# ಕಸ್ತೂರಿ

ಜನವರಿ, ೧೯೭೩

ಬೆಲೆ : ರೂ. ೧-೦೦






ಹಣ ತೊಡಗಿಸುವ ಬಗ್ಗೆ ಗಂಭೀರವಾಗಿ ವಿಚಾರಿಸುವ ಬಹಳಷ್ಟು ಜನರು ತಮ್ಮ ಬಂಡವಾಳವು ಸುರಕ್ಷಿತ, ಹೆಚ್ಚು ಆದಾಯದಾಯಕ, ಮತ್ತು ಸುಲಭವಾಗಿ ಮುರಿಸಲು ಬರುವಂಥದು ಇರಬೇಕೆಂದು ಅಪೇಕ್ಷಿಸುತ್ತಾರೆ.

UNIT TRUST OF INDIA

ಪ್ರವಿನಿಯೋಗಾತ್ ಸಮೃದ್ಧಿಃ

ನಿಮಗೆ ಗೊತ್ತಿರುವಂತೆ- ಯುನಿಟ್‌ಗಳಿಗೆ ಇವೆಲ್ಲ ಅನುಕೂಲತೆಗಳಿರುವುವಲ್ಲದೆ ತೆರಿಗೆ ರಿಯಾಯಿತಿಯೂ ಉಂಟು. ವರುಷದ ಯಾವ ಸಮಯದಲ್ಲಿಯೂ ಕೊಂಡ ಯುನಿಟ್‌ಗಳು ಒಳ್ಳೆಯ ಖರೀದಿ ಎಂದೆನಿಸುವವು.

ಯುನಿಟ್ ಟ್ರಸ್ಟ್ ಆಫ್ ಇಂಡಿಯಾ

davp 72/436

# ಕಸ್ತೂರಿ

ಪ್ರಕಟನೆ :
ಪ್ರತಿ ತಿಂಗಳ ೧ ನೇ ದಿನಾಂಕ

ಸಂಪಾದಕರು :
ರಂಗನಾಥ ದಿವಾಕರ

ಸಹಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್ ಹುಬ್ಬಳ್ಳಿ

ಕಚೇರಿ :
ಕಸ್ತೂರಿ ಕಾರ್ಯಾಲಯ ಹುಬ್ಬಳ್ಳಿ

ಕಲೆ :
ಕೆ. ಬಿ. ಕುಲಕರ್ಣಿ

ಮುದ್ರಣ :
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಮುಖಚಿತ್ರ :
ನಿರೀಕ್ಷೆಯಲ್ಲಿ...
ಎ. ಎ. ಆಲಮೇಲಕರ

ಚಂದಾ ದರ

| | | |
|---|---|---|
| ೩ ವರ್ಷ | (ಅಂಚೆ ಸೇರಿ) | ರೂ. ೨೮-೦೦ |
| ೨ ವರ್ಷ | ,, | ರೂ. ೨೦-೦೦ |
| ೧ ವರ್ಷ | ,, | ರೂ. ೧೧-೦೦ |
| ಅರ್ಧ ವರ್ಷ | ,, | ರೂ. ೬-೦೦ |

KASTURI January 1973

## ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖನಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. "ಇದುವೆ ಜೀವ" ಮೊದಲಾದ ಚುಟುಕುಗಳನ್ನು ತಿರುಗಿ ಕಳಿಸಲು ಅಥವಾ ಆ ಬಗ್ಗೆ ಪತ್ರವ್ಯವಹಾರ ಮಾಡಲು ಸಾಧ್ಯವಿಲ್ಲ. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳ ಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದುಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ, "ಕಸ್ತೂರಿ"ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ, ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

## ಚಂದಾದಾರರಿಗೆ ಸೂಚನೆ

ಪ್ರತಿ ತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೆ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲುಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

# ಈ ಸಂಚಿಕೆಯಲ್ಲಿ


| | | | |
|---|---|---|---|
| ಸಹಚಿಂತನ | ... | | ೩ |
| ಒಳಗಣ್ಣು ತೆರೆಯಿತು | ... | | ೫ |
| ಉಡುಗೊರೆಯ ಹೊರೆ | | ಸಂಗ್ರಹ : ಕಾಮಾಕ್ಷಿ ರಾಮಭಟ್ಟ | ೭ |
| ಗಾಂಧೀಜಿಯ ಆತ್ಮಯಜ್ಞ | ... | | ೧೦ |
| ಕಮ್ಯಾಂಡೋ ಯಾರು, ಏನು ? | | ಕ್ಯಾ. ಶಿವಮೂರ್ತಿ ಕಣಬರ್ಗಿಮಠ | ೧೨ |
| ಆತ ಬಂಗಾರ ಮಾಡಿದನೆ ? | ... | ಬಾಬೂರಾವ್ | ೧೭ |
| ರಾಮಪ್ರಸಾದನ ಕೊನೆಯ ದಿನ | ... | ಮನ್ಮಥನಾಥ ಗುಪ್ತ | ೨೦ |
| ಫಿಲಿಪೈನ್ಸ್ : ಸಂಪನ್ನ, ಆದರೆ ಭ್ರಷ್ಟಾಚಾರಮಯ | | ಬದರೀನಾಥ | ೨೪ |
| ಗಾಂಧೀಜಿಯ ಅಂತರ್ವಾಣಿ | ... | ಮುರಲೀಧರ | ೨೯ |
| ಕತ್ತಲೆಯಿಂದ ಕತ್ತಲೆಗೆ (ಕಥೆ) | ... | ರಾಮಲಾಲ್ | ೩೩ |
| ಯಾರು ಈ 'ಪಾಟೀಲ'ರು ? | ... | ಶ್ರೀನಿವಾಸಪ್ಪ | ೩೭ |
| ಆಸ್ಟ್ರೇಲಿಯದ ಅಪೂರ್ವ ಸ್ಮಾರಕ | ... | ಶ್ರೀಕಾಂತ | ೪೧ |
| ಕನಸುಗಳು ನಿಜವಾದಾಗ | ... | ಎಸ್. ಹೇಮಲತ | ೪೪ |
| ಅಕ್ಕಿಕಾಳು ಇತ್ಯಾದಿ | ... | ವತ್ಸಲಾ ದೊರೆ | ೪೯ |
| ಜಾನ್ ವಿಸ್ಡನ್ | ... | ಶಿವಾನಂದ ಜೋಶಿ | ೫೪ |
| ಭಾರತೀಯ ಮಧ್ಯಮ ವರ್ಗ | ... | | ೫೭ |
| ತಿತ್ತಿರಿ ಸಂಸಾರ (ಕಥೆ) | ... | ಶಶಿಧರ ವಿಶ್ವಾಮಿತ್ರ | ೬೫ |
| ಜೀವಾಧಾರ ಧಾತು ಇಂಗಾಲ | ... | ಎಸ್. ವೆಂಕಟೇಶಮೂರ್ತಿ | ೭೭ |
| ಕೇಳಿದ್ದೀರಾ–ವಾರಕ್ಕೆ ನಾಲ್ಕೇ ದಿನ ಕೆಲಸ!... | | ರಾಧಾಕೃಷ್ಣರಾವ್ | ೮೧ |
| ಮಾತೃಶಕ್ತಿ | ... | ಶಾಂತಿ ಕೆ. ಶಹಾ | ೮೭ |
| ದೀಪ | ... | ಶಂಕರ ಪಾಟೀಲ | ೮೯ |
| ನಗೆಮಲ್ಲಿಗೆ | ... | | ೯೦ |
| ಸುಕುಮಾರ ಕವಿ | | ಸಿಯೆಚ್. ಗೋಪಾಲಕೃಷ್ಣ ಭಟ್ಟ | ೯೩ |
| ಲೈಂಗಿಕ ರೋಗಗಳು | ... | ಎಸ್. ವಿ. ಪುತ್ತೂರು | ೯೭ |
| ಇದುವೆ ಜೀವ ಇದು ಜೀವನ | ... | | ೧೦೩ |
| ಹಸಿರು ಗಡ್ಡದ ಫಕೀರ (ಕಥೆ) | ... | ಬ್ಲಾದಾಸ್ ದೇಸ್ನಿಕಾ | ೧೦೫ |
| ದಾರಿದೀಪ | ... | ಸದಾನಂದ ಹೆಗಡೆಕಟ್ಟೆ | ೧೧೭ |
| ಕೊಂದವರು ಯಾರು ? | ... | ಶ್ರೀನಿಧಿರಾವ್ | ೧೧೩ |
| ಪೃಥ್ವೀರಾಜಕಪೂರ್ | ... | ಕೆ. ಟಿ. ವೇಣುಗೋಪಾಲ್ | ೧೨೧ |
| ಕವನಗಳು | ... | | ೧೨೮ |
| ಪುಸ್ತಕ ವಿಭಾಗ | | | |
| ಎರಿಕ್ ಹಾಫರ್ | | ಮೂಲ : ಕ್ಯಾಲ್ವಿನ್ ಟಾಮ್‌ಕಿನ್ಸ್ ಸಂಗ್ರಹ : ಟಿ. ಎಸ್. ಸಂಜೀವರಾವ್ | ೧[illegible]೯ |

## ಸಹಚಿಂತನ

ಅನಾದಿ ಕಾಲದಿಂದಲೂ ಮಾನವನನ್ನು ಕೆಣಕುತ್ತಿರುವ, ಗಾಬರಿಗೊಳಿಸುತ್ತಿರುವ, 'ಮನುಷ್ಯ ಜೀವನಕ್ಕೆ ಅರ್ಥವಿದೆಯೆ– ಅದಕ್ಕೊಂದು ಧ್ಯೇಯವಿದೆಯೆ–ದೈವಸಂಕಲ್ಪ ಎಂಬುದೊಂದಿದೆಯೆ' ಎಂಬ ಜಿಜ್ಞಾಸೆಗೆ ನಿವಾರಣೆ ನೀಡುವಲ್ಲಿ 'ವಿಶ್ವದಲ್ಲಿ ಮನುಷ್ಯ ಏಕಾಕಿಯೆ?' ಲೇಖನ ['ಕಸ್ತೂರಿ' ಡಿಸೆಂಬರ್, ೭೨] ವಿಫಲವಾಗಿದೆ. ಮನುಷ್ಯನ ಉತ್ಪತ್ತಿಯಲ್ಲಿ ನಿಸರ್ಗ ವಹಿಸಿದ ಪಾತ್ರವನ್ನು ವೈಜ್ಞಾನಿಕವಾಗಿ ವಿವರಿಸುವ ಲೇಖಕರು ದೈವಸಂಕಲ್ಪದ ಅಸ್ತಿತ್ವವನ್ನು ಸಂಪೂರ್ಣವಾಗಿ ನಿರಾಕರಿಸುವಲ್ಲಿ ಎಡವಿದ್ದಾರೆ.

ಲೇಖನದ ರೀತ್ಯಾ, ಅಣುಜೀವಿಗಳಿಂದ ಮಾನವನ ವರೆಗೆ ಸಕಲ ಜೀವಜಾತಗಳಿಗೂ ಆಧಾರವಾದ ಪ್ರೋಟೀನ್ ಹಾಗು ನ್ಯೂಕ್ಲಿಕ್ ಆಮ್ಲಗಳ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುವ ಅಮೈನೋ ಆಮ್ಲಗಳೂ ನ್ಯೂಕ್ಲಿಯೊಟೈಡ್‌ಗಳೂ ಜೀವವಿಕಾಸಕ್ಕೆ ಕಾರಣವಾಗುತ್ತವೆ. ಅಲ್ಲದೆ ಶುದ್ಧ ಶೂನ್ಯ ಉಷ್ಣಾಂಶದ ನಿರ್ಮಾಣ ಅಸಾಧ್ಯವಾದುದರಿಂದ ಅವು ಜೀವವೈವಿಧ್ಯಕ್ಕೆ ಅಸ್ತಿಭಾರ ಹಾಕುತ್ತವೆ.

ಈ ಜೀವವಿಕಾಸ ಹಾಗೂ ಜೀವವೈವಿಧ್ಯಗಳನ್ನು 'ದೈವಸಂಕಲ್ಪ' ಎನ್ನದೆ ಆಕಸ್ಮಿಕ ಎಂದು ಕರೆಯುವ ಲೇಖಕರ ವಾದವನ್ನು ಒಪ್ಪಬಹುದಾದರೂ, 'ಆಕಸ್ಮಿಕ'ದಿಂದ ಉಂಟಾಗಬಹುದಾದ ವೈವಿಧ್ಯಗಳ ಅತಿರೇಕವನ್ನು ನಿಯಮಿಸುವ 'ಅವಶ್ಯಕತೆ'ಯನ್ನು ವೈಜ್ಞಾನಿಕವಾಗಿ ವಿವರಿಸಿಲ್ಲವಾದ್ದರಿಂದ ಈ 'ಅವಶ್ಯಕತೆ'ಯನ್ನೇ 'ದೈವಸಂಕಲ್ಪ' ಎಂದು ಕರೆಯುವಲ್ಲಿ ಅಭ್ಯಂತರವೇನು?

ಇನ್ನೊಂದು ಮಾತು. ಲೇಖನದ ಕೊನೆಯ ಭಾಗದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ವಿಜ್ಞಾನಿಗಳ ನಕ್ಷತ್ರ ಶೋಧನೆಯ ಬಗೆಗಿನ ಮಾತುಗಳು ಸಮಂಜಸವಲ್ಲ. ಪೃಥ್ವಿಯಲ್ಲಿ ನಡೆದ ವಿಕರಣದ ನೂರೆಂಟು ಪ್ರಕಾರಗಳಲ್ಲಿ ಮನುಷ್ಯನೂ ಒಂದು ಎಂಬುದು ನಿರ್ವಿವಾದ. ಅಂತೆಯೇ ವಿಶ್ವದ ಇನ್ನು ಯಾವುದೋ ಮೂಲೆಯಲ್ಲಿ ಯಾವುದೋ ಬಗೆಯ ವಿಕರಣ ನಡೆದಿರುವುದು ಸಾಧ್ಯವಿಲ್ಲವೆ? ತತ್ಪರಿಣಾಮವಾಗಿ ಮನುಷ್ಯನಂತಲ್ಲವಾದರೂ ಬೇರೊಂದು ರೂಪದ ಬುದ್ಧಿಜೀವಿ ವಿಶ್ವದೊಳಗೆ ಅಸ್ತಿತ್ವದಲ್ಲಿರುವುದು ಸಂಭವ ಸಾಧ್ಯವಲ್ಲವೆ ?

ಕೊಡ್ಲಿಗಿ —ಯಂ. ಅನಂತೇಶರಾವ್

ಡಿಸೆಂಬರ್ ಸಂಚಿಕೆಯಲ್ಲಿ ಬಂದ 'ವಿಶ್ವದಲ್ಲಿ ಮನುಷ್ಯ ಏಕಾಕಿಯೇ ?' ಎಂಬ ಲೇಖನ ತುಂಬ ವಿಚಾರಪ್ರಚೋದಕವಾಗಿದೆ. ಆದರೂ ಮೊನೋದರ ಸಿದ್ಧಾಂತವು ಮಾತ್ರ ಕೆಳಗಿನ ಕಾರಣಗಳಿಗಾಗಿ ಸ್ವೀಕಾರಾರ್ಹವಾಗಿಲ್ಲ.

ವಿಜ್ಞಾನಲೋಕದ ಯಾವ ವಿಭಾಗದಲ್ಲಿಯೂ ಸಂಶೋಧನೆ ಇನ್ನೂ ಕೊನೆಯ ಹಂತವನ್ನು ಮುಟ್ಟಿಲ್ಲ. ಅನ್ವೇಷಣೆ ಮುಂದುವರಿದಂತೆ ಅತ್ಯಂತ ಅಬಾಧಿತವೂ ಶಾಶ್ವತವೂ ಎನಿಸಿದ ಪ್ರಚಲಿತ ಸಿದ್ಧಾಂತಗಳು ಬಾಧಿತವಾಗಿ ಅಸತ್ಯವೆಂದೋ ದೋಷಪೂರ್ಣವೆಂದೋ ತಿರಸ್ಕರಿಸಲ್ಪಡುವದು ಸರ್ವವಿದಿತ ಮೊನೋದರ ಸಿದ್ಧಾಂತವೂ ಹಾಗೇ ಆಗಬಹುದು.

ಶುದ್ಧ ಅಂಧ ಆಕಸ್ಮಿಕತೆಯಿಂದ ಜೀವಕೋಟಿಯ ಒಂದು ಮಹಾಗೋಪುರವೇ ನಿರ್ಮಾಣವಾಗಿದೆ ಎಂದ ಮೇಲೆ ಅಂಧ ಆಕಸ್ಮಿಕತೆಯ ರೂಪದಲ್ಲಿಯೇ ದೈವೀ ಸಂಕಲ್ಪವು ಕಾರ್ಯ ಮಾಡುತ್ತಲಿದೆ ಎಂದು ಏಕೆ ತಿಳಿಯಬಾರದು ? ಏಕಾಣುಜೀವಿಯಿಂದ ಮನುಷ್ಯನವರೆಗೂ ನೋಡಿದಾಗ ಪ್ರತಿಯೊಂದು ಆಕಸ್ಮಿಕತೆಯೂ ಮನುಷ್ಯನ ಕಡೆಗೆ ಏಕಾಣುಜೀವಿಯ ಪ್ರಗತಿಯನ್ನೇ ಹಂತ–ಹಂತವಾಗಿ ಸಾಧಿಸುತ್ತ ಬಂದಿರುವದರಿಂದ ಆಕಸ್ಮಿಕತೆಯನ್ನೇ ದೈವೇಚ್ಛೆಯೆಂದೂ ಅವಶ್ಯಕತೆಯನ್ನೇ ದೈವೀ ನಿಯತಿಯೆಂದೂ ಭಾವಿಸಿದರೆ ತಪ್ಪೇನು ?

'ಜೀವನಕ್ಕೆ ಅರ್ಥವಿದೆಯೇ ?' ಎಂಬ ಪ್ರಶ್ನೆ ಅನಾದಿ ಕಾಲದಿಂದ ಮನುಷ್ಯನನ್ನು ಮಾತ್ರವೇ ಏಕೆ ಕಾಡುತ್ತಲಿದೆ ? ಈ ಪ್ರಶ್ನೆ ಅವನನ್ನು ಮಾತ್ರವೇ ಕಾಡಬೇಕಾದರೆ ಇನ್ನುಳಿದ ಪ್ರಾಣಿಗಳಿಗಿಂತ ಅವನಲ್ಲಿ ಏನೋ ಒಂದು ವಿಶೇಷವಿರಬೇಕಲ್ಲವೇ ? ಆದ್ದರಿಂದ ಜೀವನಕ್ಕೆ—ಮನುಷ್ಯ ಜೀವನಕ್ಕೆ—ಅರ್ಥವಿದೆಯೋ ಇಲ್ಲವೋ ಎಂಬುದನ್ನರಿಯಬೇಕಾದರೆ ಮನುಷ್ಯನ ಅಂತರಂಗವನ್ನು ಸಂಶೋಧನೆ ಮಾಡಬೇಕಲ್ಲದೇ ಪ್ರೋಟೀನು ಮತ್ತು ನ್ಯೂಕ್ಲಿಕ್ ಆಮ್ಲಗಳನ್ನು ಸಂಶೋಧನೆ

ಮಾಡುವದರಿಂದ ಯಾವ ಪ್ರಯೋಜನವೂ ದೊರೆಯದು. ಭಾರತದಲ್ಲಿ ಪ್ರಾಚೀನ ಕಾಲದಲ್ಲಿ ಇಂಥ ಒಂದು ಸಂಶೋಧನೆ ನಡೆದಿತ್ತು. ಈ ಸಂಶೋಧನೆಯನ್ನು ನಡೆಯಿಸಿದ ಋಷಿಗಳು ಭಗವಂತನ ಲೀಲಾವಿನೋದವೇ ಈ ಸೃಷ್ಟಿ ರಚನೆಯ ಉದ್ದೇಶವೆಂದೂ ಭಗವಂತನ ಸಾಕ್ಷಾತ್ಕಾರವೇ ಮಾನವಜೀವನದ ಗುರಿಯೆಂದೂ ಸಿದ್ಧಾಂತ ಮಾಡಿದ್ದಾರೆ. ಮೊನೋದರ ಸಿದ್ಧಾಂತವು ನಮ್ಮ ಈ ಋಷಿಮುನಿಗಳ ಸಿದ್ಧಾಂತವನ್ನು ಅಲುಗಾಡಿಸಲಾರದೆಂದು ನನ್ನ ಅಭಿಪ್ರಾಯ.

ಇಷ್ಟಾದರೂ ಈ ಸೃಷ್ಟಿ ಬರಿ ಆಕಸ್ಮಿಕವೆಂದರೆ ಹೀಗೆನ್ನುವವರ ಸಿದ್ಧಾಂತವೂ ಒಂದು ಆಕಸ್ಮಿಕವೇ. ಅದನ್ನು ತತ್ತ್ವಜ್ಞಾನವೆಂದು ಪರಿಗಣಿಸಬೇಕಿಲ್ಲ.

ಧಾರವಾಡ **ಚಿದಂಬರಾನಂದ**

ನವೆಂಬರ್ 'ಕಸ್ತೂರಿ'ಯಲ್ಲಿ ಬಂದ ಮಸೀದೆಗಳ ಕುರಿತ ಸಚಿತ್ರ ಲೇಖನವು ಪರಿಚಯಾತ್ಮಕ ದೃಷ್ಟಿಯಿಂದ ಮಹತ್ವಪೂರ್ಣ ಎನ್ನಿಸಿದ್ದರೂ ಕೆಲವು ಪ್ರಾಮುಖ್ಯ ವಿಷಯಗಳ ಉಲ್ಲೇಖಗಳು ಲೇಖನದಲ್ಲಿ ಅಳವಟ್ಟಿಲ್ಲ.

ಮುಸ್ಲಿಮರ ಪವಿತ್ರ ಸ್ಥಳಗಳಲ್ಲಿ ಪ್ರಥಮ ಸ್ಥಾನವನ್ನು ಪಡೆಯುವ ಮಕ್ಕಾದಲ್ಲಿರುವ ಪವಿತ್ರ ಕಾಬಾ ಮಂದಿರವಿರುವ "ಅಲ್-ಹರಮ್" ಮಸೀದೆಯು ಅತ್ಯಂತ ಪವಿತ್ರವಾದುದೆಂದು ಪರಿಗಣಿಸಲ್ಪಟ್ಟಿರುವುದಾದರೆ ಮದೀನಾದಲ್ಲಿ ಪ್ರವಾದಿ ಮಹಮ್ಮದರಿಂದ ಸ್ವತಃ ಕಟ್ಟಲ್ಪಟ್ಟ ಪ್ರಥಮ ಮಸೀದೆ "ಮಸ್‌ಜಿದ್ ಏ ನಬವಿ" ಅಥವಾ ನಬಿಯ ಮಸೀದೆಯು ದ್ವಿತೀಯ ಸ್ಥಾನವನ್ನು ಪಡೆಯುತ್ತದೆ. ನಾಯಿಫ್ ಮತ್ತು ಇರಾಕಿನ ಕರ್ಬಾಲಗಳಲ್ಲಿರುವ ಮಸೀದೆಗಳೂ ಶಿಯಾ ಮುಸ್ಲಿಂ ಪಂಥೀಯರಿಗೆ ಅತ್ಯಂತ ಪವಿತ್ರ ಸ್ಥಾನಗಳಾಗಿವೆ. ಕಾಶ್ಮೀರದ ಹಜ್ರತ್‌ಬಾಲ್, ಅಜ್ಮೀರ್, ನಾಗಪುರಗಳ ಮಸೀದೆಗಳು ನಮ್ಮ ದೇಶದ ಅತ್ಯಂತ ಪವಿತ್ರ ಮಸೀದೆಗಳಲ್ಲಿ ಕೆಲವು.

ಮಸೀದೆಗಳ ರಚನಾವೈಖರಿಯಲ್ಲಿ ಕಾಲ, ದೇಶಗಳಿಗನುಗುಣವಾದ ವೈವಿಧ್ಯಗಳಿವೆ. ಗುಮ್ಮಟಗಳ ರಚನೆಯು ಮಸೀದೆಗಳಲ್ಲಿ ಸಾಮಾನ್ಯವಾಗಿರುತ್ತದೆ; ಆದರೆ ಎಲ್ಲ ಮಸೀದೆಗಳಲ್ಲೂ ಗುಮ್ಮಟಗಳಿರುವುದಿಲ್ಲ. ಶ್ರೀನಗರದ ಶಹಾ ಹಮ್ದಾನ್ ಮಸೀದೆಗೆ ಕೇಂದ್ರ ಶಿಖರವಿರುವುದಾದರೆ ಚೈನಾದ ಮಸೀದೆಗಳು ರಥ ಅಥವಾ ಗುಡಿಗಳೋಪಾದಿಯಲ್ಲಿವೆ. ಮಸೀದೆಗಳ ರಚನೆಗಳಲ್ಲಿ ಪ್ರಾರಂಭದಲ್ಲಿ ಗೋಪುರಗಳೂ ಇರುತ್ತಿರಲಿಲ್ಲ. ಪ್ರವಾದಿ ಮಹಮ್ಮದರು ಕ್ರಿ. ಶ ೬೨೨ರಲ್ಲಿ ಪ್ರಥಮವಾಗಿ ಕಟ್ಟಿದ ಮಸೀದೆಯು ಇಟ್ಟಿಗೆ ಕಲ್ಲುಗಳಿಂದಾವೃತ ಚೌಕಾವರಣವನ್ನೊಳಗೊಂಡಿತ್ತು. ಉಪದೇಶಪೀಠ (Pulpit) ಗಳ ರಚನೆಯು ಅನಂತರ ಕೈರೋ ಹತ್ತಿರ ೬೪೨ ರಲ್ಲಿ ಕಟ್ಟಲ್ಪಟ್ಟ ಮಸೀದೆಯಲ್ಲಿ ಆರಂಭಿಸಲ್ಪಟ್ಟಿತು. ೧೬೫೦-೫೮ರಲ್ಲಿ ಕಟ್ಟಲ್ಪಟ್ಟ ದಿಲ್ಲಿಯ ಜುಮ್ಮಾ ಮಸೀದೆಯು ಜಗತ್ತಿನ ಅತ್ಯಂತ ಸುಂದರವೂ ಅತಿ ದೊಡ್ಡದೂ ಆದ ಮಸೀದೆಗಳಲ್ಲೊಂದು. ವಾಷಿಂಗ್ಟನ್ನಿನ ಇಸ್ಲಾಮಿಕ್ ಕೇಂದ್ರದಲ್ಲಿಯ ಮಸೀದೆಯು ಹನ್ನೆರಡನೇ ಶತಮಾನದ ಇಸ್ಲಾಮಿಕ್ ವಾಸ್ತುವಿನ್ಯಾಸವನ್ನು ಅನುಕರಿಸಿದೆ.

ಮುಸ್ಲಿಂ ನಿವೇಶನಗಳಿರುವಲ್ಲೆಲ್ಲಾ ಮಸೀದೆಗಳು ಇದ್ದೇ ಇರುತ್ತವೆ. ಇಸ್ಲಾಂ ಪ್ರಥಮವಾಗಿ ಮಲಬಾರ್ ತೀರದ ಮೂಲಕವೇ ಭಾರತವನ್ನು ಪ್ರವೇಶಿಸಿದೆ ಎಂದು ನಂಬಲಾಗಿದೆ. ಮಧ್ಯ ಕೇರಳದ ಕ್ರಾಂಗನೂರಿ(ಕೊಡುಂಗಲ್ಲೂರು)ನಲ್ಲಿ ಮಾಲಿಕ್-ಇಬ್ನ್-ದಿನಾರ್ ಎಂಬವರ 'ಖಾಜಿತನ'ದಲ್ಲಿ ಪ್ರಥಮ ಮುಸ್ಲಿಂ ಮಸೀದೆಯು ಸ್ಥಾಪನೆಗೊಂಡಿತೆಂದು ಐತಿಹ್ಯವಿದೆ.

ವಾಣೀನಗರ **—ಎಸ್. ಎ. ರಹಮಾನ್**

ನವೆಂಬರ್ 'ಕಸ್ತೂರಿ'ಯಲ್ಲಿ ಶ್ರೀಮತಿ ಪದ್ಮಾವತಿ ನಾ. ಮಹಿಷಿಯವರ ಲೇಖನ 'ಆ ರೋಮಾಂಚಕಾರಿ ದಿನಗಳು' ಓದಿದೆ. ನಮ್ಮ ದೇಶದ ಇತಿಹಾಸದಲ್ಲಿಯ ಮಹತ್ವದ ಘಟ್ಟವೊಂದರಲ್ಲಿಯ ಈ ಅನುಭವಗಳ ಬೆಲೆಯನ್ನು ಶಬ್ದಗಳಲ್ಲಿ ಅಳೆಯುವುದು ದುಸ್ಸಾಧ್ಯ. ಇಂಥದೊಂದು authentic ಲೇಖನ ಆಗೊಮ್ಮೆ ಈಗೊಮ್ಮೆ ಬಂದರೂ ಸಾಕು, ಓದು ಸಾರ್ಥಕವೆನಿಸುತ್ತದೆ.

ಮುರೂರು (ಉ. ಕ.) **ಸೌ. ಲತಾ ಗುಡಿ**

ಸಂಚಿಕೆ : ೫ ವರ್ಷ : ೧೭

# ಕಸ್ತೂರಿ

ಜನವರಿ ೧೯೭೩



## ಒಳಗಣ್ಣು ತೆರೆಯಿತು

ನಿಶ್ಶಬ್ದ ರಾತ್ರಿಯಲ್ಲಿ ಸಂನ್ಯಾಸಿಯೊಬ್ಬ ದಾರಿಗುಂಟ ಏಕಾಕಿಯಾಗಿ ಸಾಗಿದ್ದ. ಅದನ್ನು ಕಂಡು ನಾಯಿಯೊಂದು ಜೋರಾಗಿ ಬೊಗಳಲಾರಂಭಿಸಿದಾಗ, "ಎ ದುರ್ಮಾರ್ಗಿ, ನನ್ನನ್ನು ಕಂಡು ಹಾಗೇಕೆ ಬೊಗಳುತ್ತಿ?" ಎಂದು ಕೇಳಿದ. "ನನ್ನನ್ನು ದುರ್ಮಾರ್ಗಿಯೆಂದು ಏಕೆ ಕರೆಯುತ್ತೀರಿ, ಸ್ವಾಮಿ?" ನಾಯಿ ವಿನಮ್ರವಾಗಿಯೆ ಕೇಳಿತು. ಸಂನ್ಯಾಸಿ ಹೇಳಿದ: "ನೀನು ಇಂಥಾ ಅಪರಾತ್ರಿಯಲ್ಲಿ ಬೊಗಳಿ ನಿನ್ನ ಯಜಮಾನನ ನಿದ್ದೆ ಕೆಡಿಸುತ್ತೀ; ದಾರಿಯ ಮಧ್ಯದಲ್ಲಿ ಮಲಗುತ್ತೀ; ಅಲ್ಲದೆ ನನ್ನಂತಹ ನಿರಾಪದರಾದ

ಸಂನ್ಯಾಸಿಗಳನ್ನು ನೋಡಿ ಬೊಗಳುತ್ತೀ. ಹೀಗಿರುವಾಗ ನಿನ್ನನ್ನು ದುರ್ಮಾರ್ಗಿಯೆಂದು ಕರೆಯದೆ ಮತ್ತೇನೆಂದು ಕರೆಯಬೇಕು?"

ನಾಯಿ ನಮ್ರಭಾವದಿಂದ ಉತ್ತರಿಸಿತು: "ಸ್ವಾಮಿ, ಕಳ್ಳಕಾಕರಿಂದ ಯಜಮಾನನ ಜೀವ ಹಾಗೂ ಸಂಪತ್ತುಗಳ ರಕ್ಷಣೆಯಾಗಲಿ ಎಂದು ನಾನು ರಾತ್ರಿಯೆಲ್ಲ ಬೊಗಳುತ್ತಿರುತ್ತೇನೆ. ದಾರಿಯಲ್ಲಿ ಸಾಧು ಸಂತರು ಓಡಾಡುತ್ತಿರುವಾಗ ಅಕಸ್ಮಾತ್ತಾಗಿಯಾದರೂ ಅವರ ಪಾಧದೂಳಿ ನನ್ನ ಮೇಲೆ ಬಿದ್ದು ಶರೀರ ಪವಿತ್ರವಾಗಲಿ ಎಂದು ಮಾರ್ಗದ ಮಧ್ಯೆ ಮಲಗಿರುತ್ತೇನೆ. ಮತ್ತು ನಿಮ್ಮಂತಹರನ್ನು ನೋಡಿ ಬೊಗಳಲು ಕಾರಣ ಬೇರೆಯೆ ಇದೆ..." "ಏನದು?" ಸಂನ್ಯಾಸಿ ಆಶ್ಚರ್ಯದಿಂದ ಪ್ರಶ್ನಿಸಿದ.

ನಾಯಿ ಹೇಳಿತು: "ಸ್ವಾಮಿ, ನೀವು ಸಂನ್ಯಾಸಿಗಳು; ವೈರಾಗ್ಯವನ್ನು ಸ್ವೀಕರಿಸಿದ್ದೀರಿ. ಹೀಗಿದ್ದೂ ನೀವು ಪ್ರತಿಯೊಂದು ಮನೆಯ ಮುಂದೆ ನಿಂತು ಕೈಯೊಡ್ಡುತ್ತೀರಿ. ಭಗವಂತನಲ್ಲಿ ವಿಶ್ವಾಸವಿಲ್ಲದಿದ್ದರೆ ನೀವು ಸಂನ್ಯಾಸಿಗಳೇಕೆ ಆದಿರಿ ಸ್ವಾಮಿ? ಒಂದು ವೇಳೆ ನಿಮಗೆ ಆತನಲ್ಲಿ ವಿಶ್ವಾಸ ವಿದ್ದದ್ದೇ ಆದರೆ ಭಗವಂತನ ಹೆಸರಿನಲ್ಲಿ ಭಿಕ್ಷೆಯನ್ನೇಕೆ ಬೇಡುತ್ತೀರಿ? ನಿಮ್ಮಂಥ ಢಾಂಬಿಕರನ್ನು ನೋಡಿ ಬೊಗಳುವುದು ತಪ್ಪೇ?"

ಸಂನ್ಯಾಸಿಯ ಒಳಗಣ್ಣು ತೆರೆಯಿತು. ಆತ ಭಗವನ್ನಾಮಸ್ಮರಣೆಯಲ್ಲಿ, ನಿರತನಾಗಿ ಕಾಡಿಗೆ ತೆರಳಿದ. ▲



ಒಬ್ಬ ಮಹಾಶಯನು, ಶೇಠ ಜಮುನಾಲಾಲ ಬಜಾಜರಲ್ಲಿ ತುಂಬ ಅಸ್ಥೆಯುಳ್ಳವನಾಗಿದ್ದನಾದರೂ ಅವರ ಕಡು ವಿರೋಧಿಯೂ ಆಗಿದ್ದನು. ಅವನೊಮ್ಮೆ ಅನಾರೋಗ್ಯದಿಂದ ಬಳಲುತ್ತಿದ್ದಾಗ ಜಮುನಾಲಾಲಜಿ ಅವನನ್ನು ನೋಡಲೆಂದು ಹೋಗಿದ್ದರು. "ಹೇಳು ಹೇಳು, ನೀನು ತೀವ್ರ ಚಿಂತೆಗೀಡಾಗಿರುವಂತೆ ತೋರುತ್ತದಲ್ಲ, ಯಾಕೆ?"– ಅವರು ಅವನ ಯೋಗಕ್ಷೇಮ ವಿಚಾರಿಸುತ್ತ ಕೇಳಿದರು.

"ತಮ್ಮಿಂದ ನಾನು ಪೂರ್ಣ ನಿರಾಶೆಹೊಂದಿದ್ದೇನೆ,"—ಅವನ ಉತ್ತರ.

"ಆದರೆ ಏಕೆ? ನಿನ್ನ ನಿರಾಶೆಯನ್ನು ಕಳೆಯಲು ಏನು ಮಾಡಬೆಕು?"

"ತಮ್ಮ ವಿರುದ್ಧ ನಾನೊಂದು ಪುಸ್ತಕ ಬರೆದಿದ್ದೇನೆ. ಅದನ್ನು ಅಚ್ಚು ಹಾಕಿಸಲು ನನ್ನ ಹತ್ತಿರ ದುಡ್ಡಿಲ್ಲ. ಅದು ಅಚ್ಚಾದರೆ ಮಾತ್ರ ನನಗೆ ಶಾಂತಿ ಸಿಗುತ್ತದೆ."

"ಅದಕ್ಕೆಷ್ಟು ಖರ್ಚು ಬರಬಹುದು?"

"ಐದು ನೂರು ರೂಪಾಯಿ."

ತತ್‌ಕ್ಷಣ ಮನೆಗೆ ಹೋಗಿ ತಮ್ಮ ಮಗ ಕಮಲನಯನನ ಸಂಗಡ ಐದು ನೂರು ರೂಪಾಯಿಗಳನ್ನು ಜಮುನಾಲಾಲಜಿ ಅವನಿಗೆ ಕಳಿಸಿಕೊಟ್ಟರು.

—ಸಂಗ್ರಹ: ಬಸವರಾಜ ಇಟಗಿ

# ಉಡುಗೊರೆಯ ಹೊರೆ

ಸಂಗ್ರಹ : **ಶ್ರೀಮತಿ ಕಾಮಾಕ್ಷಿ ರಾಮಭಟ್ಟ**

ಬೋರ್ ಯುದ್ಧದ ನಂತರ ಗಾಂಧೀಜಿ ಭಾರತಕ್ಕೆ ಮರಳಲು ನಿರ್ಧರಿಸಿದರು. ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ ಸಲ್ಲಿಸಿದ ಸಮಾಜ ಸೇವೆಯಿಂದಾಗಿ ಸಂತೋಷಚಿತ್ತರಾದ ಅಲ್ಲಿನ ಭಾರತೀಯರು ಗಾಂಧೀಜಿಯವರ ಮೇಲೆ ಪ್ರೇಮದ ಸುರಿಮಳೆಯನ್ನೇ ಸುರಿಸಿದರು. ಬೋರ್ ಯುದ್ಧದ ಕಾಲದಲ್ಲಿ ಗಾಂಧೀಜಿಯವರೂ ಅವರ ಅನುಯಾಯಿಗಳೂ ಯುದ್ಧದಲ್ಲಿ ಗಾಯಗೊಂಡವರಿಗೆ ಸಲ್ಲಿಸಿದ ನಿಃಸ್ವಾರ್ಥ ಸೇವೆಯಿಂದ ಪ್ರಭಾವಿತರಾದ ಬಿಳಿಯರೂ ಅವರನ್ನು ಆ ವೇಳೆಗೆ ಗೌರವಿಸ ತೊಡಗಿದ್ದರು.

ಗಾಂಧೀಜಿಯವರು ಭಾರತಕ್ಕೆ ಮರಳುವ ನಿರ್ಧಾರವನ್ನು ಪ್ರಕಟಿಸಿದರೇನೋ ನಿಜ. ಆದರೆ ಅಲ್ಲಿಯ ಜನರು ಅವರನ್ನು ಮರಳಿ ಕಳಿಸಲು ಸಿದ್ಧರಾಗಲೇ ಇಲ್ಲ. ಕೊನೆಗೆ ಗಾಂಧೀಜಿಯವರು ದಕ್ಷಿಣ ಆಫ್ರಿಕದಲ್ಲಿ ತಮ್ಮ ಪರವಾಗಿ ಕೆಲಸ ಮಾಡಲು ಮೇಜರ್ ಖಾನ್ ಮತ್ತು ಮನ್‌ಸುಖಲಾಲ್ ನಾಜರ್‌ರವರನ್ನು ಒಪ್ಪಿಸಿದಾಗ ಅಲ್ಲಿನ ಜನತೆ, ಒಂದು ವರ್ಷದೊಳಗೆ ಅವರ ಅವಶ್ಯಕತೆಯುಂಟಾದರೆ ತತ್‌ಕ್ಷಣ ಆಫ್ರಿಕಕ್ಕೆ ಮರಳಬೇಕು ಎಂಬ ಕರಾರಿನೊಂದಿಗೆ ಭಾರತಕ್ಕೆ ಕಳಿಸಲು ಒಪ್ಪಿತು. ಜನತೆಯು ತಮ್ಮ ಮೇಲಿಟ್ಟಿದ್ದ ಭರವಸೆ ಮತ್ತು ವಿಶ್ವಾಸಕ್ಕೆ

(ಗಾಂಧೀಜಿಯ ಆತ್ಮಚರಿತ್ರೆಯಿಂದ)

ಮಣಿದು ಗಾಂಧೀಜಿಯವರು ಶರತ್ತಿಗೆ ಒಪ್ಪಿಕೊಂಡರು.

ನಾತಾಳದಲ್ಲಿ ಏರ್ಪಟ್ಟ ಸತ್ಕಾರಕೂಟಗಳಲ್ಲಿ ಗಾಂಧೀಜಿಯವರಿಗೂ ಅವರ ಕುಟುಂಬಕ್ಕೂ ಬೆಳ್ಳಿ-ಬಂಗಾರದ ಆಭರಣಗಳನ್ನಲ್ಲದೆ, ಅತ್ಯ-ಮೂಲ್ಯವಾದ ವಜ್ರಗಳನ್ನೊಳಗೊಂಡು ಅನೇಕ ಬೆಲೆ ಬಾಳುವ ಉಡುಗೊರೆಗಳನ್ನು ಕೊಡಲಾಯಿತು.

ನಿಜವಾಗಿಯೂ, ಅವುಗಳನ್ನು ಸ್ವೀಕರಿಸುವ ನೈತಿಕ ಹಕ್ಕು ತಮಗಿಲ್ಲ; ಅಲ್ಲದೆ, ಈ ಕಾಣಿಕೆ-ಗಳನ್ನು ಸ್ವೀಕರಿಸಿದಲ್ಲಿ, ತಾವು ಸ್ವೇಚ್ಛೆಯಿಂದ ಮಾಡುತ್ತಿರುವ ಸೇವೆಗೆ ಪ್ರತಿಫಲವನ್ನು ಪಡೆ-ದಂತಾಗದೆ? ಸಮಾಜಸೇವೆಗಾಗಿ ಕೊಡಲ್ಪಟ್ಟ ಬೆಲೆ ಬಾಳುವ ವಸ್ತುಗಳನ್ನು ಮರಳಿ ಸಮಾಜ ಸೇವೆಗಾಗಿಯೇ ವಿನಿಯೋಗಿಸುವುದರಲ್ಲೇ ಅದರ ಸಾರ್ಥಕ್ಯವಿದೆಯೆಂದು ಗಾಂಧೀಜಿ ಭಾವಿಸಿದರು.

ಉಡುಗೊರೆಗಳನ್ನು ಸ್ವೀಕರಿಸಿದ ದಿನ ಗಾಂಧೀಜಿಗೆ ನಿದೆಯೆ ಬರಲಿಲ್ಲ. ಕೋಣೆಯಲ್ಲಿ ಶಥಪಥ ಹಾಕುತ್ತಾ ಇಡೀ ರಾತ್ರಿಯನ್ನು ಕಳೆ-ದರು. ಸಾವಿರಾರು ರೂಪಾಯಿ ಬೆಲೆ ಬಾಳುವ ವಸ್ತುಗಳನ್ನು ತ್ಯಜಿಸುವುದೂ ಅಷ್ಟು ಸುಲಭ-ವೆಂದು ಅವರಿಗೆ ತೋರಲಿಲ್ಲ. ಆದರೆ ಅವು ಗಳನ್ನು ಸ್ವಾರ್ಥಕ್ಕಾಗಿ ಬಳಸುವುದು ಅದಕ್ಕೂ ಕಷ್ಟಕರವೆಂದು ತೋರಿತು. ಹೀಗೆ ಇಡಿ ರಾತ್ರಿ ಅಂತಃತುಮುಲ ನಡೆದೇ ಇತ್ತು.

ಕೊನೆಗೆ, ಗಾಂಧೀಜಿಯವರು ಕ್ಷಣಿಕ ಆಸೆ-ಯೊಡನೆ ಹೋರಾಡಿ ಆ ಒಡವೆಗಳನ್ನು ಸ್ವೀಕರಿಸಬಾರದೆಂದು ನಿಶ್ಚಯಿಸಿದರು. ಅನಂತರ ಪಾರ್ಸಿ ರುಸ್ತುಂಜಿಯವರನ್ನೊಳಗೊಂಡು ಇತರ ಹಲವಾರು ಧರ್ಮದರ್ಶಿಗಳನ್ನೊಳಗೊಂಡ ಒಂದು ಟ್ರಸ್ಟನ್ನು ರಚಿಸಿ, ಅದಕ್ಕೆ ಆ ಎಲ್ಲಾ ಒಡವೆಗಳನ್ನು ಒಪ್ಪಿಸಲು ನಿರ್ಧರಿಸಿದರು.

ಅಷ್ಟಕ್ಕೇ ಅವರ ಸಮಸ್ಯೆಯು ಪರಿಹಾರ-ವಾಗಲಿಲ್ಲ. ಒಡವೆಗಳನ್ನು ತ್ಯಜಿಸುವ ವಿಷಯದಲ್ಲಿ ತಮ್ಮ ಪತ್ನಿಯನ್ನು ಒಪ್ಪಿಸುವುದು ಸುಲಭವಲ್ಲ-ವೆಂದು ಗಾಂಧೀಜಿಯವರಿಗೆ ಅನಿಸಿತ್ತು. ಮಕ್ಕಳು ತಮ್ಮ ಮಾತನ್ನು ಮೀರಲಾರರೆಂಬುದು ಅವರು ದೃಢವಾಗಿ ನಂಬಿದ ನಂಬಿಕೆ.

ತಮ್ಮ ನಂಬಿಕೆ ನಿಜವಾದಾಗ ಮಕ್ಕಳ ಹಿರಿಯ ಗುಣವನ್ನು ಕಂಡು ಆನಂದತುಂದಿಲರಾದರು. ಅನಂತರ ಗಾಂಧೀಜಿಯವರು, "ಹಾಗಾದರೆ ನೀವು ನಿಮ್ಮ ತಾಯಿಯನ್ನು ಇದಕ್ಕೆ ಒಪ್ಪಿಸುವಿರಾ?" ಎಂದು ಕೇಳಿದಾಗ, ಮಕ್ಕಳು, "ಓಹೋ ಖಂಡಿತವಾಗಿ," ಎಂದು ಉತ್ತರಿಸಿದರು.

ಆದರೆ ಈ ಕಾರ್ಯ ಅಷ್ಟು ಸುಲಭವಾಗಿರಲಿಲ್ಲ. ಗಾಂಧೀಜಿಯ ಮನೋಗತ ಕಸ್ತೂರಿ ಬಾರಿಗೆ ತಿಳಿದಾಗ ಅವರಿಗೆ ತುಂಬಾ ಕೋಪ ಬಂತು. "ನಿಮಗೆ ಒಡವೆಗಳು ಬೇಡವಾಗಿರ-ಬಹುದು. ನಿಮ್ಮ ಮಕ್ಕಳಿಗೂ ಅವು ಬೇಡ-ವಾಗಿರಬಹುದು. ಎಷ್ಟಾದರೂ ಅವರು ನಿಮ್ಮ ತಾಳಕ್ಕೆ ತಕ್ಕಂತೆ ಕುಣಿಯುವವರು. ನನಗಲ್ಲ-ವಾದರೂ ಸರಿ, ನನ್ನ ಸೊಸೆಯರಿಗಾದರೂ ಅವು ಬೇಡವೆ? ನಾಳೆ ನಮ್ಮ ಸ್ಥಿತಿಗತಿಗಳು ಹೇಗಿರುತ್ತವೆಯೋ ಯಾರು ಬಲ್ಲರು? ಜನರು ಇಷ್ಟು ಮಮತೆಯಿಂದ ಇತ್ತಿರುವ ಕಾಣಿಕೆಗಳನ್ನು ಬಿಟ್ಟುಕೊಡುವವಳು ನಾನಲ್ಲ," ಎಂದು ಕೊಂಚ ಕಟುವಾಗಿಯೇ ಹೇಳಿದರು.

ಈ ವಾಗ್ಯುದ್ಧ ಬಾರವರ ಕಣ್ಣೀರಿನಲ್ಲಿ ಮುಕ್ತಾಯವಾಯಿತು. ಆದರೆ ಗಾಂಧೀಜಿಯವರ ಹೃದಯ ಪತ್ನಿಯ ಕಣ್ಣೀರಿಗೆ ಕರಗಲಿಲ್ಲ. ಗಾಂಧೀಜಿಯವರು ಕಸ್ತೂರಬಾರನ್ನು ಸಮಾ-ಧಾನಪಡಿಸುತ್ತ ಹೇಳಿದರು: "ಮಕ್ಕಳಿನ್ನೂ ಚಿಕ್ಕವರು ಅವರ ವಿವಾಹಕ್ಕೆ ಇನ್ನೂ ತುಂಬಾ ಸಮಯವಿದೆ. ನಾವೇನು ಬಾಲ್ಯವಿವಾಹ ಮಾಡು-ವುದಿಲ್ಲವಲ್ಲ. ವಯಸ್ಕರಾದಾಗ ಅವರು ತಮ್ಮ ಅವಶ್ಯಕತೆಗಳನ್ನು ತಾವೇ ಅರಿತುಕೊಳ್ಳಬಲ್ಲರು. ಅಲ್ಲದೆ, ನಾವು ಒಡವೆಗಾಗಿ ಆಶಿಪಡುವ ಸೊಸೆ-ಯರನ್ನು ಎಂದೂ ತಂದುಕೊಳ್ಳಲಾರೆವು. ಹಾಗೊಂದು ವೇಳೆ, ಒಡವೆಗಳನ್ನು ಕೊಳ್ಳಲೇ-ಬೇಕಾದ ಪ್ರಸಂಗ ಬಂದಲ್ಲಿ, ನಾನಿಲ್ಲವೇ?"

ಬಾರವರು ನುಡಿದರು: "ಏನು? ನಿಮ್ಮನ್ನು ಕೇಳುವುದೇ? ನೀವು ನನಗೆ ಯಾವ ಆಭರಣವನ್ನೂ ತಂದುಕೊಡಲಿಲ್ಲ. ಈಗ ಜನರೇ ಕೊಟ್ಟಿರುವುದನ್ನು ಇಟ್ಟುಕೊಳ್ಳಲೂ ಒಪ್ಪುವುದಿಲ್ಲ. ಅಂದ ಮೇಲೆ, ನೀವು ಸೊಸೆಯರಿಗಾಗಿ ಒಡವೆಯನ್ನು ಮಾಡಿಸುತ್ತೀರೆಂದು ಹೇಗೆ ಹೇಳುವುದು? ಈಗಿನಿಂದಲೇ ನೀವು ನನ್ನ ಮಕ್ಕಳನ್ನು ಸನ್ಯಾಸಿಗಳನ್ನಾಗಿ ಮಾಡುತ್ತಿದ್ದೀರಿ. ಇಲ್ಲ, ನಾನು ಒಡವೆಗಳನ್ನು ಕೊಡಲಾರೆ. ಅಲ್ಲದೆ, ನನಗೆ ಕೊಟ್ಟಿರುವ ಸರದ ಮೇಲೆ ನಿಮ್ಮದೇನು ಹಕ್ಕು?"

ಗಾಂಧೀಜಿಯವರು ತಮ್ಮ ಪ್ರಯತ್ನವನ್ನು ಬಿಡಲಿಲ್ಲ. ಅವರು ಸಮಾಧಾನದಿಂದಲೇ ಹೇಳಿದರು: "ಸರಿ, ಆ ಸರವನ್ನು ನೀನು ಮಾಡಿದ ಸೇವೆಗಾಗಿ ಕೊಟ್ಟಿರುವರೋ ಅಥವಾ ನಾನು ಮಾಡಿದ ಸೇವೆಗಾಗಿಯೋ?"

ಬಾರವರೆಂದರು: "ನೀವು ಮಾಡಿದ ಸೇವೆಗಾಗಿಯೇ ಕೊಟ್ಟಿರಬಹುದು. ಆದರೆ, ನಾನೂ ನಿಮ್ಮಷ್ಟೇ ಕಷ್ಟಪಟ್ಟಿದ್ದೇನೆ. ನೀವು ಜನತೆಯ ಸೇವೆ ಮಾಡಿದ್ದರೆ, ನಾನು ಹಗಲೂ-ರಾತ್ರಿ ನಿಮಗೋಸ್ಕರ ದುಡಿದಿರುವೆ. ಇದು ಸೇವೆಯಲ್ಲವೇ? ನೀವು ಎಲ್ಲ ವಿಷಯಗಳನ್ನೂ ಬಲಾತ್ಕಾರವಾಗಿ ನನ್ನ ಮೇಲೆ ಹೊರಿಸುತ್ತಿದ್ದೀರಿ. ನಾನು ಕಣ್ಣೀರು ಸುರಿಸುತ್ತ ಎಲ್ಲವನ್ನೂ ಸಹಿಸಬೇಕಾಗಿದೆ."

ಕಡೆಗೂ ಗಾಂಧೀಜಿಯವರು ಬಾರನ್ನು ಅನುನಯಿಸಿ, ಒಪ್ಪಿಗೆ ಪಡೆದು, ಆಭರಣಗಳೆಲ್ಲವನ್ನೂ ಟ್ರಸ್ಟಿಗೆ ಒಪ್ಪಿಸಿದರು. ಅದರೊಂದಿಗೆ ೧೮೯೬ ರಿಂದ ೧೯೦೧ರ ವರೆಗೆ ಪಡೆದ ಎಲ್ಲಾ ವಸ್ತು ಒಡವೆಗಳನ್ನು ಟ್ರಸ್ಟಿಗೆ ಒಪ್ಪಿಸಿದರು.

ಕ್ರಮೇಣ ಬಾರವರು ಗಾಂಧೀಜಿಯವರ ವಿಚಾರಪ್ರಣಾಲಿಗೆ ಹೊಂದಿಕೊಳ್ಳಲಾರಂಭಿಸಿದರು. ಈ ಪ್ರಸಂಗದ ನಂತರ ಗಾಂಧೀಜಿಯವರು ಅದೆಷ್ಟೋ ಬಾರಿ ನಿಧಿ ಸಂಗ್ರಹಿಸಿದರಾದರೂ, ಮತ್ತೆಂದೂ ಇಂತಹ ಪ್ರಸಂಗ ತಲೆದೋರಲಿಲ್ಲ.

## ಗಾಂಧೀ ಉವಾಚ

"ಧರ್ಮವನ್ನು ರಾಜಕಾರಣದಲ್ಲಿ ಅಳವಡಿಸುವುದೆಂದರೆ ನ್ಯಾಯ, ಸತ್ಯಗಳತ್ತ ಮುನ್ನಡೆದಂತೆ."

"ಪಶ್ಚಿಮ ದೇಶಗಳಲ್ಲಿ ಇಂದು ಪ್ರಜಾಪ್ರಭುತ್ವವೆಂದು ಹೇಳಲಾಗುತ್ತಿರುವುದು ಪ್ರಚ್ಛನ್ನ ಸರ್ವಾಧಿಕಾರತ್ವವೆ."

"ಸತ್ಯಂ ಜ್ಞಾನಂ ಅನಂತಂ ಬ್ರಹ್ಮ ಎಂದು ಉಪನಿಷತ್ತುಗಳು ಸಾರುತ್ತಿವೆ. ಆದರೆ ನನ್ನ ಮಟ್ಟಿಗೆ ದೇವರು ಸತ್ಯದ ದೊರೆ–ಸತ್ಯನಾರಾಯಣ."

---

ತಿದ್ದುಪಡಿ : ಇದೇ ಸಂಚಿಕೆಯಲ್ಲಿ ಬಂದ 'ಗಾಂಧೀಜಿಯ ಅಂತರ್ವಾಣಿ' ಲೇಖನದಲ್ಲಿ, ೩೦ ನೆಯ ಪುಟದ ಮೊದಲ ವಾಕ್ಯದಲ್ಲಿ ಗ್ವಾಲಿಯರ್ ಭಾರತ ಪಾಕಿಸ್ತಾನ ಗಡಿಯಲ್ಲಿರುವ ಸಂಸ್ಥಾನವಾಗಿತ್ತೆಂದು ಅಚ್ಚಾಗಿದೆ. ಇದು ವಸ್ತುತಃ ಸರಿಯಲ್ಲ. ಇದನ್ನು ತಿದ್ದಿಕೊಂಡು ಓದಬೇಕು

ಈ ಲೇಖನಕ್ಕೆ 'ಸಂಡೇ ಸ್ಟ್ಯಾಂಡರ್ಡ್' ಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಎಂ. ವಿ. ಶ್ರೀನಿವಾಸನ್ನರ ಲೇಖನವೇ ಆಧಾರ.

ಡಿಸೆಂಬರ್ 'ಕಸ್ತೂರಿ'ಯಲ್ಲಿ ಬಂದ 'ಶವವಾಗಿ ತೂಗುತ್ತೇನೆ!' ಕಥೆಯ ಲೇಖಕರ ಹೆಸರು ಪ್ರಮಾದವಶಾತ್ 'ಕೆ. ಈಶ್ವರಯ್ಯ' ಎಂದು ಅಚ್ಚಾಗಿದೆ. ಅದು 'ಈಶ್ವರಯ್ಯ' ಎಂದಿಷ್ಟೆ ಇರಬೇಕಿತ್ತು.

# ಗಾಂಧೀಜಿಯ ಅಂತ್ಯಕ್ರಿಯೆ




ವಿಶ್ವಸಂಸ್ಥೆಯಿಂದ ಗೌರವ


ವಿಶ್ವದಲ್ಲಿ ಲೀನ




ರಾಜಘಾಟು



'ನನ್ನ ಅಂತರ್ವಾಣಿ ನೀವು ಸಾಯಬೇಕೆಂದು ಹೇಳುತ್ತೆ'



ಚಿರನಿದ್ರೆಯಲ್ಲಿ



ಸಮಾಧಿ



ತ್ರಿವೇಣಿ ಸಂಗಮಕ್ಕೆ ಚಿತಾಭಸ್ಮ



'ದೀಪ ಆರಿತಲ್ಲ

1973
ಜನವರಿ

ಮೂಲ ಇಂಗ್ಲೀಷ್: ಕ್ಯಾ. ಶಿವಮೂರ್ತಿ ಕಣಬರ್ಗಿಮಠ
ಕನ್ನಡಕ್ಕೆ : ಕರ್ನಲ್ (ನಿವೃತ್ತ) ಶಿವಶಂಕರ ಕಣಬರ್ಗಿಮಠ

# ಕಮಾಂಡೋ ಯಾರು, ಏನು?

ಕಮ್ಯಾಂಡೊ ಎಂದೊಡನೆಯೇ ಬಹುಜನರ ಕಣ್ಣೆದುರು ಪ್ಯಾಲೆಸ್ಟೈನ್ ಅರಬ ಕೂಟಯೋಧರೇ ಬಂದು ನಿಲ್ಲುವರು. ಆದರೆ ಆಧುನಿಕ ಯುದ್ಧತಂತ್ರದಲ್ಲಿ ಪ್ರತಿಯೊಂದು ದೇಶದ ಸೈನ್ಯಗಳಲ್ಲಿ ಕಮ್ಯಾಂಡೊಗಳಿಗೆ ಎಂಥ ಮಹತ್ತರ ಸ್ಥಾನವಿದೆಯೆಂಬುದನ್ನು ಬೆಳಗಾಂವಿಯ ಇನ್ಫಂಟ್ರಿ ಸ್ಕೂಲಿನಲ್ಲಿ ಕಮ್ಯಾಂಡೊ ವಿಭಾಗದಲ್ಲೇ ತರಬೇತು ಅಧಿಕಾರಿಯಾಗಿರುವ ಕ್ಯಾ. ಶಿವಶಂಕರ ಕಣಬರ್ಗಿಮಠರಿಲ್ಲಿ ವಿವರಿಸುತ್ತಾರೆ. ಕಮ್ಯಾಂಡೊ ಅನೇಕರು ತಿಳಿದಂತೆ ಬಂಡುಗಾರನಲ್ಲ; ನಿಷ್ಠ ಸೈನಿಕ.

ಬಾಂಗ್ಲಾದೇಶ ವಿಮೋಚನೆಗಾಗಿ ಯುದ್ಧ. ಭಾರತ, ಪಾಕಿಸ್ತಾನಗಳ ಸೈನ್ಯಗಳು ಒಂದನ್ನೊಂದು ಎದುರಿಸಿ ಕಲಿತನದಿಂದ ಕಾದುತ್ತಿವೆ. ಪಾಕ್ ಸೈನಿಕರು ತಮ್ಮ ನೆಲೆಗಳನ್ನು ರಕ್ಷಿಸಿಕೊಂಡು ಭಾರತೀಯ ಸೈನ್ಯ ಮುನ್ನಡೆಯದಂತೆ ತಡೆಗಟ್ಟತೊಡಗಿದ್ದಾರೆ. ಅದೊಂದು ಠಾಣ್ಯದಿಂದ ಪಾಕಿಸ್ತಾನೀಯರನ್ನು ಹೊರಗಟ್ಟಿ ಅದನ್ನು ತಮ್ಮ ಕೈವಶ ಮಾಡಿಕೊಳ್ಳಲು ಭಾರತೀಯರು ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗಿವೆ. ಮುಂದೇನು ಮಾಡಬೇಕೆಂದು ಕಮಾಂಡರ್ ಯೋಚಿಸತೊಡಗಿದ. ನಾವು ಮುಂಬದಿಯಿಂದಲೇ ದಾಳಿ ಮಾಡಲಾರಂಭಿಸಿದ್ದೇವೆಂದು ಶತ್ರುವನ್ನು ನಂಬಿಸಿ, ಅವನ ಹಿಂಬದಿಯಿಂದಲೇ ಅವನ ಮೇಲೆ ನುಗ್ಗುವುದೆಂದು ಅವನು ನಿರ್ಧಾರಕ್ಕೆ ಬಂದ

ಪಾಕಿಸ್ತಾನದ ಈ ಠಾಣ್ಯ ಸುಭದ್ರವಾಗಿತ್ತು ಮಾತ್ರವಲ್ಲ, ಅದರ ಮುಖ್ಯ ಕೇಂದ್ರದಿಂದ ನೇರ ರೈಲು ಸಂಪರ್ಕವನ್ನೂ ಹೊಂದಿತ್ತು. ಇದರಿಂದಾಗಿ ಅದಕ್ಕೆ ಶಸ್ತ್ರಾಸ್ತ್ರಗಳು ಹಾಗು ಆಹಾರಾದಿಗಳ ಪೂರೈಕೆ ಸರಾಗವಾಗಿ ಆಗುತ್ತಿತ್ತು. ಇದನ್ನು ಕಂಡುಕೊಂಡ ನಮ್ಮ ಕಮಾಂಡರ್ ಈ ರೈಲು ಸಂಪರ್ಕವನ್ನೇ ಕತ್ತರಿಸಿಬಿಟ್ಟರೆ ನಮ್ಮ ಮುಂದಿನ ಕಾರ್ಯ ಸುಲಭವೆಂದು ನಿರ್ಧರಿಸಿದ. ಆದರೆ ತಮಗೆ ಜೀವನಾಡಿಯಂತಿದ್ದ ಈ ರೈಲು ಮಾರ್ಗವನ್ನು ರಕ್ಷಿಸಲು ಪಾಕಿಸ್ತಾನೀಯರು ತಮ್ಮದೊಂದು ಬಟಾಲಿಯನ್ ಸೈನ್ಯವನ್ನೇ ನೇಮಿಸಿದ್ದರು. ಅಲ್ಲದೆ ಸೈನಿಕರ ಚಿಕ್ಕ ಪುಟ್ಟ ಗುಂಪುಗಳನ್ನು ಈ ಮಾರ್ಗದ ಗುಂಟ ಅಲ್ಲಲ್ಲಿ ಇರಿಸಿ ರಕ್ಷಣೆ ಅಭೇದ್ಯವಾಗುವಂತೆ ಯೋಜಿಸಿದ್ದರು.

೧೯೭೧ರ ಡಿಸೆಂಬರ್ ೬ ರಂದು ನಮ್ಮ ಕಮಾಂಡರ್ ತನ್ನ ಆಧೀನದಲ್ಲಿದ್ದ ಕಮ್ಯಾಂಡೊ ದಳಕ್ಕೆ ಆ ದಿನ ಈ ರೈಲು ಮಾರ್ಗವನ್ನು ಕತ್ತರಿಸುವುದಲ್ಲದೆ ಅಂದು ಬರುವ ರೈಲು ಗಾಡಿಯನ್ನೂ ಉರುಳಿಸಿಬಿಡಬೇಕೆಂದು ಆಜ್ಞೆಯಿತ್ತು ಎಲ್ಲ ಆವಶ್ಯಕ ವಿವರಗಳನ್ನು ನೀಡಿದನು. ಈ ದಳದಲ್ಲಿ ಇಬ್ಬರು ಅಧಿಕಾರಿಗಳೂ ೪೦ ಸೈನಿಕರೂ ಇದ್ದರು. ಈ ಗಾಡಿಯು ಸಾಮಾನ್ಯವಾಗಿ ಸಂಜೆ ಕತ್ತಲಾದ ನಂತರ ದೀಪಗಳಿಲ್ಲದೆಯೇ ಬರುವುದು ವಾಡಿಕೆಯೆಂದೂ ತಿಳಿದುಬಂದಿತ್ತು.

ಸೂರ್ಯಾಸ್ತದ ನಂತರ ನಮ್ಮ ಕಮ್ಯಾಂಡೊ ದಳ ಹೊರಟು ಪಾಕ್ ಸಂರಕ್ಷಕ ಗುಂಪುಗಳ ಕಣ್ಣು ತಪ್ಪಿಸಿ ನುಸುಳಿಕೊಂಡು ರೈಲು ಮಾರ್ಗದಲ್ಲಿ ನಿಶ್ಚಿತ ಸ್ಥಳ ತಲುಪಿತು. ಆದರೆ ಅಲ್ಲಿಂದ ರೈಲು ಗಾಡಿ ಆದೇ ಹೊರಟುಹೋಗಿತ್ತು. ಈಗ ಈ ದಳದ ಹಿರಿಯಾಧಿಕಾರಿ ತಟ್ಟನೆ ಒಂದು ನಿರ್ಧಾರಕ್ಕೆ ಬರಬೇಕಾಯಿತು. ಅವನು ತನ್ನ ದಳವನ್ನು ಸರಿಯಾಗಿ ಇಬ್ಭಾಗ ಮಾಡಿ ಇನ್ನೊಬ್ಬ ಅಧಿಕಾರಿಯ ನೇತೃತ್ವದಲ್ಲಿ ೨೦ ಸೈನಿಕರನ್ನು, ರೈಲು ಮಾರ್ಗವನ್ನು ಆಯಕಟ್ಟಿನ ಸ್ಥಳವೊಂದರಲ್ಲಿ ರಕ್ಷಿಸುತ್ತಿದ್ದ

ವೈರಿಯ ಬಟಾಲಿಯನ್ನು ದಾಟಿಕೊಂಡು ಅದರ ಹಿಂಭಾಗದಲ್ಲಿ ಈ ರೈಲು ಗಾಡಿಯನ್ನು ಉರುಳಿಸಬೇಕೆಂದು ಆದೇಶವಿತ್ತನು. ಈ ಜನ ಕಾಡು ದಾರಿಯಲ್ಲಿ ಸುಮಾರು ಒಂದು ತಾಸು ನಡೆದು ಹೋದ ನಂತರ ಸರಿಯಾದ ಸ್ಥಳವನ್ನು ಮುಟ್ಟಿದರು. ಇವರು ಲಗುಬಗೆಯಿಂದ ರೈಲು ದಾರಿಗುಂಟ ಸ್ಫೋಟಕ ದ್ರವ್ಯಗಳನ್ನಿಡುತ್ತಿದ್ದಂತೆಯೇ ಗಾಡಿ ಬರುತ್ತಿರುವ ಸಪ್ಪಳ ಕೇಳಿಸಿತು. ಆದರೆ ದುರ್ದೈವದಿಂದ, ಗಾಡಿ ಸಮೀಪಿಸುವ ಮುನ್ನವೇ ಈ ಮದ್ದು ಸ್ಫೋಟಗೊಂಡುದರಿಂದ ಡ್ರೈವರ್ ತಕ್ಷಣ ಬ್ರೇಕ್ ಹಾಕಿ ಅದನ್ನು ನಿಲ್ಲಿಸಿಬಿಟ್ಟನು. ಮರುನಿಮಿಷವೇ ಗಾಡಿ ಹಿಂದಕ್ಕೆ ಸರಿಯತೊಡಗಿತು. ಮೊದಲಿನ ಸ್ಥಳದಲ್ಲೇ ಉಳಿದಿದ್ದ ಕಮ್ಯಾಂಡೊ ಗುಂಪು, ಗಾಡಿ ತನ್ನತ್ತ ಬರುತ್ತಿರುವುದನ್ನು ಗುರುತಿಸಿ ಅಲ್ಲಿನ ರೈಲು ಮಾರ್ಗವನ್ನು ಧ್ವಂಸಗೊಳಿಸಿಬಿಟ್ಟಿತು.

ತನ್ನೆರಡೂ ಬದಿಗೂ ಭಯಂಕರ ಸ್ಫೋಟಗಳಾದುದನ್ನು ಕೇಳಿದ ಪಾಕಿಸ್ತಾನಿ ಬಟಾಲಿಯನ್ನಿನಲ್ಲಿ ಹಾಹಾಕಾರವೆದ್ದಿತು. ಭಾರತೀಯರು ತಮ್ಮನ್ನು ಎರಡೂ ಬದಿಯಿಂದ ಮುತ್ತಿದ್ದಾರೆಂದು ಭಾವಿಸಿ ರೈಲು ರಕ್ಷಣೆಗೆಂದಿದ್ದ ಈ ಸೈನಿಕರು ದಾರಿ ಸಿಕ್ಕತ್ತ ಓಡತೊಡಗಿದರು. ಕೂಡಲೆ ರೈಲು ಗಾಡಿ ಕೂಡ ಇದ್ದಲ್ಲೇ ನಿಂತು ಅದರಲ್ಲಿದ್ದ ಸುಮಾರು ೧೫೦ ಜನರು ಎಂಜಿನ್ನು, ಶಸ್ತ್ರಾಸ್ತ್ರಗಳು, ಮದ್ದುಗುಂಡು ಹಾಗು ಆಹಾರದಿಂದ ತುಂಬಿದ್ದ ೧೩ ವ್ಯಾಗನ್ನುಗಳನ್ನು ತೊರೆದು ಪಲಾಯನ ಹೇಳಿದರು.

ಇದನ್ನು ಗುರುತಿಸಿದ ಭಾರತೀಯ ಸೈನ್ಯ ಮುನ್ನುಗ್ಗಿ ಬಂದು ಈ ಆಯಕಟ್ಟಿನ ಸ್ಥಳವನ್ನು ಯಾವ ವಿರೋಧವೂ ಇಲ್ಲದೆ ವಶಪಡಿಸಿಕೊಂಡಿತು. ಮುಂದೆ ಶತ್ರುವಿನ ಮುಖ್ಯ ಠಾಣ್ಯ ಶರಣು ಬರಲು ಸಹ ಹೆಚ್ಚು ಸಮಯ ಹಿಡಿಯಲಿಲ್ಲ.

ಕಮ್ಯಾಂಡೊಗಳು ಸಮರದಲ್ಲಿ ಪೂರೈಸಿದ ಕಾರ್ಯಗಳಲ್ಲಿ ಇದು ಒಂದು ಮಾತ್ರ. ಇಂಥ ಸಂದರ್ಭಗಳಲ್ಲಿ ಪ್ರಾಣ ಹಾನಿ ಅದೆಷ್ಟೊ, ಆದರೂ ಕಮ್ಯಾಂಡೊ ತನಗೆ ವಹಿಸಿಕೊಟ್ಟ ಕಾರ್ಯವನ್ನು ನಿರ್ವಹಿಸಲು ತದೇಕಚಿತ್ತನಾಗಿ ಮುನ್ನುಗ್ಗುತ್ತಲೇ ಇರುತ್ತಾನೆ.

ಹಾಗಿದ್ದರೆ ಈ ಕಮ್ಯಾಂಡೊ ಯಾರು? ಪತ್ರಿಕೆ ಓದುವವರಿಗೆ, ರೇಡಿಯೊ ಸುದ್ದಿ ಕೇಳುವವರಿಗೆ ಈ ಶಬ್ದ ಮೇಲಿಂದ ಮೇಲೆ ಕಿವಿಗೆ ಬೀಳುತ್ತದೆ. ಕಮ್ಯಾಂಡೊಗಳೆನ್ನುವವರ ಅನೇಕ ಸಾಹಸ ಕೃತ್ಯಗಳ, ಭಯಾನಕ ಕಾರ್ಯಗಳ ಬಗ್ಗೆ ರಕ್ತ ಹೆಪ್ಪುಗಟ್ಟಿಸುವಂಥ ವರದಿಗಳು ಬರುತ್ತವೆ. ಆದರೂ ಅವನ ಗುಣಧರ್ಮ, ತರಬೇತಿ ಮುಂತಾದ ಯಾವುದರ ಬಗೆಗೂ ಜನಕ್ಕೆ ಅಷ್ಟಾಗಿ ಗೊತ್ತಿಲ್ಲ.

ಕಮ್ಯಾಂಡೊ ಶಬ್ದದ ಅರ್ಥವನ್ನು ಶಬ್ದಕೋಶಗಳಲ್ಲಿ ಸ್ಪಷ್ಟೀಕರಿಸಿಲ್ಲ: ಅವನೊಬ್ಬ ವಿಶಿಷ್ಟ ತರಬೇತಿ ಹೊಂದಿದ ಸೈನಿಕನೆಂದಿಷ್ಟೇ ಹೇಳಿದೆ. ಕೆಲವರು ಇವನನ್ನು ಕೂಟಯೋಧನೆಂದೂ ಕರೆದಿದ್ದಾರೆ. ಕಮ್ಯಾಂಡೊ ಕೂಡ ನಮ್ಮೆಲ್ಲರಂತೆ ಒಬ್ಬ ವ್ಯಕ್ತಿ, ಆದರೆ ಅತಿ ವಿಶಿಷ್ಟವಾದ ವ್ಯಕ್ತಿ; ತನ್ನ ದೇಹಸಾಮರ್ಥ್ಯದಿಂದಲೂ ಮನಸ್ಸಿನ ಸದೃಢತೆಯಿಂದಲೂ ಅಸಂಭವವೆನಿಸಿದ್ದನ್ನು ಮಾಡಬಲ್ಲ ವ್ಯಕ್ತಿ. ವೈರಿ ಠಾಣ್ಯಗಳ ಒಳಭಾಗಗಳಲ್ಲಿ, ಹಿಂಭಾಗಗಳಲ್ಲಿ, ಎತ್ತ ನೋಡಿದರೂ ಪ್ರತಿಕೂಲವಾಗಿರುವ ಪರಿಸ್ಥಿತಿಗಳಲ್ಲಿ ಕೈಕೊಳ್ಳುವ ಸಮರ ಚಟುವಟಿಕೆಗಳೇ ಕಮ್ಯಾಂಡೊ ದಾಳಿಗಳು. ಇವುಗಳ ಯಶಸ್ಸು ಈ ಪಡೆಗಳು ಹೊಂದಿರುವ ನಾಯಕತ್ವ, ಅವುಗಳ ಚಲನಸಾಮರ್ಥ್ಯ (mobility) ಮತ್ತು ಅವುಗಳ ಕಾರ್ಯಪದ್ಧತಿಯಲ್ಲಿ ಅಡಗಿರುವ ಅನಿರೀಕ್ಷಿತತೆಗಳನ್ನೇ ಅವಲಂಬಿಸಿದೆ.

ಮೊಗಲರ ಮೇಲೆ ರಾಜಪೂತರೂ ಮರಾಠರೂ ಆಗೀಗ ನಡೆಸುತ್ತಿದ್ದ ಮಿಂಚಿನ ದಾಳಿಗಳ ಯಶಸ್ಸುಗಳನ್ನು ಭಾರತದ ಇತಿಹಾಸ ಸಾರುತ್ತದೆ. ಶತ್ರು ಗುಂಪುಗಳ ಮೇಲೆ ಅಚಾನಕವಾಗಿ ಎರಗಿ ನಂತರ ಇವರು ಗಾಳಿಯಲ್ಲಿ ಮರೆಯಾಗಿ ಹೋಗುತ್ತಿದ್ದುದರಿಂದ ಮೊಗಲರ ಸ್ಥೈರ್ಯವೇ ಅಡಗಿಹೋಗುತ್ತಿತ್ತು. ಈ ತರಹದ ದಾಳಿಗಳೇ ಇತ್ತೀಚೆಗೆ ಬಳಕೆಯಲ್ಲಿ ಬಂದ ಕಮ್ಯಾಂಡೊ* ದಾಳಿಗಳು. ಅಂದಿನ ರಾಜಪೂತ ಮತ್ತು ಮರಾಠರ ಕಾಲದ ಅನುಭವವೇ ಇಂದಿನ ಕಮ್ಯಾಂಡೊ

---

* 'ಕಮ್ಯಾಂಡೋ' ಮೂಲತಃ ಪೋರ್ತುಗೀಜ್ ಭಾಷೆಯ ಶಬ್ದ; ಅದರರ್ಥ 'ಆಜ್ಞೆ' ಎಂದು.

ರಚನೆಗೆ ಸಾಕಷ್ಟು ಸ್ಫೂರ್ತಿಯನ್ನು ನೀಡಿರಬಹುದು.

ದಕ್ಷಿಣ ಆಫ್ರಿಕದಲ್ಲಿ ೧೯೦೪ ರಲ್ಲಾದ ಬೋರ್ ಯುದ್ಧದಲ್ಲಿ ಈ ತಂತ್ರ ಮೊಟ್ಟ ಮೊದಲು ಪ್ರಯೋಗಿಸಲ್ಪಟ್ಟಿತು. ಆಗ ಬ್ರಿಟಿಶ್ ಪತ್ರಿಕೆಯೊಂದರ ಯುದ್ಧ ಸುದ್ದಿಗಾರನೆಂದು ಅಲ್ಲಿಗೆ ಹೋಗಿದ್ದ ವಿನ್‌ಸ್ಟನ್ ಚರ್ಚಿಲ್ಲರ ಮನಸ್ಸಿನ ಮೇಲೆ ಈ ಯುದ್ಧತಂತ್ರ ಭಾರಿ ಪರಿಣಾಮವನ್ನುಂಟುಮಾಡಿತು. ಸ್ವತಃ ಅವರು ಕೂಡ ಕಮ್ಯಾಂಡೊಗಳ ಪೆಟ್ಟುಗಳಿಂದ ಅನೇಕ ಸಲ ಗಾಸಿಗೊಳ್ಳಬೇಕಾಯಿತು. ಅಂದಿನಿಂದ ಕಮ್ಯಾಂಡೊ ಶಬ್ದ ಸಮರಶಾಸ್ತ್ರದಲ್ಲೂ ಅದರ ಪಠ್ಯಪುಸ್ತಕಗಳಲ್ಲೂ ಉಪಸ್ಥಿತವಾಯಿತು. ಚರ್ಚಿಲ್ಲರ ಈ ಅನುಭವವೇ ಆಧುನಿಕ ಯುದ್ಧತಂತ್ರದಲ್ಲಿ ಕಮ್ಯಾಂಡೊ ದಳಗಳಿಗೆ ಮಹತ್ವದ ಸ್ಥಾನ ದೊರೆಯುವುದಕ್ಕೆ ಕಾರಣವಾಯಿತು. ಎರಡನೆಯ ಮಹಾಯುದ್ಧಕಾಲದಲ್ಲಿ ಕಮ್ಯಾಂಡೊ ದಳಗಳ ವ್ಯವಸ್ಥೆಯಲ್ಲಿ ಆಧುನೀಕರಣವಾಯಿತು. ಯುರೋಪಿನಲ್ಲಿ ಹಿಟ್ಲರನ ಜರ್ಮನಿಯನ್ನು ಎದುರಿಸಿ ಚರ್ಚಿಲ್ಲರ ಬ್ರಿಟನ್ನು ಏಕಾಕಿಯಾಗಿ ನಿಲ್ಲಬೇಕಾಗಿ ಬಂದಾಗ, ಉತ್ತಮ ತರಬೇತಿ ಕೊಟ್ಟು ತೀಡಿದ ಬ್ರಿಟಿಷರ ಚಿಕ್ಕಚಿಕ್ಕ ಕಮ್ಯಾಂಡೊ ತುಕ್ಕಡಿಗಳು ಸಮುದ್ರ ದಾಟಿ ಯುರೋಪಿನಲ್ಲಿಯ ಆಯಕಟ್ಟಿನ ಠಾಣ್ಯಗಳ ಮೇಲೆ ಅತಿ ಸಾಹಸದ ದಾಳಿಗಳನ್ನು ಮಾಡತೊಡಗಿದವು. ೧೯೪೦ರಲ್ಲಿ ಡಂಕರ್ಕ್‌ನಿಂದ ಬ್ರಿಟಿಷ್ ಸೈನ್ಯ ಇದ್ದುಬಿದ್ದಷ್ಟು ಮರಳಿ ಬಂದೊಡನೆಯೇ ಕಮ್ಯಾಂಡೊಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವ ಯೋಜನೆ ಮತ್ತು ತರಬೇತಿ ನಡೆದಿದ್ದವು. ಈ ಕಮ್ಯಾಂಡೊ ದಾಳಿಗಳಲ್ಲಿ ಕೆಲವು ಯಶಸ್ವಿಯಾದರೆ ಇನ್ನು ಹಲವು ವಿಫಲವಾಗಿ ದಾಳಿಗಾಗಿ ಹೋದವರು ಕೂಡ ಮರಳಿ ಬರಲಿಲ್ಲ. ಆದರೆ ಈ ಕಮ್ಯಾಂಡೊಗಳ ಸಾಹಸ, ಎದೆಗಾರಿಕೆ, ಮಿಂಚು ಜರ್ಮನ್ನರನ್ನು ಚಕಿತಗೊಳಿಸಿದುವು; ಅವರ ಮನಃಸ್ಥೈರ್ಯವನ್ನು ಕದಡಿದುವು. ಯುದ್ಧ ವಿಸ್ತರಿಸಿದಂತೆ ಕಮ್ಯಾಂಡೊ ತುಕ್ಕಡಿಗಳು ದೊಡ್ಡದೊಡ್ಡ ಗುಂಪುಗಳಾಗಿ ಮಾರ್ಪಟ್ಟವು. ಜರ್ಮನಿ, ಜಪಾನುಗಳನ್ನು ಸೋಲಿಸುವಲ್ಲಿ ಮಿತ್ರ ರಾಷ್ಟ್ರಗಳ ಕಮ್ಯಾಂಡೊಗಳು ಸೈನ್ಯವಿಭಾಗಗಳಲ್ಲಿ ತಮ್ಮದೇ ಒಂದು ವಿಶಿಷ್ಟ ಸ್ಥಾನ ಪಡೆದು ಸಮರ ಇತಿಹಾಸದ ಪುಟಗಳನ್ನು ರಂಜಿಸತೊಡಗಿದುವು.

ಬ್ರಿಟನ್ನಿನಲ್ಲಿ ಪ್ರಾರಂಭದಲ್ಲಿ ಕಮ್ಯಾಂಡೊ ಸೈನಿಕರನ್ನು ತಮ್ಮ ಸೈನ್ಯಪಡೆಯಿಂದಲೇ ಆರಿಸುತ್ತಿದ್ದರು. ಕ್ರಮೇಣ ನೌಕಾಪಡೆಯ ವಿಶಿಷ್ಟ ಭಾಗವಾದ ರಾಯಲ್ ಮರೀನ್ಸ್‌ನಿಂದಲೂ ಆಯ್ಕೆಮಾಡಿ ಕಮ್ಯಾಂಡೊ ದಳಗಳಲ್ಲಿ ಸೇರಿಸಹತ್ತಿದರು. ಮಹಾಯುದ್ಧಾನಂತರದಲ್ಲಿ ಕಮ್ಯಾಂಡೊ ಪಡೆಯ ಸಂಪೂರ್ಣ ಹೊಣೆಯನ್ನು ರಾಯಲ್ ಮರೀನ್ಸ್ ಹೊತ್ತಿದೆ. ಅನುಭವದ ಫಲವಾಗಿ ಈಗ ಬ್ರಿಟಿಷ್ ರಾಷ್ಟ್ರದ ರಕ್ಷಣಾ ಕವಚದಲ್ಲಿ ನವೀಕೃತವಾದ, ಉಚ್ಚ ತರಬೇತಿ ಹೊಂದುತ್ತಿರುವ ಕಮ್ಯಾಂಡೊ ಪಡೆಗಳಿಗೆ ಬಲು ಮಹತ್ವದ ಸ್ಥಾನವಿದೆ.

ಅಮೇರಿಕನ್ ಇತಿಹಾಸದ ಪುಟಗಳನ್ನು ಮಗುಚಿದಾಗ ಕಮ್ಯಾಂಡೊ ಮಾದರಿಯ ಯುದ್ಧತಂತ್ರದ ಉಪಯೋಗ ಅಲ್ಲಿ ಬಹಳ ಹಿಂದಿನಿಂದಲೂ ಇತ್ತೆಂಬುದು ಕಂಡುಬರುತ್ತದೆ.

'ದಿ ರೇಂಜರ್ಸ್' ಎಂಬ ಹೆಸರಿನ ಅಮೇರಿಕನ್ ಕಮ್ಯಾಂಡೊಗಳ ಇತಿಹಾಸವೆಂದರೆ ಧೈರ್ಯ, ಸಾಹಸ ಮತ್ತು ಅತ್ಯುತ್ತಮ ನಾಯಕತ್ವಗಳ ಒಂದು ರಂಜಕ ನೀಳ್ಗತೆ. ೧೭೫೬ರಲ್ಲಿ ನ್ಯೂ ಹ್ಯಾಂಪ್‌ಶಾಯರಿನ ರಾಬರ್ಟ್ ರೋಜರ್ಸ್ ಮೊಟ್ಟ ಮೊದಲು ರೇಂಜರ್ಸ್ ದಳವನ್ನು ಕಟ್ಟಿದ. ಕಾಡುಗಳಲ್ಲಿ, ಅರಣ್ಯಗಳಲ್ಲಿ ನಡೆಸುವ ಯುದ್ಧವಿದ್ಯೆಯಲ್ಲಿ ಈ ದಳಗಳು ಪಳಗಿದ್ದುವು. ಕಠಿಣ ಪ್ರದೇಶಗಳಲ್ಲಿ ಅತಿ ದೂರದವರೆಗೆ ನಡೆದು ಹೋಗುವುದರಲ್ಲಿ ಅಥವಾ ಸಾರಿಗೆ ಮಾಡುವಲ್ಲಿ ಇವು ಅಷ್ಟೇ ಪರಿಣತವಾಗಿದ್ದುವು. ಕ್ರಮೇಣ ಈ ಯುದ್ಧತಂತ್ರದಲ್ಲಿ ಹೆಚ್ಚಿನ ಬೆಳವಣಿಗೆಗಳಾಗುತ್ತ ಎರಡನೆಯ ಮಹಾಯುದ್ಧದಲ್ಲಿ ರೇಂಜರ್ ದಳಗಳು ಮಹಾಯುದ್ಧದ ಪ್ರಮುಖ ಕ್ಷೇತ್ರಗಳಲ್ಲೆಲ್ಲ, ಅಂದರೆ, ಬ್ರಹ್ಮದೇಶ, ಯುರೋಪ್ ಮತ್ತು ಫಿಲಿಪೈನ್ಸ್‌ಗಳಲ್ಲಿ ತಮ್ಮ ಸಾಹಸದ, ಶೌರ್ಯದ ಕೃತಿಗಳಿಂದ ಮೆರೆದವು. 'ಮೆರಿಲ್ಸ್ ಮರಾಡರ್ಸ್'

ಎಂಬ ರೇಂಜರ್ ದಳವು ಆಗ್ನೇಯ ಏಶಿಯಾ ಯುದ್ಧರಂಗದಲ್ಲಿ ಹೆಸರುವಾಸಿಯಾಗಿದೆ.

ಕಮ್ಯಾಂಡೊ ದಾಳಿಗಳ ಮುಖ್ಯ ಉದ್ದೇಶವೆಂದರೆ ಶತ್ರುಗಳ ಯುದ್ಧ ಯೋಜನೆಗಳನ್ನು ಕೆಡಿಸುವುದು. ಈ ಮುಖ್ಯೋದ್ದೇಶವನ್ನು ಸಾಧಿಸಲು ಕಮ್ಯಾಂಡೊಗಳಿಗೆ ಶತ್ರುವಿನ ಆಯುಕಟ್ಟಿನ ತಾಣ್ಯಗಳನ್ನು ನಾಶಮಾಡುವಂಥ ಗುರಿಗಳನ್ನು ನಿರ್ಧರಿಸಿ ಕೊಡುತ್ತಾರೆ. ಇಂಥ ಭಿನ್ನಭಿನ್ನವಾದ ಮಹತ್ವದ ವಿನಾಶಕಾರಕ ಧ್ಯೇಯಗಳನ್ನು ಈಡೇರಿಸಲು ಅವಶ್ಯವಾದ ಪರಿಪೂರ್ಣ ಯೋಜನೆಗಳನ್ನು ಪ್ರತ್ಯೇಕವಾಗಿ ಸಿದ್ಧಪಡಿಸುವ ಕರ್ತೃತ್ವ ಶಕ್ತಿ, ಮತ್ತು ಮಾನಸಿಕ ಶಕ್ತಿಗಳ ಸಂಗಮ ಕಮ್ಯಾಂಡೊ ಸೈನಿಕರಲ್ಲಿ ಇರಲೇಬೇಕು. ಸಾಮಾನ್ಯವಾಗಿ ಕಮ್ಯಾಂಡೊಗಳ ದಾಳಿಗೆ ತುತ್ತಾಗುವ ಶತ್ರು ಸ್ಥಾನಗಳೆಂದರೆ: (೧) ಸೇತುವೆ, ರಸ್ತೆ ಮತ್ತು ರೈಲು ದಾರಿಗಳು; (೨) ಟೆಲಿಫೋನ್ ಮತ್ತು ರೇಡಿಯೋ ಸಂಪರ್ಕ ಕೇಂದ್ರಗಳು; (೩) ಸಾರಿಗೆ ವಾಹನಗಳ ಗುಂಪುಗಳು; (೪) ತೋಫು ಅಥವಾ ಫಿರಂಗಿಗಳು; (೫) ಅಮ್ಯುನಿಶನ್ ಗುಂಡು, ಪೆಟ್ರೋಲ್ ಮತ್ತು ಖಾದ್ಯ ಸರಬರಾಜು ಸಂಗ್ರಹಗಳು; (೬) ಶತ್ರುವಿನ ಕೇಂದ್ರ ಸ್ಥಾನಗಳು—ಹೆಡ್ ಕ್ವಾರ್ಟರ್ಸ್; (೭) ವಿಮಾನ ನಿಲ್ದಾಣಗಳು.

ಇವಲ್ಲದೆ, ಕಮ್ಯಾಂಡೊಗಳನ್ನು ಹೊಂಚಿನ ದಾಳಿ, ಮಿಂಚಿನ ದಾಳಿ, ಗಸ್ತಿ, ಶತ್ರುವನ್ನು ಪರಿತಪಿಸುವ ಕ್ರಿಯೆ, ಸೆರೆಯಾಳುಗಳನ್ನು ತರುವುದಕ್ಕಾಗಿ ಮತ್ತು ಸ್ಥಳ ಪರೀಕ್ಷೆ ಅಥವಾ ಪರಿಶೋಧನೆಗಾಗಿಯೂ ಬಳಸುತ್ತಾರೆ

ಮೇಲ್ಕಾಣಿಸಿದ ಯುದ್ಧಕ್ರಿಯೆಗಳಲ್ಲಿ ಧುಮುಕುವ ಮೊದಲು ಅದರ ಪರಿಪೂರ್ಣ ಯೋಜನೆ, ಅದರಲ್ಲಿ ಭಾಗವಹಿಸುವ ಪ್ರತಿಯೊಂದು ಅಂಗದ ಸಹಕಾರ ಮತ್ತು ಇವೆಲ್ಲವುಗಳಿಗೆ ವಿಶಿಷ್ಟ ತರಬೇತಿ ಅವಶ್ಯವಿರುವವು.

## ಕಮ್ಯಾಂಡೊನ ವೈಶಿಷ್ಟ್ಯಗಳು

ಪ್ರತಿಕೂಲ ಪರಿಸರಗಳಲ್ಲಿಯೂ ಕಠಿಣವಾದ ಭೂಭಾಗಗಳಲ್ಲಿಯೂ ತಮ್ಮ ಉದ್ದೇಶವನ್ನು ನೆರವೇರಿಸುವುದೇ ಕಮ್ಯಾಂಡೊ ದಾಳಿಗಳ ನಿರಂತರವಾದ ಕ್ರಿಯೆ. ಕಲ್ಪನಾಸಾಮರ್ಥ್ಯವುಳ್ಳ ನಾಯಕತ್ವದಿಂದಲೂ ಚಲನಸಾಮರ್ಥ್ಯದಿಂದ ಶತ್ರುವಿಗೆ ಅರಿವಾಗದಂತೆ ಹೊಡೆಯುವ ದಾಳಿ ಧಕ್ಕೆಗಳಿಂದಲೂ ಕಮ್ಯಾಂಡೊ ಕಾರ್ಯಾಚರಣೆಗೆ ಯಶಸ್ಸು ದೊರಕುವುದು. ಈ ದಾಳಿಗಳು ತೀವ್ರಗಾಮಿ, ಕ್ರೂರ ಮತ್ತು ಮಿಂಚಿನಂತೆ ಕ್ಷಣಿಕವಾಗಿರುವವು. ಪರಿಸ್ಥಿತಿಯನ್ನು ಪಾರಜದಂತೆ ಇಡಲು ಸದಾ ಪ್ರಯತ್ನಿಸುತ್ತ ಕಮ್ಯಾಂಡೋಗಳು ಅನಿರೀಕ್ಷಿತ ದಿಶೆ, ಅನಿರೀಕ್ಷಿತ ಸಮಯ ಮತ್ತು ಅನಿರೀಕ್ಷಿತ ಸ್ಥಾನದಲ್ಲಿ ಶತ್ರುಗಳ ಮೇಲೆ ಮುಗಿಬೀಳುವರು. ಇದಕ್ಕಾಗಿ ಅವರಲ್ಲಿ ಕೆಲವೊಂದು ಗುಣಗಳ ಅವಶ್ಯಕತೆ ಇದೆ.

### ನಾಯಕತ್ವ

ಕಮ್ಯಾಂಡೊ ದಾಳಿಗಳು ಯಶಸ್ವಿಯಾಗಬೇಕಾದರೆ ಆಯಾ ಗುಂಪುಗಳಲ್ಲಿ ಅತಿ ಉನ್ನತ ಮಟ್ಟದ ನಾಯಕತ್ವ ಇರಲೇಬೇಕು. ಗುಂಪಿನ ನಾಯಕನು ತನುಮನಗಳಿಂದ ಒಳ್ಳೇ ಧೀರನಿರಲೇಬೇಕಲ್ಲದೆ ಕೈಕೊಂಡ ದಾಳಿಯ ಪ್ರತಿ ಹಂತದಲ್ಲಿಯೂ ಪ್ರತಿ ಹೆಜ್ಜೆಯಲ್ಲಿಯೂ ತನ್ನ ಕೃತಿಗಳಿಂದ ಆದರ್ಶ ನೀಡಿ ಇತರರು ತನ್ನನ್ನು ಅನುಸರಿಸುವಂತೆ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

### ಚಲನಸಾಮರ್ಥ್ಯ

ಚಿಕ್ಕ ಪುಟ್ಟ ಗುಂಪುಗಳಲ್ಲಿ ಬಂದು ಶತ್ರು ಸ್ಥಾನದಲ್ಲಿ ಆಯ್ದ ಗುರಿಯ ಮೇಲೆ ಮಿಂಚಿನ ದಾಳಿಯನ್ನು ಮಾಡಿ ನುಸುಳಿಕೊಂಡು ಹೋಗಲು ಸಾಧ್ಯವೇ ಹೊರತು ಕಮ್ಯಾಂಡೊ ಆ ದಾಳಿಯನ್ನು ಮುಂದುವರಿಸಿಕೊಂಡು ಹೋಗಲಾರ. ಆದುದರಿಂದ ಕಮ್ಯಾಂಡೊ ದಾಳಿಗಳಿಗಾಗಿ ಗುರಿಗಳನ್ನು ಆಯ್ಕೆ ಮಾಡುವಾಗ ಅಲ್ಲಿ ಶತ್ರುವಿಗೆ ತನ್ನ ಚಲನಸಾಮರ್ಥ್ಯವನ್ನು ಉಪಯೋಗಿಸಲು ಸಾಧ್ಯವಾಗದಂತೆ ದುರ್ಗಮ ಸ್ಥಾನಗಳನ್ನೇ ಲಕ್ಷ್ಯವಾಗಿಸಬೇಕಾಗುವುದು. ಸಾಮಾನ್ಯವಾಗಿ ಸೈನಿಕ ದಾಳಿಗಳಿಗೆ, ಆಗಮನ-ನಿರ್ಗಮನಗಳಿಗೆ ದುಸ್ಸಾಧ್ಯವೆನಿಸುವಂಥ ಸ್ಥಳಗಳನ್ನೇ ಕಮ್ಯಾಂಡೊ ತನ್ನ ಕಾರ್ಯಾಚರಣೆಗಳಿಗೆ ಆಯ್ದುಕೊಳ್ಳುವನು. ಇದಕ್ಕಾಗಿ ಅವನಲ್ಲಿ ಅತಿ ಮೇಲ್ತರಗತಿಯ ಶಾರೀರಿಕ ಬಲ ಅತ್ಯವಶ್ಯ.

ಅಷ್ಟೇ ಅಲ್ಲ, ಎಂಥ ದುರ್ಗಮ ಭೌಗೋಲಿಕ ಪರಿಸರದಲ್ಲೂ ಚಪಲತೆಯಿಂದ ಚಲಿಸಬಲ್ಲಂಥ ಚಲನಸಾಮರ್ಥ್ಯ, ಚಾಕಚಕ್ಯತೆ ಅನಿವಾರ್ಯ.

## ತನುಮನ ದಾರ್ಢ್ಯ

೪೦ ಮೈಲುಗಳ ವರೆಗೆ ಸತತವಾಗಿ ನಡೆದು ಮಲಿನವಾದ ಬಿರುಸಾದ ಭೂಮಿಯ ಮೇಲೆ ನಿದ್ರಿಸಿ, ಅವಶ್ಯ ಬಿದ್ದಾಗ ಹುಲ್ಲು ಹಾವುಗಳನ್ನೂ ತಿಂದು, ನಂತರದಲ್ಲಿ ಅದೇ ಚಪಲತೆಯಿಂದ, ಅದೇ ಕುಶಾಗ್ರತೆಯಿಂದ ಶತ್ರುವಿನ ಮೇಲೆ ಮಿಂಚಿನ ದಾಳಿ ಮಾಡುವಂಥ ತನುಮನ ದಾರ್ಢ್ಯಗಳನ್ನು ಪಡೆದಿರಬೇಕು, ಕಮ್ಯಾಂಡೋ ಸೈನಿಕ.

## ವಂಚನೆ

ಸಹಸಾ ಕಮ್ಯಾಂಡೋಗಳು ಚಿಕ್ಕ ಚಿಕ್ಕ ಗುಂಪುಗಳಲ್ಲಿದ್ದು ಹೆಚ್ಚು ಸಂಖ್ಯಾಬಲವುಳ್ಳ ಶತ್ರುವಿನ ಮೇಲೆ ದಾಳಿ ಮಾಡುವವು. ಆದ್ದರಿಂದ ದಾಳಿಯ ಅರಿವು, ಸುಳಿವು ಕೂಡ ಹತ್ತದಂತೆ ಶತ್ರುವನ್ನು ಬೆಕ್ಕಸಬೆರಗುಗೊಳಿಸಿದರೇನೇ ದಾಳಿ ಕೈಕೊಂಡ ಕಮ್ಯಾಂಡೋಗಳಲ್ಲಿ ಸಾವು ನೋವು ಕಡಿಮೆ ಆಗುವವು. ಯೋಜನೆಯಲ್ಲಿ, ಕಾರ್ಯಾಚರಣೆಯಲ್ಲಿ ಶತ್ರುವಂಚನೆ ಬೇಕು. ಸದಾಕಾಲವೂ ತಮ್ಮ ಉದ್ದೇಶ ಮತ್ತು ಚಲನವಲನಗಳ ಸುಳಿವು ಹತ್ತಗೊಡದೆ ಶತ್ರುವನ್ನು ಸಂದಿಗ್ಧದಲ್ಲಿ ಇಟ್ಟಿರಬೇಕು.

## ಸ್ವಾರಂಭಪ್ರಚೋದನೆ

ಕಮ್ಯಾಂಡೋ ದಾಳಿಗಳ ಇನ್ನೊಂದು ವೈಶಿಷ್ಟ್ಯವೆಂದರೆ ಹೊರಗಿನಿಂದ ಕೈಹಿಡಿದು ಮಾರ್ಗದರ್ಶನ ಮಾಡುತ್ತ, ದಾಳಿಯನ್ನು ಮುಂದೆ ಸಾಗಿಸಲು ಬಾರದು. ದಾಳಿ ನಡೆದಾಗ ಅದಕ್ಕೆ ಹೆಚ್ಚಿನ ಬಲವನ್ನು ತುಂಬಲೂ ಆಗದು. ಚಿಕ್ಕ ಕಮ್ಯಾಂಡೋ ದಳಗಳು ನಿರ್ದಿಷ್ಟಪಡಿಸಿದ ಗುರಿಗಳನ್ನು ಸಾಧಿಸುವಲ್ಲಿ ಸ್ವಾವಲಂಬಿಗಳಾಗಿರಬೇಕು. ಅದಕ್ಕಾಗಿ ಕಮ್ಯಾಂಡೊ ಸೈನಿಕ ಪ್ರಾರಂಭಪ್ರಚೋದನೆಯಲ್ಲಿ ಪರಿಣತನಿರಲೇಬೇಕು.

## ಶಿಸ್ತು

ಮುಖ್ಯವಾಗಿ ಶಿಸ್ತು, ಸಂಘಟನೆ ಇಲ್ಲದಿರುವ ಯೋಧರು ಅತಿ ಪ್ರಯಾಸದ ಮತ್ತು ಕಠಿಣ ಪ್ರಸಂಗಗಳಲ್ಲಿ ಹಿಂಜರಿದು ಚದುರಿ ಹೋದ ಸನ್ನಿವೇಶಗಳನ್ನು ಯುದ್ಧದ ಅನುಭವಗಳು ಎತ್ತಿ ತೋರಿಸಿವೆ. ಕಮ್ಯಾಂಡೊ ಸೈನಿಕರಂತೂ ಅತೀವ ಪ್ರಯಾಸದ ಪರಿಸರದಲ್ಲಿಯೇ ಕಠಿಣಾತಿಕಠಿಣ ವಾತಾವರಣದಲ್ಲಿ ಹೋರಾಡಬೇಕಾಗುವುದು. ಆದ್ದರಿಂದ ಕಮ್ಯಾಂಡೋನಲ್ಲಿ ಉನ್ನತ ಮಟ್ಟದ ಶಿಸ್ತು ಮತ್ತು ಪರಸ್ಪರ ಸಹಕಾರ ಪ್ರಾಮುಖ್ಯವಾಗಿ ಇರಬೇಕು.

## ಚುರುಕು

ಕಮ್ಯಾಂಡೋ ದಾಳಿಗಳು ವೈರಿ ಪ್ರದೇಶದಲ್ಲಿ ಹಾಗೂ ವೈರಿಯ ಸುಯೋಜಿತ ರಕ್ಷಣಾವಿಧಾನಗಳ ವಿರುದ್ಧವಾಗಿ ನಡೆಯುತ್ತವೆ. ಅದಕ್ಕಾಗಿ ಕಮ್ಯಾಂಡೋ ಸೈನಿಕ ಜೀವದಿಂದಿರಬೇಕಾದಲ್ಲಿ ಸದಾಕಾಲ ಜಾಗರೂಕನಾಗಿ ಇರಲೇಬೇಕು.

## ತರಬೇತಿ


ಕಮ್ಯಾಂಡೋನಿಗೆ ಅವಶ್ಯವಾದ ಮೇಲೆ ಕಾಣಿಸಿದ ಗುಣಗಳ ಸಂಪಾದನೆಗಾಗಿ ಅವನಿಗೆ ನೀಡುವ ತರಬೇತಿಯು ದಾಳಿ ಸನ್ನಿವೇಶಗಳ ನೈಜತೆಯನ್ನು ಹೊಂದಿದ್ದಾಗಿರಬೇಕಲ್ಲದೆ, ಕಠಿಣವಾಗಿ, ಕೆಲ ಮಟ್ಟದಲ್ಲಿ ಗಂಡಾಂತರಕಾರಿಯಾಗಿಯೂ ಇರಲೇಬೇಕಾಗುವುದು. ಅಮೇರಿಕದ ಸುಪ್ರಸಿದ್ಧ ಜನರಲ್ ಪ್ಯಾಟನ್ನನ ಶಬ್ದಗಳನ್ನು ಇಲ್ಲಿ ನೆನೆಯಬಹುದು. "ಯಾವ ಮಗನೂ ತಾನು ಸತ್ತು ಯುದ್ಧ ಗೆದ್ದಿಲ್ಲ: ಆದರೆ ವೈರಿ ಸೂಳೇಮಗನನ್ನು ಕೊಂದು ಯುದ್ಧ ಗೆದ್ದಿರುವ." ಕಮ್ಯಾಂಡೊ ಅಂದರೆ ಆತ್ಮಹತ್ಯಾತಂಡ (suicide squad) ಅಲ್ಲ. ಆದರೆ ಕಮ್ಯಾಂಡೊ ಸೈನಿಕನ ತರಬೇತಿ ಮಾತ್ರ ಉಗ್ರವಿದ್ದು ಅವನ ತನುಮನಗಳ ಸಾಮರ್ಥ್ಯಗಳನ್ನು ಹೆಜ್ಜೆಹೆಜ್ಜೆಗೂ ಒರೆಗೆ ಹಚ್ಚುವಂಥದ್ದಿರುತ್ತದೆ. ಹೊಸ ವಿಚಾರಗಳಿಂದಲೂ ನವೀನತೆಯಿಂದಲೂ ಸಾಂಪ್ರದಾಯಿಕತೆಯನ್ನು ಬದಿಗಿಟ್ಟು ಕಲಿಸುವ ರೀತಿಗಳಿಂದಲೂ ಕೂಡಿದ ನಮ್ಮ ಭಾರತೀಯ ಕಮ್ಯಾಂಡೋಗಳ ತರಬೇತಿಯು ವಿಶ್ವದಲ್ಲಿಯೇ ದೃಢವಾದವುಗಳಲ್ಲಿ ಒಂದು ಎಂದು ಪರಿಗಣಿಸಲ್ಪಡುತ್ತದೆ. ▲

# ಆತ ಬಂಗಾರ ಮಾಡಿದನೆ?

ಬಾಬೂರಾವ್

೭೦ದು ವರ್ಷದಿಂದ ಅವಿರತವಾಗಿ ಪ್ರಯೋಗ ನಡೆಸುತ್ತಿದ್ದ ಆತ ಗಿಲ್‌ಫೋರ್ಡಿನಲ್ಲಿರುವ ಪ್ರಯೋಗಶಾಲೆಯ ಗೂಡಿನಿಂದ ಹೊರಬಿದ್ದು, ತಾನು ಕೃತಕವಾಗಿ ಚಿನ್ನ ತಯಾರಿಸುವ ವಿಧಾನವನ್ನು ಕಂಡುಹಿಡಿದಿದ್ದೇನೆಂದು ಹೇಳಿದಾಗ ಇಂಗ್ಲಂಡಿನಲ್ಲೆಲ್ಲಾ ಆಶ್ಚರ್ಯದ ಅಲೆಗಳೆದ್ದವು. ಆತ ಅಷ್ಟಕ್ಕೆ ಸುಮ್ಮನಾಗದೆ ಕೃತಕವಾಗಿ ಬೆಳ್ಳಿಯನ್ನೂ ತಯಾರಿಸಬಲ್ಲೆನೆಂದು ಹೇಳಿದಾಗ ಅಲ್ಲಿನ ಜನರ ಆಶ್ಚರ್ಯಕ್ಕೆ ಮಿತಿಯೆ ಉಳಿಯಲಿಲ್ಲ. ಹೀಗೆ ಜನರನ್ನು ಬೆರಗುಗೊಳಿಸುವ ಹೇಳಿಕೆ ಕೊಟ್ಟವ ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ೧೭೭೭ ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಎಂ. ಎ. ಪದವಿ ಪಡೆದು ೧೭೮೧ ರಲ್ಲಿ ರಾಯಲ್ ಸೊಸಾಯಿಟಿಯ ಸದಸ್ಯತ್ವವನ್ನೂ ಆತ ಗಿಟ್ಟಿಸಿದ್ದ. ವೈಜ್ಞಾನಿಕ ಕ್ಷೇತ್ರದಲ್ಲಿ ಆತ ಸಾಕಷ್ಟು ಕೆಲಸ ಮಾಡಿರಲಿಲ್ಲವಾದರೂ ರಾಜ-ಖಗೋಲಶಾಸ್ತ್ರಿಯಾದ ಡಾನ್ ಸೋಲಂಡರ್ ಹಾಗೂ ರಿಚರ್ಡ್ ಕಿರವಾನರಂಥ ಪ್ರಸಿದ್ಧ ರಸಾಯನ ಶಾಸ್ತ್ರಿಗಳು ಅವನ ಸದಸ್ಯತ್ವವನ್ನು ಅನುಮೋದಿಸಿದ್ದರು.

ಯಾರೀತ? ಅವನೇ ಇನ್ನೂ ಮೂವತ್ತರ ಗಡಿಯನ್ನು ದಾಟದ ಜೇಮ್ಸ್ ಪ್ರೈಜ್. ಹಾದೆ ನೋಡಿದರೆ ಅವನ ಹೆಸರು ಅದಲ್ಲ. ಅದು ಅವನ ಸೋದರಮಾವನಿಂದ ಬಳುವಳಿಯಾಗಿ ಬಂದದ್ದು. ಅವನ ನಿಜವಾದ ಹೆಸರು ಜೇಮ್ಸ್ ಹಿಗ್ಗಿನ್ ಬಾಥಮ್. ೧೭೫೨ ರಲ್ಲಿ ಜನಿಸಿದ್ದ ಆತ ಎಂ. ಎ. ಮುಗಿಸಿದ ನಾಲ್ಕು ವರ್ಷಗಳ ನಂತರ ಅವನ ಮಾವ ಜೇಮ್ಸ್ ಪ್ರೈಜನು ಹಿಗ್ಗಿನ್‌ಬಾಥಮ್‌ನನ್ನು ಸಂಧಿಸಿ, ತನ್ನ ಅಡ್ಡ ಹೆಸರನ್ನು ಪ್ರೈಜ್ ಎಂದು ಬದಲಿಸಿಕೊಂಡರೆ ೧೦,೦೦೦ ಪೌಂಡಿನ ಭಾರಿ ಮೊತ್ತವನ್ನಲ್ಲದೆ ೧೩೦ ಪೌಂಡುಗಳಷ್ಟು ವಾರ್ಷಿಕ ಆದಾಯವುಳ್ಳ ಆಸ್ತಿ



ಯನ್ನೂ ಅವನಿಗೆ ಬಿಟ್ಟುಕೊಡುವುದಾಗಿ ಹೇಳಿದ. ಕರಾರನ್ನೊಪ್ಪಿಕೊಂಡು ಜೇಮ್ಸ್ ಹಿಗ್ಗಿನ್ ಬಾಥಮ್ ಜೇಮ್ಸ್ ಪ್ರೈಜನಾದ. ಹೀಗೆ ಒಮ್ಮೆಲೆ ಒದಗಿಬಂದ ಸಿರಿಸಂಪತ್ತು ಅವನಿಗೆ ರಾಯಲ್ ಸೊಸಾಯಿಟಿಯ ಸದಸ್ಯತ್ವವನ್ನು ಗಿಟ್ಟಿಸಿಕೊಳ್ಳಲು ತಕ್ಕಮಟ್ಟಿಗೆ ಸಹಾಯ ಮಾಡಿರಬಹುದು.

ರಾಯಲ್ ಸೊಸಾಯಿಟಿಯ ಸದಸ್ಯನಾದ ಕೂಡಲೆ ಆತ ಗಿಲ್‌ಫೋರ್ಡಿನಲ್ಲಿ ಸುಸಜ್ಜಿತವಾದ ಪ್ರಯೋಗಶಾಲೆಯನ್ನು ಸ್ಥಾಪಿಸಿ ಪಾರಜವನ್ನು ಬಂಗಾರ, ಬೆಳ್ಳಿಗಳಿಗೆ ಪರಿವರ್ತಿಸುವ ಸಂಶೋಧನೆಯಲ್ಲಿ ಮಗ್ನನಾದ. ಒಂದು ವರ್ಷದ ನಂತರ ಅವನು ತನ್ನ ಪ್ರಯೋಗ ಯಶಸ್ವಿಯಾಗಿದ್ದನ್ನು ಒಂದು ವಿದ್ವತ್ ಪತ್ರಿಕೆಯಲ್ಲಿ ಸಾರಿದ.

ಇದಾದ ನಂತರ ಕೆಲ ದಿನಗಳಲ್ಲೆ ಅವನು ತನ್ನ ಪ್ರಯೋಗಶಾಲೆಯಲ್ಲಿ ಸಾರ್ವಜನಿಕರೆದುರು—ಅವರಲ್ಲಿ ಕೆಲ ಗಣ್ಯವ್ಯಕ್ತಿಗಳು ಸೇರಿರುತ್ತಿದ್ದರು—ಪ್ರದರ್ಶನಗಳನ್ನೇರ್ಪಡಿಸಲಾರಂಭಿಸಿದ. ತನ್ನ ಸಂಶೋಧನೆಗಳ ಫಲವಾಗಿ ಆತ ಎರಡು ಬಗೆಯ ಪುಡಿಗಳನ್ನು ತಯಾರಿಸಿದ್ದ. ಒಂದರ ಬಣ್ಣ ಕೆಂಪು. ಅದನ್ನು ಪಾರಜದೊಡನೆ ಮಿಶ್ರ ಮಾಡಿದರೆ ತನ್ನ ತೂಕದ ಅರವತ್ತು ಪಟ್ಟು ಪಾರಜವನ್ನು ಅದು ಬಂಗಾರವಾಗಿ ಪರಿವರ್ತಿಸುತ್ತಿತ್ತು. ಇನ್ನೊಂದರ ಬಣ್ಣ ಬಿಳಿ. ಅದನ್ನು ಪಾರಜಕ್ಕೆ ಬೆರೆಸಿದರೆ ತನ್ನ ತೂಕದ ಐವತ್ತುಪಟ್ಟಿನಷ್ಟು ಪಾರಜವನ್ನು ಬೆಳ್ಳಿಯಾಗಿ ಪರಿವರ್ತಿಸುತ್ತಿತ್ತು. ಪ್ರಯೋಗದ ವಿಧಾನವೂ ಸರಳವಾಗಿತ್ತು: ಪಾರಜವನ್ನೂ ಪುಡಿಯನ್ನೂ ಕೂಡಿಸಿ ಭಟ್ಟಿಯಲ್ಲಿ ಕಾಸುವುದು. ಮಿಶ್ರಣ ಆರುವಷ್ಟರಲ್ಲಿ ಬಂಗಾರ ಅಥವಾ ಬೆಳ್ಳಿ ತಯಾರಾಗುತ್ತಿತ್ತು. ಪುಡಿ ತಕ್ಕ ಪ್ರಮಾಣದ ಪಾರಜವನ್ನು ಮಾತ್ರ ಬೆಳ್ಳಿ ಅಥವಾ ಬಂಗಾರಕ್ಕೆ ಪರಿವರ್ತಿಸುತ್ತಿತ್ತು. ಉಳಿದದ್ದು ಪಾರಜವಾಗಿಯೇ ಉಳಿಯುತ್ತಿತ್ತು.

೧೭೮೨ರ ಮೇ ಆರನೆಯ ತಾರೀಖಿನಿಂದ ಇಪ್ಪತ್ತೈದನೆಯ ತಾರೀಖಿನ ವರೆಗೆ ಜೇಮ್ಸ್ ಪ್ರೈಜ್ ಇಪ್ಪತ್ತು ಜನರೆದುರು ತನ್ನ ಪ್ರಯೋಗಗಳನ್ನೇರ್ಪಡಿಸಿದ. ಅದರಲ್ಲಿ ಇಬ್ಬರು ರಾಯಲ್ ಸೊಸಾಯಿಟಿಯ ಸದಸ್ಯರೂ ಸೇರಿದ್ದರು. ಈ ಸಮಯದಲ್ಲಿ ಅವನ ನಿಬಂಧವೊಂದು ಕ್ಲ್ಯಾರೆಂಡನ್ ಪ್ರೆಸ್ಸಿನಿಂದ ಪ್ರಕಟವಾಗಿದ್ದರಿಂದಲೂ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅವನ ಸಂಶೋಧನೆಗಾಗಿ ಎಂ. ಡಿ. ಪದವಿ ಕೊಟ್ಟಿದ್ದರಿಂದಲೂ ಚಿನ್ನಕ್ಕೆ ಮೆರಗುಕೊಟ್ಟಂತಾಗಿತ್ತು.

ಹಾಗಾದರೆ ಇದು ಜೇಮ್ಸ್ ಪ್ರೈಜನ ಮೂಲಭೂತ ಸಂಶೋಧನೆಯೆ? ಆತ ಹಾಗೇನೂ ಹೇಳಿಕೊಂಡಿರಲಿಲ್ಲ. ಪ್ರಾಚೀನ ಕಾಲದಲ್ಲಿ ಈ "ರಸವಿದ್ಯೆ"ಯ ಬಗ್ಗೆ ಸಾಕಷ್ಟು ಪ್ರಯೋಗಗಳಾಗಿದ್ದವು. ಅವುಗಳನ್ನು ಆಯಾ ಕಾಲದ ಲೇಖಕರು ತಮ್ಮ ತಮ್ಮ ಗ್ರಂಥಗಳಲ್ಲಿ ಬರೆದಿಟ್ಟಿದ್ದಾರೆ. ಅವರ ಬರಹಗಳಲ್ಲಿ ಉತ್ಪ್ರೇಕ್ಷೆಯಿದ್ದರೂ ಸತ್ಯದ ಅಂಶ ಸ್ವಲ್ಪವಾದರೂ ದೊರೆತೇ ದೊರೆಯುವುದು. ಆ ಜಾಡನ್ನನ್ನುಸರಿಸಿದರೆ ಸುಲಭವಾಗಿ ಕೀಳು ಲೋಹಗಳಿಂದ ಚಿನ್ನ ಹಾಗೂ ಬೆಳ್ಳಿ ಮಾಡುವ ವಿಧಾನ ಬೆಳಕಿಗೆ ಬರುವುದು ಎಂದಾತ ಹೇಳುತ್ತಿದ್ದ.

ಇಂಗ್ಲಂಡಿನಲ್ಲೆಲ್ಲಾ ಜೇಮ್ಸ್ ಪ್ರೈಜನ ಕೀರ್ತಿ ಹಬ್ಬಿತು. ಆದರೆ ಇಂಥ ಅಸಾಧ್ಯಕೋಟಿಯ ಮಾತನ್ನು ನಂಬುವುದು ವಿಜ್ಞಾನಿಗಳಿಗೆ ಅಶಕ್ಯವಾಗಿತ್ತು. ರಾಯಲ್ ಸೊಸಾಯಿಟಿಯ ಅಧ್ಯಕ್ಷನಾದ ಜೋಸೆಫ್ ಬ್ಯಾಂಕನಂತೂ ಇದೆಲ್ಲಾ ಮೋಸ, ನಾಲ್ಕು ಜನರಿಂದ ಶಹಭಾಸಗಿರಿಯನ್ನು ಗಿಟ್ಟಿಸುವುದಕ್ಕೆಂದೇ ಜೇಮ್ಸ್ ಪ್ರೈಜ್ ಈ ಉಪಾಯ ಕೈಕೊಂಡಿದ್ದಾನೆ ಎಂದು ದೃಢವಾಗಿ ನಂಬಿದ್ದ. ಜೇಮ್ಸ್ ಪ್ರೈಜನು ರಾಯಲ್ ಸೊಸಾಯಿಟಿಯ ಸದಸ್ಯನಾಗುವುದಕ್ಕೆ ಕಾರಣನಾದ ಕಿರ್ವಾನನೂ ಅವನತ್ತ ಸಂಶಯದ ದೃಷ್ಟಿಯಿಂದ ನೋಡಲಾರಂಭಿಸಿದ.

ಕೊನೆಗೊಮ್ಮೆ, ಜೋಸೆಫ್ ಬ್ಯಾಂಕ್ ಜೇಮ್ಸ್ ಪ್ರೈಜನಿಗೊಂದು ಕಟುವಾದ ಪತ್ರ ಬರೆದು, ರಾಯಲ್ ಸೊಸಾಯಿಟಿಯ ಸದಸ್ಯರೆ

ದುರು ಅವನ ಹೇಳಿಕೆಗಳನ್ನು ಪ್ರಯೋಗಸಿದ್ಧವಾಗಿ ಮಾಡಿ ತೋರಿಸುವಂತೆ ಹೇಳಿದ. ನಿಮ್ಮ ಸಂಶಯ ತಳಬುಡವಿಲ್ಲದ್ದು; ಸಾಕಷ್ಟು ಗಣ್ಯವ್ಯಕ್ತಿಗಳೆದುರೇ ತಾನು ಪ್ರಯೋಗ ಮಾಡಿತೋರಿಸಿದ್ದೇನೆ— ಎಂದಾತ ತಿರಸ್ಕಾರಪೂರ್ವಕವಾಗಿಯೆ ಅವನ ಪತ್ರಕ್ಕೆ ಉತ್ತರ ಬರೆದ. ಅದರಲ್ಲಿ ಆತ ಇನ್ನೂ ಒಂದು ಮಹತ್ವದ ಅಂಶವನ್ನು ಸೇರಿಸಿದ್ದ. ಅದೆಂದರೆ ಚಿನ್ನವನ್ನಾಗಲಿ ಬೆಳ್ಳಿಯನ್ನಾಗಲಿ ಈ ವಿಧಾನದಿಂದ ಕೃತಕವಾಗಿ ತಯಾರಿಸಬಹುದಾದರೂ ಅದರ ತಯಾರಿಕೆಯ ವೆಚ್ಚ ಬಹು ದುಬಾರಿಯಾಗುವುದರಿಂದ ಆರ್ಥಿಕವಾಗಿ ಪ್ರಯೋಗ ಪ್ರಯೋಜನಕರವಾಗಲಾರದು, ಎಂದು.

ಅಷ್ಟರಲ್ಲಿ ವಿಲಿಯಂ ಗೋಡ್‌ಸ್ಕಾಲ್ ಎಂಬಾತ ಜೋಸೆಫ್ ಬ್ಯಾಂಕನಿಗೂ ಜೇಮ್ಸ್ ಪ್ರೈಜನಿಗೂ ಮಧ್ಯಸ್ಥಿಕೆ ವಹಿಸಲು ಮುಂದೆ ಬಂದ. ಹಿಂದೊಮ್ಮೆ ಪ್ರೈಜನ ಪ್ರಯೋಗಗಳನ್ನು ನೋಡಿದವನೂ ಅವನಾಗಿದ್ದ. ಆತ ಜೇಮ್ಸ್ ಪ್ರೈಜನ ಬಳಿಗೆ ಹೋಗಿ, ಬೇರಾವುದೇ ಪ್ರಯೋಗ ಶಾಲೆಯಲ್ಲಿ ಪ್ರಯೋಗ ಮಾಡಿ ತೋರಿಸು; ಇಲ್ಲವಾದರೆ ನೀನು ತಯಾರಿಸಿದ ಪುಡಿಯ ರಹಸ್ಯವನ್ನಾದರೂ ಹೊರಗೆಡಹಿಬಿಡು ಎಂದಾಗ ಜೇಮ್ಸ್ ಪ್ರೈಜ್ ವಿಚಾರ ಮಾಡಲು ಕಾಲಾವಧಿ ಕೇಳಿದ. ಮುಂದೆ ಆರು ತಿಂಗಳು ಎಲ್ಲಿಯೂ ಅವನ ಸುದ್ದಿಯೇ ಇರಲಿಲ್ಲ.

ಅನಂತರ ಆತ ತನ್ನ ಪುಸ್ತಕದ ಜರ್ಮನ್ ಭಾಷಾಂತರವನ್ನು ಪ್ರಕಟಿಸುವುದಕ್ಕೋಸ್ಕರ ಜರ್ಮನಿಗೆ ಹೋಗಿದ್ದಾನೆಂಬುದು ಗೊತ್ತಾಯಿತು. ೧೭೮೩ರ ಅಗಸ್ಟಿನಲ್ಲಿ ಜೇಮ್ಸ್ ಪ್ರೈಜ್ ಗಿಲ್‌ಫೋರ್ಡಿಗೆ ಹಿಂದಿರುಗಿದಾಗ ಮೂವರು ಸದಸ್ಯರನ್ನೊಳಗೊಂಡ ರಾಯಲ್ ಸೊಸಾಯಿಟಿಯ ಪ್ರತಿನಿಧಿ ಮಂಡಲವೊಂದು ಅವನನ್ನು ಭೇಟಿಯಾಗಿ ತಮ್ಮೆದುರು ಪ್ರಯೋಗ ಮಾಡಿತೋರಿಸಬೇಕೆಂದು ಹೇಳಿತು.

ಜೇಮ್ಸ್ ಪ್ರೈಜ್ ಅವರನ್ನು ಆದರದಿಂದಲೇ ಬರಮಾಡಿಕೊಂಡ. ಪ್ರಯೋಗ ಮಾಡಿತೋರಿಸುವುದಾಗಿ ಹೇಳಿ, ಅವರನ್ನು ಪ್ರಯೋಗಶಾಲೆಯಲ್ಲಿ ಕೂಡಿಸಿದ. ಅನಂತರ ಉಪಕರಣವನ್ನು ಸಜ್ಜುಗೊಳಿಸತೊಡಗಿದ. ರಾಯಲ್ ಸೊಸಾಯಿಟಿಯ ಸದಸ್ಯರು ಬಹು ಉತ್ಸಾಹ, ಕುತೂಹಲಗಳಿಂದ ಅವನು ಪ್ರಯೋಗವನ್ನಾರಂಭಿಸುವುದನ್ನು ಎದುರುನೋಡುತ್ತಿದ್ದರು. ಅಷ್ಟರಲ್ಲೇ ಜೇಮ್ಸ್ ಪ್ರೈಜ್ ಬದಿಯಲ್ಲಿನ ಕೋಣೆಗೆ ಹೋದ. ಪ್ರಯೋಗಕ್ಕೆ ಅವಶ್ಯವಾದ ಆ ರಹಸ್ಯಮಯ ಪುಡಿಯನ್ನು ತರಲು ಬಹುಶಃ ಹೋಗಿರಬೇಕು ಎಂದು ಅಲ್ಲಿದ್ದವರು ಭಾವಿಸಿದರು. ಆದರೆ ಕೆಲವೇ ನಿಮಿಷಗಳ ನಂತರ ಜೇಮ್ಸ್ ಪ್ರೈಜ್ ತನ್ನ ಪ್ರಯೋಗ ಶಾಲೆಗೆ ಮರಳಿ ಬಂದಾಗ ಅವನ ಕೈಕಾಲುಗಳು ನಡುಗುತ್ತಿದ್ದವು. ಆತ ವಿಷವನ್ನು ಸೇವಿಸಿದ್ದು ಸ್ಪಷ್ಟವಾಗಿತ್ತು. ಕೆಲವೇ ಕ್ಷಣಗಳಲ್ಲಿ ಆತ ಸತ್ತುಹೋದ.

ಮೋಸ ಬಯಲಾಗುವುದನ್ನು ಕಂಡು ಆತ ಹೀಗೆ ಮಾಡಿರಬಹುದೆ? ಅಥವಾ ಅದಕ್ಕೆ ಇನ್ನೇನಾದರೂ ಕಾರಣವಿತ್ತೇ? ಇಲ್ಲವೆ ಅವಿರತ ಪರಿಶ್ರಮದಿಂದ ಹೊಸ ವಿಧಾನವೊಂದನ್ನು ಕಂಡುಹಿಡಿದ ಬಗ್ಗೆ ಮಹತ್ವದ ಸ್ಥಾನದಲ್ಲಿರುವ ಜನ ತನ್ನನ್ನು ಪ್ರೋತ್ಸಾಹಿಸದೆ ಸಂಶಯ, ತಿರಸ್ಕಾರದ ದೃಷ್ಟಿಯಿಂದ ನೋಡತೊಡಗಿದ್ದನ್ನು ಕಂಡು ರೋಸಿಹೋಗಿ ಆತ್ಮಹತ್ಯೆಮಾಡಿಕೊಂಡಿರಬಹುದೆ? ಅಥವಾ ಅವನ ಮರಣಕ್ಕೆ ಮತ್ತೇನಾದರೂ ಕಾರಣವಿತ್ತೆ?

ಅದೇನೇ ಇರಲಿ, ಈ ಪ್ರಕರಣದ ರಹಸ್ಯೋದ್ಘಾಟನೆಯಾಗುವುದು ಮಾತ್ರ ಅಸಾಧ್ಯ ಎಂಬುದು ನಿಸ್ಸಂಶಯ. ▲

# ರಾಮಪ್ರಸಾದನ ಕೊನೆಯ ದಿನ

ಮನ್ಮಥನಾಥ ಗುಪ್ತ

ಯಥಾಪ್ರಕಾರ ಮಧ್ಯಾಹ್ನ ಹನ್ನೆರಡು ಗಂಟೆಗೆ ಪಾಳಿ ಬದಲಾಗಿ ಹಳೆ ಕಾವಲುಗಾರರ ಸ್ಥಾನದಲ್ಲಿ ಹೊಸ ಕಾವಲುಗಾರರು ಬಂದ ಕೂಡಲೆ ಅವರು ಸೆರೆಮನೆಯ ಕೋಣೆಗಳನ್ನೂ ಬಾಗಿಲನ್ನೂ ಬಾಗಿಲಿಗೆ ಹಾಕಿದ ಕೀಲಿಯನ್ನೂ ಕೊನೆಗೆ ಕೋಣೆಯಲ್ಲಿದ್ದ ಕೈದಿಗಳನ್ನೂ ಲಕ್ಷ್ಯ-ಗೊಟ್ಟು ನೋಡಿದರು.

ಒಂದು ಕೋಣೆ ಖಾಲಿಯಾಗಿತ್ತು.

ಉಳಿದ ಮೂರು ಕೋಣೆಗಳಲ್ಲಿ ಫಾಶಿ ಶಿಕ್ಷೆ ವಿಧಿಸಲ್ಪಟ್ಟ ಮೂರು ಜನರಿದ್ದರು. ಲೋಹದ ತಟ್ಟೆಯನ್ನು ಊಟಕ್ಕಾಗಿ ಕೊಟ್ಟರೆ ಅದರಿಂದ ತಮ್ಮ ತಲೆಯನ್ನೇ ಒಡೆದುಕೊಂಡಾರೆಂದು ಲೋಹದ ತಟ್ಟೆಯ ಬದಲು ಮಣ್ಣಿನ ಹರಿವಾಣದಲ್ಲಿ ಅವರಿಗೆ ಊಟ ಕೊಡುತ್ತಿದ್ದರು. ಆದರೆ ಇಂದು ಯಾರೂ ಊಟವನ್ನೇ ಮಾಡಿರಲಿಲ್ಲ. ಹರಿವಾಣದಲ್ಲಿ ಬಡಿಸಿಟ್ಟ ಅನ್ನ ಹಾಗೇ ಇತ್ತು.

ಕಾವಲಿಗೆ ಬಂದ ರಾಮದಾಸ ಸುಮೇರರಿಬ್ಬರೂ ಪರಸ್ಪರ ದೃಷ್ಟಿವಿನಿಮಯ ಮಾಡಿಕೊಂಡು ಕೊನೆಯ ಕೋಣೆಯ ಹತ್ತಿರ ಕುಳಿತುಕೊಂಡರು ಹಾಗೆ ನೋಡಿದರೆ ಕಾವಲು ಮಾಡದೆ ಸುಮ್ಮನೆ ಕುಳಿತುಕೊಳ್ಳುವ ಅಪ್ಪಣೆ ಅವರಿ-ಗಿರಲಿಲ್ಲ ನಿಯಮದ ಪ್ರಕಾರ ಅವರಿಬ್ಬರೂ ಪರಸ್ಪರರಿಗೆ ವಿರುದ್ಧವಾದ ದಿಕ್ಕಿನಲ್ಲಿ ಸೆರೆಮನೆಯನ್ನು ಸುತ್ತುತ್ತ ಕಾವಲು ಮಾಡಬೇಕಾಗಿತ್ತು. ಯಾರಾದರೂ ಬರುತ್ತಿರುವುದು ದೂರದಿಂದ ಕಾಣಿಸಿದರೆ ಸರಕ್ಕನೆ ತಮ್ಮ ಸ್ಥಳ ಬಿಟ್ಟೆದ್ದು ಕಾವಲು ಮಾಡಲು ಅನುಕೂಲವಾಗುವುದೆಂದು ಅವರು ಕೊನೆಯ ಕೋಣೆಯ ಬಳಿ ಕುಳಿತಿದ್ದರು.

ನಾಲ್ಕನೆಯ ಕೋಣೆಯ ಕೃಪಾಲಸಿಂಹನನ್ನು ಅಂದು ಗಲ್ಲಿಗೇರಿಸಿದ್ದರಿಂದ ಸೆರೆಮನೆವಾಸಿಗಳು ಊಟ ಮಾಡಿಲ್ಲ ಎಂಬುದು ಕಾವಲುಗಾರರಿಗೆ ಚೆನ್ನಾಗಿ ಗೊತ್ತಿತ್ತು. ಇಡಿ ಫಾಶಿಗೃಹದಲ್ಲಿ ವಿಷಾದದ ಛಾಯೆ ಆವರಿಸಿದ್ದು ಇದೇ ಕಾರಣದಿಂದ. ಒಂದನೆ ನಂಬರಿನ ಕೋಣೆಯವನೂ ಮೂರನೆ ನಂಬರಿನ ಕೋಣೆಯವನೂ ಫಾಶೀ ಶಿಕ್ಷೆಯ ವಿರುದ್ಧ ಅಪೀಲು ಮಾಡಿಕೊಂಡಿದ್ದರೂ ಪ್ರಯೋಜನವಾಗಿರಲಿಲ್ಲ. ಎರಡನೆ ನಂಬರಿನ ಕೋಣೆಯವನ ಅಪೀಲಿನ ನಿರ್ಣಯ ಇನ್ನೂ ಹೊರಬಿದ್ದಿರದಿದ್ದರೂ ಆತ ಹಾಡುಹಗಲಲ್ಲೆ ಹೊಲದಲ್ಲಿ ಇಬ್ಬರನ್ನು ಕೊಂದು ಹಾಕಿದ್ದರಿಂದ ಅಪೀಲಿನ ಹಣೆಬರಹ ಏನಾಗುವುದೆಂಬುದು ಎಲ್ಲರಿಗೂ ಗೊತ್ತೇ ಇತ್ತು.

ರಾಮದಾಸ ಸುಮೇರನಿಗೆ "ಇವರಲ್ಲಿ ಯಾರೂ ಬಿಡುಗಡೆ ಹೊಂದುವುದಿಲ್ಲ," ಎಂದು ಹೇಳಿದ.



ಸುಮೇರನೂ ಅಲ್ಲಿಗೆ ಬಂದು ಬಹುಕಾಲವಾಗಿತ್ತಾದ್ದರಿಂದ ಅಲ್ಲಿನವರ ಪರಿಚಯ ಚೆನ್ನಾಗಿ ಆಗಿತ್ತು. ಅವನು ಉದಾಸೀನನಾಗಿ, "ಕರ್ಮಕ್ಕೆ ತಕ್ಕದ್ದನ್ನು ಅನುಭವಿಸುತ್ತಾರೆ. ಏನು ಮಾಡುವುದು ?" ಅಂದ.

ಇದಕ್ಕೆ ಉತ್ತರವಾಗಿ ರಾಮದಾಸ ಹೇಳಿದ: "ಊಂಹುಂ. ಹಾಗೇನೂ ಇಲ್ಲ. ಎಷ್ಟೋ ಸಲ ಮಹಾ ಮಹಾ ಅಪರಾಧಿಗಳೂ ನಿರಪರಾಧಿಗಳೆಂಬ ನಿರ್ಣಯವಾಗಿ ಪಾರಾಗಿ ಹೋಗುತ್ತಾರೆ."

ಅವರಿಬ್ಬರೂ ಜೇಲಿನ ಹೆಬ್ಬಾಗಿಲನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಾ ಬೀಡಿ ಸೇದಲಾರಂಭಿಸಿದರು.

ಸ್ವಲ್ಪ ಕಾಲ ಕಳೆದ ನಂತರ ರಾಮದಾಸ, "ಈ ದಿನವಂತೂ ಈ ಜನ ಹಾವು ಕಡಿಸಿಕೊಂಡವರಂತೆ ಹೌ ಹಾರಿದ್ದಾರೆ. ನೀನು ಇಲ್ಲೇ ಕುಳಿತಿರು; ನಾನು ಹೋಗಿ ಅವರಿಗೆ ಬೀಡಿ ಕೊಟ್ಟು ಬರುತ್ತೇನೆ," ಎಂದು ಸುಮೇರನಿಗೆ ಹೇಳಿದ.

ಕೈದಿಗಳಿಗೆ ಬೀಡಿಕೊಡುವುದು ಕಾನೂನಿಗೆ ವಿರುದ್ಧವಾಗಿತ್ತು. "ಆದರೆ ಕಾನೂನಿಗೆ ಅತೀತವಾದದ್ದೂ ಜಗತ್ತಿನಲ್ಲಿದೆ. ಇವರು ಕೈದಿಗಳಾದರೇನಾಯಿತು? ಇವರೂ ನಮ್ಮ ಹಾಗೆ ಮನುಷ್ಯರೇ. ಇವರ ಜೊತೆಯಲ್ಲಿ ನಾನು ಇನ್ನು ಎಷ್ಟೋ ಕಾಲ ಕಳೆಯಬೇಕು. ಕರ್ಮಕ್ಕೆ ತಕ್ಕ ಫಲವನ್ನು ಈ ಜನರಂತೂ ಅನುಭವಿಸಿಯೋ ಅನುಭವಿಸುತ್ತಾರೆ; ಆದರೆ ಊಟ ಬಿಡುವುದರಿಂದೇನು ಪ್ರಯೋಜನ? ಪ್ರಾಣವಿರುವ ವರೆಗೂ ಆಶೆ ಎನ್ನುವುದು ಇದ್ದದ್ದೇ" ಎಂದಾತ ಅಂದುಕೊಂಡ.

ಅನಂತರ ಅವನು ಕೈದಿಗಳ ಬಳಿ ಹೋಗಿ, ಬೀಡಿ ಕೊಟ್ಟು, ತಾನೇನೋ ಮಹಾ ಸತ್ಕಾರ್ಯವನ್ನೇ ಮಾಡಿದ್ದೇನೆ ಅನ್ನುವ ರೀತಿಯಲ್ಲಿ ನಿಂತುಕೊಂಡ. ಬೀಡಿ ಕೈಗೆ ಬಂದದ್ದೇ ತಡ, ಅವರೂ ಎದ್ದು ನಿಂತರು. ಕ್ಷಣಾರ್ಧದಲ್ಲೇ ಹೆಣದ ಕಳೆ ಮಾಯವಾಗಿ, ಅವರ ಮುಖದ ಮೇಲೆ ಅಲ್ಪ ಸ್ವಲ್ಪ ಬೆಳಕು ಕಾಣಿಸಿಕೊಂಡಿತು. ಅವರು ಪೂರ್ತಿಯಾಗಿ ಬೀಡಿಯನ್ನು ಸೇದಿದ್ದರೋ ಇಲ್ಲವೋ ಅಷ್ಟರಲ್ಲಿ ಸುಮೇರನ ಕೈಸನ್ನೆಯನ್ನು ನೋಡಿ ರಾಮದಾಸ ಅವರ ಕೈಯಿಂದ ಬೀಡಿಗಳನ್ನು ತಿರುಗಿ ಇಸಿದುಕೊಂಡು, "ರೊಟ್ಟಿ ತಿನ್ನಿರಿ" ಎಂದು ಹೇಳಿದ.

ಆತ ಕೋಣೆಯ ಬಾಗಿಲ ಬಳಿ ಬರುವಷ್ಟರಲ್ಲೇ ನಾಲ್ಕನೇ ನಂಬರಿನ ಕೋಣೆಯ ಕೈದಿ, ಇಬ್ಬರು ಕಾವಲುಗಾರರು ಹಾಗೂ ಇಬ್ಬರ ಪಟ್ಟೇವಾಲರೊಡನೆ ಬರುತ್ತಿರುವುದು ಕಂಡಿತು. ಅವರೊಡನೆ ಜೇಲರನೂ ಇದ್ದ. ಹೊಸ ಮನುಷ್ಯ ಇತರ ಕೈದಿಗಳ ಹಾಗೆ ಕಾಣದೆ ಓರ್ವ ತೇಜಸ್ವಿ ಪುರುಷನ ಹಾಗೆ ಕಾಣುತ್ತಿದ್ದ.

ತಾವಿಬ್ಬರೂ ಕಾವಲು ಮಾಡುತ್ತಿದ್ದು, ಶಬ್ದ ಕೇಳಿ ಇತ್ತ ಬಂದಿದ್ದೇವೆ ಎನ್ನುವ ರೀತಿಯಲ್ಲಿ ರಾಮದಾಸನೂ ಸುಮೇರನೂ ನಿಂತುಕೊಂಡರು. ಅಷ್ಟರಲ್ಲೇ ಈ 'ಮೆರವಣಿಗೆ' ಹತ್ತಿರ ಬಂತು. ಜಮಾದಾರನೊಬ್ಬ ಎಲ್ಲಿಂದಲೋ ಪ್ರತ್ಯಕ್ಷನಾಗಿ ಹೆಬ್ಬಾಗಿಲನ್ನು ತೆರೆದ. ಎಲ್ಲರೂ ಒಳ ಸೇರಿದ ನಂತರ ತಾನೂ ಒಳಗೆ ಹೋಗಿ ಮತ್ತೆ ಬೀಗ ಹಾಕಿದ.

ಅನಂತರ ನಾಲ್ಕನೇ ನಂಬರಿನ ಕೋಣೆಯ ಬಾಗಿಲು ತೆರೆದ. ಇದರಲ್ಲಿರಲು ಬಂದಾತ ಬಾಗಿಲ ಬಳಿ ಹೋದವನೇ ಹಿಂತಿರುಗಿ ಅಧಿಕಾರವಾಣಿಯಿಂದ, "ದುರ್ನಾತ ಬರುತ್ತಾ ಇದೆ. ಫಿನೈಲ್ ಹಾಕಿಸು; ಕೋಣೆಯನ್ನೆಲ್ಲಾ ಸ್ವಚ್ಛ ಮಾಡಿಸು," ಎಂದು ಹೇಳಿದ.

ಅನಂತರ ಅವನು ಆ ಮೂವರು ಸಹವಾಸಿಗಳನ್ನು ನಗುತ್ತಾ ಅಭಿನಂದಿಸಿದ. ಗಲ್ಲಿಗೇರಲಿರುವ ಆ ಜನರ ಮುಖಗಳು ಹೂ ಅರಳಿದಂತೆ ಅರಳಿದವು. ಅವನೂ ಫಾಶಿ ಏರುವವನೇ ಆಗಿದ್ದ ಎನ್ನುವುದು ವಾಸ್ತವಿಕ ಸತ್ಯವಾಗಿದ್ದರೂ ಅವನನ್ನು ನೋಡಿದವರಿಗೆ ಅದನ್ನು ನಂಬುವುದು ಸಾಧ್ಯವಾಗಿರಲಿಲ್ಲ. ಬ್ರಿಟಿಶ್ ಸರಕಾರ ಫಾಶೀ ಶಿಕ್ಷೆ ವಿಧಿಸಲ್ಪಟ್ಟ ಮುನ್ನೂರು ಕೈದಿಗಳನ್ನು ಬಿಟ್ಟು ಬಿಡಬಹುದಾಗಿದ್ದರೂ ಈಗ ಬಂದಿಯಾದ ರಾಮಪ್ರಸಾದ ಬಿಸ್ಮಿಲ್ಲನನ್ನು ಬಿಡುವಹಾಗಿರಲಿಲ್ಲ. ಬ್ರಿಟಿಶ್ ಸರಕಾರವನ್ನು ಉರುಳಿಸಲು ಆತ ಕಳೆದ ಹದಿಮೂರು ವರ್ಷಗಳಿಂದಲೂ ಒಂದಿಲ್ಲೊಂದು ಬಗೆಯ ಒಳಸಂಚಿನಲ್ಲಿ ತೊಡಕಿಹಾಕಿಕೊಂಡಿರುತ್ತಿದ್ದ. ಈ ಮೊದಲು ಅವನು ಗೇಂದಾಲಾಲ ದೀಕ್ಷಿತರೊಡನೆ ಒಳಸಂಚು ನಡೆಸಿದ್ದರೂ ಸರ-

ಕಾರನ ಕೈಲಿ ಸಿಕ್ಕುಬಿದ್ದಿರಲಿಲ್ಲ.

ಮೈನಪುರಿಯ ಒಳಸಂಚಿನ ಪ್ರಕರಣದಲ್ಲಿ ಅವನ ವಿರುದ್ಧ ದೊಡ್ಡ ಮೊಕದ್ದಮೆಯೇ ನಡೆದರೂ ರಾಮಪ್ರಸಾದ ಬಿಸ್ಮಿಲ್ಲ ತಲೆತಪ್ಪಿಸಿಕೊಂಡು ಬಿಟ್ಟ. ಕೊನೆಗೊಮ್ಮೆ ಪೋಲೀಸರ ಕೈಲಿ ಸಿಕ್ಕುಬಿದ್ದ. ಆದರೆ ೧೯೧೯ರಲ್ಲಿ ಸರಕಾರ ಮಾಫಿ ಮಾಡಿದ ಕೆಲ ಕ್ರಾಂತಿಕಾರರ ಪೈಕಿ ಆತನ ಹೆಸರೂ ಸೇರಿದ್ದರಿಂದ ಬೇಗನೆ ಬಿಡುಗಡೆಯಾದ. ಇದರಿಂದಾಗಿ ಬ್ರಿಟಿಶ್ ಸರಕಾರ ಪಶ್ಚಾತ್ತಾಪ ಪಡುವಂತಾಗಿತ್ತು.

ಆದೇ ಸಮಯಕ್ಕೆ ಜಾಲಿಯನ್‌ವಾಲಾ ಬಾಗಿನ ಹತ್ಯಾಕಾಂಡ ನಡೆಯಿತು. ಇದರಿಂದಾಗಿ ಕ್ರಾಂತಿಕಾರರ ಆಂದೋಲನ ಬಲಗೊಂಡಿತು. ಜನ ಎಂಥ ಆಪತ್ತನ್ನೂ ಎದುರಿಸಲು ಸಿದ್ಧರಾದರು. ಶಚೀಂದ್ರನಾಥ ಸಾನ್ಯಾಲ್, ಚಂದ್ರಶೇಖರ ಆಜಾದ, ಮುಂಕುದೀಲಾಲ್, ದಾಮೋದರ ಸ್ವರೂಪಸೇಠ್, ಸುರೇಶ ಚಕ್ರವರ್ತಿ, ರಾಜೇಂದ್ರ ಲಾಹಿಡಿ, ರೋಶನಸಿಂಹ, ಅಶಫಾಕ ಉಲ್ಲಾರಂತಹ ಎಷ್ಟೋ ಜನ ಕ್ರಾಂತಿವೀರರು ಸೇರಿ ಹಿಂದುಸ್ತಾನ ರಿಪಬ್ಲಿಕನ್ ಅಸೋಸಿಯೇಶನ್ನನ್ನು ಸ್ಥಾಪಿಸಿದರು. ಮಾನವ ಮಾನವರಲ್ಲಿಯ ಶೋಷಣೆಗೆ ಎಡೆಯಿಲ್ಲದ ಸಮಾಜವನ್ನು ಕ್ರಾಂತಿಯ ಮೂಲಕ ಸ್ಥಾಪಿಸುವುದು ಅದರ ಉದ್ದೇಶವಾಗಿತ್ತು.

ರಾಮಪ್ರಸಾದನಂತಹ ಯಾವ ವ್ಯಕ್ತಿಯೂ ಇಲ್ಲಿಯ ವರೆಗೆ ಆ ಫಾಶಿ ಗೃಹಕ್ಕೆ ಬಂದಿರಲಿಲ್ಲ. ಜಮಾದಾರ ಓಡಿ ಹೋಗಿ ಭಂಗಿಯನ್ನೂ ಕಸ ಗುಡಿಸುವವನನ್ನೂ ಕರೆತಂದ. ಕೂಡಲೇ ರಾಮಪ್ರಸಾದ ಬಿಸ್ಮಿಲ್ಲನ ಕೋಣೆಯನ್ನು ಗುಡಿಸಿ ಫಿನೈಲ್ ಹಾಕಲಾಯಿತು. ಅದು ಹಿಂದೆಂದೂ ಇಷ್ಟು ಸ್ವಚ್ಛವಾಗಿರಲಿಲ್ಲ.

"ಪಂಡಿತಜಿ, ಕೋಣೆ ತಯಾರಾಯಿತು." ಎಂದು ಜಮಾದಾರ ಹೇಳಿದ.

ರಾಮಪ್ರಸಾದ ಬಿಸ್ಮಿಲ್ಲ ಎದ್ದು ಹೋಗಿ ಕೋಣೆ ನೋಡಿ, "ಒಣಗಲಿ ಬಿಡು." ಅಂದ.

ಇವರೆಲ್ಲ ಬ್ರಿಟಿಶರ ಗುಲಾಮರಾದರೂ ನನ್ನ ಬಂಧುಗಳೆನ್ನುವುದು ಸುಳ್ಳಲ್ಲ. ಹೀಗಿರುವಾಗ, ಪಾಪ, ಇವರಿಗೇಕೆ ವೃಥಾ ತೊಂದರೆ ಕೊಡಬೇಕು? ಅಂದುಕೊಂಡು ರಾಮಪ್ರಸಾದ ಕೋಣೆಯೊಳಗೆ ಹೋದ. ಹೋಗುವಾಗ, "ನನ್ನ ಪುಸ್ತಕ ತಾ" ಎಂದು ಕೂಗಿ ಹೇಳಿದ.

ಸ್ವಲ್ಪ ಸಮಯದಲ್ಲೇ ಕೋಣೆಗೆ ಬೀಗ ಹಾಕಲಾಯಿತು. ಇಬ್ಬರು ಕಾವಲುಗಾರರನ್ನು ಹೊರತುಪಡಿಸಿ ಎಲ್ಲರೂ ಹೊರಟುಹೋದರು. ಹೌದು, ಇಡೀ ಫಾಶೀಗೃಹಕ್ಕೆ ಇಬ್ಬರು ಕಾವಲುಗಾರರು ಮತ್ತು ಕೇವಲ ರಾಮಪ್ರಸಾದನನ್ನು ಕಾಯಲಿಕ್ಕೇ ಇಬ್ಬರು ಹೆಚ್ಚಿನ ಕಾವಲುಗಾರರು! ಕಾಕೋರಿ ಒಳಸಂಚಿನ ಪ್ರಕರಣದಲ್ಲಿ ಸಿಕ್ಕಿಬಿದ್ದು ಫಾಶೀ ಶಿಕ್ಷೆಗೆ ಒಳಗಾದವರನ್ನು ಚಂದ್ರಶೇಖರ ಆಜಾದರಂತಹ ಕ್ರಾಂತಿಕಾರಿಗಳು ಪಾರುಮಾಡಲು ಪ್ರಯತ್ನಿಸಬಹುದೆಂಬ ಸೂಚನೆ ಜೇಲರನಿಗೆ ಮೊದಲೆ ದೊರೆತಿದ್ದರಿಂದ ಆತ ರಾಮಪ್ರಸಾದನನ್ನು ಕಾಯಲೆಂದೇ ಇಬ್ಬರು ಕಾವಲುಗಾರರನ್ನು ನಿಯಮಿಸಿದ್ದ.

ಜೈಲಿನಲ್ಲಿದ್ದ ಜನ 'ಪಂಡಿತಜಿ' ತಮ್ಮ ಕೋಣೆಯಲ್ಲೀಗ ಏನು ಮಾಡುತ್ತಿರಬಹುದು? ಎಂದು ಊಹಾಪೋಹಗಳನ್ನು ಮಾಡತೊಡಗಿದರು. ಆದರೆ ಸ್ವಲ್ಪಕಾಲ ಮಾತ್ರ. ರಾಮಪ್ರಸಾದ ಬಿಸ್ಮಿಲ್ಲ ಜೋರಾಗಿ ಗೀತಾ ಪಠಣ ಮಾಡಲು ಪ್ರಾರಂಭಿಸಿದ. ಗೀತಾಪಠಣದಿಂದ ಜೈಲಿನಲ್ಲಿನ ಜನಕ್ಕೇನೂ ವಿಶೇಷ ಪ್ರಯೋಜನ ಆಗಲಾರದೆಂಬುದು ಗಮನಕ್ಕೆ ಬಂದ ಕೂಡಲೇ ದೇಶಭಕ್ತಿಯಿಂದ ಓತಪ್ರೋತವಾದ ಉರ್ದೂ ಗೀತವೊಂದನ್ನು ಆತ ಮಧುರವಾಗಿ ಹಾಡತೊಡಗಿದ.

ಎಲ್ಲರೂ ಭಾವಪರವಶರಾಗಿ ಹಾಡನ್ನು ಕೇಳತೊಡಗಿದರು. ಮುಂಜಾನೆಯಿಂದ ಕವಿದಿದ್ದ ವಿಷಣ್ಣ ಛಾಯೆ ಕ್ರಮೇಣವಾಗಿ ಮಾಯವಾಗತೊಡಗಿತು. ಇಂತಹ ಅಸಾಮಾನ್ಯ ಕೈದಿಯನ್ನು ಕಾಯುವ ಸುಯೋಗ ದೊರೆತದ್ದಕ್ಕಾಗಿ ಅಲ್ಲಿನ ಕಾವಲುಗಾರರಲ್ಲಿ ಹೆಮ್ಮೆ ಮೂಡಿತ್ತು. ಕಾಕೋರಿ ಪ್ರಕರಣದಲ್ಲಿ ಬಂಧಿತರಾದವರ ಪರವಾಗಿ ವಾದಿಸಲು ಪಂ. ಮೋತಿಲಾಲ ನೆಹರೂರವರ ನೇತೃತ್ವದಲ್ಲಿ ಒಂದು ಕಮಿಟಿ ರೂಪುಗೊಂಡಿದ್ದು ಅವರಿಗೆ ತಿಳಿದಿತ್ತು. ಕಾಕೋರಿಯ ಬಳಿ ಆದ ರೈಲು ದರೋಡೆಯ ಬಗೆಗೆ ಮೊಕದ್ದಮೆ ನಡೆಯುವುದೆಂಬುದೂ ಅವರಿಗೆ ಗೊತ್ತಿತ್ತು. ಈ ಒಳಸಂಚಿಗೆ ಕಾರಣರಾದ ಅನೇಕ ಮುಖಂಡರಲ್ಲಿ

ರಾಮಪ್ರಸಾದ ಬಿಸ್ಮಿಲ್ಲನೂ ಒಬ್ಬನಾಗಿದ್ದ.

ಅವನ ಕಾರ್ಯಕ್ಷಮತೆ ಅಸಾಧಾರಣವಾಗಿತ್ತು. ಹೈಕೋರ್ಟಿನಲ್ಲಿ ಅವನ ವಿರುದ್ಧ ಮೊಕದ್ದಮೆ ನಡೆಯುತ್ತಿರುವಾಗ ಅದಕ್ಕಾಗಿ ಸಾಕಷ್ಟು ತಯಾರಿ ಮಾಡಿಕೊಳ್ಳುತ್ತಿದ್ದ. ಅದರ ಜೊತೆಗೆ ಕದ್ದುಮುಚ್ಚಿ ಆತ್ಮಕಥೆಯನ್ನೂ ಬರೆಯುತ್ತಿದ್ದ. ಬರೆದಹಾಗೆಲ್ಲ ಅದನ್ನು ವಾರ್ಡನ್ನನ ಮೂಲಕ ಉಳಿದವರ ಕಣ್ಣು ತಪ್ಪಿಸಿ 'ಸ್ವದೇಶ' ಪತ್ರಿಕೆಯ ಆಫೀಸಿಗೆ ಕಳಿಸುತ್ತಿದ್ದ. ಅಲ್ಲಿ ಅದು ಕ್ರಾಂತಿಕಾರರ ಆಪ್ತ ಸ್ನೇಹಿತರಾದ ಶ್ರೀ ಗಣೇಶ ಶಂಕರ ವಿದ್ಯಾರ್ಥಿಯವರಿಗೆ ಮುಟ್ಟುತ್ತಿತ್ತು. ಹಸ್ತಪ್ರತಿ ಪೂರ್ಣವಾದ ನಂತರ ಅದನ್ನು 'ಕಾಕೋರಿಯ ಹುತಾತ್ಮ'ನೆಂಬ ಪ್ರಕಟಿಸಲಾಯಿತಾದರೂ ಸರಕಾರ ಅಚ್ಚಾದ ಪ್ರತಿಗಳನ್ನೆಲ್ಲ ಜಪ್ತು ಮಾಡಿಬಿಟ್ಟಿತು. ಈಗ, ಮೂವತ್ತು ವರ್ಷಗಳ ನಂತರ ಆ ಪುಸ್ತಕವನ್ನು ಪುನರ್ಮುದ್ರಿಸಲಾಗಿದೆ.

ರಾಮಪ್ರಸಾದ ಬಿಸ್ಮಿಲ್ಲನು ಧಾರ್ಮಿಕ ಪ್ರವೃತ್ತಿಯವನಾಗಿದ್ದ. ಆದ್ದರಿಂದ, ಬರವಣಿಗೆಯ ಕಾರ್ಯ ಅವ್ಯಾಹತವಾಗಿ ಸಾಗಿದ್ದರೂ ಅಲ್ಪ ಸ್ವಲ್ಪ ಸಮಯ ಉಳಿಸಿಕೊಂಡು, ನಾಸ್ತಿಕರಾಗುತ್ತಿದ್ದ ಜೈಲುವಾಸಿಗಳಿಗಾಗಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದ. ಮಾನವ ಜನ್ಮ ಅನೇಕ ಜನ್ಮಗಳಲ್ಲಿ ಒಂದು. ನಾವು ಬಟ್ಟೆ ಬದಲಿಸುವಂತೆಯೆ ಪುನರ್ಜನ್ಮದ ಮೂಲಕವಾಗಿ ಶರೀರವನ್ನು ಬದಲಿಸುತ್ತೇವೆ. ಆತ್ಮ ಅಮರವಾದದ್ದು. ಅದಕ್ಕೆ ಸಾವೆಂಬುದಿಲ್ಲ; ನಾವು ಮಾಡಿದ ತಪ್ಪನ್ನು ಒಪ್ಪಿಕೊಂಡು ಅದಕ್ಕಾಗಿ ಪಶ್ಚಾತ್ತಾಪ ಪಟ್ಟರೆ ದಯಾಳುವಾದ ಪರಮಾತ್ಮ ನಮ್ಮನ್ನು ಕ್ಷಮಿಸುತ್ತಾನೆ ಎಂದೆಲ್ಲ ಆತ ಅವರಿಗೆ ಉಪದೇಶಿಸುತ್ತಿದ್ದ.

ಫಾಶೀ ಶಿಕ್ಷೆ ವಿಧಿಸಲ್ಪಟ್ಟ ಮೂರೂ ಜನ ಒಬ್ಬೊಬ್ಬರಾಗಿ ಫಾಶೀಕಟ್ಟೆಯನ್ನೇರಿದರು. ಆದರೆ ಕ್ರಾಂತಿವೀರ ಬಿಸ್ಮಿಲ್ಲ ಅವರೆಲ್ಲ ನಗುಮೊಗದಿಂದ ಮರಣವನ್ನು ಸ್ವಾಗತಿಸುವಷ್ಟು ದೃಢಮನಸ್ಸಿನವರನ್ನಾಗಿ ಮಾಡಿದ್ದ. ಹೇಳಿ ಕೇಳಿ ಬಟ್ಟೆ ಬದಲಿಸುವುದು; ಬಟ್ಟೆ ಬದಲಿಸುವುದೆಂದಮೇಲೇಕೆ ಹೆದರಿಕೆ ? ಹೊಸ ಶರೀರ ದೊರೆಯುವುದು; ಮೊದಲಿನ ಹಾಗೆ ತಪ್ಪುಗಳೂ ಸಂಭವಿಸುವುದಿಲ್ಲ ಎಂಬ ಭಾವನೆ ಬಿಸ್ಮಿಲ್ಲನ ಉಪದೇಶದಿಂದಾಗಿ ಅವರೆಲ್ಲರಲ್ಲಿ ಬಂದು ಹೋಗಿತ್ತು.

ಫಾಶೀ ಶಿಕ್ಷೆ ವಿಧಿಸಲ್ಪಟ್ಟ ವ್ಯಕ್ತಿ ಶಿಕ್ಷೆಯ ದಿನ ಮುಂಜಾನೆ ರಾಮಪ್ರಸಾದನ ಕೋಣೆಯ ಎದುರು ಸೈನಿಕನ ಹಾಗೆ ಸೆಟೆದು ನಿಲ್ಲುತ್ತಿದ್ದ. ರಾಮಪ್ರಸಾದ ಬಿಸ್ಮಿಲ್ಲ ಫಾಶಿ ಏರುವವನಿಗೆ ಒಂದೆರಡು ಸಾಂತ್ವನದ ಮಾತುಗಳನ್ನು ಹೇಳುತ್ತಿದ್ದ ಅನಂತರ ಕೈದಿ ಬಿಸ್ಮಿಲ್ಲನ ಕಾಲು ಮುಟ್ಟಿ ನಮಸ್ಕರಿಸುತ್ತಿದ್ದ. ಆತ ಗಲ್ಲಿಗೇರಲು ಮುಂದೆ ಹೊರಟಾಗ, ಬಿಸ್ಮಿಲ್ಲ, "ಹೆದರಬೇಡ, ನಾನೂ ಬೇಗನೆ ನಿನ್ನ ಹಿಂದೆ ಬರುತ್ತೇನೆ" ಎಂದು ಕೂಗಿ ಹೇಳುತ್ತಿದ್ದ.

ಅನಂತರ ಅವನು ಜೋರಾಗಿ ಗೀತಾ ಪಠಣವನ್ನಾದರೂ ಮಾಡುತ್ತಿದ್ದ ಇಲ್ಲವೆ ತನಗೆ ಪ್ರಿಯವಾದ ದೇಶಭಕ್ತಿ ಗೀತವನ್ನಾದರೂ ಹಾಡುತ್ತಿದ್ದ. ರಾಮಪ್ರಸಾದ ಬಿಸ್ಮಿಲ್ಲನ ಕೋಣೆಯ ಪಕ್ಕದಲ್ಲೇ ಒಂದು ಗೋಡೆಯಿತ್ತು. ಅದರಾಚೆಗೇ ಫಾಶೀಕಟ್ಟೆ. ಹೀಗಾಗಿ ಕೈದಿ ಫಾಶೀಕಟ್ಟೆ ಏರಿದಾಗಲೂ ಅವನಿಗೆ ಬಿಸ್ಮಿಲ್ಲನ ಗೀತಾಪಠಣ ಚೆನ್ನಾಗಿ ಕೇಳಿಸುತ್ತಿತ್ತು.

೧೯೨೭ರ ಡಿಸೆಂಬರ್ ೧೯ ರಂದು ರಾಮಪ್ರಸಾದ ಬಿಸ್ಮಿಲ್ಲನನ್ನು ಫಾಶೀಕಟ್ಟೆಗೆ ಕರೆದೊಯ್ಯಲಾಯಿತು. ಅವನು ಧೀರೋದಾತ್ತವಾಗಿ ನಡೆಯುತ್ತಾ ಫಾಶೀಕಟ್ಟೆಯನ್ನೇರಿ, "ಬ್ರಿಟಿಶ್ ಸಾಮ್ರಾಜ್ಯ ನಾಶವಾಗಲಿ" ಎಂದು ಗರ್ಜಿಸಿ ತನ್ನ ಕೊನೆಯ ಕ್ಷಣಕ್ಕಾಗಿ ಕಾದು ನಿಂತ. ಕ್ಷಣಮಾತ್ರದಲ್ಲಿ ಸುಂದರವಾದ ಅವನ ಶರೀರ ಮಾಂಸದ ಮುದ್ದೆಯಾಗಿಹೋಯಿತು. ಜೈಲುವಾಸಿಗಳಿಗೆಲ್ಲ ತಮ್ಮ ಬಂಧುವನ್ನು ಕಳೆದುಕೊಂಡಷ್ಟು ದುಃಖವಾಗಿತ್ತು. ಕೇವಲ ಜೈಲುವಾಸಿಗಳಷ್ಟೆ ಅಲ್ಲ, ಕಾವಲುಗಾರರೂ ಅಂದು ಬಿಕ್ಕಿ ಬಿಕ್ಕಿ ಅತ್ತರು. ಆದರೆ ಯಾರ ಮನದಲ್ಲೂ ಅಂದು ನಿರಾಶೆಯ ಛಾಯೆಯಿರಲಿಲ್ಲ. ಅಮರತ್ವದ ಸಂದೇಶವನ್ನಾತ ಬಿಟ್ಟುಹೋಗಿದ್ದ. ಕುತ್ತಿಗೆಗೆ ನೇಣು ತೊಡಿಸಿದಾಗ ರಾಮಪ್ರಸಾದ ಬಿಸ್ಮಿಲ್ಲ ದೇವರನಾಮ ಸ್ಮರಿಸಲಿಲ್ಲ; ಭಗವದ್ಗೀತೆಯ ಶ್ಲೋಕವನ್ನೂ ಹೇಳಲಿಲ್ಲ. ಆದರೆ "ಬ್ರಿಟಿಶ್ ಸಾಮ್ರಾಜ್ಯ ನಾಶವಾಗಲಿ" ಸಿಂಹದಂತೆ ಎಂದು ಗರ್ಜಿಸಿದ್ದ. ▲

# ಫಿಲಿಪ್ಪೈನ್ಸ್

# ಸಂಪನ್ನ, ಆದರೆ ಭ್ರಷ್ಟಾಚಾರಮಯ

ಬದರೀನಾಥ

ಗಡಿಯಾರದ ಪೆಂಡ್ಯುಲಮ್ಮಿನಂತೆ ಫೊರ್ಮೋಸಾದಿಂದ ಉತ್ತರ ಬೋರ್ನಿಯೋ ವರೆಗೆ ದಕ್ಷಿಣೋತ್ತರವಾಗಿ ಸುಮಾರು ಒಂದು ಸಾವಿರ ಮೈಲು ಶಾಂತ ಸಾಗರದಲ್ಲಿ ಎದ್ದು ನಿಂತಿರುವ ನಡುಗಡ್ಡೆಗಳ ಸಮೂಹವೇ ಫಿಲಿಪ್ಪೈನ್ಸ್. ಇವುಗಳ ಸಂಖ್ಯೆ ಸುಮಾರು ೭,೦೦೦. ಕೆಲವು ಅತ್ಯಂತ ಜನನಿಬಿಡವಾದರೆ ಇನ್ನು ಹಲವು ದ್ವೀಪಗಳಲ್ಲಿ ಜನವಸತಿಯೇ ಇಲ್ಲ. ಒಟ್ಟು ೧,೧೫,೬೦೭ ಚದರ ಮೈಲು ಭೂಪ್ರದೇಶವನ್ನು ಹೊಂದಿರುವ ಇದು ವಿಸ್ತಾರದಲ್ಲಿ ನಮ್ಮ ಉತ್ತರ ಪ್ರದೇಶಕ್ಕಿಂತ ತುಸುವೆ ದೊಡ್ಡದು. ಲೂಝಾನ್ ಮತ್ತು ಮಿಂಡಾನಾವೊ ಇವುಗಳೇ ಬಹು ದೊಡ್ಡ ದ್ವೀಪಗಳು. ದೇಶದ ರಾಜಧಾನಿ ಮಾನಿಲಾ ಇರುವುದು ಲೂಝಾನ್ ದ್ವೀಪದಲ್ಲಿ

ಏಳುಸಾವಿರ ದ್ವೀಪಗಳ ಸಮೂಹವಾದ ಫಿಲಿಪ್ಪೈನ್ಸ್ ನಿಸರ್ಗಲಕ್ಷ್ಮಿಯ ಕೃಪೆ ಅವಕೃಪೆಗಳೆರಡಕ್ಕೂ ಪಾತ್ರವಾದ ದೇಶ. ಇಲ್ಲಿನ ದ್ವೀಪಗಳು ಗುಡ್ಡಗಳಿಂದ ತುಂಬಿದ್ದು ಅಸಂಖ್ಯ ನದಿಗಳಿಗೆ, ಸರೋವರಗಳಿಗೆ ತವರ್ಮನೆಯಾಗಿವೆ. ಫಲವತ್ತಾದ ಭೂಮಿ ಫಿಲಿಪ್ಪೈನ್ಸನ್ನು ಅಕ್ಕಿಯ ಕಣಜವಾಗಿ ಪರಿವರ್ತಿಸಿದೆ. ಮಿಂಡಾನಾವೊ ನಡುಗಡ್ಡೆಯಲ್ಲಿರುವ ಅಪೋ ಪರ್ವತ (೯,೬೯೦ ಅಡಿ ಎತ್ತರ) ಶಿಖರ ಈ ಪ್ರದೇಶದಲ್ಲೇ ಅತ್ಯುನ್ನತವಾಗಿದ್ದು ಸುಪ್ತ ಜ್ವಾಲಾಮುಖಿಯಾಗಿದೆ. ಹತ್ತಾರು ಸ್ವಾಭಾವಿಕ ಬಂದರುಗಳನ್ನು ದೇಶಕ್ಕೆ ನೀಡಿದ ಶಾಂತಸಾಗರ ಮಿಂಡಾನಾವೋ ಬಳಿ ೩೪,೦೦೦ ಅಡಿಗಳಿಗಿಂತಲೂ ಆಳವಾಗಿದೆ. ಇಲ್ಲಿ ಜಗತ್ತಿನ ಅತ್ಯುನ್ನತ ಶಿಖರವಾದ ಎವರೆಸ್ಟನ್ನು ಮುಳುಗಿಸಿದರೆ ಅದರ ನೆತ್ತಿಯ ಮೇಲೆ ಇನ್ನೂ ಒಂದೂವರೆ ಸಾವಿರ ಅಡಿಗಳಿಗಿಂತ ಹೆಚ್ಚು ನೀರು ನಿಲ್ಲಬಲ್ಲುದು.

ಫಿಲಿಪ್ಪೈನ್ಸಿನಲ್ಲಿ ಶೇಕಡಾ ೮೦ ರಷ್ಟು ಜನ ಒಕ್ಕಲುತನವನ್ನವಲಂಬಿಸಿದವರು. ಸ್ಥಳೀಯ ಜನತೆಯ ಮುಖ್ಯ ಆಹಾರವಾದ ಅಕ್ಕಿಯಂತೂ ಸರಿಯೆ, ತೆಂಗು ಮತ್ತು ಗಾಂಜಾ ಉತ್ಪಾದನೆಯಲ್ಲಿ ಜಗತ್ತಿನಲ್ಲೇ ಪ್ರಥಮ ಸ್ಥಾನ ಈ ದೇಶಕ್ಕಿದೆ. ಕಬ್ಬು ಬೆಳೆಯಲ್ಲಿ ಜಗತ್ತಿನಲ್ಲಿ ಇದರ ಸ್ಥಾನ ಎರಡನೆಯದು ಮತ್ತು ತಂಬಾಕಿನಲ್ಲಿ ಏಳನೆಯದು.

ಮನುಷ್ಯನಿಗೆ ಸಾಮಾನ್ಯವಾಗಿ ದೊತ್ತಿರುವ ಖನಿಜಗಳೆಲ್ಲವೂ ಫಿಲಿಪ್ಪೈನ್ಸಿನಲ್ಲಿ ಹೇರಳವಾಗಿ ದೊರೆಯುತ್ತವೆ. ಯುರೋಪಿಯನ್ನರು ಇಲ್ಲಿಗೆ ಬರುವುದಕ್ಕೆ ಶತಮಾನಗಳಷ್ಟು ಮುನ್ನವೇ ಗಣಿಗಳಿಂದ ಖನಿಜಗಳನ್ನು ಹೊರದೆಗೆಯುವುದು


ಇಲ್ಲಿನ ಜನಪ್ರಿಯ ಉದ್ಯೋಗವಾಗಿತ್ತು. ಆಗ್ನೇಯ ಏಶಿಯಾದಲ್ಲಿ ಇನ್ನೆಲ್ಲಿಗಿಂತಲೂ ಹೆಚ್ಚು ಚಿನ್ನ ಇಲ್ಲಿ ಉತ್ಪಾದಿಸಲಾಗುತ್ತಿದೆ. ಕಬ್ಬಿಣ, ಬೆಳ್ಳಿ, ತಾಮ್ರ, ತೈಲ, ಮ್ಯಾಂಗನೀಜ್, ಕಲ್ಲಿದ್ದಲು, ಸತುವು, ಸುಣ್ಣದ ಹರಳು ಮುಂತಾದವುಗಳ ಸಂಗ್ರಹವೂ ಇಲ್ಲಿ ವಿಪುಲವಾಗಿದೆ.

ಫಿಲಿಪ್ಪೈನ್ಸಿನ ಅರ್ಧಕ್ಕಿಂತ ಹೆಚ್ಚು ಭೂಭಾಗ ದಟ್ಟ ಅರಣ್ಯಗಳಿಂದ ತುಂಬಿದೆ. ಇಲ್ಲಿ ದೊರೆಯುವ 'ನಾರಾ' ಎಂಬ ಹೆಸರಿನ ಕಟ್ಟಿಗೆ ಫಿಲಿಪ್ಪೈನ್ಸ್ ಮಹೋಗನಿ ಎಂದು ಜಗತ್ಪ್ರಸಿದ್ಧವಾಗಿದೆ. ಇಲ್ಲಿಯ ಪ್ರಾಣಿ ಮತ್ತು ಪಕ್ಷಿಲೋಕವೂ ಶ್ರೀಮಂತವಾಗಿದೆ. ಆಸ್ಟ್ರೇಲಿಯ, ಚೀನ, ಜಪಾನ್, ಇಂಡೋನೇಶಿಯಗಳಂಥ ದೇಶಗಳಲ್ಲೂ ದೊರೆಯದಷ್ಟು ವಿಪುಲ (೭೫೦) ಪಕ್ಷಿಗಳು ಇಲ್ಲಿವೆ. ಜಗತ್ತಿನಲ್ಲಿ ಮತ್ತೆಲ್ಲೂ ನೋಡಲು ದೊರೆಯದಂಥ ಮೂರು ಪ್ರಾಣಿಗಳು ಇಲ್ಲಿವೆ—ಇಲಿ ಜಿಗರಿ ಎಂದು ಕರೆಯಲಾಗುವ ಅತಿ ಚಿಕ್ಕ ಹರಿಣ; 'ಟಾರ್ಸಿಯರ್' ಎಂಬ ಹೆಸರಿನ ಅತಿ ಚಿಕ್ಕ ಮಂಗ; ಮತ್ತು 'ತಮಾರಾವ್' ಎಂದು ಗುರುತಿಸಲಾಗುವ ಹಾಗು ಇಲ್ಲಿನದೇ ವೈಶಿಷ್ಟ್ಯವೆನಿಸಿದ ಒಂದು ಜಾತಿಯ ಕಿರು ಕಾಡು ಎಮ್ಮೆ.

'ಕರಾಬಾವೊ' (ಅಂದರೆ ನೀರೆಮ್ಮೆ) ಎಂಬ ಹೆಸರಿನ ಎಮ್ಮೆ ಫಿಲಿಪ್ಪೈನ್ಸಿನ ರಾಷ್ಟ್ರೀಯ ಪ್ರಾಣಿ ಎನ್ನಬೇಕು. ಇದು ಬಲಯುತವಾದ ಶಾಂತ-ಸ್ವಭಾವದ ಪ್ರಾಣಿ. ಭತ್ತದ ಗದ್ದೆಗಳಲ್ಲಿ, ಚಕ್ಕಡಿಗಳನ್ನೆಳೆಯಲು ಇವುಗಳನ್ನು ಉಪಯೋಗಿಸುತ್ತಾರೆ. ಕರಾಬಾವೊ ಹಾಲು ಮತ್ತು ಮಾಂಸ ಇಲ್ಲಿ ಬಹಳ ಜನಪ್ರಿಯ ಆಹಾರ ವಸ್ತುಗಳು. ಅದರ ಚರ್ಮ ಮತ್ತು ಕೋಡುಗಳಿಗೂ ತುಂಬ ಬೆಲೆ ಬರುತ್ತದೆ. ಉತ್ಸವಗಳಲ್ಲಿ ಇವುಗಳ ಸ್ಪರ್ಧೆಯನ್ನೋ ಕಾಳಗವನ್ನೋ ಏರ್ಪಡಿಸುವುದು ಸರ್ವಸಾಮಾನ್ಯ. ಸಾಮಾನ್ಯವಾಗಿ ಶಾಂತ ಸ್ವಭಾವದ ಈ ಪ್ರಾಣಿ ಸಿಟ್ಟಿಗೆಬ್ಬಿಸಿದಾಗ ಕುದುರೆಗಿಂತ ವೇಗವಾಗಿ ಓಡಬಲ್ಲದು ಮಾತ್ರವಲ್ಲ, ಬಂಗಾಲಿ ಹುಲಿಯಂತೆ ಭಯಂಕರವಾಗಿ ಕಾದಬಲ್ಲುದು.

ಫಿಲಿಪ್ಪೈನ್ಸ್ ಮೀನುಗಾರರ ಸ್ವರ್ಗ ಎಂದು ತಿಳಿಯಲಾಗಿದೆ. ಇಲ್ಲಿಯ ಸಾವಿರಾರು ಸರೋವರಗಳಲ್ಲಿ, ಹೊಳೆಹಳ್ಳಗಳಲ್ಲಿ ಮತ್ತು ಸುತ್ತಲಿನ ಆಖಾತಗಳಲ್ಲಿ ಗಾತ್ರದಲ್ಲಿ ಜಗತ್ತಿನ ಅತಿ ದೊಡ್ಡ ಕಾಯದ ಮೀನುಗಳಿಂದಾರಂಭಿಸಿ ಅತ್ಯಂತ ಚಿಕ್ಕ ಮೀನುಗಳು ದೊರೆಯುತ್ತವೆ. ರ್ಹಿನೆಯೊಡಾನ್ ಟೈಟಸ್ ಎಂಬ ಮೀನು ೫೦ ಅಡಿಗಳಿಗಿಂತ ಉದ್ದವಾಗಿರುವುದಾದರೆ ಕೆಲವು ಸರೋವರಗಳಲ್ಲಿ ಸಿಗುವ ಪಂಡಾಕಾ ಪಿಗ್ಮೀ ಜಾತಿಯ ಮೀನುಗಳು ಅರ್ಧ ಅಂಗುಲಕ್ಕಿಂತ ಚಿಕ್ಕವಾಗಿದ್ದು ಜಗತ್ತಿನಲ್ಲೇ ಅತಿ ಚಿಕ್ಕ ಮೀನುಗಳೆಂಬ ಗೌರವ ಅವಕ್ಕಿದೆ.


ಇಷ್ಟೆಲ್ಲ ನೈಸರ್ಗಿಕ ಸಂಪತ್ತಿದ್ದರೂ ಶಾಂತ ಸಾಗರದ ಮೇಲಿಂದ ಬೀಸುವ ಬಿರುಗಾಳಿಗಳು ಮತ್ತು ಅವುಗಳು ತರುವ ಭೀಕರ ಮಳೆಗಳಿಂದಾಗಿ ಒಮ್ಮೊಮ್ಮೆ ಭಯಂಕರ ಅನಾಹುತಕ್ಕೆ ಈ ದೇಶ ಈಡಾಗುವುದುಂಟು. ಕಳೆದ ಜುಲೈ ತಿಂಗಳಲ್ಲಿ ಲುಝಾನ್ ದ್ವೀಪದಲ್ಲಿ ನಾಲ್ಕು ವಾರಗಳಿಗಿಂತ



ಅಧ್ಯಕ್ಷ ಮಾರ್ಕೋಸ್

ಕಡಿಮೆ ಅವಧಿಯಲ್ಲಿ ಇಲ್ಲಿ ೧೭೦ ಅಂಗುಲ ಮಳೆಯಾಯಿತು. ದೇಶದ ೬,೦೦,೦೦೦ ಎಕರೆ ಭತ್ತದ ಗದ್ದೆಗಳಲ್ಲಿ ೪/೫ ದಷ್ಟು ಕೊಚ್ಚಿಕೊಂಡು ಹೋದುವು ೬೨೫ ಮೈಲುಗಳಷ್ಟು ರಸ್ತೆಗಳೂ ಆ ಭಾಗದಲ್ಲಿಯ ಪ್ರತಿಯೊಂದು ಒಡ್ಡೂ ಹಾನಿಗೀಡಾಯಿತು. ಸುಮಾರು ೨,೦೦೦ ಶಾಲೆಗಳು ನಾಶವಾದುವು, ನಿಸರ್ಗ ಈ ದೇಶದ ಮೇಲೆ ಮುನಿಯುವುದು ಅಪರೂಪವೇನಲ್ಲ. ಈ ಸಲದ ಹಾನಿ ಹಿಂದೆಂದಿಗಿಂತಲೂ ಹೆಚ್ಚು ಭೀಕರವಾಗಿದೆಯೆಂಬುದಕ್ಕೆ ವಿಶಿಷ್ಟ ಕಾರಣವೊಂದಿದೆ. ಗಾಳಿ ಮಳೆಗೆ ತುತ್ತಾದ ಭೂಮಿಯಲ್ಲಿ ಹೆಚ್ಚಿನ ಭಾಗದಲ್ಲಿ ಉಸುಕು ಮತ್ತು ಕೆಸರು ತುಂಬಿಕೊಂಡುಬಿಟ್ಟಿದೆ. ಅದೆಲ್ಲವನ್ನೂ ತೆಗೆದುಹಾಕಿ ಈ ಭೂಮಿಯನ್ನು ಪುನಃ ಕೃಷಿಯೋಗ್ಯನಾಗಿ ಮಾಡುವುದು ಅಸಾಧ್ಯ ಕೆಲಸವೆಂದೇ ಜನ ಭಾವಿಸಿದ್ದಾರೆ.

ಫಿಲಿಪ್ಪೈನ್ಸಿನ ಜನ ಜನಾಂಗಿಕವಾಗಿ ಮಲಾಯರಿಗೆ ಹೆಚ್ಚು ಸಮೀಪವರ್ತಿಗಳು. ೧೬ನೆಯ ಶತಮಾನದಲ್ಲಿ ಸ್ಪಾನಿಶ್ ಸಾಹಸಿಗಳು ಇದನ್ನು ತಮ್ಮ ವಸಾಹತಾಗಿಸಿಕೊಂಡು ಸುಮಾರು ೪೦೦ ವರ್ಷ ಆಳಿದರು. ಅವರ ಆಳಿಕೆಯ ಈ ಅವಧಿಯಲ್ಲಿ ಅವರಿಗೆ ಸ್ಥಳೀಯರಿಂದ ವಿಶೇಷ ತೊಂದರೆಯೇನೂ ಆಗಲಿಲ್ಲ. ಆದರೆ ೧೮೭೨ರಲ್ಲಿ ರಾಜದ್ರೋಹದ ಆರೋಪ ಹೊರಿಸಿ ಮೂವರು ಧರ್ಮಬೋಧಕರನ್ನು ಸ್ಪಾನಿಶ್ ಸರಕಾರ ಗಲ್ಲಿಗೇರಿಸಿತು. ಅದನ್ನು ಕಣ್ಣಾರೆ ಕಂಡು ಉರಿದೆದ್ದವರಲ್ಲಿ ಜೋಸ್ ಮರ್ಕಾಡೊ ಎಂಬ ೧೧ ವರ್ಷದ ಬಾಲಕನೊಬ್ಬನಿದ್ದ. ಮುಂದೆ ಜೋಸ್ ರಿಝಾಲ್ ಎಂದು ಹೆಸರಾಂತ ಇವನನ್ನು ಫಿಲಿಪ್ಪೈನ್ಸಿನ ಜನ ತಮ್ಮ ರಾಷ್ಟ್ರಪಿತ ಎಂದು ಗೌರವಿಸುತ್ತಾರೆ. ದೇಶಸ್ವಾತಂತ್ರ್ಯಕ್ಕಾಗಿ ಸುಸಂಘಟಿತ ಪ್ರಯತ್ನ ಮಾಡಿದವರಲ್ಲಿ ಅವನೇ ಮೊದಲಿಗ. ಅವನು ಕವಿ, ಕಾದಂಬರಿಕಾರ, ತತ್ವಜ್ಞಾನಿ, ರಾಜಕಾರಣಿ–ಏನೆಲ್ಲವೂ ಆಗಿದ್ದ. ಅವನ ಕವನಗಳು ಭಾವನಾಪ್ರಧಾನವಾಗಿರುವವಾದರೂ ಕಾದಂಬರಿಗಳು ವಾಸ್ತವಜೀವನ ಚಿತ್ರಣವನ್ನು ನೀಡುತ್ತವೆ. ಅವನನ್ನು ಸ್ಪಾನಿಶ್ ಸೈನಿಕರು ೧೮೯೬ ರಲ್ಲಿ ಗುಂಡಿಕ್ಕಿ ಕೊಂದರು— ಅನಂತರದ ಎರಡು ವರ್ಷಗಳಲ್ಲೇ ಇಲ್ಲಿಗೆ ಅಡ್ಮಿರಲ್ ಡ್ಯೂಯಿಯ ನೇತೃತ್ವದಲ್ಲಿ ಬಂದ ಅಮೇರಿಕನ್ನರು, ಸ್ಪಾನಿಶ್‌ರನ್ನು ಸೋಲಿಸಿದರು. ಅಮೇರಿಕನ್ನರು ತಮಗೆ ಸ್ವಾತಂತ್ರ್ಯ ಕೊಡಿಸಲು ಹೆಣಗುತ್ತಿದ್ದಾರೆಂದು ಬಗೆದು ಸ್ಥಳೀಯ ಜನ ಅವರಿಗೆ ಮನಸಾರೆ ನೆರವಾದರು. ಆದರೆ ದುರ್ದೈವವೊ ಸುದೈವವೊ ಮುಂದಿನ ೪೭ ವರ್ಷ ಕಾಲ ಫಿಲಿಪ್ಪೈನ್ಸ್ ಅಮೇರಿಕನ್ ವಸಾಹತಾಗಿ ಕಾಲ ತಳ್ಳಬೇಕಾಯಿತು. ಆದರೆ ಅಮೇರಿಕನ್ ಆಳಿಕೆಯ ಕೊನೆಯ ಹಂತದಲ್ಲಿ, ೧೯೩೪ ರಲ್ಲಿ ಅಮೇರಿಕನ್ನರು ಫಿಲಿಪ್ಪೈನ್ಸಿಗೆ ಸ್ವಾಯತ್ತಾಧಿಕಾರವನ್ನಿತ್ತರು. ದ್ವಿತೀಯ ಮಹಾಯುದ್ಧಾನಂತರ ೧೯೪೬ ರಲ್ಲಿ ಫಿಲಿಪ್ಪೈನ್ಸ್ ಪೂರ್ಣ ಸ್ವತಂತ್ರ



ವಾಯಿತು.

ಸ್ವಾತಂತ್ರ್ಯಾನಂತರದಲ್ಲಿ ಅಮೇರಿಕ ತನ್ನ ಈ ಹಳೆಯ ವಸಾಹತಿಗೆ ಬಹು ದೊಡ್ಡ ಪ್ರಮಾಣದಲ್ಲಿ ನೆರವು ನೀಡತೊಡಗಿತು. ಆದರೆ ಅಲ್ಪಭಿವೃದ್ಧ ದೇಶಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳು ಇಲ್ಲಿ ಇನ್ನೆಲ್ಲಿಗಿಂತಲೂ ಹೆಚ್ಚು ಸ್ಪಷ್ಟ ರೀತಿಯಲ್ಲಿ ತೋರಿಬರತೊಡಗಿದವು. ಅಮೇರಿಕನ್ ಮಾದರಿಯಲ್ಲೇ ಅಧ್ಯಕ್ಷೀಯ ಪ್ರಜಾತಂತ್ರ ಬಳಕೆಗೆ ಬಂತು; ಆದರೆ ಅಮೇರಿಕನ್ ಹಣ ಅಧಿಕಾರದಾಹಿ ರಾಜಕಾರಣಿಗಳ ಬೊಕ್ಕಸ ಸೇರತೊಡಗಿತು. ಕೆಲವೇ ವರ್ಷಗಳಲ್ಲಿ ಭ್ರಷ್ಟಾಚಾರ ದೇಶದ ಆಡಳಿತವನ್ನೆಲ್ಲ ವ್ಯಾಪಿಸಿತು. ಅದನ್ನು ತಡೆಗಟ್ಟಲು ಅಮೇರಿಕ ಮಾಡಿದ ಪ್ರಯತ್ನಗಳನ್ನು ಫಿಲಿಪೈನ್ಸಿನ ರಾಜಕಾರಣಿಗಳು ಬಲವಾಗಿ ವಿರೋಧಿಸಿದರು. ೧೯೪೭ರಲ್ಲಾದ ಒಪ್ಪಂದದಿಂದಾಗಿ ಅಮೇರಿಕಕ್ಕೆ ಇಲ್ಲಿ ಸೈನಿಕ ನೆಲೆಗಳು ದೊರೆತುದರಿಂದಾಗಿ ಅದು ಇಲ್ಲಿಯ ರಾಜಕಾರಣಿಗಳನ್ನು 'ಸಂತೃಪ್ತ'ವಾಗಿಡುವ ತಂತ್ರವನ್ನು ಅನುಸರಿಸತೊಡಗಿತು.

೧೯೫೩ ರಲ್ಲಿ ರ್‍ಯಾಮ್ಸೆ ಮ್ಯಾಗ್ಸೆಸೆ ಅಧ್ಯಕ್ಷರಾಗಿ ಆಯ್ಕೆಯಾದಾಗ ಆಡಳಿತ ಸುಧಾರಿಸಿ ದೇಶ ಪ್ರಗತಿಯ ದಾರಿಯಲ್ಲಿ ನಡೆವ ಆಶೆ ಮೂಡಿತು. ಅವರು ಆಳಿದ ಮೂರು ವರ್ಷ ದೇಶದ ಸಾರ್ವಜನಿಕ ಜೀವನ ಚೇತರಿಸಿಕೊಂಡಿತು. ಆದರೆ ದೇಶದ ದುರ್ದೈವವೆಂಬಂತೆ ೧೯೫೭ರಲ್ಲಿ ಒಂದು ವಿಮಾನಾಪಘಾತದಲ್ಲಿ ಅವರು ಅಸು ನೀಗಿದರು. ಅನಂತರದಲ್ಲಿ ಸಂಕುಚಿತ ಬುದ್ಧಿಯ ರಾಜಕಾರಣಿಗಳಿಗೆ ಮತ್ತೆ ಪಕ್ಕಗಳು ಮೂಡಿದುವು.

೧೯೬೫ರಲ್ಲಿ ಫರ್ಡಿನಾಂಡ್ ಮಾರ್ಕೋಸ್ ದೇಶದ ಅಧ್ಯಕ್ಷರಾಗಿ ಆಯ್ಕೆಗೊಂಡರು. ಈ ಯುವಕ ರಾಜಕಾರಣಿಯು ಬಹು ದೊಡ್ಡ ಆಸ್ತಿಯೆಂದರೆ ಆಕರ್ಷಕ ಮಾತುಗಾರಿಕೆ ಮತ್ತು ಪತ್ನಿ ಇಮೆಲ್ಡಾ. ಮಾರ್ಕೋಸ್ ಜನತೆಯಲ್ಲಿ ಹೊಸ ಆಸೆಗಳನ್ನು ಚಿಗುರಿಸಿದರು. ಕೊನೆಗೂ ತಮ್ಮ ನಾಡನ್ನು ಉದ್ಧರಿಸಬಲ್ಲ ಕಾರಣಪುರುಷನೊಬ್ಬ ಬಂದನೆಂಬ ಉತ್ಸಾಹದಿಂದ, ನಂಬಿಕೆಯಿಂದ ಜನರು ಅವರನ್ನು ಅಪೂರ್ವ ಬಹುಮತದಿಂದ ಆಯ್ಕೆ ಮಾಡಿದರು. ಆದರೆ ೧೯೬೯ರಲ್ಲಿ ಅವರು ಮತ್ತೊಮ್ಮೆ ಸ್ಪರ್ಧಿಸಿದಾಗ ಜನತೆ ಅವರಲ್ಲಿನ ವಿಶ್ವಾಸವನ್ನು ಕೆಲಮಟ್ಟಿಗಾದರೂ ಕಳೆದುಕೊಂಡಿತ್ತು. ಆದರೂ ಅವರು ಪುನರಾಯ್ಕೆಗೊಂಡರು. ಅನಂತರ ಹೊರಬಿದ್ದ ಅಂಶದಿಂದ ಎಲ್ಲರೂ ದಂಗುಬಡಿಯುವಂತಾಯಿತು. ಅವರ ಚುನಾವಣೆಗಾಗಿ ಸರಕಾರದ ಬೊಕ್ಕಸದಿಂದ ೩೦ ಕೋಟಿ ಡಾಲರುಗಳಷ್ಟು ಹಣ ವೆಚ್ಚವಾಗಿತ್ತು!

ಸರಕಾರದ ಒಬ್ಬ ಕಿರಿಯ ಅಧಿಕಾರಿಯನ್ನು ಮೊದಲ್ಗೊಂಡು ದೇಶದ ಅಧ್ಯಕ್ಷರ ವರೆಗೆ ಯಾರೂ ಭ್ರಷ್ಟಾಚಾರದಿಂದ ಮುಕ್ತರಲ್ಲ ವೆಂಬಂಥ ಪರಿಸ್ಥಿತಿ ಫಿಲಿಪೈನ್ಸಿನಲ್ಲಿ ನಿರ್ಮಾಣಗೊಂಡಿತ್ತು. ಯಾರೊಬ್ಬನನ್ನೂ ಒಂದೂರಿಂದ ಮತ್ತೊಂದೆಡೆ ಬದಲಿ ಮಾಡುವುದು ಸಹ ಅಸಾಧ್ಯವಾಗಿ ಪರಿಣಮಿಸಿತ್ತು; ಯಾಕೆಂದರೆ ಪ್ರತಿಯೊಬ್ಬನಿಗೆ ಬೆಂಬಲವಾಗಿ ಒಬ್ಬಿಲ್ಲೊಬ್ಬ ರಾಜಕಾರಣಿ—ಮುಖ್ಯತಃ ಸಿನೇಟರರು—ಇದ್ದೇ ಇರುತ್ತಿದ್ದರು.

ಇದ್ದಕ್ಕಿದ್ದಂತೆ ಕಳೆದ ಸಪ್ಟಂಬರಿನಲ್ಲಿ ಅಧ್ಯಕ್ಷ ಮಾರ್ಕೋಸ್ ಒಮ್ಮೆಲೆ ದೇಶವನ್ನು ಉದ್ಧರಿಸುವುದಾಗಿ ನಿರ್ಧರಿಸಿ ಸಂವಿಧಾನವನ್ನು ಸ್ಥಗಿತಗೊಳಿಸಿ ಸೈನಿಕ ಆಡಳಿತವನ್ನು ಸಾರಿದರು. ದೇಶದ ಎಲ್ಲ ನಾಗರಿಕ ಸರಕಾರಿ ನೌಕರರಿಗೆ ರಾಜೀನಾಮೆ ಕೊಡಲು ಆಜ್ಞಾಪಿಸಿದರು. ಪತ್ರಿಕೆಗಳ ಮತ್ತು ರೇಡಿಯೋ ಟೆಲಿವಿಜನ್ನುಗಳ ಮೇಲೆ ಪೂರ್ಣ ನಿರ್ಬಂಧ ಹಾಕಿದರು. ವಿದ್ಯುತ್ ಪೂರೈಕೆಯ ದರಗಳನ್ನು ಶೇಕಡಾ ೧೫ರಷ್ಟು ಇಳಿಸಿದರು. ಉಚ್ಚ ಹುದ್ದೆಗಳಲ್ಲಿದ್ದು ಲಂಚಗುಳಿಗಳೆಂದು ಹೆಸರಾಂತ ಅನೇಕರನ್ನು ಕೆಲಸದಿಂದ ಕಿತ್ತು, ಕೆಲವರನ್ನು—ವಿರೋಧಿ ಪಕ್ಷಗಳ ಕೆಲವು ಧುರೀಣರನ್ನು ಸಹ—ಬಂಧಿಸಿದರು ಕೂಡ. ದೇಶದ ಸಂವಿಧಾನದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಲು ಕೆಲವರ ಒಂದು ಸಮಿತಿಯನ್ನು ನಿಯುಮಿಸಿದರು. ಒಟ್ಟಿನಲ್ಲಿ ಅವರು ಫಿಲಿಪೈನ್ಸಿನ ರಾಷ್ಟ್ರ

ಜೀವನವೆಲ್ಲ ತಮ್ಮ ಅಳವಿನಲ್ಲಿ ಇರುವಂತೆ ಸವ್ಯಕ್ಯಂತೂ ಮಾಡಿದ್ದಾರೆ.

ಅಧ್ಯಕ್ಷರ ಈ ಕ್ರಮಗಳು ತಮ್ಮ ದೇಶಕ್ಕೆ ಒಳ್ಳೆಯದನ್ನು ಮಾಡಬಹುದೆಂದು ಸಾಮಾನ್ಯ ಜನರಲ್ಲಿ ನಿರೀಕ್ಷೆಯಿದೆಯಾದರೂ ಅವರಿಗೆ ವಿರೋಧವೂ ಸಾಕಷ್ಟಿದೆ. ಸಂವಿಧಾನವನ್ನು ತಿದ್ದಲು ನಿಯಮಿತವಾದ ಸಮಿತಿಯ ಹಿರಿಯ ಸದಸ್ಯನೊಬ್ಬನನ್ನು ತಮಗನುಕೂಲವಾಗಿ ಮಾಡಿಕೊಳ್ಳಲೋಸುಗ ಅಧ್ಯಕ್ಷರ ಪತ್ನಿ ಅವನಿಗೆ ಭಾರಿ ಆಮಿಷ ತೋರಿಸಿದ್ದಳೆಂದು ಈಗ ಆಪಾದಿಸಲಾಗುತ್ತಿದೆ.

ಅಲ್ಲದೆ ಇಲ್ಲಿನ ರಾಜಕೀಯ ಪಕ್ಷಗಳು ತಂತಮ್ಮ ಸಶಸ್ತ್ರ ಪಡೆಗಳನ್ನೇ ಹೊಂದಿರುವುದರಿಂದ ಅವುಗಳು ಯಾವಾಗ ಬಂಡೇಳಬಹುದೆಂಬ ನಿಯಮವೂ ಇಲ್ಲ. ಕಮ್ಯುನಿಸ್ಟ್ ಗೆರಿಲ್ಲಾಗಳ ಭಯವೂ ಸಾಕಷ್ಟಿದೆ.

ಅಧ್ಯಕ್ಷ ಮಾರ್ಕೋಸರ ಈ ಹೊಸ ಪ್ರಯೋಗ ದೇಶವನ್ನು ಎಲ್ಲಿಗೆ ತಂದು ನಿಲ್ಲಿಸುವುದೆಂಬುದನ್ನು ಭವಿಷತ್ತೇ ನಿರ್ಧರಿಸಬೇಕು. ಇದು ನಾಗರಿಕ ಅಧಿಕಾರಿಯ ನೇತೃತ್ವದಲ್ಲಿ ದಂಡನಾಳಿಕೆ ಕರೆಯುತ್ತಿದ ಅಪರೂಪ ದೇಶವಾಗಿದೆ. ಮಾರ್ಕೋಸರಿಗೆ ಅವರ ವಿರೋಧ ಎಷ್ಟು ಪ್ರಬಲವಾಗಿದೆಯೆಂದರೆ, ಪತ್ನಿ ಇಮೆಲ್ಡಾಳ ಮೇಲೆ ಇದೇ ಡಿಸೆಂಬರ ೭ ರಂದು ಹಲ್ಲೆಯಾಗಿ ಆಕೆ ಬದುಕಿದ್ದೇ ದೈವವನ್ನುವಂತಾಗಿದೆ.

ನಿಸರ್ಗಲಕ್ಷ್ಮಿ ಮೆರೆಯುತ್ತಿರುವ ಫಿಲಿಪೈನ್ಸನ್ನು ಕಾಲವೇ ಕೈ ಹಿಡಿದು ಮುನ್ನಡೆಸಬೇಕು. ▲

## ಸತ್ಯ ದರ್ಶನದ ಹಾದಿ.

ಒಂದು ಇರುವೆ ಎಲ್ಲೋ ಹೊರಟಿತ್ತು. ಮಾರ್ಗಮಧ್ಯದಲ್ಲಿ ಮತ್ತೊಂದು ಇರುವೆ ಎದುರು ಸಿಕ್ಕಿತು. ಎರಡೂ ಪರಸ್ಪರ ಕ್ಷೇಮ ಸಮಾಚಾರವನ್ನು ವಿಚಾರಿಸಿದವು.

ಮೊದಲನೆಯ ಇರುವೆ ಹೇಳಿತು— "ಸೋದರಿ, ಎಲ್ಲಾ ಸರಿಯಾಗಿದೆ. ಆದರೆ ಬಾಯಿ ಸದಾ ಉಪ್ಪುಉಪ್ಪಾಗಿರುತ್ತದೆ.

ಅದಕ್ಕೆ ಉತ್ತರವಾಗಿ, "ಉಪ್ಪಿನ ಪರ್ವತದ ಮೇಲೆ ವಾಸ ಮಾಡ್ತಿದ್ದೀ. ಇನ್ನು ಬಾಯಿ ಉಪ್ಪಾಗದೆ ಇರ್ತದೆಯೆ? ನಾನು ಕಲ್ಸಕ್ಕರೆ ಬೆಟ್ಟದ ಮೇಲೆ ವಾಸಮಾಡ್ತಿದ್ದೀನಿ. ಬಾ ಅಲ್ಲಿಗೆ ಹೋಗೋಣ. ನಿನ್ನ ಬಾಯಿ ಸಿಹಿಯಾಗುತ್ತೆ" ಎಂದಿತು ಎರಡನೆಯ ಇರುವೆ.

ಅವೆರಡೂ ಕಲ್ಲುಸಕ್ಕರೆ ಬೆಟ್ಟವನ್ನು ತಲುಪಿದವು. ಆದರೆ ಅಲ್ಲಿಗೆ ಹೋದ ಮೇಲೂ ಮೊದಲನೆಯ ಇರುವೆಯ ಬಾಯಿ ಸಿಹಿಯಾಗಲಿಲ್ಲ. "ನನ್ನ ಬಾಯಿ ಇನ್ನೂ ಉಪ್ಪಾಗಿಯೇ ಇದೆಯಲ್ಲಾ?" ಎಂದಿತದು. "ಯಾಕೆ? ನಿನ್ನ ಬಾಯಲ್ಲಿ ಉಪ್ಪಿನ ಕರಣೆಯೇನಾದರೂ ಇದೆಯೋ ಹ್ಯಾಗೆ?" ಎಂದು ಪ್ರಶ್ನಿಸಿತು ಎರಡನೆಯ ಇರುವೆ.

"ಇದೆ" ಎಂದುತ್ತರಿಸಿತು ಮೊದಲನೆಯ ಇರುವೆ. ಆಗ ಎರಡನೆಯ ಇರುವೆ ಹೇಳಿತು, "ಸೋದರಿ! ಉಪ್ಪನ್ನು ಉಗುಳದಿದ್ದರೆ ಬಾಯಿ ಸಿಹಿ ಹೇಗಾದೀತು?"

ಪೂರ್ವಾಗ್ರಹಗಳಿಂದ ಮುಕ್ತನಾಗದ ಹೊರತು ಯಾರೂ ಸತ್ಯವನ್ನು ಕಾಣಲಾರದು.

—ಸಿ. ರಾಮಸ್ವಾಮಿ

# ಗಾಂಧೀಜಿಯ ಅಂತರ್ವಾಣಿ

ಮುರಲೀಧರ

ಅದು ೧೯೪೮ರ ಜನವರಿ. ಭಾರತದಲ್ಲಿ ಯಾವ ಹಿಂದೂ-ಮುಸ್ಲಿಂ ರಕ್ತಪಾತವನ್ನು ತಪ್ಪಿಸುವುದಕ್ಕಾಗಿ ನಮ್ಮ ನಾಯಕರು ದೇಶದ ವಿಭಜನೆಗೆ ಗಾಂಧೀಜಿಯ "ಅಂತರ್ವಾಣಿ"ಯ ವಿರುದ್ಧವಾಗಿ ಒಪ್ಪಿದ್ದರೋ ಅದೇ ರಕ್ತಪಾತ ಇತಿಹಾಸದಲ್ಲೇ ಕಂಡು ಕೇಳರದ ಪ್ರಮಾಣದಲ್ಲಿ ನಡೆದು ಹೋಗಿತ್ತು, ನಡೆಯುತ್ತ ಇತ್ತು. ಗಾಂಧೀಜಿ ತಮ್ಮ ಸಮಸ್ತ ಕಾರ್ಯಗಳನ್ನು ಬದಿಗಿಟ್ಟು ಈ ದಾವಾನಲವನ್ನು ನಂದಿಸುವುದರಲ್ಲಿ ಮಗ್ನರಾಗಿದ್ದರು. ಇದು ಹಿಂದೂವಾದಿಗಳ ರೋಷವನ್ನು ಇನ್ನಷ್ಟು ಉರಿದೆಬ್ಬಿಸಿತ್ತು. ಹಿಂಸೆಗೆ ಪ್ರತಿಹಿಂಸೆ ಮಾಡಬೇಕೆನ್ನುವ ಈ ಜನರ ಭಾವನೆಗಳಿಗೆ ತಮ್ಮ ಸಂಸ್ಥಾನಗಳಲ್ಲಿ ನಿರಂಕುಶ ಪ್ರಭುತ್ವವನ್ನು ಕಳೆದುಕೊಂಡ ಸಂಸ್ಥಾನಿಕರು ಕೆಲವರ ಸಹಾನುಭೂತಿಯೂ ಇತ್ತು.

ಗ್ವಾಲಿಯರ್ ಸಂಸ್ಥಾನದ ತರುಣ ಮಹಾರಾಜರು ಭಾರತದೊಡನೆ ಸೇರ್ಪಡೆ ಪತ್ರಕ್ಕೆ ಅಂಕಿತವಿಕ್ಕಿದ ಪ್ರಥಮ ಸಂಸ್ಥಾನಿಕರಲ್ಲಿ ಒಬ್ಬರಾಗಿದ್ದರು. ಸಂಸ್ಥಾನಿಕರ ಮಂಡಲಿಯ ಚಾನ್ಸಲರರಾಗಿದ್ದ ಭೂಪಾಲದ ನವಾಬರು ಅಂಕಿತ ಹಾಕಬೇಡಿರೆಂದು ಒತ್ತಾಯದಿಂದ ಸೂಚಿಸಿದ್ದರೂ ಮಹಾರಾಜರು ತಮ್ಮ ಸಲಹೆಗಾರರಾಗಿದ್ದ ಎಂ. ಎ. ಶ್ರೀನಿವಾಸನ್ನರ ಸಲಹೆಯನ್ನು ದೃಢವಾಗಿ ಅಂಗೀಕರಿಸಿ ತಮ್ಮ ನಿರ್ಣಯದಲ್ಲಿ ಅವಿಚಲಿತರಾಗಿದ್ದರು.

ಆದರೆ ಗ್ವಾಲಿಯರ್ ಭಾರತ ಪಾಕಿಸ್ತಾನ ಗಡಿಯಲ್ಲಿರುವ ದುರ್ದೈವಿ ಸಂಸ್ಥಾನವಾಗಿತ್ತು. ಭಾರತ ಪಾಕಿಸ್ತಾನಗಳ ನಡುವಣ ರೈಲು ಗಾಡಿಗಳು ಸಂಸ್ಥಾನದ ಮೂಲಕ ಹಾದು ಹೋಗುವಾಗ ಮೊದಲು ಅಧಿಕತರವಾಗಿ ಹಿಂದೂ ಮುಸ್ಲಿಂ ಶಾಂತಿಯ ದಾಖಲೆಯೇ ಇದ್ದ ಗ್ವಾಲಿಯರ್ ಅನನ್ವಿತ ಅತ್ಯಾಚಾರಗಳನ್ನು ಕಾಣಬೇಕಾಯಿತು. ಗ್ವಾಲಿಯರ್ ಮೂಲಕ ನಿರಾಶ್ರಿತ ಮುಸ್ಲಿಮರನ್ನು ಕರೆದೊಯ್ಯುತ್ತಿದ್ದ ರೈಲು ಗಾಡಿಗಳನ್ನು ಹೊಕ್ಕು ಮುಸಲ್ಮಾನರೆಂದು ಸಂಶಯ ಬಂದವರ ಬಟ್ಟೆ ಬಿಚ್ಚಿ ಪರೀಕ್ಷಿಸಿ ನಿರ್ದಯವಾಗಿ ಕೊಲೆಮಾಡಿ ಹೊರಗೊಗೆಯುವುದು ದಿನವೂ ನಡೆಯುತ್ತಿತ್ತು. ಒಂದೊಂದು ದಿನ ೩೦ರಷ್ಟು ಮುಸ್ಲಿಂ ಕಳೇವರಗಳನ್ನು ಪೋಲೀಸರು ಕಂಡುಹಿಡಿದದ್ದೂ ಇತ್ತು. ಸಂಸ್ಥಾನದಲ್ಲಿ ಹಿಂದೂ ಅತಿರೇಕವಾದಿಗಳ ಪ್ರಬಲ ಕೇಂದ್ರಗಳಿದ್ದವು. ಬೇರೆ ಕಡೆ ಪಾಕಿಸ್ತಾನದಿಂದ ಬರುವ ಹಿಂದೂ ನಿರಾಶ್ರಿತರನ್ನು ರೈಲುಗಳಲ್ಲಿ ಕೊಲೆಗಡಿದದ್ದಕ್ಕೆ ಪ್ರಾಯಶ್ಚಿತ್ತ ಕೊಡುವುದು ತಮ್ಮ ಪವಿತ್ರ ಕರ್ತವ್ಯವೆಂದು ಈ ಜನ ಭಾವಿಸಿದ್ದರು.

ಸಂಸ್ಥಾನದ ಆಡಳಿತದ ಹೊಣೆ ಹೊತ್ತಿದ್ದ ಶ್ರೀನಿವಾಸನ್ನರ ಪರಿಸ್ಥಿತಿ ಬಲು ಇಕ್ಕಟ್ಟಿನದಾಗಿತ್ತು. ಅವರು ವಿಭಜನೆಗೆ ಮೊದಲಿನಿಂದಲೂ ವಿರೋಧಿಗಳಾಗಿದ್ದರು. ಆದರೆ ಅದು ತಂದು ಹಾಕಿದ್ದ ಸಮಸ್ಯೆಯನ್ನು ಅವರು ಎದುರಿಸಲೇ ಬೇಕಾಗಿತ್ತು.

ಈ ನಡುವೆ ಸಂಸ್ಥಾನದಲ್ಲಿ ಜನಪ್ರಿಯ ಸರಕಾರ ಸ್ಥಾಪಿಸುವ ಒತ್ತಡ ಬಂತು. ಮಹಾರಾಜರು ಅಧ್ಯಕ್ಷರಾಗಿಯೂ ಎಂ. ಎ. ಶ್ರೀನಿವಾಸನ್ನರು ಉಪಾಧ್ಯಕ್ಷರಾಗಿಯೂ ಇರುವ ಆಯ್ಕೆ ಹೊಂದಿದ ಮಂತ್ರಿಮಂಡಲವನ್ನು ಸ್ಥಾಪಿಸಲಾಯಿತು. ಹಿಂದೂ ಮಹಾಸಭಾ ಅಥವಾ ಆ ಅಭಿಮತದ ಜನರಿಗೆ ಅದರಲ್ಲಿ ಪ್ರಾತಿನಿಧ್ಯವಿರಲಿಲ್ಲ. ಇದು ಅತಿರೇಕವಾದಿಗಳನ್ನು ಇನ್ನೂ ರೊಚ್ಚಿಗೆಬ್ಬಿಸಿತು.

ಶ್ರೀನಿವಾಸನ್ನರೇ ಇದಕ್ಕೆಲ್ಲ ಕಾರಣರೆಂದು ಈ ಜನ ನಂಬಿದ್ದರು. ಅವರೇ ಈಚೆಗೆ ಒಂದು ಲೇಖನದಲ್ಲಿ ಪರಿಸ್ಥಿತಿಯನ್ನು ವಿವರಿಸಿದಂತೆ, ಗ್ವಾಲಿಯರಿನಲ್ಲಿ ಅಲ್ಲಲ್ಲಿ "ನೆಹರೂಕಾ ಏಜೆಂಟ್ ಶ್ರೀನಿವಾಸನ್ ಕೋ ಹಟಾ ದೋ" ಇತ್ಯಾದಿ ಭಿತ್ತಿಪತ್ರಗಳು ಕಾಣಿಸಿಕೊಂಡವು.

ಇದೇ ಸಮಯದಲ್ಲಿ ಒಂದು ದಿನ ಡಾ. ಪರಚುರೆ (ಮುಂದೆ ಗಾಂಧೀ ಹತ್ಯೆಯ ಪ್ರಕರಣದ ಆರೋಪಿಗಳಲ್ಲಿ ಇವರೊಬ್ಬರಾದರು)ಯವರು ಒಬ್ಬ ಸಂಗಡಿಗನೊಡನೆ ಶ್ರೀನಿವಾಸನ್ನರನ್ನು ಕಾಣಲು ಅವರ ಮನೆಗೆ ಬಂದರು. ಶ್ರೀನಿವಾಸನ್ನರು ಕೊಟ್ಟ ಚಹಾವನ್ನು ಕುಡಿಯುತ್ತಿದ್ದಂತೆ ಪರಚುರೆಯವರ ಕೈ ಕ್ರೋಧದಿಂದ ನಡುಗುತ್ತಿದ್ದುದರಿಂದ ಕಪ್ ಸಾಸರುಗಳು ಖಣ ಖಣ ಸದ್ದು ಮಾಡುತ್ತಿದ್ದವೆಂದು ಶ್ರೀನಿವಾಸನ್ ಬರೆದಿದ್ದಾರೆ.

ಅದಾಗಿ ಡಾ. ಪರಚುರೆಯವರು, "ನಮ್ಮನ್ನು ಮಂತ್ರಿಮಂಡಲದಿಂದ ಹೊರಗಿಟ್ಟದ್ದೇಕೆ? ನೀವು ನಮಗೆ ವಿಶ್ವಾಸಘಾತ ಮಾಡಿದ್ದೀರಿ," ಎಂದು ಹೇಳಿದರು.

ಚುನಾವಣೆಗಳಲ್ಲಿ ಬಹುಮತ ನಿಮಗೆ ದೊರೆತರೆ ನಿಮ್ಮನ್ನೇ ಕರೆಯಬಹುದೆಂದು ಶ್ರೀನಿವಾಸನ್ ಶಾಂತವಾಗಿ ಉತ್ತರಿಸಿದರು. ಅನಂತರ ಪರಚುರೆಯವರು ಶ್ರೀನಿವಾಸನ್ನರನ್ನು ಗ್ವಾಲಿಯರಿಗೆ ದ್ರೋಹ ಮಾಡಿದವರೆಂದು ಆರೋಪಿಸಿ, ಅವರು ಹೋಗಲೇಬೇಕು ಎಂದು ಗರ್ಜಿಸಿದರು.

ಹಾಗೆ ಹೇಳುವುದು ಮಹಾರಾಜರಿಗೆ ಸೇರಿದ್ದೆಂದು ಶ್ರೀನಿವಾಸನ್ ಮಾರುತ್ತರವಿತ್ತರು.

ಆಮೇಲೆ ಪರಚುರೆಯವರು ಶ್ರೀನಿವಾಸನ್ನರನ್ನು ಜಿನ್ನಾರ ಏಜಂಟನೆಂದು ಕರೆದರು. ಶ್ರೀನಿವಾಸನ್ನರು ನಕ್ಕು, ಒಬ್ಬನೇ ಮನುಷ್ಯ (ಭಿತ್ತಿ ಪತ್ರಗಳಲ್ಲಿ ಹೇಳಿದಂತೆ) ನೆಹರೂರ ಏಜಂಟನೂ ಜಿನ್ನಾರ ಏಜಂಟನೂ ಹೇಗಾಗಿರಲು ಸಾಧ್ಯ? ಎಂದು ಪ್ರಶ್ನಿಸಿದರು. ಇದರಿಂದ

ಮತ್ತಷ್ಟು ಕ್ರೋಧೋನ್ಮತ್ತರಾಗಿ ಪರಚುರೆಯವರು ಅವರನ್ನು ಹಿಂದುಗಳ ಶತ್ರುವೆಂದು ಬಯ್ದುದಲ್ಲದೆ, "ರಘುಪತಿರಾಘವ ರಾಮ ರಹೀಮ" ಇತ್ಯಾದಿಯಾಗಿ ಹಿಂದೂ ಧರ್ಮವನ್ನು ಅಪವಿತ್ರಗೊಳಿಸುವ ನಿಮ್ಮ ಗಾಂಧಿಯನ್ನೂ ನಿಮ್ಮನ್ನೂ ಸೇರಿಯೆ ಮುಗಿಸುತ್ತೇವೆ ಸವಾಗ ಗಿ ನಮ್ಮ ಹತ್ತಿರ ಕೈಬಾಂಬುಗಳಿವೆ!" ಎಂದು ಅರ್ಭಟಿಸಿ ಎದ್ದು ನಿಂತರು.

ಮನೆಗೆ ಅತಿಥಿಯಂತೆ ಬಂದವರ ಮೇಲೆ ಅಧಿಕಾರದ ಗಡೆಯೆತ್ತಲು ಇಷ್ಟಪಡದೆ ಬಂದವರಿಬ್ಬರನ್ನೂ ಹೊರಗೆ ಕರೆದೊಯ್ದು, ಇಲ್ಲಿ ಅದೇ ಮಾತು ಹೇಳಿದರೆ ನಿಮ್ಮನ್ನು ನೋಡಿಕೊಳ್ಳುತ್ತೇನೆ ಎಂದು ಶ್ರೀನಿವಾಸನ್ ಕಠೋರವಾಗಿ ಹೇಳಿದರು. ಪರಚುರೆಯವರು ಏನೂ ಹೇಳದೆ ಅದೇ ಉದ್ವೇಗದಲ್ಲಿ ಹೊರಟೇಹೋದರು. ಶ್ರೀನಿವಾಸನ್ನರು ಒಡನೆಯೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲರಿಗೆ ವಿಷಯ ತಿಳಿಸಿ, ಬಿಗಿಯಾದ ಕ್ರಮ ಕೈಕೊಳ್ಳಲು ಆದೇಶವಿತ್ತರು. ಪರಿಣಾಮವಾಗಿ ಉಗ್ರ ಹಿಂದೂವಾದಿ ನಾಯಕರನ್ನೊಳಗೊಂಡು ಒಂಭೈನೂರಕ್ಕೂ ಮೇಲ್ಪಟ್ಟು ಜನರನ್ನು ಬಂಧಿಸಲಾಯಿತು.

ಆಗಲೇ ೩೫ ವರ್ಷಗಳನ್ನು ಸರಕಾರಿ ಸೇವೆಯಲ್ಲಿ ಕಳೆದಿದ್ದ ಶ್ರೀನಿವಾಸನ್ನರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಲು ನಿರ್ಧರಿಸಿ ಜನವರಿ ೨೧ರಂದು ನಿವೃತ್ತರಾದರು. ಈ ನಡುವೆ ಮಹಾತ್ಮಾ ಗಾಂಧಿಯವರು ಮುಸ್ಲಿಮರ ಮೇಲಾಗುವ ಅತ್ಯಾಚಾರ ನಿಲ್ಲಬೇಕೆಂದೂ ಪಾಕಿಸ್ತಾನಕ್ಕೆ ಕೊಡಬೇಕಾದ ೫೫ ರೂಪಾಯಿಗಳನ್ನು ಭಾರತ ಸರಕಾರ ಕೊಡಲೇಬೇಕೆಂದೂ ನಿರಶನ ವ್ರತ ಆರಂಭಿಸಿದ್ದು ಉರಿಯುವ ತುಪ್ಪಕ್ಕೆ ಬೆಂಕಿ ಹೊಯ್ದಂತಾಗಿತ್ತು. ಜನವರಿ ೨೦ ನೇ ದಿನ ಗಾಂಧಿಜಿಯ ಪ್ರಾರ್ಥನಾ ಸಭೆಯಲ್ಲಿ ಒಂದು ಬಾಂಬು ಸ್ಫೋಟವಾಗಿತ್ತು. ಪರಚುರೆ ಕೊಟ್ಟ ಧಮಕಿ ಬರೀ ಬಾಯ್ಬಡಕತನದ್ದಲ್ಲವೆಂದು ತೋರಿಸಿತ್ತು. ಈ ಘಟನೆಯ ನಂತರ ಸರದಾರ ಪಟೇಲರು ಪ್ರಾರ್ಥನಾ ಸಭೆಗೆ ಬರುವವರನ್ನು ಜಡತಿ ಮಾಡಿ ಒಳಗೆ ಬಿಡಬೇಕೆಂದು ಪ್ರಯತ್ನಿಸಿದರು. ಆದರೆ ಗಾಂಧೀಜಿ ಬಡಪೆಟ್ಟಿಗೆ ಒಪ್ಪಲಿಲ್ಲ. ಅವರ ದೇವರಿಗೂ ಅವರಿಗೂ ಮಧ್ಯೆ ಪೋಲೀಸರು ಪ್ರವೇಶಿಸುವುದನ್ನು ಅವರು ಸೈರಿಸಲಿಲ್ಲ!

ಗಾಂಧೀಜಿ ಇನ್ನೂ ಉಪೋಷಣೆಯಲ್ಲಿದ್ದಾಗ ಅಮೇರಿಕನ್ ಲೇಖಕ ವಿನ್ಸೆಂಟ್ ಶಿಯಾನ್ ಅವರ ಸಂದರ್ಶನ ತೆಗೆದುಕೊಂಡರು. ಗಾಂಧೀಜಿ ತಮ್ಮ ಉಪವಾಸ ಮೊದಲಾದ ಕ್ರಮಗಳಿಗೆ— ವಿಭಜನೆಯನ್ನು ತಾತ್ವಿಕವಾಗಿ ವಿರೋಧಿಸಲಿಕ್ಕೂ— ತಮ್ಮ "ಅಂತರ್ವಾಣಿ"ಯ ಕಿವಿ ಮಾತನ್ನೇ ಉಳಿದೆಲ್ಲ ತರ್ಕಕ್ಕೂ ಮಿಗಿಲಾದ ಪ್ರಮಾಣವೆಂದು ವಾದಿಸುತ್ತಿದ್ದರು. ಶಿಯಾನರು, "ಮಹಾತ್ಮಾಜಿ, ನೀವು ನಿಮ್ಮ ಅಂತರ್ವಾಣಿಯನ್ನು ಇಷ್ಟು ಖಚಿತವಾಗಿ ನಂಬುತ್ತೀರಿ. ಆದರೆ ಇತರರಿಗೂ ಅಂತರ್ವಾಣಿ ಕೇಳಿಸುತ್ತದೆ. ಆದರೆ ಅವರು ಅದರ ಸತ್ಯತ್ವದ ಬಗ್ಗೆ ಅಷ್ಟು ನಿಶ್ಚಿತಮತಿಗಳಾಗಿರುವುದಿಲ್ಲವಲ್ಲ?" ಎಂದು ಕೇಳಿದ್ದರು.

ಮಹಾತ್ಮಾಜಿ, ಎಲ್ಲಾ ತರ್ಕಗಳ ವಿರುದ್ಧವಾಗಿದ್ದರೂ ತಮಗೆ ಅವನ್ನೆಲ್ಲ ಧಿಕ್ಕರಿಸಿ ತರ್ಕಾತೀತವಾದ ನಿಯಮವೊಂದು ಅಪ್ಪಣೆ ಕೊಡುತ್ತದೆ



ಎಂದು ಉತ್ತರವಿತ್ತಿದ್ದರು. ಆದರೆ ಇನ್ನೊಬ್ಬನ ಅಂತರ್ವಾಣಿ ಗಾಂಧೀಜಿಯ ಅಂತರ್ವಾಣಿಗೆ ಬದ್ಧ ವಿರುದ್ಧವಾಗಿದ್ದರೆ?

ಗಾಂಧೀಜಿ ಈ ಪ್ರಶ್ನೆಯನ್ನು ನಿಜವಾಗಿಯೂ ಮರಣದ ಮುನ್ನಾ ದಿನ ಎದುರಿಸಬೇಕಾಯಿತು. ಎಂ. ಎ. ಶ್ರೀನಿವಾಸನ್ನರು ಗ್ವಾಲಿಯರಿನಿಂದ ನಿವೃತ್ತರಾಗಿ ದಿಲ್ಲಿಗೆ ಗಾಂಧೀಜಿಯ ದರ್ಶನಕ್ಕೆ ಹೋದರು. ಜನವರಿ ೨೯ ರಂದು ಅವರಿಗೆ ಭೇಟಿ ಸಿಕ್ಕಿತು. ಗಾಂಧೀಜಿಯ ಮುಂದೆ ಹೋಗಿ ನಿಂತಾಗ ಅವರ ತೊಡೆಯ ಮೇಲೊಂದು ದಾಖಲೆ ಇತ್ತು. ಅದು ಕಾಂಗ್ರೆಸ್ಸನ್ನು ಬರ್ಖಾಸ್ತುಮಾಡಿ ಲೋಕ ಸೇವಕ ಸಂಘವಾಗಿ ಮಾಡಬೇಕೆಂದು ಸೂಚಿಸುವ ಅವರ "ಮೃತ್ಯುಪತ್ರ"ವಾಗಿತ್ತು. ತಮ್ಮ ಮುಂದೆ ನಿಂತಿರುವ ಮೃತ್ಯು ಅವರಿಗೆ ಗೋಚರಿಸಿದ್ದರಿಂದಲೇ ಅವರು ಲಗುಬಗೆಯಿಂದ ತಮ್ಮೀ ಮೃತ್ಯುಪತ್ರ ಬರೆಯುತ್ತಿದ್ದರೇ? ಮುಂದೆ ಅವರಿಗೂ ಶ್ರೀನಿವಾಸನ್ನರಿಗೂ ಆದ ಸಂಭಾಷಣೆಯಿಂದ ಹಾಗೇ ಅನಿಸುತ್ತದೆ.

ಗಾಂಧೀಜಿ ಮೊದಲು ಶ್ರೀನಿವಾಸನ್ನರ ಹಿಂದೀ ಕಲಿಕೆಯ ಪ್ರಗತಿಯ ಬಗ್ಗೆ (ಸ್ವತಃ ತಪ್ಪು ತಪ್ಪು ಹಿಂದಿಯಲ್ಲಿ) ವಿನೋದವಾಗಿ ಪ್ರಶ್ನಿಸಿ, ಆ ಮೇಲೆ ಅವರು ಗ್ವಾಲಿಯರ್ ಸಲಹೆಗಾರ ಪದಕ್ಕೆ ರಾಜೀನಾಮೆ ಕೊಡಬಾರದಿತ್ತೆಂದು ಸೂಚಿಸಿದರು. ಸರದಾರರು ಅವರ ಕೆಲಸವನ್ನು ತುಂಬಾ ಮೆಚ್ಚಿದ್ದಾರೆಂದು ತಿಳಿಸಿದರು. ಇಬ್ಬರೂ ಖುಶಿಯಿಂದ ಹೃತ್ಪೂರ್ವಕವಾಗಿ ನಕ್ಕರು.

ಆ ಮೇಲೆ ಗಾಂಧೀಜಿ ಒಮ್ಮೆಲೇ ಗಂಭೀರರಾಗಿ, ಹೊರಟು ನಿಂತಿದ್ದ ಶ್ರೀನಿವಾಸನ್ನರನ್ನು ಕೂಡಲು ಹೇಳಿದರು. ಹೊರಗೆ ನಿಂತಿದ್ದ ಗುಂಪನ್ನು ನೋಡಿದಿರಾ? ಎಂದು ವಿಚಾರಿಸಿದರು. ಹೌದೆಂದಾಗ,

"ಆ ಬಡಪಾಯಿಗಳು ಬನ್ನುವಿನಿಂದ ಬಂದವರು, ನನ್ನನ್ನು ನೋಡಲೆಂದೇ ಅಷ್ಟು ದೂರದಿಂದ ಬಂದಿದ್ದಾರೆ. ಅವರಲ್ಲೊಬ್ಬ 'ಗಾಂಧೀಜಿ, ನೀವು ಸಾಯಬೇಕು' ಎಂದ. ನಾನು ನನ್ನ ಅಂತರ್ವಾಣಿಯ ಅಪ್ಪಣೆಯಾದ ಹೊರತು ಸಾಯಲಾರೆ ಎಂದೆ. ಶ್ರೀನಿವಾಸನ್, ಆತ ಅದಕ್ಕೆ ಏನು ಹೇಳಿದ ಗೊತ್ತೆ?" ಎಂದು ಗಾಂಧೀಜಿ ಪ್ರಶ್ನಿಸಿದರು.

ಆ ಮೇಲೆ ತಮ್ಮ ಕೈಯನ್ನು ಅವರದೇ ವಿಶಿಷ್ಟ ಭಂಗಿಯಲ್ಲಿ ಎತ್ತಿ ಸಾವಕಾಶವಾಗಿ ಹೇಳಿದರು: 'ನನ್ನ ಅಂತರ್ವಾಣಿ ನೀವು ಸಾಯಬೇಕೆಂದು ಹೇಳುತ್ತೆ' ಎಂದಾತ ಹೇಳಿದ"–ಎಂದು ಮುಗಿಸಿದರು.

ಶ್ರೀನಿವಾಸನ್ನರಿಗೆ ಸಿಡಿಲೆರಗಿದಂತಾಯಿತು. ಶಿಯಾನರ ಪ್ರಶ್ನೆ ಒಮ್ಮೆಲೇ ತಲೆಯಲ್ಲಿ ಸುಳಿದು ಹೋಯಿತು. "ನಿಮ್ಮ ಮಾತುಗಳನ್ನೇ ಅವರು ಅರ್ಥ ವರಿಯದೆ ಪುನರುಚ್ಚರಿಸುತ್ತಿದ್ದಾರೆ ಬಾಪೂಜಿ," ಎಂದವರು ನೋವಿನಿಂದ ಹೇಳಿದರು.

ಆ ಮೇಲೆ ಸಾವಕಾಶವಾಗಿ ಗಾಂಧೀಜಿ ಮುಂದುವರಿಸಿದರು: "ಅವರನ್ನು ಕಂಡು ಮರುಕವಾಗುತ್ತದೆ. ನಿಮ್ಮ ಮನೆ ಸುಟ್ಟರೆ, ನಿಮ್ಮ ಹೆಂಗಸರನ್ನು ಬಡಿದು ಅದಕ್ಕೂ ಹೀನ ಕೃತ್ಯಗಳನ್ನು ಮಾಡಿದರೆ ನಿಮಗೆ ಕೋಪ ಬರಲಾರದೆ? ಇವಕ್ಕೆಲ್ಲ ನಾನೇ ಕಾರಣ ಎಂದು ಅವರು ನಂಬಿದ್ದಾರೆ. ಅವರ ಕ್ರೋಧ ನನಗೆ ಅರ್ಥವಾಗುತ್ತದೆ."

ಏನು ಹೇಳಬೇಕೆಂದೇ ತೋಚದೆ ಶ್ರೀನಿವಾಸನ್ನರು ವಿಷಾದದಿಂದ ಗಾಂಧೀಜಿಯನ್ನು ಬೀಳ್ಕೊಂಡರು.

ಮರುದಿನ ಸಂಜೆ ಮಿತ್ರನೊಬ್ಬನಲ್ಲಿ ವಸತಿ ಮಾಡಿದ್ದ ಶ್ರೀನಿವಾಸನ್ನರಿಗೆ ಗಾಂಧೀಜಿಗೆ ಗುಂಡಿಕ್ಕಿದ ಸುದ್ದಿ ಬಂತು.

ಆ ಆಗಂತುಕನ ಅಂತರ್ವಾಣಿ ಗಾಂಧೀಜಿಯ ಹೃದಯದಲ್ಲೂ ಮರುಧ್ವನಿಗೊಂಡಿತ್ತೆ? ▲

ಉರ್ದು ಕಥೆ

# ಕತ್ತಲೆಯಿಂದ ಕತ್ತಲೆಗೆ

ರಾಮಲಾಲ್

ಅನುವಾದ: ಜಿ. ಎ. ವಿಶ್ವೇಶ್ವರ

ಈ ಗಾಡಿ ನಮ್ಮ ದೇಶದ ಅತ್ಯಂತ ವೇಗವಾಗಿ ಓಡೋ ಗಾಡಿ. ಸ್ಟೇಷನ್ ಬಿಟ್ರೆ ಮತ್ತೆ ಘಂಟೆ-ಘಂಟೆ ಎಲ್ಲಿಯೂ ನಿಲ್ಲದೇ ಓಡುತ್ತೆ!"

ಅವನು ಹಾಗೆಂದು ಪಕ್ಕದ ಪ್ರಯಾಣಿಕನಿಗೆ ಹೇಳಿದಾಗ, ಕೇಳಿಸಿಕೊಳ್ಳದವನಂತೆ ತಾನೋದುತ್ತಿದ್ದ ಪೇಪರಿನಲ್ಲಿ ಮುಖ ಹುದುಗಿಸಿಕೊಂಡಿದ್ದ ಸಹಪ್ರಯಾಣಿಕ.

ಅವನ ನಿರ್ಲಕ್ಷ್ಯದಿಂದ ಮೊದಲ ಪ್ರಯಾಣಿಕನ ಮುಖದಲ್ಲಿ ಕೋಪ ಮತ್ತು ಅವಮಾನ ಇವೆರಡರ ಮಿಳಿತದಿಂದಾಗುವ ಭಾವನೆ ಮೂಡಿತು. ಆದರವನು ಕಿಟಕಿಯೊಳಗೆ ತಲೆ ಹಾಕಿ ಹೊರಬೆ ನೋಡತೊಡಗಿದ—ಮೊದಲಿನಂತೆ. ದೃಷ್ಟಿ ಎಲ್ಲಿವರೆಗೆ—ಬಿಸಿಲಿನಲ್ಲಿ ಉರಿಯುತ್ತಿದ್ದ ಬೆಂಗಾಡು ಮೈದಾನ, ಸುತ್ತುತ್ತಿರುವ ಚಿಕ್ಕ ಚಿಕ್ಕ ಮರಗಳು. ಅದನ್ನವನು ನೋಡುತ್ತ ಮೊದಲಿಗೇನೋ ಆನಂದಪಟ್ಟಿದ್ದ. ಈಗ ಅವುಗಳನ್ನೇ ಬಹಳ ಗಂಭೀರತೆಯಿಂದ ನೋಡುತ್ತಿರುವವನಂತೆ ತೋರ್ಪಡಿಸಿಕೊಂಡ.

ತಕ್ಷಣವೇ ಅವನು ಜೋರಾಗಿ ಚೀರಿದ: "ಅನರ್ಥವಾಯಿತು! ಈಗ ನಾವು ಯಾವ ರೂಪದಲ್ಲೂ ಉಳಿಯುವುದಿಲ್ಲ! ಈ ಗಾಡಿ ಇನ್ನು ಯಾವುದೇ ಕ್ಷಣದಲ್ಲಿ ಹಳಿ ತಪ್ಪಿ ಕೆಳಗೆ ಬೀಳಬಹುದು. ಕೆಲವೇ ಸೆಕೆಂಡುಗಳಲ್ಲಿ ನಾವು ಸತ್ತು ಹೋಗುತ್ತೇವೆ. ಗಾಡಿಯು ಕೆಳಗೆ ಇರೋ ಕಲ್ಲುಗಳ ರಾಶಿಯ ಮೇಲೆ ಬಿದ್ದು ಜಜ್ಜಿ ಸತ್ತು ಹೋಗಿರ್ತೇವೆ..."

ಆ ಸಣ್ಣ ಕಂಪಾರ್ಟ್‌ಮೆಂಟ್‌ನಲ್ಲಿ ೩೭ ಜನ ಪ್ರಯಾಣಿಕರಿದ್ದರು. ಮೊದಲಿಗೆ ಅವರೆಲ್ಲ ಅವನನ್ನು ಹುಚ್ಚ ಅಂದುಕೊಂಡರು, ಅವನು ಚೀರುತ್ತಿರುವವರೆಗೂ. ಆದರೆ ತಕ್ಷಣವೇ ಅವರಿಗೆ ಇವನು ಹೇಳುತ್ತಿರುವುದಕ್ಕೆ ಏನು ಮಾಡಬೇಕೆಂದು ಏನೂ ಹೊಳೆಯುಲಿಲ್ಲ.

"ರೈಲ್ವೆ ಬಗ್ಗೆ ಕೆಲವು ಟೆಕ್ನಿಕಲ್ ವಿಷಯಗಳು ನನಗೆ ಚೆನ್ನಾಗಿ ಗೊತ್ತು. ನನಗೆ ರೈಲಿನ ಗಡಗಡ ಶಬ್ದದಲ್ಲಿ ಆದ ವ್ಯತ್ಯಾಸ ಕೇಳಿಸಿತು. ಅದು ಮುಂದಾಗಲಿರುವ ಬೃಹತ್ ದುರಂತದ ಮುನ್ಸೂಚನೆ ನಿಮಗೆಲ್ಲಾ ಮುನ್ನೆಚ್ಚರಿಕೆ ಕೊಡಬೇಕಾದದ್ದು ಅಗತ್ಯ ಅನ್ನಿಸಿತು. ಏಕೆಂದ್ರೆ ನೀವು ಕೊನೇ ಘಳಿಗೆಗೆ ನೀವೆಲ್ಲ ಸಿದ್ಧರಾಗಲಿ ಅಂತ "

ಈಗ ಪ್ರಯಾಣಿಕರೆಲ್ಲರೂ ಹತಾಶರಾದರು—ಗಂಡಸರು, ಮಕ್ಕಳು, ಹೆಂಗಸರು ಎಲ್ಲರೂ.

ಮೂಲೆಯಲ್ಲಿ ಮುದುಡಿಕೊಂಡು ಕುಳಿತಿದ್ದ ವಧು ಕೂಡಲೇ ಮುಸುಕನ್ನು ಎತ್ತಿದಳು. ತನಗಿಂತ ಹೆಚ್ಚಾಗಿ ನಾಚುತ್ತಿದ್ದ ವರನ ಹೆಗಲ ಮೇಲೆ ತಲೆಯಿಟ್ಟು, ಬಿಕ್ಕಳಿಸಿ ಅತ್ತಳು. ವರ ಮೊದಲ ಬಾರಿಗೆ ಚಂದ್ರನಂಥ ಅವಳ ಮುಖವನ್ನು ನೋಡಿ ಅಪ್ರತಿಭನಾದ. ತನ್ನ ಹೆಂಡತಿ

ಬೆಂಗಳೂರು ಸೆಂಟ್ರಲ್ ಕಾಲೇಜು ಕನ್ನಡ ವಿದ್ಯಾರ್ಥಿಗಳು ಪ್ರಕಟಿಸುವ "ಸಂಕೀರ್ಣ"ದಿಂದ



ಇಷ್ಟೊಂದು ಸುಂದರಿ ಅಂತ ಅವನು ಕಲ್ಪನೆ ಕೂಡ ಮಾಡಿರಲಿಲ್ಲ. ಆದರೆ ಅವನಿಗೆ ಸಂತೋಷ ಆಗುವ ಬದಲು ಮರುನಿಮಿಷವೇ ನಿರಾಶೆ ಮೂಡಿತು.

ಒಬ್ಬ ತರುಣ, ಹಿಂದೆ ಹೋದ ನಿಲ್ದಾಣಂಗಳಿಂದಲೂ ತರುಣಿಯೊಬ್ಬಳ ಮೊಣಕಾಲವರೆಗೆ ಬತ್ತಲೆಯಾಗಿದ್ದ ಕಾಲಸ್ಪರ್ಶವಾದರೆ ಸಾಕು ಎಂದು ಅಂಥ ಸಮಯಕ್ಕಾಗಿ, ಅವಳ ಸಮೀಪ ಟ್ರಂಕಿನ ಮೇಲೆ ಕುಳಿತೇ ಬರುತ್ತಿದ್ದ. ಆದರೆ ಆ ತರುಣಿಗೆ ಅವನ ಬಗ್ಗೆ ಸ್ವಲ್ಪವೂ ಆಕರ್ಷಣೆ ಹುಟ್ಟಿರಲಿಲ್ಲ. ಈಗ ಒಮ್ಮೆಲೇ, ಪ್ರಾಯಶಃ ದುರಂತದ ಸುಳಿವು ಸಿಕ್ಕಿದ್ದರಿಂದ ಅವನು ತನ್ನ ಪ್ರೀತಿಯೆಲ್ಲವನ್ನೂ ಮರೆತ. ತನ್ನ ಹತ್ತಿರ ಕುಳಿತಿದ್ದ ಪ್ರಯಾಣಿಕನ ಕೈ ಹಿಡಿದುಕೊಂಡು ಬಹಳ ಕರುಣಾಜನಕ ಸ್ವರದಲ್ಲಿ ಕೇಳಿದ: "ನನ್ನ ಗಮ್ಯಸ್ಥಾನವನ್ನು ನಾನು ನಾಳೆ ತಲುಪೋದಿಲ್ಲವೇ? ನಾಳೆ ನನ್ನ ಇಂಟರ್‌ವ್ಯೂ ಇದೆ."

ಅವನ ಪಕ್ಕದಲ್ಲಿ ಕುಳಿತಿದ್ದ ತರುಣಿ ಈ ಮಾತು ಕೇಳಿ ಬೆಚ್ಚಿದಳು. ಅವನ ಹೆಗಲ ಮೇಲೆ ಮೃದುವಾದ ಬಿಳಿ ಕೈಗಳನ್ನು ಇಡುತ್ತಾ ಬಹಳ ಮಧುರವಾದ ದನಿಯಲ್ಲಿ ತಡೆ-ತಡೆದು ಕೇಳಿದಳು: "ಐ ನೆವರ್ ಹೇಟೆಡ್ ಯೂ! ಲೆಟ್ ಅಸ್ ಡೈ ಇನ್ ಲವ್!"

ಉಳಿದ ಪ್ರಯಾಣಿಕರಲ್ಲೂ ಕೆಲವರು ಚಪರೆಗಳನ್ನು ಬದಲಾಯಿಸಿದರು. ತಮ್ಮ ತಮ್ಮ ಟ್ರಂಕುಗಳಿಂದ, ಚೀಲಗಳಿಂದ ಏನನ್ನೋ ಹುಡುಕತೊಡಗಿದರು.

ಅಪಾಯದ ಸೂಚನೆಯನ್ನು ನೀಡಿದ ಪ್ರಯಾಣಿಕ ಕೆಲವೇ ಕ್ಷಣಗಳಲ್ಲಿ ಪ್ರಯಾಣಿಕರಲ್ಲಾದ ಪ್ರತಿಕ್ರಿಯೆಗಳನ್ನು ಆಳ ದೃಷ್ಟಿಯಿಂದ ನೋಡಿದ. ಬಳಿಕ ಅವನು ಅವರನ್ನು ಸಂಬೋಧಿಸಿ ಹೇಳಿದ: "ನಿಮ್ಮ ನಿಮ್ಮ ಬೆಲೆ ಬಾಳುವ ವಸ್ತುಗಳನ್ನು ಜೇಬಿನಲ್ಲಿಟ್ಟುಕೊಳ್ಳಿರಿ. ಆದರೆ ಯಾವ ವಸ್ತುವೇ ಆಗಲಿ ನಿಮ್ಮ ಜತೆ ಬರುವುದಿಲ್ಲವೆಂಬುದನ್ನು ನೆನಪಿಟ್ಟುಕೊಳ್ಳಿ. ನಮ್ಮ ಹೆಣಪನ್ನೆತ್ತಲು ಬರುವ ಜನ ಮೊದಲಿಗೆ ಜೇಬನ್ನೇ ಹುಡುಕುವುದು. ನಮ್ಮ ಜೇಬಿನಿಂದ ಅವರು ಇರುವುದೆಲ್ಲವನ್ನೂ ದೋಚಬಹುದು. ಆದರೆ ನಮ್ಮ ಹೆಣಗಳನ್ನು ಹೊರುವುದಕ್ಕೆ ಬೇಸರಿಸು-

ವುದಿಲ್ಲ. ಆದರೂ ನಿಮ್ಮ ನಿಮ್ಮ ಹೆಸರು ವಿಳಾಸಗಳನ್ನು ಬರೆದಿಟ್ಟುಕೊಳ್ಳಿರಿ. ಸಾಯುವುದಕ್ಕೆ ಮುನ್ನ ನಾವು ಪರಸ್ಪರ ಪರಿಚಿತರಾಗೋಣ. ಒಬ್ಬರು ಇನ್ನೊಬ್ಬರೆದುರು ತಮ್ಮ ತಮ್ಮ ಅಪರಾಧಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳೋಣ. ಪರಸ್ಪರರನ್ನು ಕ್ಷಮಿಸೋಣ ಮತ್ತು ಪ್ರಾರ್ಥಿಸೋಣ. ನಮ್ಮನ್ನು ಹುಟ್ಟಿಸಿದವ ನಮ್ಮನ್ನು ಸತ್ತ ಬಳಿಕ ಒಂದೇ ಜಾಗಕ್ಕೆ ಕಳಿಸಲಿ, ನರಕವಾಗಲಿ ಸ್ವರ್ಗವೇ ಆಗಲಿ. ಆದರೆ ನನಗೆ ಪೂರ್ಣ ನಂಬಿಕೆಯಿದೆ–ನಾವೆಲ್ಲ ಸ್ವರ್ಗಕ್ಕೆ ಹೋಗುತ್ತೇವೆ. ನಮ್ಮ ನಮ್ಮ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಂಡಿರುವುದರಿಂದ ನಮ್ಮ ಹೃದಯ ಪವಿತ್ರವಾಗಿದೆ, ಶುದ್ಧವಾಗಿದೆ. ನಾನು ಈಗಲೂ ಪ್ರತಿಯೊಬ್ಬನ ಮುಖದ ಮೇಲೂ ಸತ್ಯ ಮತ್ತು ನಿರಾಶೆಯ ನೆರಳನ್ನೇ ನೋಡುತ್ತಿದ್ದೇವೆ. ನಿಮಗೆ ಒಂದು ವೇಳೆ ದೇವರ ಮೇಲೆ ನಂಬಿಕೆ ಇರುವುದಾದರೆ ಎಲ್ಲರೂ ಒಟ್ಟಾಗಿ ಪ್ರಾರ್ಥಿಸಲು ಕೈಗಳನ್ನೆತ್ತಿ."

ಅವನ ಪ್ರೇರಣೆಯಂತೆ ಎಲ್ಲರೂ ಕೈಗಳನ್ನೆತ್ತಿದರು. ಅವನು ತನ್ನ ಕೈ ಮೇಲೆ ಎತ್ತುತ್ತಿದ್ದಂತೆಯೇ ಪ್ರಾರ್ಥಿಸಿಕೊಂಡ ಬಳಿಕ ಒಬ್ಬರಿಗೊಬ್ಬರು ತೀರಾ ಪರಿಚಿತರಂತೆ ಕಂಡರು. ಪರಸ್ಪರ ಆಲಿಂಗಿಸಿಕೊಂಡು ತಮ್ಮ ತಪ್ಪುಗಳಿಗಾಗಿ ಕಣ್ಣೀರು ಕರೆದರು. ಅಪರಿಚಿತರಾಗಿದ್ದವರೂ ಕ್ಷಣಮಾತ್ರದಲ್ಲಿ ಪರಿಚಿತರಾಗಿಬಿಟ್ಟರು–ಪಾಪದ ಕಾರಣದಿಂದಲೇ; ಪಾಪ ಅವರಲ್ಲಿ ಸಂಯುಕ್ತವಾಗಿದ್ದಿತೇನೋ ಎನ್ನುವಂತೆ.

ಅವನು ಮುನ್ನುಗ್ಗಿ ಎಲ್ಲ ಕಿಟಕಿಗಳನ್ನು ಮುಚ್ಚಿದ. "ಈಗ ನಾವು ಹೊರಗಿನ ಯಾವ ವಸ್ತುವನ್ನೂ ನೋಡುವಂತಿಲ್ಲ. ನಮ್ಮ ಯಾತ್ರೆ ಈಗ ಗಂಭೀರ ಕತ್ತಲೆಯ ಕಡೆಗೆ. ಎಷ್ಟು ಹೊತ್ತಿನ ವರೆಗೆ ಕತ್ತಲೆಯಲ್ಲೇ ಇರಬೇಕೋ ಗೊತ್ತಿಲ್ಲ. ಆದರೆ ಯಾರೂ ಇದಕ್ಕಾಗಿ ದುಃಖಪಟ್ಟುಕೊಳ್ಳಬಾರದು. ನಿರಾಶೆ ಬೇಡ. ಯಾರ ಕಣ್ಣಿಂದಲೂ ಹನಿ ಕಣ್ಣೀರೂ ಉದುರಬಾರದು. ತುಟಿಗಳಿಂದ ಬಿಕ್ಕಳಿಕೆ ಹೊರಡಕೂಡದು."

ಬಹಳ ಕ್ಷಣಗಳನ್ನು ನಿಶ್ಶಬ್ದವಾಗಿ ಕತ್ತಲೆಯಲ್ಲೇ ಕಳೆದರು. ಪ್ರತಿಯೊಬ್ಬರೂ ಕಣ್ಣುಗಳನ್ನು ಮುಚ್ಚಿಕೊಂಡು, ಒಳಗೊಳಗೇ ಅಳುತ್ತಿದ್ದರು. ಹೊರಗಿನ ಬೆಳಕಿನೊಂದಿಗೆ ಸಂಬಂಧವನ್ನು ಅವರು ಕತ್ತರಿಸಿಕೊಂಡಿದ್ದರು.

ಅವನು ಹೇಳಿದ: "ನಿಮ್ಮಲ್ಲಿ ಯಾರು ಯಾರಲ್ಲಿ ತಿಂಡಿ ತಿನಿಸು ಇದೆ? ಯಾರ ಹತ್ತಿರ ಏನೇ ಇರಲಿ, ತೆರೆದು ಇಲ್ಲಿ ಹಾಕಿ. ನಾವು ಕೊನೆಯ ಭೋಜನವನ್ನು ಕೂಡಿ ಮಾಡೋಣ."

ಅವನ ಧ್ವನಿ ಬಹಳ ಪ್ರಭಾವಶಾಲಿಯಾಗಿದ್ದಿತು. ಎಲ್ಲರೂ ಅವನ ಆಜ್ಞೆಯನ್ನು ಕೇಳಿದ ಬಳಿಕ 'ಹ್ಞೂ' ಅನ್ನುತ್ತ ತಲೆ ಬಗ್ಗಿಸುತ್ತಿದ್ದರು. ನೋಡನೋಡುತ್ತಿದ್ದಂತೆಯೇ ಎಲ್ಲವನ್ನೂ ತೆಗೆದು ಹೊರಗಿಡಲಾಯಿತು. ತಿಂಡಿಯ ರಾಶಿಯೇ ಬಿದ್ದಿತು. ಲಾಡು, ಪೂರಿ, ಒಣಗಿದ ರೊಟ್ಟಿ, ಮೊಟ್ಟೆ, ಟೋಸ್ಟ್, ಹಣ್ಣು, ಟಾಫಿಗಳು... ಎಲ್ಲವನ್ನೂ ಎಲ್ಲರೂ ಒಟ್ಟಿಗೆ ತಿನ್ನತೊಡಗಿದರು. ಕತ್ತಲೆಯಲ್ಲಿ ಯಾರಿಗೆ ಏನು ಸಿಕ್ಕಿತೋ ಅದನ್ನೇ ಕಬಳಿಸಿದರು.

ಇದ್ದಕಿದ್ದಂತೆ ಮೇಲಿನ ಬರ್ತ್ ಮೇಲೆ ಮಲಗಿದ್ದ ಒಬ್ಬ ವ್ಯಕ್ತಿಯ ಮೇಲೆ ಎಲ್ಲರ ದೃಷ್ಟಿಯೂ ಹೋಯಿತು. ಎಲ್ಲರಿಗೂ ಆಶ್ಚರ್ಯವಾಯಿತು. ಅವನನ್ನು ಈವರೆಗೆ ಯಾರೂ ಎಬ್ಬಿಸಿರಲಿಲ್ಲ. ಒಬ್ಬ ಅವನನ್ನು ಅಲ್ಲಾಡಿಸಿ ಎಬ್ಬಿಸಲು ಮುನ್ನುಗ್ಗಿದ ಕೂಡಲೇ ಅಪಾಯದ ಸೂಚನೆ ನೀಡಿದ್ದ ವ್ಯಕ್ತಿ ಅವನನ್ನು ತಡೆದ. "ಈಗ ಅವನನ್ನೆಬ್ಬಿಸುವ ಅವಶ್ಯಕತೆ ಇಲ್ಲ. ನಾವೆಲ್ಲರೂ ನಮ್ಮ ನಮ್ಮ ಭಯದ, ದುಃಖದ ಹತೋಟಿ ಪಡೆದುಕೊಂಡು ಗಮ್ಯಸ್ಥಾನದತ್ತ ಧಾವಿಸುತ್ತಿದ್ದೇವೆ. ಈ ವ್ಯಕ್ತಿಗೆ ಯಾವುದೇ ರೀತಿಯ ನೋವು, ಅಪಾಯದ ಸೂಚನೆ ತಿಳಿಯದೆ ಹಾಯಾಗಿ ನಿದ್ರಿಸುತ್ತಿದ್ದಾನೆ. ಇವನ ತಪ್ಪಿಗೆ ನಾವೇ ಪ್ರಾರ್ಥನೆ ಮಾಡೋಣ. ದೇವರಿಗೆ ನಿಜಕ್ಕೂ ನಮ್ಮ ವರ್ತನೆ ಸಂತೋಷ ತರುತ್ತೆ,

ಕಡೆಯ ಪಕ್ಷ ಒಬ್ಬನನ್ನಾದರೂ ಸಾವಿನ ದುಃಖ ದಿಂದ ಪಾರು ಮಾಡಿದ್ದಾರಲ್ಲ ಎಂದು!"

ಎಲ್ಲರೂ ಅವನ ಮಾತಿಗೆ ದೋಣು ಹಾಕಿದರು. ಮಲಗಿದ್ದ ವ್ಯಕ್ತಿಯ ಪರವಾಗಿ ಉಳಿದವರೆಲ್ಲ ಪ್ರಾರ್ಥಿಸಿದರು. ಪ್ರಾರ್ಥನೆಮಾಡಿ ಮುಗಿಸಿದಂತೆಯೇ ಎಲ್ಲರ ಅನುಭವಕ್ಕೆ ಏನೋ ಪ್ರಜ್ಞೆ ಬಂದಂತಾಯಿತು. ಗಾಡಿ ಹೀಗೆಯೇ ಮುಂದಕ್ಕೆ ಸಾಗುತ್ತಲೇ ಇದೆ. ದುರಂತ ಈವರೆಗೆ ಆಗಲೇ ಇಲ್ಲ. ಈ ಪ್ರಜ್ಞೆಯಿಂದ ಅವರಿಗೆಲ್ಲ ದುಃಖವಾಯಿತು. ಅವರ ಮುಖಗಳ ಮೇಲೆ ನಿರಾಶೆ ಓಡಾಡಿತು. ಅವರು ಬಹು ಬೇಗ ಕೋಪದಿಂದ ಕ್ರುದ್ಧರಾದರು.

ಒಬ್ಬ ಆನೆಯ ಹಾಗೆ ಘೀಳಿಟ್ಟ, "ಆಕ್ಸಿ-ಡೆಂಟ್ ಯಾಕೆ ಆಗ್ತಾನೆ ಇಲ್ಲ?"

ಇನ್ನೊಬ್ಬ ಅವನಿಗೆ ನಂಬಿಕೆ ನೀಡಿದ: "ದುರಂತ ಖಂಡಿತ ಆಗೋಲ್ಲ"

ಮೂರನೆಯವನು ಅಪಾಯದ ಸೂಚನೆ ಕೊಟ್ಟವನ ಕುತ್ತಿಗೆ ಪಟ್ಟಿ ಹಿಡಿದು ಕೇಳಿದ: "ಹಾಗಿದ್ರೆ ಇದೆಲ್ಲ ಬರೇ ಸುಳ್ಳು ತಾನೆ? ನೀನು ನಮ್ಮನ್ನೆಲ್ಲ ಯಾಕೆ ಫೂಲ್ ಮಾಡಿದು?"

ಸಾವಿನ ಭಯದಿಂದ ಮುಸುಕು ತೆರೆದಿದ್ದ ಸ್ತ್ರೀ, ಪುನಃ ಮುಸುಕು ಹಾಕಿಕೊಂಡು ತನ್ನ 'ವರ'ನಿಂದ ದೂರ ಸರಿದು ಕೂತಳು. ತರುಣನಿಗೆ ಪ್ರೇಮಕ್ಕೆ ಹೂ್ಞ ಎಂದಿದ್ದ ತರುಣಿ, ಅವನನ್ನು ತಳ್ಳಿ ದೂರ ಹೋದಳು. ಒಬ್ಬಾತನಂತೂ ಉತ್ತೇಜಿತನಾಗಿ ತಿಂಡಿಯ ಪಾತ್ರೆಯನ್ನೇ ತಲೆ ಕೆಳಕು ಮಾಡಿದ.

ಸೂಚನೆ ನೀಡಿದ್ದ ವ್ಯಕ್ತಿ ಇದೆಲ್ಲವನ್ನೂ ಗಮನಿಸಿ, ಒಂದು ಟ್ರಂಕಿನ ಮೇಲೆ ನಿಂತು-ಕೊಂಡು, ತನ್ನ ಕೂದಲನ್ನು ಕೀಳುತ್ತಾ ಚೀರಿದ: "ನಿಮಗೆ ಒಮ್ಮಿಂದೊಮ್ಮೆಗೇ ಸಾವಿನ ಬಗ್ಗೆ ನಂಬಿಕೆಯೇಕೆ ಹೊರಟುಹೋಯಿತು? ಆಕ್ಸಿ-ಡೆಂಟ್ ಖಂಡಿತ ಆಗುತ್ತೆ."

ಆದರೆ ಈಗ ಯಾರೂ ಅವನ ಮಾತು ಕೇಳಲಿಲ್ಲ. ಮುಚ್ಚಿದ ಕಿಟಕಿಗಳನ್ನು ಜನ ತೆರೆದರು. ಬಹಳ ಹೊತ್ತಿನಿಂದ ಕತ್ತಲೆಯಲ್ಲಿದ್ದ ಕಾರಣ ಈಗ ಒಮ್ಮೆಲೇ ಕಿಟಕಿ ತೆರೆದುದರಿಂದ ನುಗ್ಗಿ ಬಂದ ಪ್ರಖರ ಬೆಳಕನ್ನು ಎದುರಿಸಲಾಗದೆ ಅವರು ತತ್ತರಿಸಿದರು. ಒಬ್ಬರನ್ನು ಇನ್ನೊಬ್ಬರು ಗುರುತಿಸುವುದೇ ಕಷ್ಟವಾಗಿ ಹೋಯಿತು.

ಆ ವ್ಯಕ್ತಿ ವಿಚಿತ್ರ ರೀತಿಯಲ್ಲಿ ನಡುಗುತ್ತ ಕಿಟಕಿಯಿಂದ ಹೊರಕ್ಕೆ ಇಣುಕಿದ. ದುರ್ಘಟ-ನೆಯ ಸೂಚನೆಯನ್ನು ಪತ್ತೆ ಹಚ್ಚಲು ಪ್ರಯತ್ನಿ ಸಿದ. ಮತ್ತೆ ಇದ್ದಕಿದ್ದಂತೆಯೇ ಬಾಗಿಲನ್ನು ತೆರೆದು ಸಂತೋಷದಿಂದ ಜೋರಾಗಿ ಕಿರಿಚಿದ: "ಸಾವು ದೂರವಿಲ್ಲ. ಬಹಳ ದೂರವಿಲ್ಲ. ನನ್ನ ಹಿಂದೆ ಯಾರಿಗೆ ಬರೋಕೆ ಇಷ್ಟವಿದೆಯೋ ಅವರು ಬನ್ನಿ!"

ಹಾಗನ್ನುತ್ತಾ ಅವನು ಓಡುತ್ತಿದ್ದ ಗಾಡಿ ಯಿಂದ ಕೆಳಗೆ ಧುಮುಕಿದ. ಕೆಲ ಕ್ಷಣಗಳವರೆಗೆ ಎಲ್ಲರ ತುಟಿಗಳೂ ಹೊಲಿದುಕೊಂಡಂತೆ ಕಾಣಿಸಿ ದವು.

ಯಾರೊಬ್ಬರೂ ಮಾತಾಡಲಿಲ್ಲ. ಮತ್ತೆ ಬರ್ತ್‌ನ ಮೇಲೆ ಮಲಗಿದ್ದ ವ್ಯಕ್ತಿ ಒಮ್ಮೆಲೇ ಎಚ್ಚೆತ್ತು ಕೆಳಕ್ಕೆ ನೋಡಿದ. ಬಹಳ ಆಶ್ಚರ್ಯ ದಿಂದ ಅವನು ಕೇಳಿದ: "ಏನಾಯ್ತು? ನೀವೆಲ್ಲ ಯಾಕೆ ಸುಮ್ಮನಿದ್ದೀರಿ? ನಿಮ್ಮ ಮೌನದಿಂದ ನಾನು ಗಾಡಿ ಗಮ್ಯಸ್ಥಾನವನ್ನು ಮುಟ್ಟಿದೇಂತ ತಿಳಿದುಕೊಂಡೆ. ನೀವೆಲ್ಲ ಹೊರಟುಹೋಗಿದ್ದೀರಿ ಅಂತಲೇ ಭಾವಿಸಿದೆ."

ಪುನಃ ಏನೋ ಜ್ಞಾಪಕಕ್ಕೆ ಬಂದಂತೆ ಅವನು ಬರ್ತ್‌ನ ಕೆಳಗೆ ಯಾರನ್ನೋ ಹುಡುಕಿದ. ಈಗ ಮೊದಲಿಗಿಂತಲೂ ಗಾಬರಿ, ಆಶ್ಚರ್ಯದಿಂದ ಅವನು ಕೇಳಿದ: "ಅವನು ಎಲ್ಲಿ ಹೋದ? ನನ್ನ ಜತೆ ನನ್ನ ಸ್ನೇಹಿತ ಇದ್ದ, ಅಲ್ಲಿ ಕುಳಿತಿದ್ದ. ಎಲ್ಲೂ ಇಳಿದುಹೋಗಲಿಲ್ಲ ತಾನೇ—ರಸ್ತೇಲೇ? ಅವನ ಮಿದುಳು ಸರಿ ಇರ್ಲಿಲ್ಲ!"

ಇದನ್ನು ಕೇಳಿ ಎಲ್ಲರಿಗೂ ಗಾಡಿಯ ಅರ್ಥಗಟ್ಟ, ಅದರ ವೇಗ ಪುನಃ ಅನುಭವಕ್ಕೆ ಬಂದಿತು. ಅನೇಕ ಕೈಗಳು ಒಟ್ಟಿಗೆ ಅಪಾಯದ ಚೈನು ಎಳೆಯಲು ಮೇಲೆದ್ದವು.

▲

ಶ್ರೀನಿವಾಸಪ್ಪ

# ಯಾರು ಈ 'ಪಾಟೀಲ'ರು?

ಬೆಂಗಳೂರಿನವರೊಬ್ಬರು ಉತ್ತರ ಕರ್ನಾಟಕದಿಂದ ಬರುವ "ಪಾಟೀಲ"ರ ಸಂಖ್ಯೆ ಮತ್ತು ವೈವಿಧ್ಯದಿಂದ ತಮಗೆ ಪೂರ್ತಿ ಗೊಂದಲವಾಗುತ್ತದೆಂದು ಹೇಳಿದರು. ಉತ್ತರ ಕರ್ನಾಟಕದಲ್ಲಿ ಪಾಟೀಲರು ಹೊರತು ಬೇರೆ ಯಾರೂ ಇಲ್ಲವೇ ಇಲ್ಲವೇ ಎಂದವರು ಸೋಜಿಗಪಟ್ಟರು.

ಪಾಟೀಲ ಎಂಬ ಅಡ್ಡ ಹೆಸರಿನವರು ಉತ್ತರ ಕರ್ನಾಟಕದಲ್ಲಿ ಬಹಳ ಇದ್ದಾರೆಂಬುದು ನಿಜ. ಇನ್ನೂ ಉತ್ತರಕ್ಕೆ ಮಹಾರಾಷ್ಟ್ರದಲ್ಲಿಯೂ ಧಾರಾಳವಾಗಿ ಪಾಟೀಲರು ಸಿಗುತ್ತಾರೆ. ಅದಕ್ಕೂ ಆಚೆ ಗುಜರಾಥದಲ್ಲಿರುವ ಪಟೇಲರು ಪಾಟೀಲರದೇ ಅಪರಾವತಾರಗಳು.

ಈ ಪಾಟೀಲರು ಯಾರು? ಊರಿನ ಗೌಡರೇ ಪಾಟೀಲರು ಅಥವಾ ಪಟೇಲರು ಎಂದು ಭಾವಿಸಲಾಗುತ್ತದೆ. ಅದಕ್ಕೆ ಸರಿಯಾಗಿ ಅನೇಕ ಪಾಟೀಲರು ಊರಿನ ಗೌಡರು ಅಥವಾ ಪ್ರಮುಖ ಕಂದಾಯಾಧಿಕಾರಿಗಳು ಆಗಿರುವುದು ನಿಜ. ಕರ್ನಾಟಕದ ಕರಾವಳಿ ಮತ್ತು ಇತರ ಕೆಲ ಭಾಗಗಳಲ್ಲಿ ಗೌಡರಿಗೆ ಮಾತ್ರ ಪಟೇಲರೆಂದು ಹೇಳುತ್ತಾರೆ. ಆದರೆ ಈ ಹೆಸರು ಹೇಗೆ ಹುಟ್ಟಿತು? ಅದರ ಅರ್ಥವೇನು?

ಗ್ರಾಮಾಧಿಕಾರಿಗೆ ಬಹು ಪ್ರಾಚೀನ ಕಾಲದಲ್ಲಿ ಗ್ರಾಮಪ್ರಮುಖ, ಗ್ರಾಮಕೂಟ, ಗ್ರಾಮಣಿ, ಗ್ರಾಮಿಕ, ಮಹತ್ತರ ಮೊದಲಾದ ಹೆಸರುಗಳಿದ್ದುದಾಗಿ ಪುರಾತನ ಶಾಸನಗಳಿಂದ ವೇದ್ಯವಾಗುತ್ತದೆ. ಗ್ರಾಮಕೂಟದಿಂದ ಗಾವುಂಡ (ಹಳೇ ಕನ್ನಡ ಗ್ರಂಥಗಳಲ್ಲಿ ಗಾವುಂಡ ಎಂದೇ ಇದೆ) ಆಗಿ ಈಗ ಗೌಡ ರೂಪದಿಂದ ಕಾಣಿಸಿಕೊಳ್ಳುತ್ತಿದೆ ಎಂದೂಹಿಸಬಹುದು.

ಪಾಟೀಲ ಎಂಬುದರ ಮೂಲ "ಪಟ್ಟಕೀಲ"ದಲ್ಲಿದೆಯೆಂದು ತೋರುತ್ತದೆ. ಉಜ್ಜಯಿನಿಯಲ್ಲಿ ದೊರೆತ ಇಪ್ಪತ್ತು ಶತಮಾನ ಹಳೇ ಆಲೇಖಗಳಲ್ಲಿ ಪಟ್ಟಕೀಲ ಶಬ್ದ ಕಾಣಿಸಿಕೊಳ್ಳುತ್ತದೆ. ಇದರ ವ್ಯುತ್ಪತ್ತಿ ಮಾತ್ರ ಸಮಾಧಾನಕರವಾಗಿ ತೀರ್ಮಾನಿಸಲ್ಪಟ್ಟಿಲ್ಲ. ಪಟ್ಟ ಎಂಬುದು ಗ್ರಾಮಾಧಿಕಾರಿಗಳಿಗೆ ಕೊಡಲ್ಪಟ್ಟ ಅಧಿಕಾರ ಪತ್ರವನ್ನು ಸೂಚಿಸುತ್ತದೆಂದೂ ಅದು ಪಟ್ಟಲಿಕವಾಗಿ ಪಾಟೀಲವಾಯಿತೆಂದೂ ಹೇಳಲಾಗಿದೆ. ಅಂತೂ ಮಧ್ಯಯುಗದಲ್ಲಿ "ಪಟ್ಟಕೀಲ" ಹೆಚ್ಚು ಬಳಕೆಗೆ ಬಂತೆಂಬುದು ಖಂಡಿತ ಜಯಸಿಂಹ, ತ್ರೈಲೋಕ್ಯಮಲ್ಲ, ವಿಜಯಸಿಂಹರ ತಾಮ್ರ ಮತ್ತು ಶಿಲಾಶಾಸನಗಳಲ್ಲಿ ಅದು ಕಾಣಿಸಿಕೊಂಡಿದೆ ಮರಾಠಿ ಶಾಸನ, ತಾಮ್ರಪಟಗಳಲ್ಲಿ ಮುಂದೆ ಪಟಕೀಲ, ಪಾಟೈಲ, ಪಾಟೈಲು ರೂಪಗಳನ್ನು ಅದು ತಾಳಿದೆ.

ಸಂಸ್ಕೃತದ ಪಟ್ಟಕೀಲ ಎಂಬುದು ಬೇರೆ ಬೇರೆ ಪ್ರಾಕೃತಗಳಲ್ಲಿ ಪಟಕೀಲ, ಪಟ್ಟಲ, ಪಟ್ಟಇಲಗಳಾಗಿ ಪಟೇಲ, ಪಾಟೀಲ ರೂಪಗಳಿಗೆ ಬಂದು

ತಲುಪಿತೆಂದು ಗ್ರಹಿಸಬಹುದಾದರೂ "ಕೀಲ" ಎಂಬುದಕ್ಕೆ ಸಮಾಧಾನಕರ ವ್ಯುತ್ಪತ್ತಿ ಸಿಗುವುದಿಲ್ಲ. ಆದ್ದರಿಂದ ಪ್ರಖ್ಯಾತ ಸಂಶೋಧಕರಾದ ಶಂ. ಬಾ. ಜೋಶಿಯವರು ಸಂಸ್ಕೃತದಲ್ಲಿ ಪಾಟೀಲರ ಮೂಲ ಹುಡುಕುವುದು ನಿರರ್ಥಕವೆಂದು ಬರೆಯುತ್ತಾರೆ. ಪಟ್ಟಣ, ಪತ್ತನ ಇತ್ಯಾದಿ ನಗರಸೂಚಕ ಪದಗಳಿಗೆ ಸಂಬಂಧಿಸಿದಂತೆ ಪಟ್ಟಿ ಎಂದರೆ ವಸತಿಪ್ರದೇಶ ಎಂಬರ್ಥದ ದ್ರಾವಿಡ ಶಬ್ದವಿದೆ. ಪಟ್ಟಿ ಎಂಬುದು ವಿಶೇಷವಾಗಿ ಪಶುಪಾಲಕರ ವಸತಿಯನ್ನು ಸೂಚಿಸುತ್ತದೆ. ಇಂದಿಗೂ ಹಟ್ಟಿಯೆಂಬುದು ದನಗಾಹಿಗಳ ವಸತಿಯೇ. ಪಟ್ಟಿ ಇಲ್ಲ ಎಂಬುದೇ ಪಟ್ಟಕೀಲಕ್ಕೂ ಮುಂಚಿನದು. ಹಟ್ಟಿಯ ನಿವಾಸಿ (ಇಲ್ = ಮನೆ) ಎಂದು ಅದರ ಅರ್ಥ.

ಶಂ. ಬಾ. ಜೋಶಿಯವರ ಮತದಲ್ಲಿ ಪಟ್ಟ-ಇಲ್ಲ, ಪಟ್ಟಕೀಲ ಇದು ಮೂಲತಃ ಒಂದು ವಿಶಿಷ್ಟ ಜನವರ್ಗಸೂಚಕ ಪದವೇ ಹೊರತು ಅಧಿಕಾರ ಸೂಚಕವಲ್ಲ. ಪತ್ತಿಯೆಂಬ ಜಾತಿ ಇತ್ತೆಂದು ಯಜುರ್ವೇದದ "ಪತ್ತೀನಾಂ ಪತಯೇ ನಮಃ", ವರಾಹಮಿಹಿರನ "ಪತ್ತಿಜನ" ಎಂಬ ಉಲ್ಲೇಖಗಳಿಂದ ವ್ಯಕ್ತವಾಗುತ್ತದೆ. ಈ ಜನರು ದ್ರಾವಿಡರು. ಮುಖ್ಯವಾಗಿ ಗ್ರಾಮಾಂತರ ನಿವಾಸಿಗಳು—ವೃತ್ತಿಯಿಂದ ದನಗಾಹಿಗಳು. ಇಂದಿನ ಮಹಾರಾಷ್ಟ್ರದಲ್ಲಿ ಕುಣಬಿಗಳು, ಧನಗರರು (= ದನಗಾರರು) ಈ ವರ್ಗದವರು. ಅವರೇ ಹಟ್ಟಿಕಾರರು (ಹಟಕಾರ). ಬಹುಶಃ ಕೃಷಿ ಪಶುಪಾಲನ ವೃತ್ತಿಗಳಲ್ಲಿರುವ ಸ್ವತಂತ್ರ ಗ್ರಾಮಸ್ಥರಿಗೆ ಆಗ ತುಂಬ ಗೌರವವಿತ್ತು. ಇನ್ನೂ ಉತ್ತರಕ್ಕೆ ಕಣ್ಣು ಹಾಯಿಸಿದರೆ ಗುಜರಾಥದಲ್ಲಿ ಪಟೇಲ ಎಂಬುದು ತುಂಬಾ ಪ್ರಬಲ, ಶೂರ ರೈತ ಜಾತಿಯೇ ಆಗಿರುವುದು ಕಾಣಿಸುತ್ತದೆ. ಗ್ರಾಮಾಧಿಕಾರಿಗಳನ್ನು ಜನರಿಂದಲೇ ಆರಿಸುವುದು ಸಾಮಾನ್ಯ ರೂಢಿಯಾದುದರಿಂದ ಗೌಡರಿಗೆ ಪಾಟೀಲ, ಪಟೇಲ ಎಂಬ ಶಬ್ದಗಳು ಪ್ರಯೋಗಿಸಲ್ಪಟ್ಟಿರಬೇಕು. ಗ್ರಾಮಾಧಿಕಾರಕ್ಕೆ ಎಂದೂ ಏನೇನೂ ಸಂಬಂಧವಿಲ್ಲದಿದ್ದ ಮನೆತನಗಳಿಗೂ ಪಾಟೀಲ ಎಂಬ ಉಪನಾಮವಿರುವುದರಿಂದ ಅದು ಅಧಿಕಾರಸೂಚಕವಲ್ಲವೆಂಬ ವಾದಕ್ಕೆ ಬಲ ಬರುತ್ತದೆ. ಗ್ರಾಮಾಧಿಕಾರಿಗೆ ಸಂಸ್ಕೃತ ಶಿಲಾಲೇಖಗಳಲ್ಲಿ ಮಧ್ಯಯುಗದಲ್ಲಿಯೂ ಗ್ರಾಮಾಧಿಪತಿ, ಗ್ರಾಮಕೂಟ, ಮಹತ್ತರ ಎಂಬ ಅಭಿಧಾನಗಳು ದೊರಕುತ್ತವೆ. ಇಂದಿಗೂ ಪ್ರಾದೇಶಿಕವಾಗಿ ಈ ಅಧಿಕಾರಿಗೆ ಚೌಧುರಿ, ಮಹತೋ, ಚೌಗುಲೆ ಇತ್ಯಾದಿ ಉಪಾಧಿಗಳು ಮಹಾರಾಷ್ಟ್ರದಲ್ಲೇ ಇವೆ.

ಆದರೆ ಈಚಿನ ಶತಮಾನಗಳಲ್ಲಿ ಪಾಟೀಲ ಶಬ್ದ ಗ್ರಾಮಾಧಿಪತಿಗೆ ಪ್ರಯೋಗಿಸಲ್ಪಡತೊಡಗಿತೆಂದೂ ಬಹುಶಃ ಮಹಾರಾಷ್ಟ್ರದ ಪ್ರಭಾವದಿಂದ ಅದು ಕರ್ನಾಟಕದ ಅನೇಕ ಭಾಗಗಳಿಗೆ ಹಬ್ಬಿತೆಂದೂ ತೋರುತ್ತದೆ. ಮುಂದೆ ಆ ಪದವಿಗೆ ರಾಜ್ಯಶಾಸಕರು ಯಾವ ಜಾತಿಯವನನ್ನು ನೇಮಿಸಿದರೂ ಅವನಿಗೆ ಪಾಟೀಲನೆಂಬ ಹೆಸರು ಬೀಳುವಂತಾಯಿತು. ಹೀಗೆ ಕರ್ನಾಟಕದಲ್ಲಿ ಲಿಂಗವಂತ ಪಾಟೀಲರಿದ್ದಾರೆ, ಜೈನ ಪಾಟೀಲರಿದ್ದಾರೆ, ರೆಡ್ಡಿ ಪಾಟೀಲರಿದ್ದಾರೆ, ಬ್ರಾಹ್ಮಣ, ಸೋಮವಂಶ ಕ್ಷತ್ರಿಯ ಮೊದಲಾದ ನಾನಾ ಮತ ಜಾತಿ ಪಂಥಗಳ ಪಾಟೀಲರೂ ಇದ್ದಾರೆ. ಹಾಗೇ ಪೋಲೀಸ್-ಪಾಟೀಲರು, ಪಾಟೀಲ-ಕುಲಕರ್ಣಿಯವರು ಮೊದಲಾದ ಏಕಾಧಿಕ ಅಧಿಕಾರ ಹೊಂದಿದವರೂ ಕಾಣಿಸಿಕೊಂಡು ವಂಶಪಾರಂಪರ್ಯವಾಗಿ (ಅಧಿಕಾರವಿಲ್ಲದಿದ್ದರೂ) ಆ ಉಪಾಧಿಯನ್ನು ಅನುಭವಿಸುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಕೂಡ ಮರಾಠಾ, ಕುಣಬಿ, ಬ್ರಾಹ್ಮಣ ಮೊದಲಾದ ಜಾತಿಗಳಲ್ಲಿ ಪಾಟೀಲರು ಇದ್ದಾರೆ. ಆದರೆ ಕೆಲವೆಡೆ "ಜಾತಿ ಪಾಟೀಲ" ಎಂಬ ಹೆಸರೂ ಇರುವುದನ್ನು ನೋಡಿದರೆ ಜಾತಿಯ ಅಥವಾ ಮನೆತನದ ಹಿರಿಯನನ್ನು ಪಾಟೀಲ ಎಂದು ಕರೆಯುವುದೂ ಕೃಷಿಕ ಜಾತಿಗಳಲ್ಲಿ ರೂಢವಾಗಿತ್ತೆಂದು ಅರ್ಥವಾಗುತ್ತದೆ. ಇದರಿಂದಲೇ ಬೇರೆ ಬೇರೆ ಜಾತಿಗಳವರು ತಮ್ಮ

ತಮ್ಮ ಪ್ರಮುಖನನ್ನು ಪಾಟೀಲನೆಂದು ಕರೆಯತೊಡಗಿರಬಹುದು. ಮತ್ತು ಇದೇ ಕಾರಣದಿಂದಾಗಿಯೇ ಅಧಿಕಾರವಿಲ್ಲದವರಿಗೂ ಈ ಉಪಾಧಿ ಪ್ರಾಪ್ತವಾಗಿರಬಹುದು.

ಪಾಟೀಲನೆಂಬ ಹೆಸರು ಸೂಚಿಸುವ ಗ್ರಾಮಾಧಿಕಾರಿ ಪದ ಆರ್ಯರು ದಂಡಕಾರಣ್ಯದಲ್ಲಿ ಪ್ರವೇಶಿಸಿದಂದಿನಿಂದಲೂ ಇದೆ—ಹೆಸರು ಗ್ರಾಮಣಿ, ಗ್ರಾಮಕೂಟ, ಮುಖಿಯಾ, ಗೌಡ, ಚೌಧರಿ—ಏನೇ ಇರಲಿ. ಮೊದಲು ಅವನು ಜನರಿಂದ ಆಯ್ಕೆ ಹೊಂದಿದವನಾಗಿರುತ್ತಿದ್ದ. ಕಾಲಾಂತರದಲ್ಲಿ ಅದು ವಂಶಪಾರಂಪರ್ಯವಾಯಿತು.

ಈ ಅಧಿಕಾರಿಯ ಸ್ಥಾನ ಗೌರವಯುಕ್ತವಾಗಿತ್ತು. ಗ್ರಾಮದ ರಕ್ಷಣೆಯನ್ನು ಸಂಘಟಿಸುವುದೂ ರಾಜನಿಗೆ ಗ್ರಾಮದ ಕಂದಾಯವನ್ನು ವಸೂಲು ಮಾಡಿಕೊಡುವುದೂ ಅವನ ಅಧಿಕಾರವಾಗಿತ್ತು. ಕೇಂದ್ರ ಸರಕಾರ ಅವನ ಕಾರ್ಯಗಳಲ್ಲಿ ಕೈಹಾಕುತ್ತಿರಲಿಲ್ಲ. ಬ್ರಾಹ್ಮಣರಿಗಾಗಲಿ ದೇವಾಲಯಗಳಿಗಾಗಲೀ ಗ್ರಾಮದ ಜಮೀನುಗಳನ್ನು ದಾನ ಕೊಡುವುದಾದಲ್ಲಿ ಈ ಅಧಿಕಾರಿಯ ಹೆಸರು (ರಾಜಪ್ರತಿನಿಧಿಯಾಗಿ) ಶಾಸನಗಳಲ್ಲಿ ಉಲ್ಲೇಖವಾಗುತ್ತಿತ್ತು. ಶಿವಾಜಿ ಮಹಾರಾಜನು ಪಾಟೀಲರಿಗೆ ಮರ್ಯಾದೆ ಕೊಡಬೇಕೆಂದು ಶಾಸಕರಿಗೆ ಆಜ್ಞೆ ಮಾಡಿದ್ದನು. ಅವರು ತಿರುಗಿಬಿದ್ದರೆ ಕೇಂದ್ರ ಸರಕಾರಕ್ಕೆ ಅನವಶ್ಯಕ ತಲೆನೋವಾಗುವುದೆಂದು ಎಲ್ಲ ಶಾಸಕರಿಗೂ ಗೊತ್ತಿತ್ತು. ಬ್ರಿಟಿಶರು ಕೂಡ ಪ್ರಾರಂಭದಲ್ಲಿ ಅವನು ತನ್ನ ಗ್ರಾಮದ ಮಟ್ಟಿಗೆ ಅರಸನೆಂದೇ ಸ್ವೀಕರಿಸಿದ್ದರು. ಅವನು ಕೇಳಿಕೊಂಡ ಹೊರತು ಪೋಲೀಸರು ಗ್ರಾಮದಲ್ಲಿ ಪ್ರವೇಶಿಸುವಂತಿರಲಿಲ್ಲ; ಕಲೆಕ್ಟರನಂಥ ಪ್ರಬಲಾಧಿಕಾರಿ ಕೂಡ ಪಟೇಲನಿಗೆ ಸೂಚನೆ ಕೊಡದೆ ಗ್ರಾಮ ಪ್ರವೇಶ ಮಾಡಿದರೆ ಅವನಿಗೆ ಒಂದು ತಟುಕು ನೀರು ಸಿಗದಂತೆ ಮಾಡಿದ ಉದಾಹರಣೆ·



ಗಳು ಜನರ ಬಾಯಲ್ಲಿ ಕೇಳಿಬರುತ್ತವೆ.

ಪಾಟೀಲನಿಗೆ ಸರ್ವಮಾನ್ಯ (ಸಂಪೂರ್ಣ ಕರ ವಿಮುಕ್ತ) ಪೈತೃಕ ಭೂಮಿ ಜೀವನಾಧಾರವಾಗಿತ್ತು. ಕೃಷಿಭೂಮಿಯಲ್ಲದ ಗೋಚರಾವು ಜಮೀನುಗಳು ಅವನ ಅಧಿಕಾರಕ್ಕೆ ಒಳಪಟ್ಟಿದ್ದವು. ಮಹಾಭಾರತ ಕಾಲದಲ್ಲಿ ಆತನಿಗೆ ಗ್ರಾಮದ ಅಡವಿಗಳ ಉತ್ಪತ್ತಿಗಳು ವೇತನ ರೂಪದಲ್ಲಿ ಸಿಗುತ್ತಿದ್ದವು. ಕೆಲವು ಅಪರಾಧಗಳಿಗೆ ವಿಧಿಸಿದ ದಂಡಗಳು ಅವನ ಹಕ್ಕಿಗೆ ಸೇರಿದ್ದವಲ್ಲದೆ ಕೆಲವೆಡೆ (ಉದಾಹರಣೆಗೆ ಬೆಳಗಾವಿ, ಧಾರವಾಡ)ಗಳಲ್ಲಿ ವಿವಾಹೋಪನಯನಾದಿ ಸಂಸ್ಕಾರಗಳಲ್ಲಿ ಗೌಡನಿಗೆ ನಿರ್ದಿಷ್ಟ ಶುಲ್ಕ ಕೊಡಬೇಕಾಗುತ್ತಿತ್ತು. ಸಮಗಾರನಿಂದ ವರ್ಷಕ್ಕೆರಡು ಜತೆ ಮೆಟ್ಟು, ವೀಳ್ಯದವನಿಂದ ದಿನಕ್ಕೆ ೧೩ ವೀಳ್ಯದೆಲೆ, ಗಾಣಿಗನಿಂದ ಎಣ್ಣೆ ಇತ್ಯಾದಿಗಳನ್ನು ಪುಕ್ಕಟೆ ಪಡೆಯುವ ಅಧಿಕಾರ ಅವನಿಗಿತ್ತು. ಸರಕಾರಿ ಕಂದಾಯದ ಮೇಲೆ ಪ್ರಥಮ ಸಾವಿರಕ್ಕೆ ಸೇಕಡಾ ೫, ಎರಡನೇ ಸಾವಿರಕ್ಕೆ ಸೇಕಡಾ ೪ ಇತ್ಯಾದಿಯಾಗಿ ಅಂಶಕ್ಕೆ ಅವನು ಭಾಗಿಯಾಗಿದ್ದನು. ಹೀಗೆ ಆತ ಗ್ರಾಮದಲ್ಲೇ ಶ್ರೀಮಂತನೂ ಆಢ್ಯನೂ ಆಗಿರುತ್ತಿದ್ದ.

ಇಷ್ಟೆಲ್ಲ ಅಧಿಕಾರ ಸಂಪನ್ನವಾದ ಸ್ಥಾನವನ್ನು ವಂಶಪಾರಂಪರ್ಯವಾಗಿ ಅನುಭವಿಸುತ್ತಿದ್ದ ಪಾಟೀಲ ಅಥವಾ ಪಟೇಲ ಬರಬರುತ್ತ ಸ್ವಾರ್ಥಿಯೂ ಪ್ರಜಾಪೀಡಕನೂ ಆದದ್ದು ಸ್ವಾಭಾವಿಕ. ಗ್ರಾಮಾಧಿಕಾರಿ ಪಾಟೀಲನು ಪ್ರಮುಖ ಕೃಷಿಕ ಜಾತಿಯವನೇ ಆಗಿರುತ್ತಿದ್ದ. ಆದರೆ ಗ್ರಾಮದ ಶಾನುಭೋಗ (ಸೇನಬೋವನೆಂಬುದು ಶಾಸನಗಳಲ್ಲಿ ಬರುವ ಹೆಸರು) ಅಥವಾ ಕುಲಕರ್ಣಿ (ಗ್ರಾಮದ ದಾಖಲೆ ಹಾಗೂ ಕಂದಾಯದ ಲೆಕ್ಕವಿಡುವವ) ಹೆಚ್ಚಾಗಿ ಬ್ರಾಹ್ಮಣನಾಗಿರುತ್ತಿದ್ದುದರಿಂದ ಅಧಿಕಾರದ ದುರುಪಯೋಗದ ಅವಕಾಶ ಕಡಿಮೆಯಾದೀತೆಂದು ನಿರೀಕ್ಷೆ ಇದ್ದಿರಬಹುದು. ಆದರೆ ಕೊನೆಗೆ ಇಬ್ಬರೂ ಗ್ರಾಮಕ್ಕೆ ಆತಂಕಕಾರಿಗಳಾಗಿ ಪರಿಣಮಿಸಿದ್ದರಿಂದ "ಪಟೇಲ ಶ್ಯಾನುಭಾಗ ಊರಿಗೆ ಮಾರಿ" ಎಂಬ ಗಾದೆ ಹುಟ್ಟಿಕೊಂಡಿತು. ಆದರೆ ಇಂದು ಈ ಎರಡೂ ಪರಂಪರಾಗತ ಅಧಿಕಾರ ಸ್ಥಾನಗಳು ರದ್ದಾಗಿ ಪಟೇಲ-ಪಾಟೀಲರು ಕೇವಲ ನಾಮಾವಶೇಷರಾಗಿದ್ದಾರೆ. ▲

ಆಧಾರ: "ಕಾದಂಬಿನಿ"

## ಕಾಣೆಯಾದ ಒಡವೆ

ಇಟಲಿಯ ಸರ್ವಾಧಿಕಾರಿ ಮುಸ್ಸೋಲಿನಿ ಒಮ್ಮೆ ಹಲವರು ಪ್ರತಿಷ್ಠಿತರನ್ನು ದುಂಡುಮೇಜಿನ ಔತಣಕ್ಕೆ ಕರೆದಿದ್ದ. ಮೇಜಿನ ಮಧ್ಯದಲ್ಲಿ, ತನ್ನ ಸಿರಿವಂತಿಕೆಯನ್ನು ಪ್ರದರ್ಶಿಸಲು ಒಂದು ಬೆಳ್ಳಿ ತಟ್ಟೆಯಲ್ಲಿ ಬಂಗಾರದ ಒಡವೆಯೊಂದನ್ನಿರಿಸಿದ್ದ. ಆದರೆ ಊಟದ ಮಧ್ಯೆ ಆ ಒಡವೆಯನ್ನು ಅಲ್ಲಿದ್ದ ಪ್ರತಿಷ್ಠಿತರಲ್ಲಿ ಯಾರೋ ಅಪಹರಿಸಿರುವುದು ಮುಸ್ಸೋಲಿನಿಯ ಗಮನಕ್ಕೆ ಬಂತು. ತಕ್ಷಣ ಆತ ಉಚ್ಚ ಸ್ವರದಲ್ಲಿ "ನಾನು ಮೇಜಿನ ಮೇಲಿಟ್ಟಿರುವ ಒಡವೆಯನ್ನು ಇಲ್ಲಿರುವ ಯಾರೋ ಕದ್ದಿದ್ದಾರೆ. ಆದರೆ ಕಳ್ಳ ಯಾರೆಂದು ಬಹಿರಂಗಪಡಿಸಿ ಯಾರನ್ನೂ ಅವಮಾನಿಸುವ ಇಚ್ಛೆ ನನಗಿಲ್ಲ. ಆದುದರಿಂದ ಮೂರು ನಿಮಿಷ ಕಾಲ ಭೋಜನ ಗೃಹದ ದೀಪವನ್ನು ಆರಿಸುತ್ತೇನೆ. ಪುನಃ ದೀಪ ಹಚ್ಚುವ ಮೊದಲೇ ಸ್ವಸ್ಥಾನದಲ್ಲಿ ಅದನ್ನಿಟ್ಟುಬಿಡಿ" ಎಂದು ಹೇಳಿ ದೀಪಗಳನ್ನು ಆರಿಸಿದ.

ಮೂರು ನಿಮಿಷ ಕಳೆದು ಪುನಃ ದೀಪಗಳು ಹೊತ್ತಿದಾಗ ಒಡವೆ ಅಲ್ಲಿರುವುದು ಬಿಡಿ, ಅದನ್ನಿರಿಸಿದ್ದ ಬೆಳ್ಳಿ ತಟ್ಟೆ ಕೂಡ ನಾಪತ್ತೆಯಾಗಿತ್ತು! —ಪ. ರಾಮಕೃಷ್ಣ ಶಾಸ್ತ್ರಿ

ಕೀಟದಿಂದಾಗಿ
ದೇಶ ಬದುಕಿತು



# ಆಸ್ಟ್ರೇಲಿಯದ ಆ ಅಪೂರ್ವ ಸ್ಮಾರಕ

ಶ್ರೀಕಾಂತ

ಆಸ್ಟ್ರೇಲಿಯದಲ್ಲಿ ಬೂನಾರ್ಗಾ ಎಂಬ ನಗರದಲ್ಲಿ ಒಂದು ಸ್ಮಾರಕವಿದೆ. ಇದು ಯಾವೊಬ್ಬ ಮಹಾಪುರುಷನಿಗಾಗಿ ನಿರ್ಮಿಸಿದ ಸ್ಮಾರಕವಲ್ಲ. ಅದೊಂದು ಜಾತಿಯ ಪತಂಗದ ಸ್ಮರಣೆಗಾಗಿ ನಿರ್ಮಿಸಿದ್ದು. ಇದಕ್ಕೆ ಆಶ್ಚರ್ಯಪಡಬೇಕಾದ್ದಿಲ್ಲ. ಇಡೀ ಆಸ್ಟ್ರೇಲಿಯ ಖಂಡಕ್ಕೊದಗಿದ ಗಂಡಾಂತರದಿಂದ ಅದನ್ನು ಪಾರುಮಾಡಿದ ಶ್ರೇಯಸ್ಸು ಈ ಪತಂಗಕ್ಕೇ ಲಭಿಸುತ್ತದೆ.

ಆಸ್ಟ್ರೇಲಿಯ ಖಂಡದ ಶೋಧವಾಗಿ ಬಹು ಕಾಲವಾಗಿರಲಿಲ್ಲ. ಹೊಸ ಖಂಡವನ್ನು ಕಾಣಬೇಕೆನ್ನುವ, ಈ ನವಖಂಡದಲ್ಲಿನ ನೈಸರ್ಗಿಕ ಸಂಪತ್ತಿನಿಂದ ತಮ್ಮ ಖಜಾನೆಯನ್ನು ತುಂಬಿಕೊಳ್ಳಬೇಕೆನ್ನುವ ಉದ್ದೇಶದಿಂದ ನಾನಾ ದೇಶಗಳಿಂದ ಜನ ಬರತೊಡಗಿದರು. ಬರುವಾಗ ಅವರು ತಮ್ಮ ತಮ್ಮ ಸಾಮಾನುಗಳೊಡನೆ ತಮ್ಮ ಸಾಕುಪ್ರಾಣಿಗಳನ್ನೂ ತಾವು ಈ ಮೊದಲು ವಾಸಿಸುತ್ತಿದ್ದಲ್ಲಿ ಬೆಳೆಸುತ್ತಿದ್ದ ಸಸ್ಯಗಳನ್ನೂ ತಂದರು. ಮುಂದೊಂದು ದಿನ ಅವು ಮಹಾ ವಿಪತ್ತನ್ನೇ ತಂದೊಡ್ಡಬಹುದೆಂಬುದು ಅವರಿಗೆ ಗೊತ್ತಾಗಲಿಲ್ಲ.

ಪ್ರಪಂಚದ ತೀರ ದಕ್ಷಿಣಕ್ಕಿರುವ ಆಸ್ಟ್ರೇಲಿಯ ಯುಗಯುಗಗಳಿಂದ ಹೊರ ಜಗತ್ತಿನ ಸಂಪರ್ಕದಿಂದ ದೂರವಾಗಿತ್ತು. ಅಲ್ಲಿನ ಸಸ್ಯವರ್ಗ, ಪ್ರಾಣಿವರ್ಗಗಳು ಪ್ರಪಂಚದ ಇತರ ಭೂಭಾಗಗಳಿಂದ ಬೇರ್ಪಡಿಸಲ್ಪಟ್ಟು ಸ್ವತಂತ್ರವಾಗಿ ವಿಕಾಸಗೊಂಡು ಅಲ್ಲಿನ ಪರಿಸರಗಳಿಗೆ ಒಗ್ಗಿಕೊಂಡಿದ್ದವು. ಹೊಸದಾಗಿ ಇಲ್ಲಿ ನೆಲೆಸಲು ಬಂದ ಜನ ತಮ್ಮೊಂದಿಗೆ ತಂದ ಎಷ್ಟೋ ಪ್ರಾಣಿ, ಸಸ್ಯಗಳು ಹೊಸ ಪರಿಸರಕ್ಕೆ ಹೊಂದಿಕೊಳ್ಳಲಾರದೆ ಸತ್ತುಹೋದರೆ ಇನ್ನು ಕೆಲವು ಹೊಸ ಪರಿಸರಕ್ಕೆ ಚೆನ್ನಾಗಿ ಒಗ್ಗಿಕೊಂಡವಲ್ಲದೆ ಅಲ್ಲಿ ನೈಸರ್ಗಿಕ ಶತ್ರುಗಳಿಲ್ಲದ್ದರಿಂದ ದಿನೇ ದಿನೇ ವೃದ್ಧಿಸತೊಡಗಿ ಹೊಸ ಹೊಸ ಸಮಸ್ಯೆಗಳು ಹುಟ್ಟುವುದಕ್ಕೆ ಕಾರಣವಾದುವು.

ಅಂತಹವುಗಳಲ್ಲಿ ಪಾಪಾಸುಕಳ್ಳಿಯೂ ಒಂದು. ೧೮೩೯ರ ಸುಮಾರಿಗೆ ಅಮೇರಿಕದಿಂದ ಇಲ್ಲಿ ನೆಲಸಲು ಬಂದವನಾರೋ ಆ ಕಳ್ಳಿಯನ್ನು ತಂದ. ತನ್ನ ಮನೆಯ ಅಂಗಳದ ಸುತ್ತಲೂ

ಅದನ್ನು ದಂಡೆಯ ಹಾಗೆ ಬೆಳೆಸಲು ಆತ ಹೀಗೆ ಮಾಡಿರಬಹುದು. ಅದನ್ನು ಇತರರೂ ಅನುಸರಿಸತೊಡಗಿದರು. ತಮ್ಮ ಜಮೀನುಗಳಿಗೆ ಅದು ಉತ್ತಮ ಬೇಲಿಯಾಗಬಲ್ಲದೆಂದು ಅವರು ಎಣಿಸಿದರು.

ಮೊದಲು ಇದರಿಂದೇನೂ ತೊಂದರೆ ಉದ್ಭವಿಸಲಿಲ್ಲ. ತೊಂದರೆ ಪ್ರಾರಂಭವಾದದ್ದು ಈ ಕಳ್ಳಿ ಒಳನಾಡನ್ನು ಪ್ರವೇಶಿಸಿದ ಮೇಲೆ. ಅಲ್ಲಿ ಅದನ್ನು ತೋಟಗಳ, ಹೊಲಗಳ ಗಡಿಗಳನ್ನು ಗುರುತಿಸಲು ಬೆಳೆಯಲಾಗುತ್ತಿತ್ತು. ಪಾಪಾಸುಕಳ್ಳಿ ಆಸ್ಟ್ರೇಲಿಯದ ಹೊಸ ಪರಿಸರಕ್ಕೆ ಚೆನ್ನಾಗಿ ಒಗ್ಗಿಕೊಂಡಿತಷ್ಟೇ ಅಲ್ಲ, ಅದರ ಬೆಳವಣಿಗೆಯನ್ನು ಪ್ರತಿಬಂಧಿಸುವ ನೈಸರ್ಗಿಕ ಶತ್ರುಗಳೂ ಇಲ್ಲದ್ದರಿಂದ ಅನಿರ್ಬಂಧವಾಗಿ ಬೆಳೆಯತೊಡಗಿತು. ಬೇಲಿಯೇ ಎದ್ದು ಹೊಲ ಮೇಯಿತು ಎಂಬ ಗಾದೆಮಾತನ್ನು ನಾವೆಲ್ಲ ಕೇಳಿದ್ದೇವೆ. ಆದರೆ ಅದು ನಿಜಕ್ಕೂ ಸಂಭವಿಸಿದಾಗ ಜನ ಗಾಬರಿಯಾದರು. ಸಿಕ್ಕಸಿಕ್ಕಲ್ಲಿ ಕಳ್ಳಿಯನ್ನು ಕಡಿದುಹಾಕಿದರು. ಟನ್ನುಗಟ್ಟಲೆ ಸಸ್ಯನಾಶಕಗಳನ್ನು ಸುರಿದರು.

ಆದರೂ ಕಳ್ಳಿಯ ಸಾಮ್ರಾಜ್ಯ ವಿಸ್ತರಿಸುತ್ತಲೇ ಇತ್ತು. ೧೯೦೦ರ ಸುಮಾರಿಗೆ ಅದು ಪ್ರತಿ ನಿಮಿಷಕ್ಕೆ ಸುಮಾರು ಒಂದು ಎಕರೆಯಷ್ಟು ಫಲವತ್ತಾದ ಭೂಮಿಯನ್ನು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಳ್ಳುತ್ತಿತ್ತು. ೧೯೨೫ ರ ಹೊತ್ತಿಗೆ ಇಡೀ ಇಂಗ್ಲಂಡಿನಷ್ಟು ಪ್ರದೇಶವನ್ನು ಅಂದರೆ ಸುಮಾರು ೬,೦೦,೦೦,೦೦೦ (ಆರು ಕೋಟಿ) ಎಕರೆಗಳಷ್ಟು ಪ್ರದೇಶವನ್ನು ಅದು ಕಬಳಿಸಿಬಿಟ್ಟಿತ್ತು. ಹುಲ್ಲುಗಾವಲು ಬರಿದಾಯಿತು. ಹುಲ್ಲುಗಾವಲನ್ನು ಅವಲಂಬಿಸಿದ್ದ ಗೋಕುಲಗಳು ಮುನ್ನುಗ್ಗುತ್ತಿದ್ದ ಕಳ್ಳಿಯ ಸಾಮ್ರಾಜ್ಯದ ಮುಂದೆ ತತ್ತರಿಸಿ ಪಲಾಯನಗೈಯತೊಡಗಿದವು. ಆರು ಕೋಟಿ ಎಕರೆಗಳ ಪೈಕಿ ಮೂರು ಕೋಟಿ ಎಕರೆಗಳಲ್ಲಿ ಪಾಪಾಸುಕಳ್ಳಿ ಮನುಷ್ಯನಾಗಲಿ ಪ್ರಾಣಿಯಾಗಲಿ ಕಾಲಿಡದಷ್ಟು ದಟ್ಟವಾಗಿ ಬೆಳೆದಿತ್ತು. ಇನ್ನುಳಿದ ಮೂರು ಕೋಟಿ ಎಕರೆಗಳಲ್ಲಿ ಫಲವತ್ತಾದ ಭೂಮಿಯಿರುವಲ್ಲೆಲ್ಲ ಕಳ್ಳಿ ಬೆಳೆದು ಬಿಟ್ಟಿದ್ದರಿಂದ ಮೊದಲಿನ ಹಾಗೆ ಬೆಳೆಗಳನ್ನು ಬೆಳೆಯಲಾಗುತ್ತಿರಲಿಲ್ಲ. ಪಾಪಾಸು ಕಳ್ಳಿಯ ವಿಸ್ತಾರದಿಂದಾಗಿ ಎಲ್ಲಿ ನೋಡಿದಲ್ಲಿ ಹಾಹಾಕಾರ ಎದ್ದಿತು.

ಪಾಪಾಸುಕಳ್ಳಿಯ ಭಯೋತ್ಪಾದಕ ಅಭಿವೃದ್ಧಿಯಿಂದ ಚಿಂತಿತರಾಗಿ ವಿಜ್ಞಾನಿಗಳು ೧೯೧೨ ರಷ್ಟು ಹಿಂದೆಯೇ ಅದರ ಬೆಳವಣಿಗೆಯನ್ನು ಕುಗ್ಗಿಸುವುದಕ್ಕಾಗಿ ಹೊಸ ಹೊಸ ಉಪಾಯಗಳನ್ನು ಕಂಡುಹಿಡಿಯುವಲ್ಲಿ ಮಗ್ನರಾಗಿದ್ದರು. ಸಾಮಾನ್ಯ ಉಪಾಯಗಳು ಸಫಲವಾಗಿದ್ದ ಸಂದರ್ಭಗಳಲ್ಲಿಯೂ ಅವು ತೀರ ತುಟ್ಟಿಯಾಗುತ್ತಿದ್ದವು. ಆದ್ದರಿಂದ ಈ ಸಸ್ಯಕ್ಕೆ ನೈಸರ್ಗಿಕ ಶತ್ರುಗಳು ಇವೆಯೇ ಎಂದು ಹುಡುಕುವುದೊಂದೇ ಹಾದಿಯೆಂದು ಸಿದ್ಧವಾಯಿತು. ಸಂಶೋಧನೆಗಳು ಮುಂದುವರಿದಂತೆಲ್ಲ ಜೈವಿಕ ವಿಧಾನಗಳಿಂದ ಕಳ್ಳಿಯ ಬೆಳವಣಿಗೆಯನ್ನು ಕುಗ್ಗಿಸುವುದು ಶ್ರೇಷ್ಠವಾದ ಉಪಾಯವೆಂಬುದು ಮನದಟ್ಟಾಯಿತು. ಈ ಪಾಪಾಸು ಕಳ್ಳಿಯ ಮೂಲಸ್ಥಾನವಾದ ಅಮೇರಿಕದಲ್ಲಿ ಹುಡುಕಾಟ ಪ್ರಾರಂಭವಾಯಿತು. ವಿಜ್ಞಾನಿಗಳು ಪಾಪಾಸುಕಳ್ಳಿಯನ್ನು ಭಕ್ಷಿಸುವ ೧೩೦ ಜಾತಿಯ ಕೀಟಗಳನ್ನು ಕಲೆಹಾಕಿದರು. ಅವುಗಳನ್ನು ಆಸ್ಟ್ರೇಲಿಯಕ್ಕೆ ಕಳಿಸಿದರೆ ಅವು ಕಳ್ಳಿಯನ್ನು ನಾಶಪಡಿಸುವುದು ಖಚಿತವಾಗಿದ್ದರೂ ಮಾನವನಿಗೆ ಉಪಯುಕ್ತವಾದ ಇತರ ಸಸ್ಯಗಳನ್ನೂ ಅವು ಕಬಳಿಸಿದರೆ ರೋಗಕ್ಕಿಂತ ಔಷಧವೇ ಅಪಾಯಕರವಾಗಬಹುದಿತ್ತು. ಅದಕ್ಕಾಗಿ ವಿಜ್ಞಾನಿಗಳು ಅವುಗಳ ಜೀವನವಿಧಾನ, ಅವುಗಳಿಗೆ ಇಷ್ಟವಾದ ಆಹಾರ, ಅವುಗಳ ಆಯುಷ್ಯ, ಮುಂತಾದವುಗಳನ್ನು ಆಮೂಲಾಗ್ರವಾಗಿ ಅಭ್ಯಸಿಸಿದರು. ತತ್ಪರಿಣಾಮವಾಗಿ, ಆ ೧೩೦ ಕೀಟಗಳ ಪೈಕಿ ಆರು ಬಗೆಯ ಕೀಟಗಳು ಪರಿಶೀಲನೆಗೆ ಯೋಗ್ಯವಾಗಿವೆ ಎಂಬ ತೀರ್ಮಾನಕ್ಕೆ ಬಂದರು. ಅವುಗಳನ್ನು ಆಸ್ಟ್ರೇ-

ಲಿಯಾಕ್ಕೆ ಕಳಿಸಿದರೆ ಅವು ಆಶ್ಚರ್ಯಕರ ರೀತಿಯಲ್ಲಿ ಪಾಪಾಸುಕಳ್ಳಿಯ ಸಾಮ್ರಾಜ್ಯವನ್ನು ಮಣ್ಣುಗೂಡಿಸುವವು ಎಂದು ಅವರು ನಿರೀಕ್ಷಿಸಿದ್ದರು.

೧೯೨೫ರಲ್ಲಿ ಕ್ಯಾಕ್ಟೋಬ್ಲಾಟಿಸ್ ಕ್ಯಾಕ್ಟೋರಮ್ ಎಂಬ ಜಾತಿಯ ಅರ್ಜೆಂಟಿನಾ ದೇಶದ ಪತಂಗದ ೨,೭೫೦ ತತ್ತಿಗಳು ಆಸ್ಟ್ರೇಲಿಯಾಕ್ಕೆ ಬಂದು ತಲಪಿದವು. ಆಸ್ಟ್ರೇಲಿಯಾದ ಪ್ರಯೋಗಾಲಯದಲ್ಲಿ ತತ್ತಿ ಒಡೆದು ಮರಿಗಳು ಹೊರ ಬರುತ್ತಲೇ ಅವುಗಳನ್ನು ಬಲೆಯಲ್ಲಿರಿಸಲಾಯಿತು. ಮಾನವನಿಗೆ ಉಪಯುಕ್ತವಾದ ಯಾವ ಸಸ್ಯವನ್ನು ಅವುಗಳಿಗೆ ಕೊಟ್ಟರೂ ಅವು ತಿನ್ನಲಿಲ್ಲ. ಆದರೆ ಪಾಪಾಸುಕಳ್ಳಿಯನ್ನು ಕೊಟ್ಟಾಗ ಅತ್ಯಾತುರವಾಗಿ ಕೊಟ್ಟದ್ದನ್ನೆಲ್ಲ ಕಬಳಿಸಿಹಾಕಿದವು. ವಿಜ್ಞಾನಿಗಳು ಆನಂದದಿಂದ ಕುಣಿದಾಡಿದರು. ಸಮಸ್ಯೆಗೆ ಉತ್ತರ ಸಿಕ್ಕಿತ್ತು.

ಈ ಪತಂಗದ ಮರಿಗಳನ್ನು ಬೆಳೆಸಿ ಕಳ್ಳಿ ಬೆಳೆದಲ್ಲಿ ಬಿಟ್ಟರೆ ಕಳ್ಳಿ ತಂತಾನೇ ನಾಶವಾಗುವುದೆಂದು ಭರವಸೆ ಬಂತು. ಆದರೆ ಪತಂಗ ಎಷ್ಟು ಬೇಗನೆ ಸಂತಾನವೃದ್ಧಿಯನ್ನು ಮಾಡಿಕೊಂಡಿತೆಂದರೆ ಅದನ್ನು ಸಾಕಿ ಬೆಳೆಸುವ ಪ್ರಶ್ನೆಯೇ ಉದ್ಭವಿಸಲಿಲ್ಲ. ಬೆಳೆದ ಕಳ್ಳಿಯನ್ನೆಲ್ಲ ತಿಂದು ಹಾಕಿದ ನಂತರ ತಿನ್ನಲಿಕ್ಕೆ ಏನೂ ಉಳಿಯದೆ ಉಪವಾಸದಿಂದ ಹಣ್ಣಾಗಿ ಅಲ್ಲಲ್ಲಿ ಬಿದ್ದುಕೊಂಡ ಪತಂಗಗಳನ್ನೂ ಅವುಗಳ ತತ್ತಿಗಳನ್ನೂ ಕೂಡಿಸಿ ಪಾಪಾಸುಕಳ್ಳಿ ಬೆಳೆದ ಬೇರೊಂದು ಸ್ಥಳಕ್ಕೆ ಸಾಗಿಸಲಾಯಿತು; ಅಲ್ಲಿಯೂ ಕಳ್ಳಿಯ ರಾಜ್ಯ ಕರಗತೊಡಗುತ್ತಿತ್ತು. ೧೯೩೦ರ ಸುಮಾರಿಗೆ ಸಾವಿರಾರು ಎಕರೆಗಳಷ್ಟು ಭೂಮಿ ಪಾಪಾಸುಕಳ್ಳಿಯ ಹಿಡಿತದಿಂದ ಪಾರಾಗಿತ್ತು. ೧೯೩೫ರ ವೇಳೆಗಂತೂ ಮಾನವನಿಗೆ ಕಾಲಿಡಲೂ ಸಾಧ್ಯವಿಲ್ಲದಷ್ಟು ದಟ್ಟವಾಗಿ ಬೆಳೆದ ಸ್ಥಳಗಳಿಂದ ಕೂಡ ಈ ಕಳ್ಳಿಯ ಸಾಮ್ರಾಜ್ಯ ಹೇಳ ಹೆಸರಿಲ್ಲದಂತಾಗಿತ್ತು. ಈ ಅವಧಿಯಲ್ಲಿ ಅದು ತೀರಾ ಕಡಿಮೆಯೆಂದರೆ ೧೫,೦೦,೦೦,೦೦,೦೦೦ ಟನ್ನುಗಳಷ್ಟು ಪಾಪಾಸುಕಳ್ಳಿಯನ್ನು ಕಬಳಿಸಿರಬೇಕೆಂದು ಆ ಮೇಲೆ ವಿಜ್ಞಾನಿಗಳು ಲೆಕ್ಕ ಹಾಕಿದರು.

ಹೀಗೆ ಆಸ್ಟ್ರೇಲಿಯಾವು ಮಾನವ ತಂತಾನೆ ತಂದೊಡ್ಡಿಕೊಂಡ ನೈಸರ್ಗಿಕ ವಿಪತ್ತಿನಿಂದ ಪಾರಾಯಿತು. ಆಸ್ಟ್ರೇಲಿಯಾಕ್ಕೆ ವಿಪತ್ತನ್ನೊಡ್ಡಿದ ಸಸ್ಯ ಕೇವಲ ಈ ಕಳ್ಳಿಯೊಂದೇ ಅಲ್ಲ. ೧೮೭೦ರಲ್ಲಿ ಅಲಂಕಾರಿಕ ಸಸ್ಯವಾಗಿ ಹೊರಗಿನಿಂದ ತಂದ ಸೇಂಟ್ ಜಾನ್ಸ್ ವಾರ್ಟ್ ೧೯೨೦ರ ಹೊತ್ತಿಗೆ ೭,೫೦,೦೦೦ ಎಕರೆಗಳನ್ನು ವ್ಯಾಪಿಸಿತ್ತು. ಕ್ರಿಸೋಮೆಲಾ ಎಂಬ ಜಾತಿಯ ಕೀಟದಿಂದ ಅದರ ಬೆಳವಣಿಗೆಯನ್ನು ನಿಯಂತ್ರಿಸಲಾಯಿತು. ಲಂತಾನಾ ಸಸ್ಯ ಕಂಡಾಪಟ್ಟೆ ಬೆಳೆದುಕೊಂಡಾಗ ಬ್ರಾಜಿಲ್ಲಿನ ಟೆಲಿಯೋನೆಮಿಯಾ ಸ್ಕ್ರುಪ್ಯುಲೋಸಾ ಎಂಬ ಕೀಟದಿಂದ ಅದರ ಬೆಳವಣಿಗೆಯನ್ನು ಮಟ್ಟಹಾಕಲಾಯಿತು. ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡಿನ ಕಬ್ಬಿನ ಬೆಳೆಗೆ ಹುಳು ತಗಲಿದಾಗ ಅಮೇರಿಕದಿಂದ ಒಂದು ಜಾತಿಯ ಕಪ್ಪೆಗಳನ್ನು ತರಿಸಿ ಅವುಗಳಿಂದ ಹುಳಗಳನ್ನು ನಾಶಪಡಿಸಲಾಯಿತು. ಆದರೆ ಇವಾವೂ ಆಸ್ಟ್ರೇಲಿಯಾಕ್ಕೆ ಪಾಪಾಸುಕಳ್ಳಿ ಮಾಡಿದ ಹಾನಿಗೆ ಸರಿದೂಗಲಾರವು. ಅದನ್ನು ಹಿಡಿತಕ್ಕೆ ತಂದ ಪತಂಗಕ್ಕೆ ಅವರು ಸ್ಮಾರಕ ನಿರ್ಮಿಸಿದ್ದು ಆಶ್ಚರ್ಯವಲ್ಲ.

ಜೈವಿಕ ವಿಧಾನಗಳಿಂದ ಅವಾಂಛಿತ ಸಸ್ಯಾದಿಗಳನ್ನು ನಾಶಪಡಿಸುವಲ್ಲಿ ಭಾರತದ ವಿಜ್ಞಾನಿಗಳೂ ಈಗ ನಿರತರಾಗಿದ್ದಾರೆ. ಸೀರಲ್ಲಿ ಕಂಡಾಪಟ್ಟೆಯಾಗಿ ಬೆಳೆದುಕೊಂಡು ನದಿ ಸರೋವರಗಳನ್ನು ನಿರುಪಯುಕ್ತಗೊಳಿಸುವ ಹಯಾಸಿಂಥ್ ಎಂಬ ಜಲಸಸ್ಯವನ್ನೂ ಹೊಲದಲ್ಲಿ ಬೆಳೆಯುವ ಕಳೆಯಂತಹ ನಿರುಪಯುಕ್ತ ವನಸ್ಪತಿಗಳನ್ನೂ ನಿಯಂತ್ರಿಸುವ ಜೈವಿಕ ವಿಧಾನಗಳ ಬಗ್ಗೆ ಅವರು ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ▲

ಕನಸುಗಳು ಸಾಮಾನ್ಯವಾಗಿ ಎಲ್ಲರಿಗೂ ಬೀಳುತ್ತಿರುತ್ತವೆ. ಈಗ ಎರಡು ವರ್ಷಗಳ ಹಿಂದಿನವರೆಗೆ ನಾನೂ ಎಲ್ಲರಂತೆಯೇ ಕನಸು ಕಾಣುತ್ತಿದ್ದೆ; ಹಾಗೆಯೇ ಅವುಗಳನ್ನು ಮರೆಯುತ್ತಿದ್ದೆ. ಅವುಗಳಲ್ಲಿ ಯಾವುದೇ ವಿಶೇಷವಿರುತ್ತಿರಲಿಲ್ಲ. ಕೆಲವು ಕನಸುಗಳು ಭಯಂಕರವಾಗಿರುತ್ತಿದ್ದರೂ ಅವುಗಳ ಪರಿಣಾಮ ಮನಸ್ಸಿನಲ್ಲಿ ಹೆಚ್ಚು ಕಾಲ ನಿಲ್ಲುತ್ತಿರಲಿಲ್ಲ.

ಅನಂತರ ಸುಮಾರು ಒಂದು ವರ್ಷ ಕಾಲ ನನಗೆ ಹೆಚ್ಚು ಕನಸುಗಳೇ ಬೀಳುತ್ತಿರಲಿಲ್ಲ. ಎಷ್ಟೋ ದಿನ ಅಮ್ಮ, ಕನಸಿನಲ್ಲಿ ತಾನು ವೈಕುಂಠವನ್ನು ನೋಡಿದೆ, ಪಾರ್ವತಿ ಬಂದು ತನಗೆ ಹೂ ಕೊಟ್ಟಳು ಎಂದೆಲ್ಲ ಹೇಳುತ್ತಿದ್ದಾಗ ನನಗೂ ಅಂತಹ ಕನಸುಗಳು ಬೀಳಬಾರದೆ ಎಂದು ಆಸೆ ಪಡುವಂತಾಗಿತ್ತು. ಒಮ್ಮೆ ಪೇಪರಿನಲ್ಲಿ ಮಾನಸಿಕ ಆರೋಗ್ಯ ಚೆನ್ನಾಗಿರುವ ಮನುಷ್ಯ ಸಾಮಾನ್ಯವಾಗಿ ಪ್ರತಿ ರಾತ್ರಿಯೂ ಯಾವುದಾದರೂ ಕನಸನ್ನು ಕಂಡೇ ಕಾಣುತ್ತಾನೆ ಎಂದು ಓದಿದಾಗ ನನ್ನ ಮಾನಸಿಕ ಆರೋಗ್ಯವೇ ಸರಿಯಾಗಿಲ್ಲವೇನೋ ಎಂದು ಭಾವಿಸಿ ಗಾಬರಿಯಾಗಿ ಒಳ್ಳೆ ಕನಸಲ್ಲದಿದ್ದರೆ ಹೋಗಲಿ, ಕೆಟ್ಟ ಕನಸಾದರೂ ಬೀಳಲಿ ದೇವರೇ ಎಂದು ಬೇಡುವ ಸ್ಥಿತಿಗೆ ಬಂದಿದ್ದೆ.

ಹೀಗಿದ್ದ ನನಗೆ ಈಗ ಒಂದು ವರ್ಷದಿಂದ ವಿಚಿತ್ರ ಕನಸುಗಳು ಬೀಳಲು ಪ್ರಾರಂಭವಾಗಿವೆ. ಇಂತಹ ಕನಸುಗಳಲ್ಲಿ ಮೊದಲನೆಯದು ನಾನು ಸ್ನಾತಕೋತ್ತರ ಪದವಿಗೆ ಓದುತ್ತಿರುವಾಗ ಬಿದ್ದುದು. ಮಾರ್ಚ್ ತಿಂಗಳು ಉಳಿದ ಎಲ್ಲಾ ವಿಷಯಗಳನ್ನೂ ಬದಿಗೊತ್ತಿ ಪರೀಕ್ಷೆಗೆ ಅಭ್ಯಾಸ ಮಾಡುತ್ತಿದ್ದೆ. ಒಂದು ರಾತ್ರಿ ಕನಸಿನಲ್ಲಿ ಯಾರೋ ಬಂದು, "ಎಲ್ಲರೂ ಕವಿತೆ ಬರೆಯುವುದು ಸಾಧ್ಯವೆ? ನೀನು ಬರೆಯುವ ಹಾಗೆ?" ಎಂದು ಕೇಳಿದರು. ನಾನು ಅರ್ಥವಾಗದೆ, "ನಾನು ಎರಡು ಸಾಲು ಕಾಗದ ಬರೆಯೋದೆ ಅಪರೂಪ. ಇನ್ನು ಕವಿತೆ ಬರೆಯುವುದು ನನಗೆಲ್ಲಿ ಸಾಧ್ಯ!" ಎಂದು ಕೇಳಿದೆ. ಅವರು ನಗುತ್ತ, "ಯಾಕೆ ಬರೆಯೋಲ್ಲ? ಅಲ್ಲಿ ನೋಡು. ಅದನ್ನು ನೋಡಿಕೊಂಡು ನಾಳೆ ಬರಿ," ಎಂದು ಆಜ್ಞಾಪಿಸಿ ಮಾಯವಾದರು. ನಾನು ಅತ್ತ ತಿರುಗಿ ನೋಡಿದೆ— ಒಂದು ಮಗು ಓಡಿ ಬರುತ್ತಿದೆ. ಅಷ್ಟರಲ್ಲೇ ಇನ್ನೊಂದು ಕಡೆಯಿಂದ ಬಂದ ಬಸ್ಸು ಮಗುವಿಗೆ ಢಿಕ್ಕಿ ಹೊಡೆಯಿತು. ನಾನು ಗಾಬರಿ-



ಯಾಗಲಿಲ್ಲ; ಮಗುವನ್ನು ರಕ್ಷಿಸಲೂ ಪ್ರಯತ್ನಿಸ-ಲಿಲ್ಲ. ಯಾವುದೋ ಶಕ್ತಿಯಿಂದ ಪ್ರೇರೇಪಿಸಲ್ಪಟ್ಟವಳಂತೆ ಏನೇನೋ ಸಾಲುಗಳನ್ನು ಬರೆದು-ಕೊಳ್ಳುತ್ತಿದ್ದೆ.

ಬೆಳಿಗ್ಗೆ ಎದ್ದಾಗ ನನಗೆ ಆಶ್ಚರ್ಯ. ಇದು ನಿಜವೇ ಎಂದು ಪರೀಕ್ಷಿಸಲು ಎದ್ದ ತಕ್ಷಣ ಪುಸ್ತಕ ಪೆನ್ನು ಹಿಡಿದು ಕುಳಿತೆ. ಯಾರೋ ಹೇಳುತ್ತಿರುವುದನ್ನು ಬರೆಯುವ ಹಾಗೆ ನನ್ನ ಲೇಖನಿ ಸರಾಗವಾಗಿ ಓಡುತ್ತಿದೆ. ಒಂದು ದಿನವೂ ಕವನಗಳನ್ನು ಓದಿಯೂ ಅಭ್ಯಾಸವಿಲ್ಲದ ನಾನು ಒಂದೇ ರಾತ್ರಿಯಲ್ಲಿ ಕವಯತ್ರಿಯಾಗಿದ್ದೆ. ಆದರೆ

**★ ಎಸ್. ಹೇಮಲತ ★**

ನನಗೆ ಇದು ವರವೋ ಶಾಪವೋ ತಿಳಿಯುತ್ತಿಲ್ಲ. ನನ್ನನ್ನು ಕವಿಯನ್ನಾಗಿ ಮಾಡುವುದು ಯಾವುದೋ ಅದ್ಭುತ ಶಕ್ತಿಯ ಅಭಿಲಾಷೆ-ಯಾಗಿದ್ದರೆ ಮೊದಲನೆಯ ಕವನಕ್ಕೆ ವಸ್ತುವಾಗಿ ಅಪಘಡವೊಂದನ್ನು ತೋರಿಸಬೇಕಾಗಿತ್ತೆ? ಮಗುವೊಂದು ಬಸ್ಸಿನಡಿಯಲ್ಲಿ ಸಿಕ್ಕಿ ಹಾಕಿ-ಕೊಂಡರೆ ಸ್ವಲ್ಪವೂ ಗಾಬರಿಯಾಗದಿರಲು ನಾನೇನು ನಿರ್ಜೀವ ವಸ್ತುವೆ? ಅಂತೂ ಅಲ್ಲಿಂದ ಮುಂದೆ ನಾನು ಅನೇಕ ಕೃತಿಗಳನ್ನು ರಚಿಸಿದ್ದರೂ ಈ ಕನಸು ಪ್ರಶ್ನೆಯಾಗಿಯೇ ಉಳಿದಿದೆ.

ಮನೆಯಲ್ಲಿ ನನ್ನ ಅಕ್ಕನ ಮದುವೆಗೆ ಪ್ರಯ-ತ್ನಿಸುತ್ತಿದ್ದರು. ಒಂದು ರಾತ್ರಿ ನನ್ನ ಕನಸಿನಲ್ಲಿ ಬೆಳ್ಳಗೆ, ಎತ್ತರವಾಗಿ ಮತ್ತು ತೆಳ್ಳಗಿದ್ದ ವೃದ್ಧ-ರೊಬ್ಬರು ತಾವೇ ಹುಡುಕಿಕೊಂಡು ಮನೆಗೆ ಬಂದರು. ನನ್ನ ಅಕ್ಕ ತಲೆಯನ್ನೂ ಬಾಚದೆ ಹಳೆಯ ಸೀರೆಯೊಂದನ್ನು ಉಟ್ಟು ಓಡಾಡು-



ತ್ತಿದ್ದಳು. ಅವರು ಬಂದವರೇ ಹುಡುಗಿಯ ಫೋಟೋ ಬೇಕೆಂದು ಕೇಳಿದರು. ಬೆಳಿಗ್ಗೆ ಎದ್ದಾಗ ಅಂತೂ ನನಗೂ ಮತ್ತೆ ಕನಸುಗಳು ಬೀಳುತ್ತಿವೆಯಲ್ಲ, ಎಂದು ಸಮಾಧಾನವಾಯಿತು. ಮನೆಯಲ್ಲಿ ಅನೇಕ ಬಾರಿ ಮದುವೆಯ ವಿಷಯ ಮಾತನಾಡುತ್ತಿರುವುದರಿಂದ ಹಾಗೆ ಕನಸು ಬೀಳುವುದು ಸಾಮಾನ್ಯವೆಂಬ ವೈಜ್ಞಾನಿಕ ವಿಶ್ಲೇಷಣೆಯನ್ನು ನಾನೇ ಮಾಡಿ ಸಂತೋಷಪಟ್ಟುಕೊಂಡೆ. ಕನಸಿನಲ್ಲಿ ಕಂಡಂಥ ವೃದ್ಧರು ಯಾರೂ ನನಗೆ ನೆನಪಿಗೆ ಬರಲಿಲ್ಲ. ನಾನು ಆ ಬಗ್ಗೆ ಯೋಚಿಸಲೂ ಇಲ್ಲ. ಕನ್ಯಾಪಿತೃಗಳೇ ಸಾವಿರ ಬಾರಿ ಬಾಗಿಲಿಗೆ ಅಲೆದರೂ ಲೆಕ್ಕಕ್ಕೆ ತೆಗೆದುಕೊಳ್ಳದ ವರನ ಮಾತಾಪಿತರು ಕನ್ಯೆಯ ಮನೆಯ ಬಾಗಿಲಿಗೆ ಬರುವುದು ಕನಸಿನಲ್ಲಿಯೇ ಎನ್ನುವುದು ನನಗೆ ತಿಳಿಯದ ವಿಷಯವೂ ಆಗಿರಲಿಲ್ಲ.

ಈ ಕನಸು ಬಿದ್ದು ಒಂದೆರಡು ದಿನ ಕಳೆದಿರಬಹುದು. ನಮ್ಮ ದೂರದ ಸಂಬಂಧಿಗಳೊಬ್ಬರು ನಮ್ಮ ಮನೆಗೆ ಬಂದರು. ಅವರನ್ನು ನೋಡಿದ ಕೂಡಲೇ ನನಗೆ ಕನಸಿನ ವ್ಯಕ್ತಿಯ ನೆನಪು ಬಂತು. ಸಂಶಯವೇ ಇರಲಿಲ್ಲ. ಕನಸಿನಲ್ಲಿಯಂತೆಯೇ ನನ್ನ ಅಕ್ಕ ತಲೆ ಬಾಚದೆ, ಹಳೆಯ ಸೀರೆಯೊಂದನ್ನುಟ್ಟು ಮನೆಗೆಲಸದಲ್ಲಿ ತೊಡಗಿದ್ದಳು. ಬಂದಿದ್ದವರು ಯೋಗಕ್ಷೇಮದ ನಂತರ, "ನಿಮ್ಮ ಹುಡುಗಿಯ ಫೋಟೋ ಒಂದು ಇದ್ದರೆ ಕೊಡುತ್ತೀರಾ?" ಎಂದು ಕೇಳಿದಾಗ ನಾನು ಚಕಿತಳಾದೆ. ಮುಂದೆ ನಡೆಯಬೇಕಾದ ವಿಷಯವೊಂದು ನನ್ನ ಮನಸ್ಸಿಗೆ ಮೊದಲೇ ಹೇಗೆ ಗೊತ್ತಾಯಿತು? ಎಂಬ ಪ್ರಶ್ನೆಗೆ ನನ್ನಲ್ಲಿ ಉತ್ತರವಿರಲಿಲ್ಲ. ಇದು ಮೊದಲ ಬಾರಿಯಾದ್ದರಿಂದ ಕಾಕತಾಳೀಯವಿರಬಹುದೆಂಬ ಸಮಾಧಾನ ಸಾಕಷ್ಟು ಉಪಯೋಗವಾಯಿತು.

ಪರೀಕ್ಷೆಯಲ್ಲಿ ಪಾಸಾಯಿತು. ಎಷ್ಟು ಪ್ರಯತ್ನ ಪಟ್ಟರೂ ಕೆಲಸ ಸಿಕ್ಕಲಿಲ್ಲ. ಆಗ ಒಂದು ದಿನ ಕನಸಿನಲ್ಲಿ ನಾನು ಯಾರದೋ ಮನೆಯ ಬಾಗಿಲಿನಲ್ಲಿ ಕಾಯುತ್ತ ಕುಳಿತಿದ್ದೆ. ಹೊರಗಿನಿಂದ ಹಾಲಿನವಳು ಬಂದು ಕೂಗಿದಳು. ಒಂದೆರಡು ನಿಮಿಷಗಳ ನಂತರ ವಿಧವೆ ಮುದುಕಿಯೊಬ್ಬರು ಹಿತ್ತಾಳೆಯ ಪಾತ್ರೆಯೊಂದನ್ನು ಹಿಡಿದು ಹೊರ ಬಂದರು. ಆ ಹಾಲಿನವಳ ಹತ್ತಿರ, "ನನ್ನ ಮೊಮ್ಮಗನಿಗೆ ಸೀತಾಳೆ ಎದ್ದುಬಿಟ್ಟಿದೆ ನಿಂಗಿ. ಸ್ವಲ್ಪ ಬೇವಿನಸೊಪ್ಪು ತಂದುಕೊಡುತ್ತೀಯಾ?" ಎಂದು ಕೇಳಿದರು. ಆಗ ಹಾಲಿನವಳು ಹಾಲನ್ನು ಸುರಿಯುತ್ತ, "ಮನೇಲಿ ಬಾಣಂತಿ ಬಿಟ್ಟು ಬಂದಿದೀನಿ ಕಣವ್ವ. ಕೆಲಸ ಐತೆ. ಈಗ ಆಗಾಕಿಲ್ಲ. ಸಂಜೆ ಖಂಡಿತ ತರ್ತೀನಿ," ಅಂತ ಹೇಳಿ ಹೋದಳು.

ಹಿಂದಿನೆರಡು ಕನಸುಗಳು ನನಗೆ ಸಂಬಂಧಿಸಿದಂತೆಯೇ ಇದ್ದವು. ಆದರೆ ಈ ಕನಸಿನ ವ್ಯಕ್ತಿಗಳು ಯಾರೆಂದು ಗುರುತು ಹಿಡಿಯುವುದು ನನಗೆ ಸಾಧ್ಯವಾಗಲಿಲ್ಲ. ಆದರೆ ಈ ಕನಸೂ ನಿಜವಾಗಬಹುದೆಂದು ನಾನು ಆಗ ಭಾವಿಸಿರಲಿಲ್ಲ. ಆದ್ದರಿಂದ ಅದರ ಬಗ್ಗೆ ನಾನು ಆಗ ಅಷ್ಟು ಯೋಚಿಸಿ ತಲೆ ಕೆಡಿಸಿಕೊಳ್ಳಲಿಲ್ಲ.

ಇದಾದ ಎಂಟು ದಿನಗಳ ನಂತರ ನಾನು ಕೆಲಸ ಸಿಗದೇ ಇದ್ದುದರಿಂದ ಮನೆಯಲ್ಲಿ ಕುಳಿತು ಬೇಸರವಾಗಿ ಸಂಸ್ಕೃತ ಪಾಠಶಾಲೆಯೊಂದನ್ನು ಸೇರಿದೆ. ಅಲ್ಲಿನ ಉಪಾಧ್ಯಾಯರು ಅವರ ಮನೆಯಲ್ಲಿಯೇ ತರಗತಿಗಳನ್ನು ನಡೆಸುತ್ತಿದ್ದರು. ಒಂದು ದಿನ ನಾನು ಅಲ್ಲಿಗೆ ಹೋದಾಗ ತರಗತಿ ಇನ್ನೂ ಪ್ರಾರಂಭವಾಗಿರಲಿಲ್ಲ. ನಾನು ಬಾಗಿಲಿನಲ್ಲಿಯೇ ಕಾಯುತ್ತ ಕುಳಿತೆ. ಆಗ ಹೊರಗಿನಿಂದ ಹಾಲಿನವಳು ಬಂದಳು. ನನ್ನ ಕನಸು ಮತ್ತೆ ಪುನರಾವರ್ತನಗೊಳ್ಳುತ್ತಿದೆಯೋ ಎಂದು ನನಗೇ ಸಂಶಯವಾಯಿತು. ಸಂಭಾಷಣೆಗಳಲ್ಲಂತೂ ಸ್ವಲ್ಪವೂ ವ್ಯತ್ಯಾಸವಿರಲಿಲ್ಲ. ಹಿಂದಿನ ಎರಡು ಸಂದರ್ಭಗಳಲ್ಲಿ ವ್ಯಕ್ತಿಗಳು ಕನಸಿನಂತೆಯೇ ಇದ್ದರೂ ಸಂಭಾಷಣೆಗಳಲ್ಲಿ ಸ್ವಲ್ಪ ಬದಲಾವಣೆ ಇತ್ತು. ಅಲ್ಲದೆ ಸುತ್ತಲಿನ ಪರಿಸರದಲ್ಲೂ ಸ್ವಲ್ಪ ವ್ಯತ್ಯಾಸವಿತ್ತು. ಈ ಘಟನೆ ತೀರ ವಿಚಿತ್ರವಾಗಿತ್ತು. ಇದಕ್ಕೆ ಸಂಬಂಧಿಸಿದ ಒಬ್ಬ

ವ್ಯಕ್ತಿಯೂ ನನಗೆ ಕನಸು ಬೀಳುವ ಹೊತ್ತಿಗೆ ಪರಿಚಯವಿರಲಿಲ್ಲ. ಯಾವುದೋ ಸಂಬಂಧವಿಲ್ಲದ ವ್ಯಕ್ತಿಗಳಲ್ಲಿ ಮುಂದೆ ನಡೆಯುವ ಸಂಭಾಷಣೆ ನನಗೆ ಮೊದಲೇ ತಿಳಿದ ಬಗೆಯಾದರೂ ಹೇಗೆ ?

ಮತ್ತೆ ನಿಜವಾದ ನನ್ನ ನಾಲ್ಕನೇ ಕನಸು ಈ ಮೇಲಿನ ಸಂದರ್ಭವಾದ ಸುಮಾರು ಒಂದು ತಿಂಗಳ ನಂತರ ಕಂಡದ್ದು. ಈ ಕನಸಿನ ಪ್ರಕಾರ ನಾನು ಒಂದು ದೊಡ್ಡ ಭವನದಲ್ಲಿ ನಿಂತಿದ್ದೇನೆ. ಆ ಭವನ ಯಾವುದೆಂದು ಗೊತ್ತಾಗುತ್ತಿಲ್ಲ. ಅಲ್ಲಿ ಮತ್ತೊಬ್ಬ ಹೆಂಗಸು ನನ್ನನ್ನು ಸುಮ್ಮನೆ ಬೈಯುತ್ತಿದ್ದಾಳೆ. ಆ ದೊಡ್ಡ ಭವನದಲ್ಲಿ ನಾವಿಬ್ಬರಲ್ಲದೆ ಮತ್ತಾರೂ ಇಲ್ಲ. ನಾನು ಉತ್ತರಿಸಲೂ ಸಾಧ್ಯವಾಗದೆ ಮೌನವಾಗಿ ನಿಂತು ಆ ಹೆಂಗಸನ್ನೇ ನೋಡುತ್ತಿದ್ದೇನೆ. ಎಚ್ಚರವಾದ ನಂತರ ಎಷ್ಟು ಯೋಚಿಸಿದರೂ ಅಷ್ಟು ದೊಡ್ಡ ಕಟ್ಟಡಗಳಾವುವೂ ನನ್ನ ಮನಸ್ಸಿಗೆ ಹೊಳೆಯಲಿಲ್ಲ.

ಕೆಲವು ದಿನಗಳ ನಂತರ ಅದೇ ಊರಿನಲ್ಲಿದ್ದ ಕಾಲೇಜೊಂದರಲ್ಲಿ ಒಬ್ಬ ಲೆಕ್ಚರರ್ ಬಿಟ್ಟು ಹೊರಟುಹೋದರು. ಆಗ ಅಲ್ಲಿನ ಪ್ರಿನ್ಸಿಪಾಲ್ ನನಗೆ ಫೋನ್ ಮಾಡಿ ಕೆಲವು ದಿನಗಳ ಕಾಲ ಅಲ್ಲಿ ಕೆಲಸ ಮಾಡಬೇಕೆಂದು ಕೇಳಿಕೊಂಡರು. ನನಗೂ ಬೇರೆ ಕೆಲಸ ಸಿಕ್ಕದ್ದರಿಂದ ಆಗಲೆಂದು ಒಪ್ಪಿಕೊಂಡೆ. ಆದರೆ ಹಿಂದಿನವರು ಆ ಸ್ಥಾನದಲ್ಲಿ ಮಾಡಬೇಕಾದ ಕೆಲಸ ಬಹಳ ಉಳಿಸಿದ್ದರು. ಅಷ್ಟನ್ನು ನಾನು ಎರಡು ತಿಂಗಳಲ್ಲಿ ಮುಗಿಸಬೇಕಿತ್ತು. ಎಷ್ಟು ಪ್ರಯತ್ನ ಮಾಡಿದರೂ ನಾನು ಭಾವಿಸಿದ್ದಷ್ಟು ಚೆನ್ನಾಗಿ ಪಾಠ ಮಾಡಲು ಸಾಧ್ಯವಾಗಲಿಲ್ಲ. ಅಲ್ಲದೆ ನನಗೂ ಮೊದಲ ಅನುಭವ.

ಆದರೆ ಆ ಕಟ್ಟಡವನ್ನು ನೋಡಿದಾಗ ಅದು ನನ್ನ ಕನಸಿನಲ್ಲಿ ಕಂಡ ಕಟ್ಟಡವೇನೋ ಎನಿಸುತ್ತಿತ್ತು. ಆ ಕಟ್ಟಡಕ್ಕೆ ನಾನು ಬರುವಂತೆ ಆಗಿದ್ದರಿಂದ ಕನಸಿನ ಪೂರ್ವಾರ್ಧ ನಿಜವಾದಂತೆ ಎನಿಸುತ್ತಿತ್ತು. ಅಲ್ಲಿನ ಪ್ರಿನ್ಸಿಪಾಲರೂ ಹೆಂಗಸಾದ್ದರಿಂದ ಒಮ್ಮೊಮ್ಮೆ ಉತ್ತರಾರ್ಧವೂ ನಿಜವಾಗಿಬಿಡುತ್ತದೇನೋ ಎಂದು ಭಯವಾಗುತ್ತಿತ್ತು.

ಆ ಕಾಲೇಜು ಊರಿನ ಹೊರಗಡೆ ಇದ್ದುದರಿಂದ ಅಲ್ಲಿಗೆ ಇದ್ದುದು ಒಂದೇ ಬಸ್ಸು. ಆ ಬಸ್ಸು ಹೊರಟುಹೋದರೆ ಸುಮಾರು ಅರ್ಧ ಮೈಲಿ ದೂರ ನಡೆದು ಬೇರೆ ಬಸ್ಸು ಹತ್ತಬೇಕಾಗಿತ್ತು. ಒಂದು ದಿನ ಯಾವುದೋ ಪ್ರಯೋಗವನ್ನು ಪರಿಶೀಲಿಸುತ್ತಿದ್ದ ನನಗೆ ಬಸ್ಸು ಹೋದದ್ದು ತಿಳಿಯಲೇ ಇಲ್ಲ. ಇನ್ನೇನು ಮಾಡುವುದೆಂದು ಬಾಗಿಲು ಬೇಗ ಹಾಕಿ ನಡೆದುಕೊಂಡು ಹೊರಟೆ ಅಷ್ಟರಲ್ಲಿಯೇ ಪ್ರಿನ್ಸಿಪಾಲ್ ನನ್ನನ್ನು ಕೂಗಿ, "ಹುಡುಗಿಯರಿಗೆ ಅರ್ಥವಾಗುತ್ತಿಲ್ಲ. ಸಾಕಷ್ಟು ಪಾಠ ಮಾಡಿಲ್ಲ. ನೋಟ್ಸ್ ಕೊಡುತ್ತಿಲ್ಲ," ಮುಂತಾಗಿ ನನ್ನ ಮೇಲೆ ಆಕ್ಷೇಪಗಳ ಮಳೆಯನ್ನೇ ಕರೆದರು. ನಿಜ, ಅದೇ ದೊಡ್ಡ ಭವನ. ಅದರಲ್ಲಿ ನಾವಿಬ್ಬರೇ ಇರುವುದು. ಅಷ್ಟು ದಿನ ನನ್ನ ಆರೋಗ್ಯವನ್ನು ಅಲಕ್ಷಿಸಿ ಶ್ರಮಿಸಿದ್ದು ಈ ತೆಗಳಿಕೆಯ ಬಳುವಳಿಯನ್ನು ಪಡೆಯುವುದಕ್ಕೇನೆ? ನನ್ನ ಕನಸನ್ನು ಮೊದಲೇ ವಿಶ್ಲೇಷಿಸಿದ್ದರೆ ಇದನ್ನು ತಪ್ಪಿಸಲು ಸಾಧ್ಯವಿತ್ತೆ?

ಅನಂತರ ಮತ್ತೆ ಬೇರೆ ಕೆಲಸ ಹುಡುಕಲು ಪ್ರಯತ್ನಿಸಿದೆ. ಆಗೊಂದು ದಿನ ಕನಸಿನಲ್ಲಿ ನಾನು ರೂಮೊಂದರಲ್ಲಿ ಒಂಟಿಯಾಗಿ ಕುಳಿತಿದ್ದೇನೆ. ಸುಮಾರು ನನ್ನದೇ ವಯಸ್ಸಿನ ಆದರೆ ಬಣ್ಣದಲ್ಲಿ ಕಪ್ಪಾದ ಯುವತಿಯೊಬ್ಬಳು ನನ್ನ ರೂಮಿನ ಬಾಗಿಲನ್ನು ಬಡಿಯುತ್ತಾಳೆ. ನಾನು ಎದ್ದು ಬಾಗಿಲು ತೆರೆಯುತ್ತೇನೆ ಆಕೆ ಬಾಗಿಲಲ್ಲಿಯೇ ನಿಂತು ಮಾತನಾಡಲು ಪ್ರಾರಂಭಿಸುತ್ತಾಳೆ. ಸ್ವಲ್ಪ ಹೊತ್ತಿನ ನಂತರ ಒಳಗೆ ಬಂದು ಕುಳಿತುಕೊಳ್ಳುತ್ತಾಳೆ. ಸ್ವಲ್ಪ ಹೊತ್ತಿನ ನಂತರ ಮತ್ತೆ ಬಾಗಿಲು ತಟ್ಟಿದ ಶಬ್ದವಾಗುತ್ತದೆ. ಒಬ್ಬ ಯುವಕ ಬಂದು ಆಕೆಯನ್ನು ಏನೋ ಕೆಲಸ ಮಾಡಲು ಹೇಳುತ್ತಾನೆ. ಆಕೆ ಕೂಡಲೇ ಒರಟಾಗಿ, "ನನಗೆ ಈಗಲೇ ಸಾಕಷ್ಟು ಕೆಲಸವಿದೆ. ನನ್ನಿಂದ ಸಾಧ್ಯವಿಲ್ಲ. ಬೇರೆ ಯಾರಿಗಾದರೂ ಹೇಳಿ," ಎಂದು

ಹೇಳುತ್ತಾಳೆ. ಕೂಡಲೇ ಆ ಯುವಕ ಹೊರಟು-ಹೋಗುತ್ತಾನೆ.

ಈ ಕನಸು ನಿಜವಾದುದು ಮತ್ತೊಂದು ಕಾಲೇಜಿನಲ್ಲಿ ನಾನು ಕೆಲಸಕ್ಕೆ ಸೇರಿದಾಗ. ಕಾಲೇಜಿನ ಹಾಸ್ಟೆಲಿನಲ್ಲಿ ಒಂದು ಸಂಜೆ ಕ್ಲಾಸ್ ಮುಗಿಸಿಕೊಂಡು ಬಂದು ನಾನೊಬ್ಬಳೇ ಕುಳಿತಿದ್ದೆ. ಮೇಲಿನ ಘಟನೆ ಚಾಚೂ ತಪ್ಪದೆ ಸಂಭವಿಸಿತು. ಇಲ್ಲಿ ಕೂಡ ಈ ವ್ಯಕ್ತಿಗಳು ನನಗೆ ಕನಸು ಬೀಳುವ ಕಾಲದಲ್ಲಿ ಅಪರಿಚಿತರಾಗಿಯೇ ಇದ್ದರು. ಅಲ್ಲದೆ ಘಟನೆಯಲ್ಲಿ ನನ್ನ ಪಾತ್ರ ಬಹಳ ಕಡಿಮೆ. ಹೀಗೇಕಾಗುತ್ತಿದೆಯೆಂಬುದಕ್ಕೆ ನನ್ನಲ್ಲಿ ಉತ್ತರವೇ ಇಲ್ಲ.

ಈ ಘಟನೆ ನಡೆದ ರಾತ್ರಿಯ ಕನಸಿನಲ್ಲಿ ನಾನು ರೈಲಿನಲ್ಲಿ ಕುಳಿತಿದ್ದೇನೆ. ಪಕ್ಕದಲ್ಲಿ ಕುಳಿತಿದ್ದವರು, "ಈ ಪ್ರಯಾಣ ಸಾಕಾಗಿಹೋಗಿದೆ," ಎಂದು ಉದ್ಗರಿಸುತ್ತಾರೆ. ನಾನು ಸುಮ್ಮನೆ ನಗುತ್ತೇನೆ. ಅಷ್ಟರಲ್ಲಿ ರೈಲು ನಿಲ್ಲುತ್ತದೆ. ನಾವಿಬ್ಬರೂ ಇಳಿದು ಕಂಬಿಗಳನ್ನು ದಾಟಿಕೊಂಡು ಎಲ್ಲಿಗೋ ಹೋಗುತ್ತೇವೆ.

ಈ ಕನಸೂ ಎಂಟೇ ದಿನಗಳಲ್ಲಿ ನಿಜವಾಯಿತು. ನನಗೆ ಇದ್ದಕ್ಕಿದ್ದ ಹಾಗೆ ಬೇರೆ ಊರಿನ ಕಾಲೇಜಿನಲ್ಲಿ ಒಳ್ಳೆಯ ಕೆಲಸ ಸಿಕ್ಕಿದ್ದರಿಂದ ಮೊದಲಿನ ಕೆಲಸವನ್ನು ಬಿಟ್ಟು ಇಲ್ಲಿಗೆ ಬಂದು ಸೇರಿದೆ. ಆ ಊರಲ್ಲಿ ವಾಸಕ್ಕೆ ಅನುಕೂಲ ಸಿಗದೆ ಇದ್ದುದರಿಂದ ಪ್ರತಿ ದಿನ ರೈಲಿನಲ್ಲಿ ಪ್ರಯಾಣ ಮಾಡಲು ಪ್ರಾರಂಭಿಸಿದೆ. ಆ ಊರಲ್ಲಿ ಪ್ರತಿದಿನ ಕಂಬಿಗಳನ್ನು ದಾಟಿಕೊಂಡೇ ಕಾಲೇಜಿಗೆ ಹೋಗಬೇಕು. ಅಲ್ಲದೆ "ಬೇಜಾರು" ಎಂಬ ಜೊತೆಯವರ ಪ್ರಲಾಪವೂ ಸಾಮಾನ್ಯ.

ಈ ಘಟನೆ ನನ್ನ ಇತ್ತೀಚಿನ ಅನುಭವ, ನನಗೆ ಬೀಳುವ ದೊಡ್ಡ ದೊಡ್ಡ ಪರಿಣಾಮವನ್ನುಂಟು ಮಾಡುವ ಕನಸುಗಳೇ ನಿಜವಾಗುತ್ತವೆಂದೂ ಹೇಳುವಹಾಗಿಲ್ಲ. ನಮ್ಮ ಮನೆಯ ಹಾಗಲಕಾಯಿಯ ಗಿಡದಲ್ಲಿ ಸುಮ್ಮನೆ ಹೂಗಳೆಲ್ಲ ಉದುರಿಹೋಗುತ್ತಿದ್ದವು. ಒಂದು ದಿನ ನನ್ನ ಕನಸಿನಲ್ಲಿ ಅದರಲ್ಲಿ ಮೂರು ಕಾಯಿಗಳು ಬಿಟ್ಟಿದ್ದಂತೆ ಕಾಣಿಸಿತು. ಮಾರನೆ ಬೆಳಿಗ್ಗೆ ಪರೀಕ್ಷಿಸಿದಾಗ ನನ್ನ ಕನಸು ನಿಜವಾಗಿತ್ತು. ಗಿಡದಲ್ಲಿ ಮೂರು ಹಾಗಲಕಾಯಿ ಹೀಚುಗಳಿದ್ದವು. ಹೀಗೆ ಇನ್ನೂ ಎಷ್ಟೋ ಸಲ ನಡೆದದ್ದುಂಟು. ಆದರೆ ಬಿದ್ದ ಎಲ್ಲಾ ಕನಸುಗಳು ನಿಜವಾಗುತ್ತದೆಂದೂ ಹೇಳುವಹಾಗಿಲ್ಲ. ಎಷ್ಟೋ ಕನಸುಗಳು ನಿಜವಾಗಿಲ್ಲ. ಅಲ್ಲದೆ ಅವುಗಳಲ್ಲಿ ಯಾವ ಕ್ರಮವಾಗಲೀ, ನಿಯಮವಾಗಲೀ ಇಲ್ಲ ಕೆಲವು ಸಲ ಅವು ಬಹಳ ದಿನಗಳ ನಂತರ ನಿಜವಾಗುವವು. ಅಲ್ಲದೆ ರಾತ್ರಿಯ ಇಂತಹುದೇ ಕಾಲದಲ್ಲಿ ಕಾಣಿಸಿದ ಕನಸುಗಳೇ ನಿಜವಾಗುತ್ತವೆಂದೂ ಹೇಳುವಹಾಗಿಲ್ಲ ಈಗಿನ್ನು ನಾನು ಯಾವ ಕನಸುಗಳು ನಿಜವಾಗುತ್ತವೆಂಬುದನ್ನು ಪರೀಕ್ಷಿಸಲು ಅವುಗಳನ್ನು ಬರೆದಿಡುವ ಅಭ್ಯಾಸ ಮಾಡಿಕೊಂಡಿದ್ದೇನೆ. ಅವುಗಳೆಲ್ಲ ಹೆಚ್ಚು ಸುಂದರವಾದ ಸಾಹಿತ್ಯವನ್ನು ಸೃಷ್ಟಿಸಿವೆಯೇ ಹೊರತು ಹೆಚ್ಚು ಉಪಯೋಗವಾಗಿಲ್ಲ. ಈ ವಿಚಿತ್ರ ಸಮಸ್ಯೆಗೆ ಮನೋವಿಜ್ಞಾನ ಉತ್ತರಿಸಬಲ್ಲದೆ? ▲

ಅಶ್ಲೀಲ ಪದಗಳನ್ನು ತನ್ನ ನಿಘಂಟಿನಲ್ಲಿ ಸೇರಿಸಿದುದಕ್ಕೆ ನಿಘಂಟುಕಾರ ಡಾಕ್ಟರ್ ಜಾನ್‌ಸನ್ನನನ್ನು ಒಬ್ಬ ಹೆಂಗಸು ತರಾಟೆಗೆ ತೆಗೆದುಕೊಂಡಳು. ಡಾ. ಜಾನ್‌ಸನ್ ಕೇಳಿದ:

"ಆ ಅಶ್ಲೀಲ ಪದಗಳು ನನ್ನ ನಿಘಂಟಿನಲ್ಲಿವೆ ಎಂಬುದನ್ನು ಪತ್ತೆ ಹಚ್ಚಲು ಅವನ್ನು ನೀವು ಬೇಕೆಂದೇ ಹುಡುಕುತ್ತಿದ್ದಿರಿ ಅಲ್ವೇನಮ್ಮ!" (ಸಂ.) ಎಸ್. ವಿಶ್ವನಾಥ

# ಅಕ್ಕೀಕ್ಕಾಳು ಇತ್ಯಾದಿ

● ವತ್ಸಲಾ ಮೋರೆ

"ಏನ್ರೀ, ಕನ್ನಡ ತಿಳಿತೈತೇನ್ರೀ??" ಎಂದು ಸಂದೇಹವಾಗಿ ನನ್ನ ಮುಖ ನೋಡಿದ್ಲು ನಮ್ಮ ಮನೆಗೆ ಹಾಲು ಕೊಡುವವಳು. ಆದೇ ತಾನೇ ನಮ್ಮ ಯಜಮಾನರಿಗೆ ಹುಬ್ಬಳ್ಳಿಗೆ ವರ್ಗವಾಗಿ ಬಂದಿದ್ವಿ. "ನಾವೂ ಕನ್ನಡದವರೇಮ್ಮ. ಬೆಂಗಳೂರಿಂದ ಬಂದಿದ್ದೇವೆ. ಕನ್ನಡ ಚೆನ್ನಾಗಿಯೇ ತಿಳಿಯುತ್ತಮ್ಮ" ಎಂದು ಹೆಮ್ಮೆಯಿಂದಲೇ, ಹೇಳಿದೆ. ಅವಳು ಆದೇಕೋ ಮುಖ ಕಸಿವಿಸಿ ಮಾಡಿಕೊಂಡಂತೆ ಕಾಣ್ತು (ಆಮೇಲೆ ತಿಳಿಯಿತು. 'ಅಮ್ಮಾ' ಅನ್ನುವ ಸಂಬೋಧನೆ, ತಪ್ಪಾಯ್ತೆಂದು). ಹುಬ್ಬಳ್ಳಿಗೆ ಬಂದು ಇನ್ನೂ ಎರಡು ದಿನವೇ ಆಗಿತ್ತು. ನಾನು ಅವಳನ್ನು ಹೆಚ್ಚಾಗಿ ಗಮನಿಸಲು ಅವಕಾಶವಿರಲಿಲ್ಲವೆನ್ನಿ. ಕಾರಣ ಕೈ ತುಂಬಾ ಕೆಲಸ ಕಾದಿತ್ತು.

ಮನೆಯಿಂದ ಕಾಲು ಹೊರಗೆ ಹಾಕಿದ ಕೂಡಲೇ, ನನ್ನ ಪೇಚಾಟ ಶುರುವಾಯ್ತು. ಮೊಟ್ಟ ಮೊದಲನೇ ಪ್ರಶ್ನೆ "ನಿಮ್ಮ ಅಡ್ಡ ಹೆಸರೇನ್ರೀ?" ಎಂದು, ಮಾರ್ಕೆಟ್ ಬಸ್ಸಿನಲ್ಲಿ ಪರಿಚಯವಾದ ಕಾಲೇಜು ಹುಡುಗಿ ಕೇಳಿದಳು. "ಅಡ್ರೆಸ್, 44/A....ನಗರ" ಎಂದೆ. ಬಸ್ಸಿನಲ್ಲಿ, ಅಕ್ಕ—ಪಕ್ಕದಲ್ಲಿ ಕುಳಿತವರು, ಬಾಯಿ ಮುಚ್ಚಿ ನಕ್ಕಂತಾಯ್ತು. "ಅಲ್ರಿ, ನಿಮ್ಮ ಅಡ್ಡ ಹೆಸರೇನ್ರೀ?" ಎಂದು ಮತ್ತೆ ಕೇಳಿದಳು ಆ ಹುಡುಗಿ. "ಅದೇ, ನಾವು ನಗರದಲ್ಲಿದ್ದೇವೆ" ಎಂದೆ ಮತ್ತೆ. "ಅಲ್ಲ, ನಿಮ್ಮ ವಿಳಾಸವಲ್ಲ, ನಿಮ್ಮ ಅಡ್ಡ ಹೆಸರು, ನಾನು ಕೇಳಿದ್ದು" ಎಂದಳು ಮತ್ತೆ. "ಆ! ಅಡ್ಡ ಹೆಸರು!" ಎಂದು ತಬ್ಬಿಬ್ಬಾದೆ. "ಅಡ್ಡ ಹೆಸರು, ಉದ್ದ ಹೆಸರು ನನಗೇನೋ ತಿಳಿಯೋದಿಲ್ಲ" ಎಂದೆ. ಕೂಡಲೇ ನನ್ನ ಪೆಚ್ಚುಮೋರೆಯನ್ನು ನೋಡಿ. ಮಧ್ಯದಲ್ಲಿ ಮತ್ಯಾರೋ ಬಾಯಿ ಹಾಕಿ, "Your surname" ಎಂದು ವಿವರಿಸಿದರು. ಓಹೋ! ಆಗ ತಿಳಿಯಿತು ಈ ಅಡ್ಡ ಹೆಸರಿನ ಅವಾಂತರ. ಆ ಮೇಲೆ ಕಂಡಕಂಡವರೆಲ್ಲಾ "ನಿಮ್ಮ ಅಡ್ಡ ಹೆಸರೇನ್ರಿ?" ಎಂದು ಕೇಳಲು ಸುರುವಾಯ್ತು. "ಅಡ್ಡ ಹೆಸರಿಲ್ರೀ" ಎಂದು ಹೇಳಿ ಹೇಳಿ ನನಗೆ ತುಂಬಾ ಬೇಸರವೆನಿಸಿತು. ನಾನು ಒಂದು ಅಡ್ಡ ಹೆಸರೋ ಉದ್ದ ಹೆಸರೋ ಹಚ್ಚಿಕೊಂಡು ಬಿಡೋದು ಒಳ್ಳೇದು ಎನಿಸಿತು. ಹುಬ್ಬಳ್ಳಿಗೆ ಬಂದ ಒಂದೆರಡು ತಿಂಗಳೊಳಗೆ, ನಮ್ಮಪ್ಪ-ಅಮ್ಮ ಇಟ್ಟಿದ್ದ 'ರೂಪಾ' ಅನ್ನೋ ಹೆಸರನ್ನ ಹೇಳೋದು ಬಿಟ್ಟು (ಎಷ್ಟು ಆಲೋಚಿಸಿ ಆರಿಸಿದ್ದರೋ ಪಾಪ, ಆ ಹೆಸರನ್ನ!) "ಪಳ್ಳೀಕರ್" ಎಂದು ನಮ್ಮ ಕುಟುಂಬಕ್ಕೇ ಹೆಸರಿಟ್ಟುಕೊಂಡೆವು. (ನಮ್ಮವರು ಆವುದೋ 'ಹಳ್ಳಿ'ಯಲ್ಲಿ ಹುಟ್ಟಿದ್ದರಂತೆ )

ಮಕ್ಕಳಿರೋ ಮನೇಲಿ ಮೊದಲು ಬೇಕಾಗುವುದು ಡಾಕ್ಟರ ಸಹಾಯ. ನನ್ನ ಮಗಳು ವೀಣಾಗೆ ತುಂಬಾ ಜ್ವರ ಕಾಯುತ್ತಿತ್ತು. ನಮ್ಮ

ಯಜಮಾನ್ರು ಅವರ "ಸಾಹೇಬ್ರು" ಅರ್ಜೆಂಟು ಬರಹೇಳಿದರೆಂದು, ಆಫೀಸಿಗೆ ಹೊರಟು ನಿಂತಿದ್ರು. "ಮುಂದಿನ ರಸ್ತೇಲಿ ಡಾ. ಸಣ್ಣಕ್ಕಿ ಎಂದು ಬೋರ್ಡಿದೆ ನೋಡು, ಅವರ ಹತ್ತಿರ ಹೋಗಿ consult ಮಾಡು" ಎಂದು ಹೇಳಿ ಹೊರಟರು. ನಾನೂ ಅವಸರ ಅವಸರವಾಗಿ, ಡಾಕ್ಟರರ ಮನೆ ಹುಡುಕಿಕೊಂಡು ಹೊರಟೆ. ಅಕ್ಕಿ- ಬೇಳೆ- ತೆಂಗಿನಕಾಯಿ-ಅಡಿಕೆ- ದೊಡ್ಡ ಮನೆ-ಸಣ್ಣಮನೆ ಎಲ್ಲಾ ಹೆಸರಿನ ಬೋರ್ಡಿನ ಪರಿಚಯ ಈಗಾಗಲೇ ಸಾಕಷ್ಟು ಆಗಿತ್ತು. 'ಡಾ. ಸಣ್ಣಕ್ಕಿ' ಬೋರ್ಡಿನ ಮನೆಯೂ ಕಣ್ಣಿಗೆ ಬಿತ್ತು. ಮುಂದಿನ ಬಾಗಿಲಿನ ಬಳಿ ಹೋಗಿ ನಿಂತ ಕೂಡಲೇ "ಡಾಕ್ಟರ್ ಇದ್ದಾರೆಯೇ?" ಎಂದೆ.

"ಬನ್ನಿ, ಕೂಡ್ರಿ. ಇಲ್ಲೇ ಅಕ್ಕೀಕಾಳು ಹಾಕಿ ಬರಲು ಹೋಗ್ಯಾರ, ಈಗ ಬರ್ತಾರ" ಎಂದು ಹೇಳಿ ಒಳಗೆ ಹೋದಳು, ಡಾಕ್ಟರ ಮನೆಯ ಕೆಲಸದವಳು.

ಬೆಳಗ್ಗೆ ಎದ್ದ ಕೂಡಲೇ ಈ ಮಾತು ಕೇಳಬೇಕಾಯ್ತಲ್ಲಾ ಎನ್ನಿಸಿತು. ಅರ್ಧ ಗಂಟೆಯಲ್ಲೇ ಡಾಕ್ಟರರು ಬಂದರು. (ನಾನೆಣಿಸಿದಂತೆ ಸಣ್ಣ



ಅಕ್ಕಿ ಅಲ್ಲ, ದಪ್ಪ ಅಕ್ಕಿಯಂತೇ ಇದ್ದರು!) ನಮಸ್ಕಾರ-ಪ್ರತಿ ನಮಸ್ಕಾರವಾಯ್ತು.

"ಅಕ್ಕೀಕಾಳು ಹಾಕಿ ಬರಲಿಕ್ಕೆ ಹೋಗಿದ್ದೆ, ಸ್ವಲ್ಪ ತಡವಾಯ್ತು" ಎಂದ್ರು ಡಾಕ್ಟರು. ಕೂಡಲೇನಾನು ಕುತೂಹಲವಾಗಿ, "ತುಂಬಾ ವಯಸ್ಸಾಗಿತ್ತೇ ಡಾಕ್ಟರೇ" ಎಂದೆ.

"ಇಲ್ಲ ಇಲ್ಲ. ಇಬ್ಬರೂ ಇನ್ನೂ ಚಿಕ್ಕ ವಯಸ್ಸಿನವರೇ" ಎಂದ್ರು. ನಾನೆಣಿಸಿದಂತೆ ಒಂದು ಸಾವಲ್ಲ, ಎರಡು ಸಾವು. ಛೇ! ಎಂತಹ ಅನ್ಯಾಯ ಎನ್ನಿಸಿತು. ತಟ್ಟನೇ "ಇಬ್ರು ಚಿಕ್ಕವರು ಎಂದ್ರೆ ಆತ್ಮಹತ್ಯವೇ ಅಥವಾ accident case ಏ ಡಾಕ್ಟರೇ?" ಎಂದು ಕೇಳಿಯೇಬಿಟ್ಟೆ. ಡಾಕ್ಟರು ಒಂದೈದು ನಿಮಿಷ ಮಾತನಾಡಲೇ ಇಲ್ಲ. ನನ್ನ ಮುಖವನ್ನೇ ನೋಡುತ್ತಾ, "ನೀವು ಏನು, ಕೇಳ್ತಿದ್ದೀರಿ? ನಾನು ಲಗ್ನಕ್ಕೆ ಹೋಗಿದ್ದೆ, ಅಕ್ಕೀಕಾಳು ಹಾಕಿ ಬರಲಿಕ್ಕೆ" ಎಂದ್ರು.

"ಓ! ಅಕ್ಷತೆ ಹಾಕಲಿಕ್ಕೆ ಹೋಗಿದ್ರಾ? Sorry, doctor, ನಮ್ಮಲ್ಲಿ ಅಕ್ಕೀಕಾಳು ಹಾಕೋದು ಎಂದ್ರೆ ಕೆಟ್ಟದ್ದು. ಅಂದ್ರೆ ಶವಸಂಸ್ಕಾರದ ಒಂದು ಪದ್ಧತಿ" ಎಂದಾಗ ಡಾಕ್ಟರು ಹೊಟ್ಟೆ ಹುಣ್ಣಾಗುವಷ್ಟು ನಕ್ಕರು. ಶುಭಕಾರ್ಯದಲ್ಲಿ "ಅಕ್ಷತೆ" (ಬಣ್ಣದ ಅಕ್ಕಿ) ಎನಿಸುವುದು, ಅಶುಭದಲ್ಲಿ ಅಕ್ಕೀಕಾಳು ಎನಿಸುವುದು. ಎಷ್ಟು ಅಜಗಜಾಂತರದ ಅರ್ಥ!

ನಮ್ಮ ಪಕ್ಕದ ಮನೇಲಿ ದೊಡ್ಡ ಸಂಸಾರ, ಮನೆ 'ನಂದಗೋಕುಲ'ದಂತಿತ್ತು. ದಿನಾ ಬೆಳಿಗ್ಗೆ ೮ ರಿಂದ ೧೦ ರ ವರೆವಿಗೆ 'ದಬ-ದಬ-ದಬ' ಎಂದು ಶಬ್ದ ಕೇಳಿಸುತ್ತಿತ್ತು. ಮಕ್ಕಳೂ ಗುಂಡು ಗುಂಡಾಗಿ ಮೈ ತುಂಬಿಕೊಂಡಿದ್ದು ನೋಡಿ, ನಮ್ಮ ಮಕ್ಕಳು ನರಪೇತಲನಾರಾಯಣ ಎನ್ನುವಂತಿರುವರಲ್ಲಾ ಎನ್ನಿಸುತ್ತಿತ್ತು. ನಾವು ಬಂದು ನಾಲ್ಕೈದು ತಿಂಗಳಾಯ್ತು. ಪ್ರತಿ ದಿನವೂ ಬೆಳಿಗ್ಗೆ ಅದೇ 'ದಬ-ದಬ' ಶಬ್ದ ಕೇಳಿಸುತ್ತಿತ್ತು. ನಾನೂ ತುಂಬಾ ಗಮನವಿಟ್ಟು ಕೇಳುತ್ತಿದ್ದೆ. ಆ ಶಬ್ದವನ್ನು ಚೆನ್ನಾಗಿಯೇ ಆಲಿಸಿದೆ. ಓ, ಈಗ

ತಿಳಿಯಿತು. ಉಷ್ಣದೇಶ, ನಿತ್ಯ ಮಕ್ಕಳಿಗೆ ಚೆನ್ನಾಗಿ ಎಣ್ಣೆ ಒತ್ತಿ, ತಟ್ಟಿಕುಟ್ಟಿ ದಬದಬ ಎರೆಯುವರು. ಅದಕ್ಕೇ ಮಕ್ಕಳು ಮೈ ತುಂಬಿಕೊಂಡಿದ್ದಾರೆ ಎನ್ನಿಸಿತು. ನೀರಿಗೋ ಮೊದಲೇ ತೊಂದರೆ! ಇರಲಿ 'ನಮ್ಮ ಮಕ್ಕಳೂ ಚೆನ್ನಾಗಿ ಆದ್ರೆ ಸಾಕು' ಎಂದು, ನಾನೂ ಮಾರುದಿನವೇ ಸುರುಮಾಡಿದೆ. ಇಬ್ಬರು ಮಕ್ಕಳೂ 'ಉಯ್ಯೋ! ಮುರ್‍ಯೋ!' ಎಂದ್ರೂ ಬಿಡಲಿಲ್ಲ. ಹಿಡಿದೆಳೆದು, ನನಗೆ ಆಯಾಸವಾಗುವಷ್ಟು 'ದಬದಬ' ಎಂದು ಎಣ್ಣೆ ಒತ್ತಿ, ತಲೆಯನ್ನು ಪಟಪಟ ಬಡಿದು, ಎರೆಯಲು ಆರಂಭಿಸಿಯೇಬಿಟ್ಟೆ! ಒಂದು ವಾರ ಸಹ ನನ್ನಿಂದ ಈ ಕೆಲಸ ಮಾಡಲಾಗಲಿಲ್ಲ. ನನ್ನ ಕೈಯೆಲ್ಲ ನೋವಿನಿಂದ ಬಾತಿತ್ತು. ನೀರಿಗಾಗಿ ಪರದಾಟ, ಸಾಕಾಗಿತ್ತು. ಪಕ್ಕದ ಮನೆಯವ್ರು ಆರು ಮಕ್ಕಳಿಗೆ ನಿತ್ಯ ಹೇಗೆ ಎರೆಯುವರು? ಎಂದು ಕೇಳಲೇಬೇಕೆಂದು ಮನಸ್ಸಾಯ್ತು. ಆ ದಿನ ಕೇಳಿಯೇಬಿಟ್ಟೆ "ಎನ್ರೀ! ನೀವು ದಿನವೂ ಆರು ಜನಕ್ಕೂ ದಬದಬನೇ ಬಡಿದು ನೀರು ಹಾಕ್ತೀರಲ್ಲಾ, ಹೇಗೆ ಮಾಡ್ತೀರಿ? ನನ್ನಿಂದ ಇಬ್ಬರಿಗೆ ಮಾಡಲು ಸಹ ಆಗುತ್ತಿಲ್ಲ," ಎಂದೆ. ನನ್ನ ನೆರೆಮನೆಯ ಶ್ರೀಮತಿ ಬಿಸಿ ರೊಟ್ಟಿ, "ಇಲ್ರೀ, ದೀಪಳಿಗೆ, ಯುಗಾದಿ, ಪಂಚಮಿಗೆ, ನೀರು ಹಾಕಿ ಎರೆಯೋದೇ ಸಾಕಾಗಿತ್ತು ನನಗೆ, ಈ ಆರು ಮಂದಿ ಮಕ್ಕಳಿಗೆ. ಇನ್ನು ನಿತ್ಯ ಎರೆಯೋದು ಎಂದ್ರೆ ಎನ್ರೀ!?" ಎಂದ್ರು. "ಹಾ...ಗಾ...ದರೆ, ದಿನಾ ಬೆಳಿಗ್ಗೆ ದಬದಬ ಎಂದು ಶಬ್ದ ಕೇಳಿ ಬರುತ್ತಲ್ಲಾ ನಿಮ್ಮ ಮನೆಯಿಂದ?" ಎಂದೆ ಸಂದೇಹವಾಗಿ. "ಓಹೋ! ಅದೇ, ಬಕ್ರಿ ಬಡಿತೀವ್ರಿ, ಬಕ್ರಿ!" ಎಂದ್ರು. ಇಂಗು ತಿಂದ ಮಂಗನಂತಾಗಿತ್ತು ನನ್ನ ಮುಖ. ಸದ್ಯ ನನ್ನ ಮಕ್ಕಳ ಗೋಳೋ ನಿಂತಿತು, ಅನ್ರಿ, ಆ ದಿನದಿಂದ.

ಈ 'ಬಕ್ರೀ'ದು ಒಂದು ಹುಚ್ಚೇಹಿಡಿಯಿತು. "ಅಮ್ಮ, ನಮ್ಮ ಮನೇಲಿ ಬಕ್ರಿ ಮಾಡು," ಎಂದು ಮಕ್ಳು ಶುರುಮಾಡಿದರು. ಬಕ್ರೀ ಹೇಗೆ ಮಾಡ್ತೀರಿ ಎಂದು ಹೇಗೆ ಕೇಳೋದು? ಅಂತ ಆತ್ಮಾಭಿಮಾನದಿಂದ ಹಿಂಜರಿದೆ. ಗೋದೀಲಿ ಮಾಡೋದು ಚಪ್ಪಾತಿ, ಹಾಗೇ ಜೋಳದಲ್ಲಿ ಮಾಡೋದೇ ಬಕ್ರಿ, ಎಂದು ಮನಸ್ಸಿನಲ್ಲೇ ನೆನೆದು, ಎರಡು ಕೆಜಿ. ಜೋಳ ಬೀಸಿ ತರಿಸಿದೆ. ಮಕ್ಕಳಿಗೆ ಐಸ್ ಕ್ರೀಮ್ ಮಾಡಿದ ದಿನ ಎಷ್ಟು ಖುಷಿಯಾಗಿರುತ್ತಿತ್ತೋ ಅಷ್ಟೇ ಖುಷಿ—ಈ ದಿನ ಏನೋ ವೆರೈಟಿ ಟಿಫನ್ ಕಾದಿದೆ ತಮಗೆ ಎಂದು. ಬಯಸಿದ ಬಕ್ರಿಗಾಗಿ ಕುಣಿದಾಡುತ್ತಿದ್ದರು. ಇನ್ನು ಮುಂದೆ ನಮ್ಮ ಮನೆಯಲ್ಲೂ ರಾತ್ರಿ, ಬಕ್ರಿ ಪಲ್ಯ ಮಾತ್ರ ಊಟ ಮಾಡುವುದೆಂದು ಠರಾವು ಹಾಕಿದೆ. ಪಲ್ಯ ರೆಡಿ ಮಾಡಿಯಾಯ್ತು. ಅರ್ಧ ಸೇರು ಜೋಳದ ಹಿಟ್ಟನ್ನು ಚಪ್ಪಾತಿಗೆ ಕಲಸುವಂತೆ ನೀರು ಹಾಕಿ ಕಲಸಿಟ್ಟೆ. ಅರ್ಧ ಗಂಟೆಯಾದ ಮೇಲೆ ಚೆನ್ನಾಗಿ ಒಂದೆರಡು ಸಲ ನಾದಿದೆ. ಹಿಟ್ಟನ್ನು ತವ ಬಿಸಿಗೆ, ಸ್ಟೋವ್ ಮೇಲಿಟ್ಟೆ. ಇದು ಲಟ್ಟಿಸುವುದಲ್ಲ, ಕೈಯಲ್ಲಿ ತಟ್ಟುವುದೆಂದು ಮೊದಲೇ ನೆರೆಮನೆಯ ಶ್ರೀಮತಿ ಬಿಸಿರೊಟ್ಟಿ ಅವರಿಂದ ಕೇಳಿ ತಿಳಿದಿದ್ದೆ. ಚಪ್ಪಾತಿಯ ಮಣೆಯ ಮೇಲೆ ಒಂದು ತುಂಡು ಹಿಟ್ಟು ತೆಗೆದು ದಬದಬ ಶಬ್ದ ಮಾಡುತ್ತ ಕೈ ಆಡಿಸಿದೆ. ಕೈಗೆ ಹಿಟ್ಟು ಗಟ್ಟಿ ಎನ್ನಿಸಿತು. ಮತ್ತೆ ಸ್ವಲ್ಪ ನೀರು ಹಾಕಿ, ಕಲಸಿದೆ. ತಟ್ಟಲು



ಹೋದರೆ, ಸುಖವಿಲ್ಲವೆನಿಸಿತು, ಮತ್ತೆ ಲಟ್ಟಣಿಗೆಯಿಂದ ಲಟ್ಟಿಸಲು ನೋಡಿದೆ. ಊಹೂ. ಅದೂ ಸಾಧ್ಯವಾಗಲಿಲ್ಲ! ಮತ್ತೆ ಸ್ವಲ್ಪ ಹಿಟ್ಟು ಹಾಕಿ ಕಲಸಿದೆ. ತಟ್ಟಲು ಹೋದರೆ ತುಂಡು ತುಂಡಾಗಿ ಹೋಯ್ತು. ಎರಡು ಗಂಟೆಯ ಸತತ ಪ್ರಯತ್ನ ವಿಫಲವಾಯ್ತು. ಮಕ್ಕಳು ತಟ್ಟೆಯ ಮುಂದೆ ಕೂತು ತೂಕಡಿಸಲಾರಂಭಿಸಿದರು. 'ನೀರು ಹೆಚ್ಚಾಯ್ತು ನಾವು ತಾ, ನಾವು ಹೆಚ್ಚಾಯ್ತು ನೀರು ತಾ' ಎನ್ನುವ ಗಾದೆಯಂತೆ, ಎರಡು ಕಿಜಿ ಹಿಟ್ಟಿನ ಒಂದು ಮುದ್ದೆಯಂತೆ ಕೂತಿದೆ. ಬಡಿದು ಬಡಿದು, ನಾದಿ ನಾದಿ, ಕೈಯೆಲ್ಲಾ ಕೆಂಪಾಗಿತ್ತು, ಬೆವರು ಹರಿಯುತ್ತಿತ್ತು ಮುಖವಲ್ಲಿ! ಕೈಯೆಲ್ಲಾ ಹಿಟ್ಟು, ಮೈಯೆಲ್ಲಾ ಹಿಟ್ಟು. ಬಕ್ರಿಯನ್ನು ಬಯಸಿದ ಮಕ್ಕಳಿಬ್ಬರೂ ತಟ್ಟೆಯ ಮುಂದೆ ನಿದ್ದೆ ಹೋಗಿದ್ದರು. ಒಮ್ಮೆ ಹಿಟ್ಟಿನ ಮುದ್ದೆಯನ್ನೂ ಒಮ್ಮೆ ಮಕ್ಕಳ ಮುದ್ದು ಮುಖವನ್ನೂ ನೋಡಿದೆ. ಅಷ್ಟರಲ್ಲೇ ನಮ್ಮ 'ಅವರು' ಬಂದೇ ಬಿಟ್ರು! ಬಕ್ರಿಯ ಭಜನೆ ಸಾಕೆನಿಸಿತ್ತು. "Western cooking ಕಲಿಯುವುದಾದರೂ ಸುಲಭಾರೀ, ಈ ಬಕ್ರಿ ಮಾತ್ರ ನನಗೆ ಮಾಡಲು ಬರುವುದಿಲ್ಲ" ಎಂದು ನನ್ನ ಸೋಲನ್ನು (ನಮ್ಮವರ ಮುಂದೆ ಮಾತ್ರ!) ಒಪ್ಪಿಕೊಂಡೆ. ಅಂದಿನಿಂದ ಇಂದಿನ ವರೆವಿಗೆ ಮತ್ತೆ ನಾನು ಬಕ್ರಿ ಬಡಿಯುವ ಪ್ರಯತ್ನ ಮಾಡಿಯೇ ಇಲ್ಲ!

ನಾನೊಬ್ಬಳೇ ಅಲ್ಲ! ನಮ್ಮವರೂ ನನ್ನ ಹಾಗೆ ಒಂದೆರಡು ಸಲ ಪ್ರಸಂಗದ ಪೇಚಾಟಕ್ಕೆ ಸಿಕ್ಕಿದ್ರು. ಕೇಳಿ. ತಮ್ಮ ಕೆಲಸದ ಮೇಲೆ ಯಾರನ್ನೋ ಕಾಣಲು ಹೋಗಿದ್ದರು. ಮನೆಯಲ್ಲಿ ಹೋಗಿ ವಿಚಾರಿಸಲಾಗಿ, "ಪಾಟೀಲರು, ತಂಬಿಗೆ ತಗೊಂಡು ಹೋಗ್ಯಾರ್ರೀ" ಎಂದು ಉತ್ತರ ಬಂತು. ಆ ಮನುಷ್ಯನನ್ನು ಕಾಣಲೇಬೇಕಾಗಿತ್ತಾದ್ದರಿಂದ, ಅಲ್ಲೇ ಹಾಕಿದ್ದ ಕುರ್ಚಿಯೊಂದರಲ್ಲಿ ಕುಳಿತು ಆಲೋಚಿಸುತ್ತಿದ್ದರಂತೆ. 'ಇವ, ತಂಬಿಗೆ ತೆಗೊಂಡು ಏನು ತರಲು ಹೋಗಿರಬಹುದು?–ಹಾಲೋ-ಮೊಸರೋ ಇರಬೇಕು. ಎಷ್ಟು ದೂರ ಹೋಗಿರುವರೋ–ಎಷ್ಟು ಹೊತ್ತಾಗತ್ತೋ' ಎಂದು, ಮುಂದಿನ ಬಾಗಿಲನ್ನೇ ದಿಟ್ಟಿಸುತ್ತಾ ಕುಳಿತಿದ್ದರಂತೆ. ಒಳಗಿನಿಂದ ಹಲ್ಲು ಕಿರಿಯುತ್ತಾ, ಪಾಟೀಲರು "ಏನು ಪಳ್ಳೀಕರ್, ಇಲ್ಲಿಯ ವರೆವಿಗೆ ಬಂದ್ರೀ?" ಎಂದಾಗ, ಕಕ್ಕಾಬಿಕ್ಕಿಯಾಗಿ ನೋಡಿದರಂತೆ ನಮ್ಮವರು. "ಅಲ್ಲಯ್ಯಾ, ತಂಬಿಗೆ ತಗೊಂಡು ಎಲ್ಲೋ ಹೋಗಿದ್ದೀಯಾ ಎಂದ್ರು. ನೀನು ಮನೆ ಒಳಗಿನಿಂದಲೇ ಬರ್ತಿದ್ದೀಯಲ್ಲಾ! ಏನು ತರಲು ಹೋಗಿದ್ದೆ?" ಎಂದಾಗ ಪಾಟೀಲರು ಬಿದ್ದು ಬಿದ್ದು ನಕ್ಕರಂತೆ. 'ಪಳ್ಳೀಕರ್' ಹೆಸರಿಗೆ ತಕ್ಕಂತೆ ಹಳ್ಳಿಯ ಮುಕ್ಕನೆಂದೇ ತಿಳಿದಿರಬೇಕು ಅವರ ಗೆಳೆಯ.

ಮತ್ತೊಮ್ಮೆ ಪ್ರವಾಸ ಕಾಲದಲ್ಲಿ ಒಬ್ಬರ ಮನೆಗೆ ಹೋಗುವ ಪ್ರಸಂಗ ಬಂತು. ಸಂಜೆ ಆರು ಗಂಟೆಯ ಸಮಯವಾಗಿತ್ತು. ಮನೆಯ ಮುಂದೆ ನಿಂತು 'ಕಾಲಿಂಗ್' ಎಂದು ತೂಗುಹಾಕಿದ್ದರಂತೆ. ಮನೆಯ ಒಳಗಿನಿಂದ ಬಂದ ಸ್ತ್ರೀವ್ಯಕ್ತಿ, ಬಾಗಿಲಲ್ಲಿ ಬಂದು ನಿಂತು, ಹಲ್ಲು ಕಿರಿಯುತ್ತಾ, ನಸುನಾಚುತ್ತಾ, "ಅವರಿಲ್ರೀ, ಅಡ್ಡಾಡಲಿಕ್ಕೆ ಹೊರಗೆ ಹೋಗ್ಯಾರ, ಹಿಂದಾಗಡೆ ಬರ್ರಿ" ಎಂದಳಂತೆ. ನಮ್ಮವರಿಗೆ ಎದೆಬಡಿತ ಹೆಚ್ಚಾಯ್ತು. ಕಾಲಿಗೆ ಬುದ್ಧಿ ಹೇಳಿ, ಒಂದೇ ಉಸಿರಿನಲ್ಲಿ ತಮ್ಮ ಬಿಡಾರಕ್ಕೆ ಓಡಿಬಂದರಂತೆ, ಅಲ್ಲ, ಗಂಡ ಇಲ್ಲದ ಸಮಯದಲ್ಲಿ, ಪರಪುರುಷನನ್ನು, ಹಿಂದಿನ ಬಾಗಿಲಲ್ಲಿ (ಹಿಂದಾಗಡೆ) ಬಾ ಎಂದಳಲ್ಲ; ಈ ಹೆಂಗಸಿಗೆ ಧೈರ್ಯ ಎಷ್ಟಿದೆ? ಎಂದು ಭಯಭೀತರೂ ಆಶ್ಚರ್ಯಚಕಿತರೂ ಆದರಂತೆ. (ಮತ್ತೆ ಆ ಮಿತ್ರನ ಮನೆಗೇ ಅವರು ಹೋಗಲಿಲ್ಲ!) ಆದರೆ ಇದನ್ನು ಯಾರಲ್ಲೂ ಹೇಳಿಕೊಳ್ಳುವಂತೆಯೂ ಇಲ್ಲ. ಮನೆಗೆ ಬಂದೊಡನೆ, ನನ್ನೊಡನೆ ಹೇಳಿದಾಗ, ಹಿಂದಾಗಡೆ ಶಬ್ದದ ಅರ್ಥ ಅಪಾರ್ಥವಾಗಿ, ಅನಾಹುತವಾಗಿದ್ದನ್ನು ತಿಳಿಯಪಡಿಸಿದೆ. ಏಂದರೆ ಈ ವೇಳೆಗಾಗಲೇ ನಾನು ಹುಬ್ಬಳ್ಳಿ 'ಅವ್ವ' ಆಗಿದ್ದು ಸರಿಹೋಯ್ತು!


# ಮಹಿಳೆಯರಿಗೆ ಒಂದು ಹೊಸ ಸುಸಂಧಿ

ಮಹಿಳಾ ಮುಖಂಡತ್ವದ ಕ್ಷೇತ್ರೀಯ ಉಳಿತಾಯ ಯೋಜನೆ ಎಂಬ ಹೆಸರಿನ ಹೊಸ ಉಳಿತಾಯ ಯೋಜನೆಯೊಂದನ್ನು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಏಪ್ರಿಲ್ 1, 1972 ರಂದು ಉದ್ಘಾಟಿಸಿದರು.

ಈ ಯೋಜನೆಯು

- ನಿಮ್ಮ ಕುಟುಂಬದ ಆದಾಯ ಹೆಚ್ಚಿಸಲು
- ನಿಮ್ಮ ಬಿಡುವಿನ ವೇಳೆಯನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಲು
- ಸಾಮಾಜಿಕ ಸಂಪರ್ಕಗಳನ್ನು ಬೆಳೆಸಿಕೊಳ್ಳಲು, ಹಾಗೂ
- ರಾಷ್ಟ್ರೀಯ ಧ್ಯೇಯ ಸಾಧಿಸಲು

ನಿಮಗೆ ಅಂಶಕಾಲೀನ ಕೆಲಸವನ್ನು ಕಲ್ಪಿಸಿಕೊಡುವುದು.



---

**ಉಳಿತಾಯ ವಿಷಯದ ಮಹಿಳಾ ಮುಖಂಡರಾಗಿ ನೀವು ಮಾಡಬೇಕಾದ ಕೆಲಸ:**

ನಿಮ್ಮ ಕ್ಷೇತ್ರದ ಗೃಹಿಣಿಯರನ್ನು ಭೇಟಿಮಾಡಿ ಅವರು ನಿಯಮಿತವಾಗಿ ಹಣ ಉಳಿಸುವಂತೆ ಅವರ ಮನ ಒಲಿಸಬೇಕು. ಆ ಗೃಹಿಣಿಯರು ಉಳಿಸಿದ ಹಣವನ್ನು ತಿಂಗಳು ತಿಂಗಳು ಹೋಗಿ ಸಂಗ್ರಹಿಸಬೇಕು. ಮತ್ತು ಗೊತ್ತುಮಾಡಿದ ಅಂಚೆ ಕಚೇರಿಗೆ ಹೋಗಿ ಹೀಗೆ ಸಂಗ್ರಹಿಸಿದ ಹಣವನ್ನು ಕಟ್ಟಬೇಕು.

**ನೀವು ಸಂಗ್ರಹಿಸಿದ ಹಣದಮೇಲೆ ಶೇಕಡ 2½ ರಷ್ಟು ಕಮಿಷನ್ ನಿಮಗೆ ಸಿಗುವುದು**


ಉಳಿತಾಯ ವಿಷಯದ ಬಗ್ಗೆ ಕೆಲಸಮಾಡ ಬಯಸುವ ಮಹಿಳಾ ಮುಖಂಡರು ದೇಶದ ಎಲ್ಲ ನಗರಗಳಲ್ಲಿ ಹಾಗು ಪ್ರಮುಖ ಪಟ್ಟಣಗಳಲ್ಲಿ ಬೇಕಾಗಿದ್ದಾರೆ.

**ನ್ಯಾಶನಲ್ ಸೇವಿಂಗ್ಸ್ ಕಮಿಷನರ್
ಪೋಸ್ಟ್ ಬಾಕ್ಸ್ ನಂ.: 96,
ನಾಗಪುರ,**
ಇವರಿಗೆ ವಿವರಗಳಿಗಾಗಿ ಅರ್ಜಿ ಸಲ್ಲಿಸಿ.



ಅವನು ಯಾರೆಂದು ಗೊತ್ತಿಲ್ಲವಿದ್ದರೂ
ಅವನ ಹೆಸರು ಮಾತ್ರ ಅಜರಾಮರ

# ಜಾನ್ ವಿಸ್ಡನ್



— ಶಿವಾನಂದ ಜೋಶಿ

ವಿಸ್ಡನ್ ಎಂದರೆ ಏನೆಂಬುದು ಕ್ರಿಕೆಟ್ ಪ್ರೇಮಿಗಳಲ್ಲಿ ಬಹು ಜನರಿಗೆ ಗೊತ್ತು; ಆದರೆ, ಯಾರು ಎನ್ನುವುದು ಕ್ರಿಕೆಟ್ ಆಟಗಾರರಲ್ಲಿ ಸಹ ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಆ ಮಹಾಶಯನ ಹೆಸರಿನಿಂದ ಇಂಗ್ಲಂಡಿನಲ್ಲಿ ಪ್ರತಿವರ್ಷ ಪ್ರಕಟವಾಗುವ ಕ್ರಿಕೆಟ್ ಗ್ರಂಥ ಆಟಗಾರರ ಬೈಬಲ್ ಎಂದು ಹೆಸರಾಗಿದೆ. ಕ್ರಿಕೆಟ್ ಪ್ರಚಲಿತವಿರುವ ಎಲ್ಲ ದೇಶಗಳಲ್ಲಿ ಆಯಾ ವರ್ಷ ನಡೆದ ಚಟುವಟಿಕೆಗಳ ಇತಿವೃತ್ತ ಅದರಲ್ಲಿ ಇರುತ್ತದೆ. ಅಂಕಿ ಅಂಶಗಳ ಅಪೂರ್ವ ಸಂಗ್ರಹವನ್ನು ಅದು ಪ್ರತಿವರ್ಷ ಹೊತ್ತು ತರುತ್ತದೆ. ಇದಕ್ಕೂ ಮಿಗಿಲಾದ ಒಂದು ಅಂಶವೆಂದರೆ, 'ವಿಸ್ಡನ್' ಪ್ರತಿವರ್ಷ ಆಯ್ಕೆಮಾಡುವ ಐವರು ಶ್ರೇಷ್ಠ ಆಟಗಾರರಲ್ಲಿ ಒಬ್ಬ ನೆನಿಸಬೇಕೆಂದು ಪ್ರತಿ ಆಟಗಾರನೂ ಕಾಣುವ ಕನಸು. 'ವಿಸ್ಡನ್'-ನಿಂದ ಆಯ್ಕೆಯಾದ ಆಟಗಾರ ಜಗದ್ವಂದ್ಯನಾಗುತ್ತಾನೆ. ಭಾರತೀಯರ ಪೈಕಿ ಎಂಟು ಆಟಗಾರರು ಇದುವರೆಗೆ 'ವಿಸ್ಡನ್' ಗೌರವಕ್ಕೆ ಪಾತ್ರರಾಗಿದ್ದಾರೆ. ಅವರೆಂದರೆ— ಕೆ. ಎಸ್. ರಣಜಿತಸಿಂಹಜಿ, (೧೮೯೭), ಕೆ. ಎಸ್. ದುಲೀಪಸಿಂಹಜಿ (೧೯೨೯), ಪಟೌಡಿಯ ಹಿರಿಯ ನವಾಬ (೧೯೩೨), ಸಿ. ಕೆ. ನಾಯುಡು (೧೯೩೩), ವಿಜಯ ಮರ್ಚಂಟ್ (೧೯೩೭), ವಿನೂ ಮಂಕಡ (೧೯೪೭), ಪಟೌಡಿಯ ಕಿರಿಯ ನವಾಬ ಮನಸೂರ ಅಲಿಖಾನ (೧೯೬೮), ಬಿ. ಎಸ್. ಚಂದ್ರಶೇಖರ (೧೯೭೨).

ಕ್ರಿಕೆಟ್ಟನ್ನು ಸ್ವತಃ ಆಡಿ, ಅದರ ಬಗೆಗೆ ಬರೆದುದಷ್ಟೇ ಅಲ್ಲ, ಆಟದ ಎಲ್ಲ ಸಲಕರಣೆಗಳನ್ನೂ ತಯಾರಿಸುವ ಸಾಹಸಕ್ಕೆ ಕೂಡ ಕೈಹಾಕಿ ಯಶಸ್ವಿಯಾದ ಜಾನ್ ವಿಸ್ಡನ್ನನ ಕಥೆ ಕಳೆದ ಶತಮಾನದಲ್ಲಿ— ನಿರ್ಣಾಯಕ ಕ್ರಿಕೆಟ್ ಪಂದ್ಯಗಳ ಯುಗ ಉದಿಸುವುದಕ್ಕೆ ಬಹು ಮೊದಲು— ಆರಂಭವಾಗುತ್ತದೆ. ಕ್ರಿಕೆಟ್ಟಿನ ಚೇತನ ಅದಮ್ಯ ಎಂದು ಹೇಳುತ್ತಾರೆ. ನಿಜವೇ ಇರಬೇಕು. ಇಂದು ವಿಸ್ಡನ್ ನಮ್ಮ ಮಧ್ಯೆ ಜೀವಿಸಿಲ್ಲವಾದರೂ ಅವನ ಮಹತ್ಕಾರ್ಯಗಳ ಫಲವನ್ನು ಕ್ರಿಕೆಟ್ ಆಟಗಾರರ ಇಂದಿನ ಪೀಳಿಗೆ ಕೂಡ ಭೋಗಿಸುತ್ತಿದೆ. ವಿಸ್ಡನ್ ಬ್ಯಾಟ್ ಹಾಗೂ ವಿಸ್ಡನ್

ಚೆಂಡುಗಳ ಜನಪ್ರಿಯತೆಯ ಬಗೆಗೆ ಎರಡು ಅಭಿಪ್ರಾಯಗಳಿಲ್ಲ. ನಿರ್ಣಾಯಕ ಪಂದ್ಯಗಳಲ್ಲಿ ವಿಸ್ಡನ್ ಸ್ಪೆಶಲ್ ಕ್ರೌನ್ ಚೆಂಡುಗಳನ್ನು ಉಪಯೋಗಿಸಿದಷ್ಟು ಬೇರಾವ ತಯಾರಿಕೆಯ ಚೆಂಡುಗಳನ್ನೂ ಬಳಸಲಾಗಿಲ್ಲ. ಅವನು ತನ್ನ ಕಾಲದ ಶ್ರೇಷ್ಠ ಬೌಲರ್ ಆಗಿದ್ದ ಕಾರಣದಿಂದಲೋ ಏನೋ, ಅವನು ತಯಾರಿಸಿದ ಚೆಂಡುಗಳು ಸಹ ಸದಾ ಶ್ರೇಷ್ಠ ಗುಣಮಟ್ಟದವುಗಳೇ ಆಗಿದ್ದುವು.

ಸಮ್ಮಾನದಿಂದ ಮಧ್ಯಮ ಎತ್ತರವೇ ಎನ್ನಬಹುದಾದರೂ ಇಂಗ್ಲೆಂಡಿನ ಆಟಗಾರರಲ್ಲಿ ಕುಳ್ಳ ಎನಿಸಿದ್ದ (ಐದು ಅಡಿ ನಾಲ್ಕೂವರೆ ಅಂಗುಲ) ಜಾನ್ ವಿಸ್ಡನ್ ಸಸೆಕ್ಸ್ ಕೌಂಟಿಯ ಗೌಂಡಿಯೊಬ್ಬನ ಮಗ. ಬ್ರೈಟನ್ನಿನಲ್ಲಿ ಜನಿಸಿದ ಅವನನ್ನು ತಾಯಿ ಪ್ರೀತಿಯಿಂದ ಜೆಮ್ಮಿ ಎಂದು ಕರೆಯುತ್ತಿದ್ದಳು. ಕ್ರಿಕೆಟ್ ವಲಯಗಳಲ್ಲಿ ಕೂಡ ಮುಂದೆ ಆತ ಅದೇ ಹೆಸರಿನಿಂದ ಪ್ರಸಿದ್ಧನಾದನು. ತಂದೆ ಸತ್ತ ನಂತರ ಅವನು ಟಾಮ್ ಬಾಕ್ಸ್‌ನೆಂಬೊಬ್ಬ ಹೋಟೆಲ್ ಒಡೆಯನ ಆಶ್ರಯದಲ್ಲಿ ಬೆಳೆದನು. ಬಾಕ್ಸ್ ಇಂಗ್ಲೆಂಡಿನಲ್ಲಿ ಆ ಕಾಲದ ಪ್ರಸಿದ್ಧ ವಿಕೆಟ್ ಕೀಪರ್ ಎನಿಸಿದ್ದನು. ಅವನಿಂದಲೇ ಜೆಮ್ಮಿಗೆ ಕ್ರಿಕೆಟ್ ದೀಕ್ಷೆ ದೊರೆಯಿತು. ನೋಡುವುದಕ್ಕೆ ಕ್ರಿಕೆಟ್ ಆಟಗಾರನೆಂಬುದಕ್ಕಿಂತ ಹೆಚ್ಚಾಗಿ ವಿಸ್ಡನ್ ನಾಟಕದಲ್ಲಿಯ ಹಾಸ್ಯಗಾರನಂತಿದ್ದನು.

೧೯ ವರ್ಷ ವಯಸ್ಸಿನಲ್ಲಿ ಜೆಮ್ಮಿ ತನ್ನ ಪ್ರಥಮ ಪಂದ್ಯವನ್ನು ಸಸೆಕ್ಸ್ ಪರವಾಗಿ ಕೆಂಟ್ ವಿರುದ್ಧ ಆಡಿದನು. ಇದರಲ್ಲಿ ಅವನು ಗಮನಾರ್ಹವಾದುದೇನನ್ನೂ ಸಾಧಿಸಲಿಲ್ಲ. ಮರು ವರ್ಷ ತನ್ನ ಕೌಂಟಿಯ ಪರವಾಗಿ ಎಂ. ಸಿ. ಸಿ. ವಿರುದ್ಧ ಆಡಿದಾಗ ಇವನ ಯೋಗ್ಯತೆ ಬೆಳಕಿಗೆ ಬಂದಿತು. ಎರಡೂ ಆಟಗಳಲ್ಲಿ ಸೇರಿ ಕೇವಲ ೯ ಓಟ ಗಳಿಸಿದ ವಿಸ್ಡನ್ ಬ್ಯಾಟಿಂಗನಲ್ಲಿ ವಿಫಲನಾದರೂ ಆರು ಹುದ್ದರಿಗಳನ್ನು ಕೆಡವಿ ಸಸೆಕ್ಸ್‌ಗೆ ಜಯ ತಂದುಕೊಟ್ಟನು.

ಆಗ ಇಂದಿನಂತೆ ಬೌಲಿಂಗಿನಲ್ಲಿ ಅನೇಕ ಪ್ರಭೇದಗಳಿರಲಿಲ್ಲ. ತೋಳನ್ನು ವರ್ತುಲಾಕಾರದಲ್ಲಿ ತಿರುಗಿಸಿ ಕೈಲಾದಷ್ಟು ವೇಗದಿಂದ ನೇರವಾಗಿ ಚೆಂಡು ಎಸೆಯುವುದು ಅಂದಿನ ಪದ್ಧತಿಯಾಗಿತ್ತು. ಆ ಕಾಲಕ್ಕೆ ವಿಸ್ಡನ್ 'ಅತಿ ವೇಗದ' ಬೌಲರನೇ ಆಗಿದ್ದನು. ಅವನು ಕೆಲವು ಹೆಜ್ಜೆಗಳನ್ನು ಮಾತ್ರ ಓಡಿ ತೋಳನ್ನು ಸರಾಗವಾಗಿ ಚಲಿಸಿ ಆಕರ್ಷಕ ರೀತಿಯಲ್ಲಿ ಚೆಂಡನ್ನು ಎಸೆಯುತ್ತಿದ್ದನು. ತೋಳನ್ನು ಹೆಗಲಿಗಿಂತ ಹೆಚ್ಚು ಎತ್ತರಕ್ಕೆ ಎತ್ತುವುದು ಆಗ ಪ್ರಮಾದವೆನಿಸುತ್ತಿತ್ತು. ತೋಳನ್ನು ವರ್ತುಲಾಕಾರದಲ್ಲಿ ಚಲಿಸುವಾಗ, ಈಗ ರೂಢಿಯಲ್ಲಿರುವಂತೆ ಬೆರಳುಗಳಿಂದ ಚೆಂಡನ್ನು ತಿರುಗಿಸುವುದು ತುಂಬ ಕಠಿಣವಾಗಿತ್ತು. ಆದರೆ ಆ ವಿಧಾನಕ್ಕೆ ಅದರದೇ ಆದ ಪ್ರಯೋಜನಗಳಿದ್ದುವು. ಚೆಂಡು ನಿರ್ದಿಷ್ಟ ಸ್ಥಳದಲ್ಲಿ ನೆಲ ತಾಗಿದೊಡನೆ ಅದು ಬ್ಯಾಟ್ಸಮನ್ನನತ್ತ ನೆಗೆದು ಹೋಗುವಂತೆ ಅದನ್ನು ಎಸೆಯಲು ಅದರಿಂದ ಸಾಧ್ಯವಿತ್ತು. ಈ ಬಗೆಯ ಬೌಲಿಂಗ್ ಎದುರಿಸಿ ಆಡುವುದು ಸುಲಭವಾಗಿರಲಿಲ್ಲ.

೧೮೫೧ ರಲ್ಲಿ ವಿಸ್ಡನ್ ಒಟ್ಟು ೪೪೫ ಹುದ್ದರಿಗಳನ್ನು ಕೆಡವಿದ್ದು ಒಂದು ಹೊಸ ದಾಖಲೆಯಾಗಿದ್ದರೂ ಅದರ ಹಿಂದಿನ ಜುಲೈನಲ್ಲೇ ಆತನ ಬೌಲಿಂಗ್ ವಿಸ್ಮಯವನ್ನು ಸಾಧಿಸಿತ್ತು. ಅವನು ಲಾರ್ಡ್ಸ್ ಮೈದಾನದಲ್ಲಿ ಉತ್ತರ ಇಂಗ್ಲೆಂಡಿನ ತಂಡದಲ್ಲಿ ದಕ್ಷಿಣದ ವಿರುದ್ಧ ಆಡಿ ತನ್ನ ವೈಶಿಷ್ಟ್ಯಪೂರ್ಣ ಆಫ್ ಬ್ರೇಕ್‌ಗಳಿಂದ ದಕ್ಷಿಣದ ದ್ವಿತೀಯ ಆಟದ ಎಲ್ಲ ಹತ್ತು ಹುದ್ದರಿಗಳನ್ನೂ, ಸ್ಟಂಪ್ ಉರುಳಿಸುವ ಮೂಲಕವೇ, ಆಹುತಿ ತೆಗೆದುಕೊಂಡನು. ಒಂಬತ್ತು ವರ್ಷಗಳ ನಂತರ, ಗಾಯಗಳಿಂದಾಗಿ ಆಟದಿಂದ ನಿವೃತ್ತನಾಗುವ ಮುನ್ನ, ವಿಸ್ಡನ್, ಜಾರ್ಜ್ ಪಾರ್ ಅವರ ನಾಯಕತ್ವದಲ್ಲಿಯ ಇಂಗ್ಲೆಂಡ್ ತಂಡದ ಸದಸ್ಯನಾಗಿ ಉತ್ತರ ಅಮೇರಿಕ ಸಂಚಾರ ಕೈಕೊಂಡನು. ರೋಚೆಸ್ಟರಿನಲ್ಲಿ ಅಮೇರಿಕ ಹಾಗೂ ಕೆನಡಾಗಳ ಸಂಯುಕ್ತ ತಂಡ (೨೨ ಆಟಗಾರರಿದ್ದರು)ದ ವಿರುದ್ಧ ಆಡುವಾಗ ಅವನು ತನ್ನ

ಒಂದು ಓವರಿನಲ್ಲಿ ಪ್ರತಿಯೊಂದು ಎಸೆತದಿಂದಲೂ ಒಂದೊಂದು ಹುದ್ದರಿ ಕೆಡವಿ ಆರು ಆಟಗಾರರನ್ನು ಬಲಿ ತೆಗೆದುಕೊಂಡನು. ಇದು 'ಡಬಲ್ ಹ್ಯಾಟ್ರಿಕ್'ಗಿಂತಲೂ ಮಿಗಿಲಾದ ಸಾಧನೆ. ಅವನು ಎರಡೂ ಆಟಗಳಲ್ಲಿ ಸೇರಿ ೬೦ ಓಟಗಳಿಗೆ ೨೯ ಹುದ್ದರಿಗಳನ್ನು ಕೆಡವಿದನು. (ಇಂಗ್ಲೆಂಡ್ ತಂಡದಲ್ಲಿ ಮಾತ್ರ ಎಂದಿನಂತೆ ೧೧ ಹುದ್ದರಿಗಳೇ ಇದ್ದರು )

ವಿಸ್ಡನ್ ಬೌಲರ್ ಎಂದೇ ಹೆಸರಾದರೂ ಕೂಡ ಬ್ಯಾಟಿಂಗಿನಲ್ಲಿ ಅವನ ಯೋಗ್ಯತೆ ಕಡಿಮೆಯೇನಾಗಿರಲಿಲ್ಲ. ಕ್ರಿಕೆಟ್ಟಿನ ಪ್ರಾಥಮಿಕ ಪಾಠವಾದ ನೇರ ಬ್ಯಾಟಿನ ತತ್ತ್ವವನ್ನು ಅವನೆಂದೂ ಮರೆಯಲಿಲ್ಲ. ಚೆಂಡನ್ನು ಅತ್ಯಂತ ರಭಸದಿಂದ ಥಳಿಸುತ್ತಿದ್ದ ಅವನು ಒಮ್ಮೆ ಕ್ಯಾಂಟರ್ಬರಿಯಲ್ಲಿ ಅದನ್ನು ಸ್ಟೇಡಿಯಮ್ಮಿನ ಪ್ರವೇಶ ದ್ವಾರಕ್ಕೆ ಹೋಗಿ ಬೀಳುವಂತೆ ಹೊಡೆದು ಏಳು ಓಟಗಳನ್ನು ಸಂಪಾದಿಸಿದನು. ಒಂದು ಆಟದಲ್ಲಿ ಅವನು ಗಳಿಸಿದ ಅತಿ ಹೆಚ್ಚು ಓಟಗಳೆಂದರೆ ೧೪೮. ಶೆಫೀಲ್ಡಿನಲ್ಲಿ ಯಾರ್ಕ್‌ಶಾಯರಿನ ಕ್ರಿಕೆಟ್ ಮೈದಾನದ ಉದ್ಘಾಟನಾ ಪಂದ್ಯದಲ್ಲಿ (೧೮೫೫) ಅವನು ಗಳಿಸಿದ ಈ ಶತಕ ಸ್ಮರಣೀಯವೆನಿಸಿತು. ಆಗಿನ ಕಾಲದಲ್ಲಿ ಶತಕ ಸಾಧನೆ ಈಗಿನಂತೆ ಸಾಮಾನ್ಯ ಸಂಗತಿಯಾಗಿರಲಿಲ್ಲ. ಅವನು ತನ್ನ ಪ್ರಥಮ ಶತಕವನ್ನು ಕೆಂಟ್ ವಿರುದ್ಧ ಟನ್‌ಬ್ರಿಜ್ ವೆಲ್ಸ್ ಮೈದಾನದಲ್ಲಿ ಗಳಿಸಿದನು. ಆ ಕಾಲದ, ಆಡಲು ಅತಿ ಕಠಿಣ ಬೌಲರ್ ಎನಿಸಿದ್ದ ವಿಲ್ಸರನ ಬೌಲಿಂಗಿನಲ್ಲಿ ವಿಸ್ಡನ್ ನಾಲ್ಕು ಸಿಕ್ಸರುಗಳನ್ನು ಹೊಡೆದುದು ಅಸಾಮಾನ್ಯ ಘಟನೆ.

ಕ್ರಿಕೆಟ್ಟಿನಿಂದ ನಿವೃತ್ತನಾಗುವಾಗ ವಿಸ್ಡನ್ನನಿಗೆ ಬೇರಾವ ಜೀವನೋಪಾಯವೂ ಇರಲಿಲ್ಲ. ಆದಕ್ಕಾಗಿ ಸಹ ಅವನು ಕ್ರಿಕೆಟ್ಟನ್ನೇ ಆಯ್ದುಕೊಂಡ, ಆದರೆ ಬೇರೆ ರೀತಿಯಲ್ಲಿ. ಲಂಡನ್ನಿನ ಲೀಸ್ಟರ್ ಚೌಕದಲ್ಲಿ ಕ್ರಿಕೆಟ್ ಸಲಕರಣೆಗಳು ಹಾಗು ಸಿಗಾರುಗಳ ಸ್ಟೋರನ್ನವನು ಆರಂಭಿಸಿದನು. ಇದು ಇಂದಿಗೆ ೧೨೨ ವರ್ಷಗಳ ಹಿಂದಿನ ಮಾತು. ಕಾಲಕ್ರಮೇಣ ಇದು ಕ್ರಿಕೆಟ್ ಸರಕುಗಳನ್ನು ತಯಾರಿಸುವ ಬಹು ದೊಡ್ಡ ಕೇಂದ್ರವಾಗಿ ಬೆಳೆಯಿತು. ಗುಣಮಟ್ಟ ಹಾಗು ಪ್ರಮಾಣ ಎರಡರಲ್ಲೂ ವಿಸ್ಡನ್ನನ ಈ ಸಂಸ್ಥೆ ತನ್ನದೇ ಆದ ವೈಶಿಷ್ಟ್ಯ ಸಾಧಿಸಿತು. ಅದರ ತಯಾರಿಕೆಗಳಲ್ಲಿ ಒಂದಾದ ಸ್ಪೇಶಲ್ ಕ್ರೌನ್ ಚೆಂಡಿನ ಗುಣಮಟ್ಟಕ್ಕೆ ಬೇರೆ ಯಾವುದೇ ಕಂಪನಿ ತಯಾರಿಸಿದ ಚೆಂಡೂ ಇದುವರೆಗೆ ಬಂದಿಲ್ಲ. ನಾಲ್ಕೈದು ವರ್ಷದ ಎತ್ತಿನ ಚರ್ಮದಿಂದ ಇವುಗಳನ್ನು ತಯಾರಿಸುತ್ತಾರೆ. (ಸಂಸ್ಥೆಯ ಶತಮಾನೋತ್ಸವದ (೧೯೫೦) ಸಂದರ್ಭದಲ್ಲಿ ಟಾನ್‌ಬ್ರಿಜ್‌ನಿಂದ ಆರು ಮೈಲು ದೂರದಲ್ಲಿರುವ ಪೆನ್‌ಶರ್ಸ್ಟ್‌ನಲ್ಲಿ ಆಧುನಿಕ ಕಾರಖಾನೆಯೊಂದನ್ನು ಸ್ಥಾಪಿಸಲಾಯಿತು.) *

ತನ್ನ ಆಟದ ಪ್ರತಿಭೆ ಹಾಗೂ ಪ್ರಸಿದ್ಧಿಯನ್ನು ತಾನು ತಯಾರಿಸಿದ ಸಲಕರಣೆಗಳಿಗೆ ಧಾರೆಯೆರೆದು ಕೊಟ್ಟ ವಿಸ್ಡನ್ ತನ್ನ ೫೮ ನೇ ವಯಸ್ಸಿನಲ್ಲಿ, ಮಕ್ಕಳಿಲ್ಲದೆ ಕ್ಯಾನ್ಸರಿನಿಂದ ಸತ್ತನು. ಆದರೆ ಅವನು ಕ್ರಿಕೆಟ್ಟಿನಿಂದ ಪಡೆದ ಹಾಗೂ ಪ್ರತಿಯಾಗಿ ಅದಕ್ಕೆ ನೀಡಿದ ಚೇತನ ಅದಮನೀಯ. ಅಂತೆಯೇ ವಿಸ್ಡನ್ ಅಜರಾಮರ. ▲

---

* ಕಾರಖಾನೆ ನಡೆಸುವುದರೊಂದಿಗೆ ವಿಸ್ಡನ್ Cricket Almanac ವೊಂದನ್ನು ಪ್ರಕಟಿಸಲಾರಂಭಿಸಿದನು. ಅದು ಇಂದಿಗೂ ಕ್ರಿಕೆಟ್ಟಿನ ವಿಶ್ವಾಸಾರ್ಹ ಸಂದರ್ಭ ಗ್ರಂಥವಾಗಿ ಉಳಿದುಕೊಂಡಿದೆ, ಆದರೆ ವರ್ಷದ ಐವರು ಶ್ರೇಷ್ಠ ಆಟಗಾರರ ಆಯ್ಕೆಯಲ್ಲಿ ಮೊದಲಿನ ನಿಷ್ಪಕ್ಷಪಾತ ನಿಲುವು ಈಗ ಅದರ ಸಂಪಾದಕರಲ್ಲಿ ಇಲ್ಲ ಎಂದು ಹೇಳಲಾಗುತ್ತದೆ. ಇದು ಅಭಿಪ್ರಾಯದ ಪ್ರಶ್ನೆ. 'ವಿಸ್ಡನ'ನ ಮಹತ್ವ ಹಾಗು ವಿಶ್ವಾಸಾರ್ಹತೆಗೆ ಕುಂದು ಬಂದಿಲ್ಲ.

ಈ ಬುದ್ಧಿಪ್ರಧಾನವರ್ಗ ನಿರ್ನಾಮವಾಗಬಹುದೆ?

# ಭಾರತೀಯ ಮಧ್ಯಮವರ್ಗ

ಮನುಷ್ಯಲೋಕದಲ್ಲಿ ನಾಗರಿಕತೆ ಉದಿಸಿದಾಗಿನಿಂದಲೂ ಕಂಡುಬರುವ ಒಂದು ಸಾಮಾಜಿಕ ಲಕ್ಷಣವೆಂದರೆ ವರ್ಗಮೂಲವಾದ ಸಮಾಜರಚನೆ. ಸಮಾಜಕ್ಕೆ ನಾಯಕತ್ವವನ್ನು ಒದಗಿಸಿ ರಾಜ್ಯಭಾರ ಮಾಡುವಂತಹ ಉಚ್ಚವರ್ಗ, ಮತ್ತು ಮುಖ್ಯವಾಗಿ ಶಾರೀರಿಕ ಶ್ರಮದಿಂದಲೇ ಜೀವನ ನಿರ್ವಹಣೆ ಮಾಡುವ ಕೆಳ ವರ್ಗ ಹಾಗೂ ಇವೆರಡರ ನಡುವೆ ಬುದ್ಧಿಯನ್ನೇ ಬಂಡವಾಳವಾಗಿಸಿಕೊಂಡು ಬದುಕುವಂಥ ಮಧ್ಯಮವರ್ಗ. ವರ್ಗಮೂಲವಾದ ಈ ಸಮಾಜ ವ್ಯವಸ್ಥೆಯನ್ನು ತೊಡೆದುಹಾಕಿ ವರ್ಗರಹಿತ ಸಮಾಜವನ್ನು ಸ್ಥಾಪಿಸುವ ಆದರ್ಶದ ಕನಸನ್ನು ಮನುಷ್ಯ ಎಂದಿನಿಂದಲೂ ಕಾಣುತ್ತ ಬಂದಿದ್ದಾನೆ. ಭಾರತದಲ್ಲಿ ಬುದ್ಧ, ಬಸವರಂಥವರಿಂದ ಇಂಥ ಪ್ರಯತ್ನಗಳು ನಡೆದಿವೆ. ಈ ದಿಸೆಯಲ್ಲಿ ಜಗತ್ತಿನಲ್ಲಿ ನಡೆದ ಬಹು ದೊಡ್ಡ ಪ್ರಯೋಗವೆಂದರೆ ಸೋವಿಯತ್ ಕ್ರಾಂತಿ. ಈ ಕ್ರಾಂತಿಯಿಂದಾಗಿ ರಶಿಯನ್ ಸಮಾಜದಲ್ಲಿಯ ಉಚ್ಚ ಮತ್ತು ಮಧ್ಯಮವರ್ಗಗಳನ್ನು ಸಂಪೂರ್ಣ ತೊಡೆದುಹಾಕಲಾಗಿದೆಯೆಂದು ಹೇಳಿಕೊಳ್ಳಲಾಗುತ್ತಿದೆ. ಆದರೂ ಸೋವಿಯತ್ ಕ್ರಾಂತಿಯ ನಂತರದ ಈ ಐವತ್ತು ವರ್ಷಗಳಲ್ಲಿ ಆ ದೇಶದಲ್ಲಿ ವರ್ಗಭೇದ ಅಳಿಯುವುದಕ್ಕೆ ಬದಲು ಹಲವು ಹೊಸ ವರ್ಗಗಳೇ ಹುಟ್ಟಿಕೊಂಡಿವೆ. ಕಿಬುತ್ಜ್‌ಗಳನ್ನು ಸ್ಥಾಪಿಸಿ ಸಾಮೂಹಿಕ ಜೀವನವನ್ನು ಬಳಕೆಯಲ್ಲಿ ತಂದು ವರ್ಗಭೇದವನ್ನು ಅಳಿಸಿಹಾಕಬೇಕೆಂದು ಇಸ್ರೇಲಿನಲ್ಲಿ ನಡೆದ ಯತ್ನದ ಪರಿಣಾಮವೂ ಅಷ್ಟೊಂದು ಫಲಕಾರಿಯಾಗದೆಯೆ, ಅಲ್ಲೂ ಬುದ್ಧಿಪ್ರಧಾನವಾದ ಒಂದು ವರ್ಗ ಹುಟ್ಟಿಕೊಂಡಿದ್ದು ಅದು ಸಮಾಜದಲ್ಲಿ ಆ ರೀತಿ ಹೆಚ್ಚಿನ ಮನ್ನಣೆಯನ್ನೂ ಪಡೆಯುವಂತಾಗಿದೆ.

೧೭ ಮತ್ತು ೧೮ನೆಯ ಶತಮಾನದಿಂದೀಚೆ ಯುರೋಪಿನಲ್ಲಿ ಮನ್ನೆಯರ ಪ್ರಾಬಲ್ಯ ಕಡಿಮೆಯಾಗುತ್ತ, ಅವರಿಗೂ ಒಕ್ಕಲಿಗರಿಗೂ ಮಧ್ಯೆ ಮಧ್ಯಮವರ್ಗ ಹುಟ್ಟಿಕೊಂಡಿತು. ಯುರೋಪಿನ ಮಧ್ಯಯುಗೀನ ಸಮಾಜವನ್ನು ಆಧುನಿಕ ಔದ್ಯಮಿಕ ಸಮಾಜವಾಗಿ ಪರಿವರ್ತಿಸಿದ ಶ್ರೇಯಸ್ಸೂ ಈ ವರ್ಗಕ್ಕೆಯೆ ಸಲ್ಲುತ್ತದೆ. ಮುಖ್ಯವಾಗಿ ಚಿಕ್ಕಪುಟ್ಟ ವ್ಯಾಪಾರಿಗಳ ವರ್ಗವಾಗಿ ಪ್ರಾರಂಭವಾದ ಈ ವರ್ಗದ ಲಕ್ಷಣಗಳು ಈ ಶತಮಾನದಲ್ಲಿ ಸಾಕಷ್ಟು ಬದಲಾವಣೆ ಹೊಂದಿವೆ. ಸುಮಾರು ೧೦೦ ವರ್ಷಗಳ ಹಿಂದಿನವರೆಗೂ ಬಂಡವಳಗಾರರನ್ನು ಮಧ್ಯಮ ವರ್ಗದಲ್ಲೇ ಗಣಿಸಲಾಗುತ್ತಿತ್ತು. ಆದರೆ ಬಂಡವಾಳ

ಗಾರರು ಹೆಚ್ಚೆಚ್ಚು ಹಣವಂತರಾಗತೊಡಗಿದಂತೆ ಅವರನ್ನೂ ಉಚ್ಚವರ್ಗಕ್ಕೇರಿಸಲಾಗಿದೆ. ಈಗ ಸಾಮಾನ್ಯವಾಗಿ ಸ್ವಂತ ಉದ್ಯೋಗಗಳನ್ನು ಅವಲಂಬಿಸಿರುವವರು, ವೃತ್ತಿನಿರತರು ಮತ್ತು ಬಿಳಿಯಂಗಿಯ ಕೆಲಸಗಾರರೆಲ್ಲ ಮಧ್ಯಮವರ್ಗದವರು.

ಭಾರತೀಯ ಸಮಾಜ ಬಹು ಪುರಾತನ ಕಾಲದಿಂದಲೂ ಚಾತುರ್ವರ್ಣ್ಯದಂತಹ ಪದ್ಧತಿಯಿಂದಾಗಿ ಹಲವು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ನಮ್ಮ ಬಹುಜನ ಸಮಾಜವ್ಯವಸ್ಥೆಯ ತಳಹದಿಯಾಗಿರುವ ಚಾತುರ್ವರ್ಣ್ಯಕ್ಕೆ ಆರ್ಥಿಕ ಮಹತ್ವ ಅಷ್ಟಾಗಿ ಇಲ್ಲ. ಇಂದು ಉಚ್ಚ, ಮಧ್ಯಮ ಮತ್ತು ಕೆಳವರ್ಗಗಳಲ್ಲಿ ಸಮಾಜವನ್ನು ವಿಂಗಡಿಸುವಾಗ ಮುಖ್ಯವಾಗಿರುವುದು ಆರ್ಥಿಕ ಅಳತೆಗೋಲು. ಚಾತುರ್ವರ್ಣ್ಯ ವ್ಯವಸ್ಥೆಯಲ್ಲಿ ವೈಶ್ಯರನ್ನು ಇಂದಿನ ಮಧ್ಯಮವರ್ಗಕ್ಕೆ ಹೋಲಿಸಬಹುದು. ಹೊಸ ಹೊಸ ವಿಚಾರಗಳಿಗೆ, ಸಾಮಾಜಿಕ ಪರಿವರ್ತನೆಗೆ ಈ ವರ್ಗದಲ್ಲಾಗುವ ಜಾಗ್ರತಿಯೇ ಕಾರಣವೆಂಬುದನ್ನು ಇತಿಹಾಸದಲ್ಲಿ ಗುರುತಿಸಬಹುದು. ಪ್ರಾಚೀನ ವೈದಿಕ ಧರ್ಮವನ್ನು ವಿರೋಧಿಸಿ ಜನಿಸಿದ ಜೈನ, ಬೌದ್ಧ, ವೀರಶೈವಗಳಂಥ ಕ್ರಾಂತಿಕಾರಕ ಆಂದೋಲನಗಳಲ್ಲಿ ಈ ವರ್ಗದ ಪಾತ್ರವೇ ಪ್ರಮುಖವಾಗಿತ್ತೆಂಬುದು ಗಮನಾರ್ಹ.

ಭಾರತದಲ್ಲಿ ಬ್ರಿಟಿಶ್ ಅಧಿಕಾರಾಸತ್ತೆ ಬೇರೂರುವುದರೊಂದಿಗೆ ನಮ್ಮಲ್ಲೂ ವರ್ಗಭೇದಕ್ಕೆ ಆರ್ಥಿಕ ತಳಹದಿ ದೊರೆಯಿತು. ಔದ್ಯಮಿಕ ಕ್ರಾಂತಿಯ ಪರಿಣಾಮವಾಗಿ ಇಂಗ್ಲಂಡಿನಲ್ಲಿ ಉತ್ಪಾದನೆಯ ಪ್ರಮಾಣ ಕಲ್ಪನಾತೀತವಾಗಿ ಬೆಳೆಯತೊಡಗಿತು. ಉತ್ಪಾದಿಸಿದ್ದೆಲ್ಲವನ್ನೂ ಸ್ವೀಕರಿಸುವಷ್ಟು ಬಲವಾದ ಮಾರುಕಟ್ಟೆ ಸ್ವದೇಶದಲ್ಲಿಲ್ಲದಾಗ ವಿದೇಶಿ ಪೇಟೆಗಳನ್ನು ಇಂಗ್ಲಂಡ್ ಹುಡುಕಿಕೊಳ್ಳಬೇಕಾಯಿತು. ಆ ಸುಮಾರಿಗೆಯೆ ಅದರ ಕೈವಶವಾಗಿದ್ದ ಭಾರತ ಅದಕ್ಕೆ ಒಳ್ಳೆಯ ಪೇಟೆಯಾಯಿತು ಮಾತ್ರವಲ್ಲ, ಅದಕ್ಕೆ ಅವಶ್ಯವಿದ್ದ ಅನೇಕ ಕಚ್ಚಾ ಮಾಲಿನ ಪೂರೈಕೆದಾರನೂ ಆಯಿತು. ಇದರಿಂದಾಗಿ ಭಾರತದಂಥಲ್ಲಿ ತನ್ನ ಸಾಮ್ರಾಜ್ಯವನ್ನೂ ಆರ್ಥಿಕ ಹಿತಾಸಕ್ತಿಗಳನ್ನೂ ಕಾಯ್ದುಕೊಳ್ಳುವುದು ಅದಕ್ಕೆ ಅನಿವಾರ್ಯವಾಯಿತು. ಅದಕ್ಕಾಗಿ ಹೆಚ್ಚು ಸುಶಿಕ್ಷಿತರೂ ಅಷ್ಟೇನೂ ಶ್ರೀಮಂತರೂ ಅಲ್ಲದ ಭಾರತೀಯರನ್ನು ಅಂದಿನ ಸರಕಾರ ಪ್ರೋತ್ಸಾಹಿಸತೊಡಗಿತು. ಇದರಿಂದಾಗಿ ಇಂದಿನ ಭಾರತೀಯ ಮಧ್ಯಮವರ್ಗ ತಲೆಯೆತ್ತತೊಡಗಿದ್ದು.

ಈ ಸುಶಿಕ್ಷಿತ ವರ್ಗವೇ ಭಾರತದಲ್ಲಿ ತಮ್ಮ ಸಾಮ್ರಾಜ್ಯದ ಬೆನ್ನೆಲುಬಾಗುಳಿಯುವುದೆಂದು ಆಳರಸರು ನಿರೀಕ್ಷಿಸಿದ್ದರು. ತಕ್ಕ ಮಟ್ಟಿಗೆ ಅವರ ನಿರೀಕ್ಷೆ ಸರಿಯಾಗಿಯೇ ಫಲಿಸಿತೆನ್ನಬೇಕು. ಆದರೆ ಇದೇ ಸುಶಿಕ್ಷಿತ ವರ್ಗದಲ್ಲೇ ದೇಶಸ್ವಾತಂತ್ರ್ಯದ ಬೀಜವೂ ಮೊಳಕೆಯೊಡೆಯಿತು. ಈ ವರ್ಗವೇ ಅಂದು ಜನಸಾಮಾನ್ಯಕ್ಕೆ ನಾಯಕತ್ವವನ್ನು ನೀಡಿತು. ಮಹಾತ್ಮಾ ಗಾಂಧಿ, ಸರದಾರ ಪಟೇಲ, ಲಾಲಾ ಲಜಪತರಾಯ, ಮುಂತಾದ ರಾಷ್ಟ್ರನಾಯಕರೆಲ್ಲ ಮಧ್ಯಮ ವರ್ಗದಿಂದಲೇ ಬಂದವರು. ಅರ್ಥಾತ್ ಮಧ್ಯಮವರ್ಗ ಬ್ರಿಟಿಶ್ ಆಳಿಕೆಯಲ್ಲಿ ಮಹತ್ವದ ರಾಜಕೀಯ ಶಕ್ತಿಯಾಗಿ ಪರಿಣಮಿಸಿತು.

ಸ್ವಾತಂತ್ರ್ಯೋತ್ತರದಲ್ಲಿ ಭಾರತೀಯ ಮಧ್ಯಮವರ್ಗದ ಲಕ್ಷಣಗಳು ಭರದಿಂದ ಬದಲಾಗತೊಡಗಿವೆ. ರಾಜಕಾರಣ ಒಂದು ಆಂದೋಲನವಾಗಿದ್ದಾಗ ಮತ್ತು ಹೆಚ್ಚಾಗಿ ಸುಶಿಕ್ಷಿತರ ಪ್ರಭಾವವಲಯವೇ ಆಗಿದ್ದಾಗ ಮಧ್ಯಮವರ್ಗೀಯನು ಅದರಲ್ಲಿ ಆಸಕ್ತಿ ವಹಿಸುತ್ತಿದ್ದ. ಆದರೆ ಸ್ವಾತಂತ್ರ್ಯ ಬಂದ ನಂತರ ಅದು ಉಳ್ಳವರು ಮಾತ್ರ ಆಡಬಹುದಾದ ಆಟವಾಗಿ ಪರಿಣಮಿಸಿದ್ದರಿಂದ ಅವನಿಗೆ ಅಲ್ಲಿ ಸ್ಥಾನ ಇಲ್ಲವಾಯಿತು. ರಾಜಕೀಯ ಗುರುತ್ವಾಕರ್ಷಣ ಕೇಂದ್ರ ಈ ವರ್ಗದಿಂದ ಬೇರೆಡೆ ಸರಿಯತೊಡಗಿತು.

ಮಧ್ಯಮವರ್ಗವನ್ನು ಒಂದು ವ್ಯಾಖ್ಯೆಯ

ಚೌಕಟ್ಟಿನೊಳಕ್ಕೆ ಕೂಡಿಸುವುದು ತುಸು ಪ್ರಯಾಸದ ಕೆಲಸ. ಸಾಮಾನ್ಯವಾಗಿ ಶ್ರೀಮಂತರು ಮತ್ತು ಬಡವರ ನಡುವಿನ ಗುಂಪೇ ಈ ವರ್ಗವೆಂದು ಹೇಳಬಹುದು. ಬಿಳಿಯಂಗಿಯ ಕೆಲಸಗಾರರು, ಚಿಕ್ಕ ಪುಟ್ಟ ವ್ಯಾಪಾರೋದ್ಯಮಿಗಳು, ಡಾಕ್ಟರ್, ವಕೀಲ ಮುಂತಾದ ಸ್ವತಂತ್ರ ವ್ಯವಸಾಯಗಳನ್ನು ಈ ವರ್ಗದಲ್ಲಿ ಸ್ಥೂಲವಾಗಿ ಸೇರಿಸಬಹುದು. ಇದು ಬುದ್ಧಿಪ್ರಧಾನ ವರ್ಗವಾದುದರಿಂದ ಇದರಲ್ಲಿ ಔದ್ಯಮಿಕ ಕಾರ್ಮಿಕರನ್ನು ಸೇರಿಸುವಂತಿಲ್ಲ. ಇವರ ಮಾಸಿಕ ವರಮಾನ ಸಾಧಾರಣ ರೂ ೧೦೦ ರಿಂದ ೧,೦೦೦ ವರೆಗೆಂದು ಗೃಹೀತವಾಗಿಟ್ಟುಕೊಳ್ಳಬಹುದು. ಈ ದೃಷ್ಟಿಯಿಂದ ಭಾರತದಲ್ಲಿಯ ಒಟ್ಟು ಜನಸಂಖ್ಯೆಯ ಸುಮಾರು ಶೇಕಡಾ ೫ರಷ್ಟನ್ನು ಮಾತ್ರ ಮಧ್ಯಮ ವರ್ಗದಲ್ಲಿ ಸೇರಿಸಬಹುದು; ಕೃಷಿಕ್ಷೇತ್ರದಲ್ಲಿ ದುಡಿಯುವವರನ್ನು ಹೊರತುಪಡಿಸಿದರೆ ಇದು ಒಟ್ಟು ಕಾರ್ಯನಿರತ ಜನಸಂಖ್ಯೆಯ ಶೇಕಡಾ ೨೦ ರಷ್ಟಾಗಬಹುದು. ಈ ಪ್ರಮಾಣ ತೀರ ಕಡಿಮೆಯೆನಿಸಿದರೂ ಅವರ ಪ್ರಭಾವ ಮಾತ್ರ ಈ ಪ್ರಮಾಣಕ್ಕಿಂತ ಬಹಳ ಹೆಚ್ಚಾಗಿರುತ್ತದೆ.

ಸ್ವಾತಂತ್ರ್ಯೋತ್ತರದಲ್ಲಿ ಬದಲಾಗುತ್ತಿರುವ ಪರಿಸ್ಥಿತಿಗನುಗುಣವಾಗಿ ಮಧ್ಯಮ ವರ್ಗದ ಸ್ವರೂಪ ಬದಲಾಗುತ್ತಿದೆ. ಒಂದು ಕಾಲಕ್ಕೆ ಕೆಲವೊಂದು ಜಾತಿಗಳವರನ್ನು ಈ ವರ್ಗದವರೆಂದು ಸಹಜವಾಗಿ ಹೇಳಬಹುದಿತ್ತಾದರೆ ಈಗ ಜಾತೀಯ ಅಂಶ ಪ್ರಾಮುಖ್ಯವನ್ನು ಕಳೆದುಕೊಂಡು ಆರ್ಥಿಕ ಅಂಶ ಮಹತ್ವದ್ದಾಗಿ ಪರಿಣಮಿಸಿದೆ.

ಮಧ್ಯಮವರ್ಗೀಯರ ಪ್ರಮುಖ ಲಕ್ಷಣಗಳನ್ನು ಈ ರೀತಿ ಹೇಳಬಹುದು: ಈ ವರ್ಗಕ್ಕೆ ಸೇರಿದವರು ಸಾಮಾನ್ಯತಃ ಎಲ್ಲರೂ ಸುಶಿಕ್ಷಿತರು. ಸಮಾಜದ ಉಳಿದವರಿಗಿಂತಲೂ ಇವರಲ್ಲಿ ಸಂಸ್ಕೃತಿ ಪ್ರಜ್ಞೆ ಹೆಚ್ಚು. ಧಾರ್ಮಿಕ ವಿಧಿವಿಧಾನಗಳಿಗೆ ಮತ್ತು ಸಮಾಜದ ನೈತಿಕ ಮೌಲ್ಯಗಳಿಗೆ ಉಳಿದೆಲ್ಲರಿಗಿಂತಲೂ ಇವರಲ್ಲಿ ಹೆಚ್ಚಿನ ಪ್ರಾಧಾನ್ಯವಿರುತ್ತದೆ. ತಮ್ಮ ಆಹಾರ, ಉಟ್ಟೆಬರೆಗಳು ಮುಂತಾದವುಗಳ ವಿಷಯದಲ್ಲಿ ಇವರು ಇರಿಸಿಕೊಂಡಿರುವ ಅಭಿರುಚಿ ಉಚ್ಚ ಮಟ್ಟದ್ದಾಗಿರುತ್ತದೆ. ಸಾಮಾನ್ಯವಾಗಿ ಒಬ್ಬಿಬ್ಬರ ಗಳಿಕೆಯ ಮೇಲೆಯೆ ಇಡೀ ಸಂಸಾರ ನಿರ್ವಹಣೆಯಾಗುತ್ತಿರುತ್ತದೆ. ಯಾವ ದೇಶದಲ್ಲೇ ಆದರೂ ಅದರ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದು ಈ ಮಧ್ಯಮ ವರ್ಗವೇ. ಈ ದೃಷ್ಟಿಯಿಂದ ಇದು ಸಮಾಜದ ಬೆನ್ನೆಲುಬೆನ್ನಬೇಕು. ಹಿಂದೂ ಸಂಯುಕ್ತ ಕುಟುಂಬ ಕಣ್ಮರೆಯಾಗುತ್ತಿರುವ ಈ ದಿನಗಳಲ್ಲಿ ಮನೆಯಲ್ಲಿಯ ಹೆಣ್ಣುಮಕ್ಕಳೂ ನಗರ ಪ್ರದೇಶಗಳಲ್ಲಿ ಈಗೀಗ ದುಡಿಯತೊಡಗಿದ್ದಾರೆ. ಆದರೂ ಇಂಥವರ ಪ್ರಮಾಣ ಇನ್ನೂ ಗಮನಾರ್ಹವೇನಾಗಿಲ್ಲ.

ಸ್ವಾತಂತ್ರ್ಯಾನಂತರದಲ್ಲಿ ದೇಶದ ಆರ್ಥಿಕ ಅಭಿವೃದ್ಧಿಗಾಗಿ ಕೈಕೊಂಡ ಹಲವು ಪಂಚವಾರ್ಷಿಕ ಯೋಜನೆಗಳ ಪರಿಣಾಮವಾಗಿ ಹಿಂದೆಂದೂ ಕಾಣದಿದ್ದಂಥಹ ಔದ್ಯಮೀಕರಣ ಸಾಧ್ಯವಾಗಿದೆ. ಇದರ ಪ್ರಯೋಜನ ನಿಜವಾಗಿಯೂ ದೊರೆತದ್ದು ಉಚ್ಚವರ್ಗ ಮತ್ತು ಕೆಳ ವರ್ಗಗಳಿಗೆ ಮಾತ್ರವೇ ಹೊರತು ಮಧ್ಯಮ ವರ್ಗಕ್ಕಲ್ಲ. ಈ ವರ್ಗಕ್ಕೆ ಕಳೆದ ಕಾಲು ಶತಮಾನದಲ್ಲಿ ಹಾನಿಯೇ ಹೆಚ್ಚಾಗಿದೆಯೆಂಬುದನ್ನು ಇವರ ಆದಾಯಗಳಲ್ಲಿಯ ಮತ್ತು ಬೆಲೆಗಳ ಮಟ್ಟದಲ್ಲಿಯ ಏರಿಕೆಯನ್ನು ತೂಗಿನೋಡಿದಾಗ ಸ್ಪಷ್ಟಪಡುವುದು.

ಇಂಥ ವಿಷಯಗಳಲ್ಲಿ ಒಂದು ಕೊರತೆಯೆಂದರೆ ನಮ್ಮ ದೇಶದಲ್ಲಿ ಸರಿಯಾದ ಅಂಕಿ ಸಂಖ್ಯೆಗಳು ಲಭ್ಯವಿಲ್ಲದಿರುವುದು. ಅಲ್ಲದೆ ಮಧ್ಯಮ ವರ್ಗವು ಕೂಡ ಒಂದೇ ಬಗೆಯ ಜನರುಳ್ಳ ಗುಂಪಲ್ಲ. ಈ ವರ್ಗದಲ್ಲಿಯ ಮೇಲಿನ ಸ್ತರದ ಮತ್ತು ಕೆಳಗಿನ ಸ್ತರದ ಜನರ ಆದಾಯ, ಜೀವನ ಮಟ್ಟಗಳಲ್ಲೂ ತುಂಬ ಅಂತರ ಕಂಡು ಬರುತ್ತದೆ ಅಂತೆಯೆ ಸರಾಸರಿ ತಲಾ ಆದಾಯದ

ಮಾನದಿಂದ ತುಲನೆ ಮಾಡಿ ನೋಡುವುದು ಅವಾಸ್ತವವೂ ಅಸಾಧುವೂ ಎನಿಸೀತು. ಈ ಕಾರಣಕ್ಕಾಗಿ ಈ ವರ್ಗದಲ್ಲಿ ಬರುವ ಕೆಲವು ಪ್ರಾತಿನಿಧಿಕ ಗುಂಪುಗಳನ್ನು ಎತ್ತಿಕೊಂಡು ೧೯೪೭-೪೮ ರಿಂದ ಇದು ವರೆಗೆ ಆಗಿರುವ ಸ್ಥಿತ್ಯಂತರಗಳನ್ನು ಗಮನಿಸಿಯೇ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ ಈ ಗುಂಪುಗಳ ಆದಾಯಗಳಲ್ಲಿಯಂತೆಯೆ ಬೆಲೆಗಳ ಮಟ್ಟದಲ್ಲಿಯ ಬದಲಾವಣೆಗಳನ್ನು ಗುರುತಿಸಿ ಹೋಲಿಸಿ ನೋಡಿದಾಗ ದೊರೆಯುವ ಚಿತ್ರವು ಸ್ಥೂಲ ಕಲ್ಪನೆಯನ್ನು ನೀಡುವುದು.

ಅಂಕಣ ೧ ರಲ್ಲಿ ವ್ಯಕ್ತವಾಗುವ ಅಂಶವೆಂದರೆ ಕಳೆದ ೨೫ ವರ್ಷಗಳಲ್ಲಿ ಮಧ್ಯಮವರ್ಗದಲ್ಲಿಯ ವಿವಿಧ ಗುಂಪುಗಳ ಆದಾಯ ಶೇಕಡಾ ೬೭ ರಿಂದ ೧೦೦ ರಷ್ಟು ಹೆಚ್ಚಾಗಿದೆ. ಅಂಕಣ ೨ ರಲ್ಲಿ ಕಂಡುಬರುವಂತೆ ೧೯೪೭-೪೮ ರಿಂದ ಮುಂದಿನ ೨೫ ವರ್ಷಗಳಲ್ಲಿ ಸಗಟು ಬೆಲೆಗಳು ಏರುತ್ತಲೇ ಇವೆ ೧೯೫೨-೫೩ ರ ಬೆಲೆಗಳು ೧೦೦ ಎಂದು ಗ್ರಹಿಸಿ ಈ ಬೆಲೆಸೂಚಿಯನ್ನು ಸಿದ್ಧಗೊಳಿಸಲಾಗಿದೆ ಈ ಮಧ್ಯೆ ೧೯೪೮-೪೯, ೧೯೫೪-೫೫ ಮತ್ತು ೧೯೫೫-೫೬ ಈ ಮೂರು ವರ್ಷಗಳಲ್ಲಿ ಮಾತ್ರ ಬೆಲೆಗಳು ಕಡಿಮೆಯಿದ್ದು ೧೯೬೨ ರಿಂದ ೧೯೭೦ ರ ವರೆಗಿನ ಅವಧಿಯಲ್ಲಿ ಅವುಗಳಲ್ಲಿಯ ಏರಿಕೆ ಅತಿಯಾಗಿರುವುದು ವ್ಯಕ್ತವಾಗುತ್ತದೆ. ಈ ಕಾಲು ಶತಮಾನದಲ್ಲಿ ಬೆಲೆಗಳು ವರ್ಷಕ್ಕೆ ಸರಾಸರಿ ಶೇಕಡಾ ೭ ೭ ರಂತೆ ಒಟ್ಟು ಶೇಕಡಾ ೧೮೪ ರಷ್ಟು ಏರಿದಂತಾಗಿದೆ. ೧೯೭೨ ರಲ್ಲಿಯಂತೂ ಬೆಲೆಯೇರಿಕೆ ಹಿಂದೆ ಕಾಣದಷ್ಟು ಅತಿಯಾಗಿದೆ. ಈ ವರ್ಷದ ಮೇ ಮೊದಲ ವಾರದಿಂದ ಆಗಸ್ಟ್ ಮಧ್ಯದ ವರೆಗೆ ಸಗಟು ಬೆಲೆ ಶೇಕಡಾ ೮.೮ ರಷ್ಟು ಏರಿದೆ. ಈ ಅವಧಿಯಲ್ಲಿ ಔದ್ಯಮಿಕ ಕಚ್ಚಾ ಸರಕುಗಳನ್ನು ಹೊರತುಪಡಿಸಿ ಎಲ್ಲ ಸರಕುಗಳ ಬೆಲೆಯೂ ತುಂಬ ಏರಿದೆ. ಆಹಾರ ಧಾನ್ಯಗಳ ಬೆಲೆ ಶೇಕಡಾ ೧೨ ರಷ್ಟು ಬೇಳೆಯ ಕಾಳುಗಳ ಬೆಲೆ ಶೇಕಡಾ ೨೫ ೩ ರಷ್ಟು ಮತ್ತು ಸಕ್ಕರೆಯ ಬೆಲೆ ಶೇಕಡಾ ೩೯.೪ ರಷ್ಟು

**ಅಂಕಣ ೧: ಮಧ್ಯಮ ವರ್ಗದಲ್ಲಿಯ ಕೆಲವರ ಆದಾಯದ ತುಲನೆ ೧೯೪೭—೪೮ ಮತ್ತು ೧೯೭೧—೭೨ ರಲ್ಲಿದ್ದಂತೆ.**

| | ೧೯೪೭-೪೮ ರಲ್ಲಿಯ ಸರಾಸರಿ ಮಾಸಿಕ ಆದಾಯ | ೧೯೭೧-೭೨ ರಲ್ಲಿಯ ಸರಾಸರಿ ಮಾಸಿಕ ಆದಾಯ | ೧೯೪೭-೪೮ ರಿಂದ ೧೯೭೧-೭೨ ರ ಅವಧಿಯಲ್ಲಿದ್ದ ಶೇಕಡಾವಾರು ಅಂತರ |
|---|---|---|---|
| ಐ. ಎ. ಎಸ್., ಸೇವಾಧಿಕಾರಿಗಳ | | | |
| ಪ್ರಾರಂಭ ವೇತನ : | ೪೦೦ | ೭೦೦ | + ೭೫ |
| ಇಂಜಿನಿಯರರು : | ೩೦೦ | ೫೦೦ | + ೬೭ |
| ಡಾಕ್ಟರರು : | ೪೦೦ | ೭೦೦ | + ೭೫ |
| ಕಾಲೇಜ್ ಅಧ್ಯಾಪಕರು : | ೨೦೦ | ೪೦೦ | + ೧೦೦ |
| ಎರಡನೇ ದರ್ಜೆಯ | | | |
| ಸರಕಾರಿ ನೌಕರರು : | ೩೦೦ | ೬೦೦ | + ೧೦೦ |
| ಮೂರನೇ ದರ್ಜೆಯ | | | |
| ಸರಕಾರಿ ನೌಕರರು : | ೨೦೦ | ೪೦೦ | + ೧೦೦ |

ಹೆಚ್ಚಾಗಿದೆ. ಇದರಿಂದ ಕಂಡುಬರುವುದೇನೆಂದರೆ, ಸಾಮಾನ್ಯ ಮಧ್ಯಮ ವರ್ಗೀಯನ ಆದಾಯವು ೨೫ ವರ್ಷಗಳಲ್ಲಿ ಎರಡು ಪಟ್ಟಾಗಿದೆಯಾದರೂ ಬೆಲೆಗಳು ಶೇಕಡಾ ೧೮೪ ರಷ್ಟು ಹೆಚ್ಚಿವೆಯಾದ್ದರಿಂದ ಅವನ ಗಳಿಕೆಯ ಮೌಲ್ಯ ಸುಮಾರು ಶೇಕಡಾ ೩೦ ರಷ್ಟು ಕಡಿಮೆಯಾಗಿದೆ.

ಆದರೆ ಇದು ವಾಸ್ತವ ಚಿತ್ರವೇನಲ್ಲ. ಯಾಕೆಂದರೆ ಸಗಟು ಬೆಲೆಗಳ ಏರಿಕೆಯು ವ್ಯಕ್ತಿಯ ಆದಾಯ ಮತ್ತು ಜೀವನ ಮಟ್ಟದ ಮೇಲೆ ಉಂಟುಮಾಡುವ ಪರಿಣಾಮವನ್ನು ಸರಿಯಾಗಿ ಬಿಂಬಿಸುವುದಿಲ್ಲ. ಅದಕ್ಕಾಗಿ ಅವನು ತನ್ನ ನಿತ್ಯ ಜೀವನದಲ್ಲಿ ಬಳಸುವ ಹಲವು ವಸ್ತುಗಳ ಚಿಲ್ಲರೆ ಬೆಲೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುವುದು. ಈ ಏರಿಕೆಯ ಚಿತ್ರವನ್ನು ಅಂಕಣ ೩ ರಲ್ಲಿ ಕಾಣಬಹುದು. ಈ ಅಂಕಣದಲ್ಲಿ ವ್ಯಕ್ತವಾಗುವ ಅಂಶವೆಂದರೆ ಮಧ್ಯಮವರ್ಗೀಯನ ವಿವಿಧ ಜೀವನಾವಶ್ಯಕ ವಸ್ತುಗಳ ಬೆಲೆ ಈ ೨೫ ವರ್ಷಗಳಲ್ಲಿ ಶೇಕಡಾ ೨೧೪ ರಿಂದ ೪೦೦ ರ ವರೆಗೆ ಹೆಚ್ಚಾಗಿದೆ. ಈ ಎಲ್ಲ ವಸ್ತುಗಳ ಬೆಲೆಯೇರಿಕೆಯು ಸರಾಸರಿ ಶೇಕಡಾ ೩೦೦ ಅರ್ಥಾತ್ ೧೯೪೭–೪೮ ರಲ್ಲಿದ್ದ ಬೆಲೆಗಳು ಈಗ ನಾಲ್ಕು ಪಟ್ಟು ಏರಿವೆ. ಇದರರ್ಥ ಮಧ್ಯಮವರ್ಗೀಯನ ಆದಾಯ ಎರಡು ಪಟ್ಟಾಗಿದ್ದರೂ ಬೆಲೆಯೇರಿಕೆ ಮೂರು ಪಟ್ಟಾಗಿದೆ. ಅಂದರೆ ಅಂದು ೩೩ ಪೈಸೆಗಳಿಗೆ ಕೊಳ್ಳುತ್ತಿದ್ದಷ್ಟು ವಸ್ತುಗಳನ್ನು ಕೊಳ್ಳಲು ಮಧ್ಯಮವರ್ಗೀಯ ಇಂದು ಒಂದು ರೂಪಾಯಿ ವೆಚ್ಚಮಾಡಬೇಕಾಗುತ್ತದೆ.

ಭಾರತೀಯ ಮಧ್ಯಮ ವರ್ಗೀಯನ ಜೀವನ ಮಟ್ಟ ಈ ಕಾಲು ಶತಮಾನದಲ್ಲಿ ತೀರ ಕೆಳಗಿಳಿದಿದೆಯೆಂಬುದು ಸ್ಪಷ್ಟವಾಗಿದೆ ಆದರೆ ಅವನನ್ನು ಉಚ್ಚ ಮತ್ತು ಕೆಳ ವರ್ಗಗಳೊಂದಿಗೆ ಹೋಲಿಸಿದರೆ ಅವನ ಜೀವನ ಮಟ್ಟದ ಅಧೋಗತಿ ಇನ್ನಷ್ಟು ನಿಚ್ಚಳವಾಗುವುದು.

ಸ್ವಾತಂತ್ರ್ಯೋತ್ತರದಲ್ಲಿ ಔದ್ಯಮೀಕರಣ ಮತ್ತು ಅತಿಪ್ರಸರಣದಿಂದ ಯಾರಿಗಾದರೂ ಪ್ರಯೋಜನವಾಗಿದ್ದರೆ ಅದು ಉಚ್ಚ ವರ್ಗಕ್ಕೆಂದೇ ಹೇಳಬೇಕು. ಭಾರತ ಸರಕಾರದ ಪ್ರಕಟನೆಗಳ ಪ್ರಕಾರ ಶೇಕಡಾ ಸುಮಾರು ೫ ರಷ್ಟಿರುವ ಉಚ್ಚ ವರ್ಗೀಯರಿಗೆ-ಅಂದರೆ ಉದ್ಯೋಗಪತಿಗಳು, ದೊಡ್ಡ ವ್ಯಾಪಾರಸ್ಥರು ಮತ್ತು ಇತರ ಪ್ರತಿಷ್ಠಿತರಿಗೆ ಮಾತ್ರ ಈ ಪ್ರಯೋಜನ ದೊರೆತಿದೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯದ ನಂತರ ರೂಪುಗೊಳ್ಳುತ್ತಿರುವ ರಾಜಕೀಯ ಚಿತ್ರದಿಂದ ಆಳುವ ವರ್ಗವೊಂದು ಉದಿಸಿದೆ. ವಿಧಾನ-

ಅಂಕಣ ೨ : ಎಲ್ಲ ವಸ್ತುಗಳ ಸಗಟು ಬೆಲೆ ಸೂಚಿ (೧೯೫೨—೫೩ = ೧೦೦)

| ವರ್ಷ | ಸೂಚಿ |
|---|---|
| ೧೯೪೭–೪೮ | ೮೧.೧ |
| ೧೯೪೮–೪೯ | ೯೮.೯ |
| ೧೯೪೯–೫೦ | ೧೦೧.೩ |
| ೧೯೫೦–೫೧ | ೧೦೭.೬ |
| ೧೯೫೧–೫೨ | ೧೧೪.೩ |
| ೧೯೫೨–೫೩ | ೧೦೦.೦ |
| ೧೯೫೪–೫೫ | ೯೭.೫ |
| ೧೯೫೬–೫೭ | ೧೦೫.೩ |
| ೧೯೫೭–೫೮ | ೧೦೮.೪ |
| ೧೯೫೮–೫೯ | ೧೧೨.೯ |
| ೧೯೫೯–೬೦ | ೧೧೭.೧ |
| ೧೯೬೦–೬೧ | ೧೨೪.೯ |
| ೧೯೬೧–೬೨ | ೧೨೫.೧ |
| ೧೯೬೨–೬೩ | ೧೨೭.೯ |
| ೧೯೬೩–೬೪ | ೧೩೫.೩ |
| ೧೯೬೫–೬೬ | ೧೬೫.೦ |
| ೧೯೬೬–೬೭ | ೧೯೧.೩ |
| ೧೯೬೭–೬೮ | ೨೧೨.೪ |
| ೧೯೬೮–೬೯ | ೨೧೦.೨ |
| ೧೯೬೯–೭೦ | ೨೧೮.೧ |
| ೧೯೭೦–೭೧ | ೨೩೦.೨ |

ಮಂಡಳ ಮತ್ತು ಸಂಸತ್ತುಗಳಿಗೆ ಆಗುವ ಚುನಾವಣೆಗಳು ಅತೀವ ವೆಚ್ಚದಾಯಕವಾಗಿರುವುದರಿಂದ ಸಿರಿವಂತರು ಮಾತ್ರ (ಅಪವಾದಗಳು ತೀರ ವಿರಳ) ಸ್ಪರ್ಧಿಸಿ ಆಯ್ಕೆಯಾಗಬಲ್ಲರೆಂಬಂಥ ಪರಿಸ್ಥಿತಿಯಿದೆ. ಇನ್ನೂ ಒಂದು ವಿಶೇಷವೆಂದರೆ ನಮ್ಮ ರಾಷ್ಟ್ರೀಯ ಆದಾಯದಲ್ಲಿ ಶೇಕಡಾ ೪೦ರಷ್ಟು ಕೃಷಿಮೂಲವಾಗಿರುವುದಾದರೂ ಈ ಕ್ಷೇತ್ರ ಕರಾಕರಣೆಯ ದೃಷ್ಟಿಯಿಂದ ಸರಕಾರದ ಜೊಚ್ಚಲ ಮಗುವೆನಿಸಿದೆ. ದೇಶಕ್ಕೆ ಕರಗಳಿಂದ ಸಂದಾಯವಾಗುವ ಆದಾಯದಲ್ಲಿ ಶೇಕಡಾ ೧ಕ್ಕಿಂತ ಕಡಿಮೆ ಕೃಷಿಮೂಲದಿಂದ ಬರುತ್ತದೆ. ನೇರ ಕರಗಳು ಉಚ್ಚವರ್ಗದಿಂದಲೇ ಹೆಚ್ಚಾಗಿ ಬರುತ್ತವೆಂಬುದು ಸರಿಯಾದರೂ ಈ ವರ್ಗದಲ್ಲಿಯೇ ಕರ ತಪ್ಪಿಸುವುದು ಹೆಚ್ಚಾಗಿದೆ ಮಾತ್ರವಲ್ಲ, ಈ ಕರಗಳನ್ನು ಪ್ರತಿಯಾಗಿ ಬಳಕೆದಾರರ ಮೇಲೆ ಹೊರಳಿಸಿ ಕೃತ್ರಿಮವಾಗಿ ಅತಿಪ್ರಸರಣವನ್ನುಂಟುಮಾಡುವ ಪ್ರವೃತ್ತಿ ಅತಿಯಾಗಿರುವುದು ಸಹ ಕಂಡುಬರುತ್ತದೆ. ಅಂತೆಯೆ, ಬಹುತರ ವೇತನ ಪಡೆಯುವ ವರ್ಗವೇ ಆದ ಮಧ್ಯಮ ವರ್ಗದ ಮೇಲೆಯೆ ನೇರ ಕರಗಳ ಭಾರ ಅತಿಯಾಗಿ ಬೀಳುತ್ತದೆ. ಸುಂಕಗಳಂಥ ಅಪ್ರತ್ಯಕ್ಷ ಕರಗಳ ಭಾರವೂ ಹೆಚ್ಚಾಗಿ ಪೂರ್ಣತಃ ಬಳಕೆದಾರರ ಮೇಲೆಯೇ ಬೀಳುವುದರಿಂದ ಅದರಿಂದಲೂ ತೊಂದರೆಗೀಡಾಗುವವ ಮಧ್ಯಮ ವರ್ಗೀಯನೆ. ೧೯೫೦-೫೧ ರಿಂದ ೧೯೭೧-೭೨ರ ವರೆಗೆ ಕೇಂದ್ರ ಸರಕಾರಕ್ಕೆ ವಿವಿಧ ಸುಂಕಗಳಿಂದ ಬರುವ ಆದಾಯ ರೂ ೬೭.೫೪ ಕೋಟಿಯಿಂದ ರೂ. ೨,೪೭೪.೮ ಕೋಟಿಗೆ ಅರ್ಥಾತ್ ೨೧ ವರ್ಷಗಳಲ್ಲಿ ೩೬ ಪಟ್ಟು ಹೆಚ್ಚಾಗಿದೆ ಇದು ಬೆಲೆಗಳ ಮಟ್ಟ ಹೆಚ್ಚಾಗುವುದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಕಾರಣವಾಗಿದೆ ಹಸಿರು ಕ್ರಾಂತಿಯ ಪ್ರಯೋಜನ ಪಡೆದು ಶ್ರೀಮಂತ-

**ಅಂಕಣ ೩ : ಕೆಲವು ಆಯ್ದ ವಸ್ತುಗಳ ಚಿಲ್ಲರೆ ಬೆಲೆಗಳು**
**೧೯೪೭—೪೮ ಮತ್ತು ೧೯೭೨ ರಲ್ಲಿ**

| ವಸ್ತು (ಒಂದು ಕಿಲೋಕ್ಕೆ) | ಬೆಲೆ ೧೯೪೭-೪೮ ರಲ್ಲಿ (ಪೈಸೆಗಳಲ್ಲಿ) | ಬೆಲೆ ೧೯೭೨ ರಲ್ಲಿ (ಪೈಸೆಗಳಲ್ಲಿ) | ಶೇಕಡಾವಾರು ಅಂತರ |
|---|---|---|---|
| ಜೋಳ | ೩೦ | ೧೨೫ | ೩೧೭ |
| ಗೋದಿ | ೩೭ | ೧೧೬ | ೨೧೪ |
| ಕಡಲೇ ಬೇಳೆ | ೩೦ | ೧೨೫ | ೩೧೭ |
| ಸಕ್ಕರೆ | ೭೫ | ೩೬೦ | ೩೬೬ |
| ಅಕ್ಕಿ | ೬೦ | ೨೧೦ | ೩೦೦ |
| ಶುದ್ಧ ತುಪ್ಪ | ೪೦೦ | ೧೫೦೦ | ೨೫೦ |
| ವನಸ್ಪತಿ ತುಪ್ಪ | ೧೭೦ | ೫೮೦ | ೨೭೫ |
| ಬಟ್ಟೆ ಸಾಬೂನು | ೧೨೫ | ೫೦೦ | ೩೦೦ |
| ಪಲ್ಲೆಕಾಯಿ | ೨೫-೫೦ | ೧೦೦-೨೦೦ | ೩೦೦ |
| ಹಾಲು | ೫೦ | ೧೭೦ | ೨೪೦ |
| ಬಟ್ಟೆ (ಸಾಧಾರಣ ತರಗತಿಯದು) | ೧೨೫ | ೫೦೦ | ೩೦೦ |

ರಾಗಿರುವ ದೊಡ್ಡ ಕೃಷಿಕರು, ಆದಾಯವನ್ನು ಬಚ್ಚಿಟ್ಟು ಕರ ತಪ್ಪಿಸಬಲ್ಲ ಉದ್ಯೋಗಪತಿಗಳು ಮತ್ತು ವ್ಯಾಪಾರಸ್ಥರು, ಹಾಗು ಸಾರ್ವಜನಿಕ ಸಂಪತ್ತನ್ನೇ ಸ್ವಂತಕ್ಕಾಗಿ ಉಪಭೋಗಿಸುವ ರಾಜಕಾರಣಿಗಳು ಇವರೆಲ್ಲರ ಮಟ್ಟಿಗೆ ನಮ್ಮ ದೇಶ ಸಾಧಿಸಿದ ಆರ್ಥಿಕ ಪ್ರಗತಿ ಅರ್ಥವತ್ತಾಗಿದೆ. ನಗರಗಳಲ್ಲಿ ಹೆಚ್ಚೆಚ್ಚಾಗಿ ಲಭ್ಯವಾಗುತ್ತಿರುವ ವಿಲಾಸ ವೈಭವಗಳು ಅತಿಪ್ರಸರಣ ಈ ವರ್ಗದ ಮೇಲೆ ಯಾವ ದುಷ್ಪರಿಣಾಮವನ್ನೂ ಬೀರದೆಯೇ ಇವರ ಸಿರಿವಂತಿಕೆ ಹಿಂದಿಗಿಂತಲೂ ಹೆಚ್ಚಾಗಿದೆಯೆಂಬುದನ್ನು ಸೂಚಿಸುತ್ತಿವೆ. ನಗರಗಳಲ್ಲಿ ಹೆಚ್ಚುತ್ತಿರುವ ಭವ್ಯ ಸೌಧಗಳು, ಮುಗಿಲು ಮುಟ್ಟುವಂಥ ಹತ್ತಿಪ್ಪತ್ತು ಅಂತಸ್ತಿನ ಕಟ್ಟಡಗಳು ಇವಕ್ಕೆ ಸಾಕ್ಷಿಯಾಗಿವೆ.


ಇದೇ ರೀತಿ, ಕೆಳವರ್ಗದ ಜನರೊಂದಿಗೆ ಮಧ್ಯಮವರ್ಗದವರನ್ನು ಹೋಲಿಸಿ ನೋಡಿದಾಗಲೂ ಇದೇ ಬಗೆಯ ಉತ್ತರ ಕಂಡುಬರುತ್ತದೆ. ನಾಲ್ಕನೆಯ ದರ್ಜೆಯ ನೌಕರರು, ಕಾರಖಾನೆಗಳಲ್ಲಿಯ ಕೆಲಸಗಾರರಲ್ಲದೆ ಕೂಲಿ ಕುಂಬಳಿ ಮಾಡಿಕೊಂಡಿರುವ ಇವರೆಲ್ಲರನ್ನೂ ಕೆಳವರ್ಗದಲ್ಲಿ ಸೇರಿಸಬಹುದು. ಕೆಳವರ್ಗದ ಈ ಕೆಲಸಗಾರರು ಬಹು ಮಟ್ಟಿಗೆ ಸುಸಂಘಟಿತರಾಗಿರುವುದರಿಂದ ಅತಿಪ್ರಸರಣದ ದುಷ್ಪರಿಣಾಮಗಳನ್ನು ಕಡಿಮೆ ಮಾಡುವಂತೆ ಅವರ ತುಟ್ಟಿಭತ್ತೆಯನ್ನು ಬೆಲೆಸೂಚಿಯಲ್ಲಿಯ ಏರಿಳಿತಗಳಿಗೆ ಜೋಡಿಸಲಾಗಿದೆ. ಅಲ್ಲದೆ ಬಹು ಜನರಿಗೆ ಸಮವಸ್ತ್ರ, ಪಾದರಕ್ಷೆ ಮುಂತಾದವುಗಳ ಉಚಿತ ಪೂರಯಿಕೆಯಾಗುತ್ತದೆ.

ಕೆಳವರ್ಗದವರು ಮುಖ್ಯವಾಗಿ ಬಳಸುವುದು ಜೋಳ, ಗೋದಿ, ಅಕ್ಕಿಗಳಂತಹ ಆಹಾರ ಧಾನ್ಯಗಳನ್ನು. ಇವುಗಳ ಬೆಲೆಯೂ ಏರುತ್ತಿದೆಯಾದರೂ ಇದೆಲ್ಲ ಸುಂಕದಿಂದ ಮುಕ್ತವೆಂಬುದನ್ನು ಗಮನಿಸಬೇಕು. ಅಲ್ಲದೆ ಇವರು ಬಳಸುವ ಒರಟು ಬಟ್ಟೆಗಳ ಬೆಲೆಗಳನ್ನು ಸರಕಾರ ನಿಯಂತ್ರಿಸುತ್ತಿರುವುದರಿಂದ ಅವುಗಳಿಂದಾಗಬಹುದಾದ ಹಾನಿಯೆಲ್ಲವನ್ನೂ ಉದ್ದಿಮೆದಾರರು ಇತರ ಹೆಚ್ಚಿನ ದರ್ಜೆಗಳ ಬಟ್ಟೆಯ ಬೆಲೆಯೇರಿಸಿ ತುಂಬಿಕೊಳ್ಳುತ್ತಾರೆ. ಇದರಿಂದ ದುಷ್ಪರಿಣಾಮಗಳಾಗುವುದು ಒರಟು ಬಟ್ಟೆ ತೊಡಲೊಲ್ಲದ ಮಾಧ್ಯಮ ವರ್ಗೀಯನ ಮೇಲೆಯೇ. ಕೆಳವರ್ಗದವರ ಬೇಡಿಕೆ ಆವಶ್ಯಕತೆಗಳು ಮಧ್ಯಮ ವರ್ಗದವರಿಗಿಂತ ಕಡಿಮೆಯಾಗಿರುವುದು ಮಾತ್ರವಲ್ಲ, ವಯಸ್ಸಿಗೆ ಬಂದವರೆಲ್ಲರೂ ದುಡಿಯುವುದು ಇವರಲ್ಲಿ ಸಾಮಾನ್ಯ ನಿಯಮವೇ ಆಗಿರುತ್ತದೆ. ಈ ವಿಷಯದಲ್ಲೂ ಪರಿಸ್ಥಿತಿ ಮಾಧ್ಯಮ ವರ್ಗೀಯರಿಗೆ ಪ್ರತಿಕೂಲವೇ ಆಗಿದೆ.

ಈ ಎಲ್ಲ ತುಲನೆಯ ನಂತರ ವ್ಯಕ್ತವಾಗುವುದಿಷ್ಟು :

ಕಳೆದ ೨೫ ವರ್ಷಗಳಲ್ಲಿ ಉಚ್ಚ ಮತ್ತು ಮಧ್ಯಮವರ್ಗಗಳಲ್ಲಿಯ ಅಂತರ ಹೆಚ್ಚುತ್ತಲೇ ನಡೆದಿದೆಯಲ್ಲದೆ ಮಧ್ಯಮವರ್ಗೀಯರು ಕೆಳವರ್ಗಕ್ಕೆ ಹೆಚ್ಚೆಚ್ಚು ಸಮೀಪ ಬರತೊಡಗಿದ್ದಾರೆ. ಬುದ್ಧಿಪ್ರಧಾನವಾದ ಈ ವರ್ಗವನ್ನು ಉಚ್ಚಾಟಿಸಿ ದೇಶದಲ್ಲಿ ಶ್ರೀಮಂತ ಮತ್ತು ಬಡವ ಎಂಬೆರಡೇ ವರ್ಗಗಳನ್ನುಳಿಸಿಕೊಳ್ಳಲು ನಮ್ಮ ಮುಖಂಡರು ಪ್ರತಿಜ್ಞೆಗೈದಿದ್ದಾರೇನೊ ಎಂದು ಒಮ್ಮೊಮ್ಮೆ ಸಂದೇಹ ಬರುವಂತಾಗುತ್ತದೆ. ಬುದ್ಧಿಪ್ರಧಾನವಾದ ಮಧ್ಯಮವರ್ಗದಲ್ಲಿ ಹೊಗೆಯಾಡುತ್ತಿರುವ ಅಸಂತೋಷ ಭವಿಷ್ಯತ್ತಿನಲ್ಲಿ ಯಾವ ಪರಿಣಾಮಗಳಿಗೆಡೆಮಾಡಿಕೊಡಬಹುದೋ ನೋಡಬೇಕು. ಆದರೆ ದೇಶದ ಭವಿತವ್ಯದ ದೃಷ್ಟಿಯಿಂದ ಇದು ಒಳ್ಳೆಯ ಲಕ್ಷಣವಲ್ಲವೆಂಬುದು ಶತಸ್ಸಿದ್ಧ. ▲

ಆಭಾರ : ದಿಲ್ಲಿಯ "ಕೆರವಾನ್"




# ಬಟ್ಟೆಯಾಲುವಿನ ಗಾಳಿ
# ನಮ್ಮ ಬಾಳಿನ ಉಸಿರು

ಬಟ್ಟೆ ಶಿಸ್ತಿನ ವಿಷಯದಲ್ಲಿ ಈಗಿನ ಕಾಲದವರ ಅಭಿರುಚಿಯೇನು ಎಂಬುದು ನಮಗೆ ಗೊತ್ತು. ಮಾತ್ರವಲ್ಲ, ಹೊಸ ಹೊಸ ಅಭಿರುಚಿಯ ಮೇಲ್ಪಂಕ್ತಿಯನ್ನೂ ಹಾಕುತ್ತೇವೆ. ಇದಕ್ಕಾಗಿ ನಾವು ಅತ್ಯುತ್ತಮವಾದ ಲಾಂಕ್ಲಾತ್, ಪಾಪ್ಲಿನ್, ಮಲ್, ಸೂಟಿನ ಬಟ್ಟೆ, ಪಂಚೆ ಮುಂತಾದುವುಗಳನ್ನು ತಯಾರು ಮಾಡುತ್ತಿದ್ದೇವೆ. ಇನ್ನೂ ವಿಧವಿಧವಾದ ಬಟ್ಟೆಗಳನ್ನು ನಯನ ಮನೋಹರವಾದ ಬಣ್ಣಗಳಲ್ಲಿಯೂ, ವಿನ್ಯಾಸಗಳಲ್ಲಿಯೂ ಇಷ್ಟರಲ್ಲಿಯೇ ತಯಾರು ಮಾಡುತ್ತೇವೆ.

**MTM ಮಹದೇವ್ ಟೆಕ್ಸ್‌ಟೈಲ್ ಮಿಲ್ಸ್**

ಹುಬ್ಬಳ್ಳಿ

ಜೆವಮ್

Rachana·MTM 3 b Kan

ಮೈಸೂರು ರಾಜ್ಯದ ಏಜಂಟರು: ೧) ಮೆ। ಎವರ್‌ಟೆಕ್ಸ್ ಏಜೆನ್ಸೀಜ, ಬೆಳಗಾವಿಗಲ್ಲಿ, ಹುಬ್ಬಳ್ಳಿ

# ತಿತ್ತಿರಿ ಸಂಸಾರ

## ಪ್ರಾಣಿ ಜೀವನದ ದುರಂತ ನಾಟಕ

ಶಶಿಧರ ವಿಶ್ವಾಮಿತ್ರ

ಅಂದಿನ ಸಂಜೆಯೆಲ್ಲಾ ಗಾಳಿ ಒಟ್ಟುಗೂಡಿಸಿ ಬಾನಂಚಿನಿಂದ ಅಂಚಿಗೆ ನೇಣು ಹಾಕಿದಂತೆ ಅಡ್ಡರಿಸಿದ್ದ ವೈಶಾಖದ ಮೋಡಗಳು ರಾತ್ರಿ ಗುಡುಗು ಗುಡುಗುಡಿಸಿ ಮಿಂಚು ಮಿಂಚಿಸಿ ನಂತರ ಅಡ್ಡಮಳೆಯ ರಭಸ ಗದ್ದಲಗಳಿಲ್ಲದೆ ಒಂದರ್ಧ ಘಂಟೆ ತೂರಲು ಹನಿಗಳನ್ನು ಹನಿಕಿಸಿ ಸುಮ್ಮನಾಗಿ ಮೆಲ್ಲಮೆಲ್ಲನೆ ಕರಗಿಹೋಗಿದ್ದುವು. ಬೆಳಗಿನ ಸೌಮ್ಯಸೂರ್ಯ ಬಾನಿನಲ್ಲಿ ಅಲ್ಲೊಂದು ಇಲ್ಲೊಂದು ಗಂಭೀರವಾಗಿ ನಿಂತಿದ್ದ ಬೆಳ್ಮೋಡಗಳ ಅಂಚುಗಳಿಗೆ ಮಿಂಚುಮೆರಗಿನ ಅಂಚನ್ನು ತೊಡಿಸಿದ್ದ.

ಗುಟ್ಟೆಯ ಕಪೋಲದ ಮೇಲೆ ಸೊಟ್ಟ ಬೈತಲೆಯಂತೆ ಅರೆಯನ್ನು ಹೊದರನ್ನು ಬಳಸಿ ಹೋಗುವ ಹೊನವಳ್ಳಿ-ಬೈರನಹಳ್ಳಿಯ ಕಾಲು ಹಾದಿಯ ಬಡ್ಡೆಯಲ್ಲಿಯೇ ಅರೆಯೊಂದನ್ನು ಸುತ್ತುವರೆದು ದಟ್ಟೈಸಿದ್ದ ಲಂಟಾನಾ ಹೊದರಿನೊಳಗಡೆಯ ಅರೆಪೊಟರೆಯ ಅಕ್ಕೆಯಲ್ಲಿ ಮಿದುವಾದ ಹುಲ್ಲು ತರಗೆಲೆಗಳನ್ನು ಹಾಸಿ ರಚಿಸಿಕೊಂಡಿದ್ದ ಹೊಂಡೆಯೊಳಗೆ ಇನ್ನೂ ಎರಡು ದಿನದ ಆರು ಹೂಮರಿಗಳನ್ನು ತನ್ನ ರೆಕ್ಕೆ ಗರ್ಭದಲ್ಲಿರಿಸಿಕೊಂಡ ತಾಯಿ-ತಿತ್ತಿರಿ, ಸನಿಹದಲ್ಲಿಯೇ ಕತ್ತನ್ನು ಎದೆಯೊಳಗೆ ಹುದುಗಿಸಿ ದೇಹವನ್ನು ಹಿಡಿಮಾಡಿಕೊಂಡ ಗಂಡು ತಿತ್ತಿರಿ ಗೊತ್ತುಕೂತಿದ್ದವು. ಎರಡಕ್ಕೂ ಆ ಕಾಲು ಹಾದಿಯಲ್ಲಿ ಮುಂದೆ ದನವನ್ನು ಬಿಟ್ಟುಕೊಂಡು ಹೊನವಳ್ಳಿಯ ಕಡೆಗೆ ಹೊರಟಿದ್ದ ಬೈರನಹಳ್ಳಿಯ ಎಲೆಗಪ್ಪನ ಪದಾಘಾತ ಕೇಳಿಸಿ ಮಿಸುಕದೆ ಕುಳಿತಲ್ಲಿಯೇ ಘನೀಭೂತವಾಗಿದ್ದುವು. ತಾಯಿಯ ರೆಕ್ಕೆ ರಕ್ಷೆಯಲ್ಲಿದ್ದರೂ ರಾತ್ರಿಯ ಸಣ್ಣ ಮಳೆ ಹಾಗೂ ಮೋಡದ ಛಳಿಗಳಿಂದ ನಡುಗುತ್ತಿದ್ದು ನಿಂತಲ್ಲಿ ನಿಲ್ಲದೆ ಮುಲುಕುತ್ತಿದ್ದ ಆ ಆರು ಹೂಮರಿಗಳೂ ಈ ಶಬ್ದ ಕೇಳಿದೊಡನೆಯೇ ಘನೀಭೂತವಾಗಿದ್ದವು. ಪದಾಘಾತಗಳು ಬಳಿಸಾರಿ ನಂತರ ದೂರ ದೂರ ಹೋಗಿ, ಕ್ಷೀಣಿಸಿ, ಕೇಳಿಸದಂತಾದಾಗ ಗಂಡುತಿತ್ತಿರಿ ಕಾಲೂರಿ ನೆಟ್ಟಗೆ ನಿಂತು, ಕತ್ತೆತ್ತಿ, ರೀವಿಯಿಂದ ತನ್ನ ಕಂದು-ನಸ್ಯ ಬಣ್ಣದ ರೆಕ್ಕೆ ಪುಕ್ಕಗಳನ್ನೂ ಚಿತ್ತಾರವಾದ ಕರಿಯ ಅಡ್ಡರೇಖಾ-

ಗಳಿದ್ದ ಬೂದುಬಿಳಿಯ ಉದರದ ಪುಕ್ಕಗಳನ್ನು ಕೊಕ್ಕಿನಲ್ಲಿ ನೇರ್ಪುಗೊಳಿಸಿ ತನ್ನನ್ನೇ ಎಲ್ಲಾ ವಿಧದಲ್ಲಿ ಹೋತರೂ ಗಾತ್ರದಲ್ಲಿ ತನಗಿಂತ ತುಸು ಕಿರಿದಾದ ಹೆಣ್ಣಿನತ್ತ ಒಲುಮೆ ವೈಯಾರಗಳಿಂದ ನೋಡಿ, ಅಕ್ಕಿಯ ಹೊಂಡೆಯಿಂದ ಹೊರಬಂದು, ತುಸು ದೂರ ನಡೆದು ಬೆಳಗಿನ ಸೂರ್ಯನಿಗೆ ತನ್ನ ಸಂಪುಷ್ಟವಾದ ಮೈಯನ್ನು ಹರಹಿ, ಸುತ್ತಲಿನ ಜಗತ್ತನ್ನು ಗಂಡುಗತ್ತಿನಿಂದ ಕೆಕ್ಕರಿಸಿನೋಡಿ ನಂತರ, ಕಿಯೆ ಕ್ಕೊಕ್ಕೊಕ್ಕೋ, ಕಿಯೆ ಕ್ಕೊಕ್ಕೊಕ್ಕೋಲೀ ಎಂದು ಗರ್ವದಿಂದ ಕೂಗಿತು. ಆ ಮೇಲೆ ತನ್ನ ದುಂಡು ರೆಕ್ಕೆಗಳು ಕೊಂಡೊಯ್ಯುವಷ್ಟು ದೂರ ಹಾರಿ, ಗುಟ್ಟೆಯ ಕೆಳಗಡೆ ಹೊಲವೊಂದರ ಮಧ್ಯದಲ್ಲಿದ್ದ ಇನ್ನೂ ಹಸಿಯಾದ ಮಣ್ಣಿನ ಗೆಜ್ಜಲುಗೂಡನ್ನು ತನ್ನ ಕಾಲುಗಳಿಂದ ಕೆದರಿ, ಚೂಪಾದ ಕೊಕ್ಕಿನಿಂದ ಕಡಿದು ಗೆದ್ದಲನ್ನು ಹೆರಕಿ ತಿನ್ನಲು ಸುರು ಹಚ್ಚಿತು.

ಹೊರಗಣ್ಣಿನಿಂದ ಗಂಡಿನ ಉಲಿವುಗಳನ್ನು ಕೇಳಿ, ತನ್ನ ಮರಿಗಳನ್ನು ಹೊಂಡೆಯಿಂದ ಹೊರ-ಕಿಸಿಕೊಂಡು ಪ್ರಾಣಿಪ್ರಪಂಚದ ನಿರ್ದಯ ನಿಯತಿಗಳನ್ನೂ ಅವಕ್ಕಿಂತ ಮಿಗಿಲಾಗಿ ತಮ್ಮ ವೈರಿ ಮನುಷ್ಯನ ಅಮಾನುಷತೆಗಳನ್ನೂ ಬಲ್ಲ ತಾಯಿ ತಿತ್ತಿರಿ, ಇನ್ನೂ ಹಾರಲಾಗದೆ, ಸರ್ರನೆ ನಡೆ-ಯಲೂ ಆಗದೆ ಏಳು–ಬೀಳುತ್ತಾ ಕೀಯಗ್-ಗುಟ್ಟಿಕೊಂಡು ತನ್ನೊಡನೆ ಬರುತ್ತಿದ್ದ ತನ್ನ ಮರಿಗಳನ್ನು ಅತ್ಯಂತ ಜಾಗರೂಕವಾಗಿ ತನ್ನ ರಕ್ಷಣೆಯಲ್ಲಿಯೇ ಮೆದುವಾಗಿ ಗಂಡುತಿತ್ತಿರಿ ತನ್ನನ್ನು ಉಲಿದು ಕರೆಯುತ್ತಿದ್ದ ಬಳಿಗೆ-ಕೊಂಡೊಯ್ದಿತು ಗೆದ್ದಲನ್ನು ಕಂಡದ್ದೇ ಮರಿಗಳು ಕೀಯಗ್‌ಗುಡುವುದನ್ನು ಬಿಟ್ಟು ತಿನ್ನ-ಲಿಕ್ಕೇ ಹುಟ್ಟಿದ್ದಂತೆ ಆತುರ ಕಾತುರಗಳಿಂದ ಗೆದ್ದಲನ್ನು ಹೆರಕಿ ತಿನ್ನಲು ಸುರುಹಚ್ಚಿದ್ದುವು.

ದೂರ ಗಗನದಲ್ಲಿ ಕರಿಚುಕ್ಕೆಯಾಗಿ ಕಾಣಿಸಿ-ಕೊಂಡು, ವರ್ತುಲ ಸುತ್ತುತ್ತಾ, ಸುತ್ತುತ್ತಾ, ಹತ್ತಿರ ಬಂದಂತೆ ಬಂದಂತೆ ಬೇಟೆಗೆ ಹೊಂಚಿ ಬಂದ ಹದ್ದಾದಾಗ ನಿರಾತಂಕವಾಗಿ ಗೆದ್ದಲು ಹೆರಕುತ್ತಿದ್ದ ತಿತ್ತಿರಿ ಮರಿಗಳ ತಾಯಿಗೆ ಫಕ್ಕನೆ ಎಚ್ಚರವಾಗಿತ್ತು. ಹದ್ದು ನಿಧಾನವಾಗಿ ನಿಶ್ಶಬ್ದವಾಗಿ, ಗಂಭೀರವಾಗಿ ಕೆಳಕೆಳಗೆ ಇಳಿಯು-ತ್ತಿರುವುದನ್ನು ಕಂಡು, ಮುಳ್ಳು ಮರೆಯಿಲ್ಲದ ಮೈದಾನದಲ್ಲಿ ಕಾಣಸಿಕ್ಕ ತಾವು ಇನ್ನು ಘನೀ-ಭೂತವಾಗುವುದು ನಿಷ್ಪ್ರಯೋಜಕವೆಂದು ತಾಯಿ ತಿತ್ತಿರಿ ಕರ್ಕಶವಾಗಿ ಕ್ರೀಕ್ ಕ್ರೀಕ್ ಎಂದದ್ದೇ ತನ್ನ ಮರಿಗಳನ್ನು ಗದರಿ ಕರೆದು, ಸರ್ರನೆ ಅವುಗ-ಳನ್ನು ತನ್ನ ರಕ್ಷಣೆಯಲ್ಲಿ ಹತ್ತಿರದ ಲಂಟಾನಾದ ಹೊದರಿನೆಡೆಗೆ ಹೊರಡಿಸಿಕೊಂಡು ಹೊರಟಿತ್ತು. ಇದನ್ನು ಗಮನಿಸಿದ ಹದ್ದು ಮೆಲ್ಲಮೆಲ್ಲನೆ ವರ್ತುಲ ಸುತ್ತುವುದನ್ನು ಬಿಟ್ಟು ಥಟ್ಟನೆ ಗುಂಡು ಬಿದ್ದಂತೆ ಕೆಳಗೆ ಬಂದು ಮರಿ ತಿತ್ತಿರಿ-ಯೊಂದರ ಮೇಲೆ ಎರಗಿತು. ಮರಿಗಳ ರಕ್ಷಣೆ-ಗಾಗಿ ಎಂತಹ ಅಪಾಯವನ್ನಾದರೂ ಎದುರಿಸುವ ಛಾತಿಯುಳ್ಳ ತಾಯಿತಿತ್ತಿರಿಯೂ ಅಷ್ಟರಲ್ಲೇ ತನ್ನ ಸಂಸಾರಕ್ಕೊದಗಿ ಬಂದಿದ್ದ ಈ ಹಠಾತ್ ಗಂಡಾಂ-ತರವನ್ನು ಗುರುತಿಸಿ ಕನಲಿ ಹಾರಿಬಂದಿದ್ದ ಗಂಡುತಿತ್ತಿರಿಯೂ ಬೀಭತ್ಸವಾಗಿ ಕಿರಿಚಿ, ರೆಕ್ಕೆಗಳನ್ನು ಬಿಡಿಸಿಕೊಂಡು ಅತ್ಯಂತ ರೋಷ-ದಿಂದ ಹದ್ದಿನ ಮೇಲೆ ಎರಗಿದವು. ಕೊನೆಯ ಘಳಿಗೆಯಲ್ಲಾದ ಈ ರಂಪದಿಂದ ಹದ್ದಿನ ಲೆಕ್ಕಾ-ತಪ್ಪಿ ಮರಿ ದಕ್ಕದೆ, ತನ್ನ ಮೇಲೆ ರೌದ್ರಾ-ವತಾರದಿಂದೆರಗಿ ಬಂದಿದ್ದ ತಿತ್ತಿರಿಗಳ ಹೊಡೆತ ವನ್ನು ಚುರುಕಿನಿಂದ ತಪ್ಪಿಸಿಕೊಂಡು ಹಾರಿ, ಹತ್ತಿರದ ಆಲದ ಮರದ ತುದಿಗೊಂಬೆಯೊಂದರ ಮೇಲೆ ಕುಳಿತು, ತುಸು ಹೊತ್ತು ಅಸಮಾಧಾನ-ದಿಂದ ಕಯ್ಯಿಯ್ಯಿ ಇಯ್ಯೂ, ಕಯ್ಯಿಯ್ಯಿ-ಇಯ್ಯೂಗುಟ್ಟಿ, ನಂತರ ಸುಮ್ಮನಾಯಿತು.

•

ಹೊತ್ತೇರಿದಂತೆ ಮೇಯುತ್ತಿದ್ದ ಮೇಕೆಗಳ

ಸಂಗಡ ಗುಟ್ಟೆಯ ಮೇಲೇರಿ ಬರುತ್ತಿದ್ದ ಬೈರನಹಳ್ಳಿಯ ಎಲಗಪ್ಪನ ಮಗ ಮಾದ ತಿತ್ತಿರಿಗಳು ಹುದುಗಿದ್ದ ಹೊದರಿನ ಬಳಿಯೇ ಸಾರಿ, ಹದ್ದು ತಾಳ್ಮೆಯಿಂದ ನಿಶ್ಶಬ್ದವಾಗಿ ಕುಳಿತಿದ್ದ ಆಲದ ಮರವನ್ನೇರಿ, ದೋಟಿಯಿಂದ ಬಂದಷ್ಟು ಸೊಪ್ಪು ಸವರಿ ಕೆಳಗೆ ಬಿಸಾಡಿದಾಗ ಮೇಕೆಗಳು ಸರಸರನೆ ಓಡಿಬಂದು ಆಲದೆಲೆಗಳಿಗೆ ಬಾಯಿ ಹಾಕಿದವು. ಅವು ಅಸಾಧ್ಯವಾದ ಧಾಂದಲೆ ನಡೆಯಿಸುತ್ತಿದ್ದಾಗ ತಿತ್ತಿರಿಗಳು ಸುಮ್ಮನೆ ಹುದುಗಿದ್ದಲ್ಲಿಯೇ ಹುದುಗಿಕೊಂಡಿದ್ದವು. ಮಾದ ಸೊಪ್ಪಿಗಾಗಿ ಟೊಂಗೆಗಳನ್ನು ಸವರಿದಾಗ ಗಾಬರಿಗೊಂಡು ಗಗನಕ್ಕೇರಿದ ಹದ್ದು, ಎಲ್ಲೂ ಏನೂ ದಕ್ಕದೆ ನಿರಾಶೆಯಿಂದ ಪುನಃ ಆಲದ ಮರಕ್ಕೇ ಬಂದು ಕುಳಿತಿತು. ಮಾದ ಮರದ ಬುಡದಲ್ಲಿಯೇ ಹಾಯಾಗಿ ಅಡ್ಡಲಾದ.

ಸುತ್ತಲಿನ ಪರಿಸರ ನಿರಾತಂಕವಾಗಿದೆಯೆಂದರಿತ ಮೇಲೆ ಲಂಟಾನಾದಲ್ಲಿ ಹುದುಗಿದ್ದ ಗಂಡು ತಿತ್ತಿರಿ ಗಂಡಿಗೆ ಸಹಜವಾದ ಧೈರ್ಯ ದಿಟ್ಟತನಗಳಿಂದ ಮೊದಲು ಹೊರಬಂದು ನೆಟ್ಟಗೆ ಕಾಲೂರಿ ನಿಂತು, ಆಢ್ಯವಾಗಿ ಸುತ್ತಲೂ ನೋಡಿ ಕಿಯ್ಯೆಕ್ಕೊಕ್ಕೊಕೋ ಎಂದುಲಿದು, ಅಲ್ಲಿಯೇ ಜರ್ಬಿನಿಂದ ಓಡಿಯಾಡಿ, ಹೊಲದಲ್ಲಿದ್ದ ಗೆದ್ದಲು ಗೂಡಿನತ್ತ ಹಾರಿತು. ತುಸು ಹೊತ್ತಿನಲ್ಲಿಯೇ ತಾಯಿತಿತ್ತಿರಿಯೂ, ಇನ್ನೂ ಸುಮ್ಮನಿರಲು ಸಾಧ್ಯವಾಗದೆ ಮುಲುಕುತ್ತಿದ್ದ ತನ್ನ ಆರೂ ಹೂಮರಿಗಳನ್ನು ಹೊರಡಿಸಿಕೊಂಡು ಹೊರಟಿತು. ಅವು ಸ್ವೇಚ್ಛೆಯಿಂದ ಗೆದ್ದಲು ಹೆರಕಲು ಶುರು ಹಚ್ಚಿದುದನ್ನು ಆಲದ ಮೇಲೆ ನಿಶ್ಚಲವಾಗಿ ಕುಳಿತು ಹದ್ದು ಆಸಕ್ತಿಯಿಂದ ನೋಡತೊಡಗಿತು. ತುಸು ಹೊತ್ತು ಗೆದ್ದಲು ಹೆರಕಿ ತೃಪ್ತಿಗೊಂಡ ಮರಿಗಳು ಪಕ್ಕದಲ್ಲಿಯೇ ಮಣ್ಣಿನಲ್ಲಿ ಹೊರಳಿಬಿದ್ದು, ಸಾಧ್ಯವಾದಷ್ಟು ಗಟ್ಟಿಯಾಗಿ ಕೀಗುಟ್ಟಿ, ಒಂದರ ಮೇಲೊಂದು ತೆಕ್ಕೆಮುರಿ ಬಿದ್ದು, ತಮ್ಮ ಎಳೆಯ ಕಾಲುಗಳಿಂದ ಒದೆದು ಕೊಕ್ಕಿನಿಂದ ಕಡಿದು, ಜೋಡಿ ಜೋಡಿಯಾಗಿ ಹೋರಾಡಲು ಶುರುಮಾಡಿದ್ದುವು. ಕ್ಷಿಪ್ರಕೋಪ ಕ್ಷಿಪ್ರ ಕಾಳಗಗಳಿಗೆ ಹೆಸರಾದ ತನ್ನ ಕುಲಸ್ವಭಾವವನ್ನು ಬಲ್ಲ ತಾಯಿತಿತ್ತಿರಿ ಒಂಟಿ ಕಾಲಿನ ಮೇಲೆ ಸ್ತಬ್ಧವಾಗಿ ನಿಂತು ತನ್ನ ಕಂದಮ್ಮಗಳ ಕಾಳಗವನ್ನು ಆಸಕ್ತಿಯಿಂದ ನಿರೀಕ್ಷಿಸಿತ್ತು. ಬೇಗ ಕಾಳಗ ನಿಲ್ಲಿಸದೆ ಉನ್ಮಾದ ರೋಷಗಳಿಂದ ಅವು ಶಕ್ತಿ ಮೀರಿ ಸೆಣಸುವುದನ್ನು ಕಂಡು ತಾಯಿತಿತ್ತಿರಿ ಕ್ರೀಕ್ ಕ್ರೀಕ್ ಎಂದು ಗದ್ದರಿಸುತ್ತಲೆ ಎಷ್ಟು ಹಠಾತ್ತಾಗಿ ಕಾಳಗವನ್ನು ಶುರುಮಾಡಿಕೊಂಡಿದ್ದುವೋ ಅಷ್ಟೇ ಕ್ಷಿಪ್ರದಲ್ಲಿ ಅವು ಕಾಳಗ ನಿಲ್ಲಿಸಿ, ಏನೂ ಆಗಿಲ್ಲವೆಂಬಂತೆ ಆಟವಾಡತೊಡತೊಡಗಿದವು.

ಅದೇ ಕ್ಷಣದಲ್ಲಿಯೇ ನಾಲ್ಕಾರು ಘಟನೆಗಳು ಸರ್ರನೆ ಜರಗಿ ಹೋಗಿದ್ದುವು. ಅರೆಗಣ್ಣಾಗಿ ಅಡ್ಡಾಗಿದ್ದ ಮಾದನಿಗೆ ಗಂಡುತಿತ್ತಿರಿಯ ಉಲಿವು ಕೂಕುಗಳು, ನಂತರ ತಾಯಿತಿತ್ತಿರಿಯ ಕ್ರೀಕ್ ಕೇಳಿಸಿ, ಪೂರ್ತಿ ಎಚ್ಚರಾಯಿತು. ಕಾಳಗದ ಗೌಜನ ಹಕ್ಕಿಗಳನ್ನು (ತಿತ್ತಿರಿ) ಪಾಜಿ, ಉರುಳುಗಳನ್ನೊಡ್ಡಿ ಹಿಡಿಯಲು ತನ್ನ ತಂದೆ ಎಲೆಗಪ್ಪನ ಜೊತೆ ಗುಟ್ಟೆಯಿಂದ ಗುಟ್ಟೆಗೆ ಅಲೆದಿದ್ದ ಅವನ ಕಿವಿ ಚುರುಕಾಗಿ ಅವನು ಶಬ್ದ ಬಂದ ಕಡೆ ತಿರುಗಿ ಚುರುಕುಗಣ್ಣುಗಳಿಂದ ನೋಡತೊಡಗಿದ್ದ. ಮರದ ಮೇಲೆ, ಕೆಳಗಣ ಪರಿಸರವನ್ನು ನಿರುಕಿಸುತ್ತಾ, ಮಿಸುಕದೆ ಕುಳಿತಿದ್ದ ಹದ್ದು ತಾಯಿತಿತ್ತಿರಿಯಿಂದ ಅತ್ಯಂತ ದೂರವಾಗಿ ಮಣ್ಣಿನಲ್ಲಿ ಹೊರಳಾಡುತ್ತಿದ್ದ ಮರಿಯೊಂದರ ಮೇಲೆ ತನ್ನ ಸಮಸ್ತ ಗಮನವನ್ನೂ ಕೇಂದ್ರೀಕರಿಸಿಕೊಂಡು, ಯಾವ ಶಬ್ದವನ್ನೂ ಮಾಡದೆ ಸರ್ರನಿಳಿದಿದ್ದೇ ಕಾಲುಗುರಗಳಲ್ಲಿ ಆ ಮರಿಯನ್ನು ಸಿಕ್ಕಿಸಿಕೊಂಡು ಭರ್ರನೆ ಹಾರಿಹೋಗಿತ್ತು. ತನ್ನ ಕಣ್ಣೆದುರಿಗೇ ತನ್ನ ಮರಿಯೊಂದನ್ನು ಹೀಗೆ ಹಾರಿಸಿಕೊಂಡು ಹೋಗುತ್ತಿರುವ ಹದ್ದನ್ನು ಕಂಡು ತಾಯಿತಿತ್ತಿರಿ ಅಸಹನೀಯವಾದ ಸಿಟ್ಟಿನಿಂದ ದಹಿಸಿಹೋಗಿ, ಕ್ರೀಕ್ ಕ್ರೀಕ್ ಎಂದು ಕನಲಿ, ಕ್ರಂದಿಸಿ, ತೂಸು ದೂರ ಹಾರಿ, ಗಾಳಿಯನ್ನೇ ಒದೆದು ಕೊಕ್ಕಿನಿಂದ ಕಡಿದು, ನಂತರ ತನ್ನ ಅಸಹಾಯತೆಯಿಂದ ವ್ಯಥಿತವಾಗಿ ತನ್ನ ಉಳಿದ ಮರಿಗಳನ್ನು ಕೂಡಿಕೊಂಡಿತ್ತು. ತಿತ್ತಿರಿಮರಿಗಳು ಗೆದ್ದಲುಣ್ಣುತ್ತಿದ್ದ ಹೊಲದ ಬದುವಿನ ಸನಿಹದಲ್ಲಿಯೇ ಇದ್ದ ಉಬ್ಬೊಂದರ ತುತ್ತತುದಿಯಲ್ಲಿ ತನ್ನ ಚಾಕೊಲೇಟು ಮೇಲ್ಭಾಗ,

ಬೂದು ಹಸುರಿನ ಕೆಳಭಾಗದ ನೀಳ ದೇಹವನ್ನು ಹಿಂದೆ ಹರಡಿಕೊಂಡು, ಕತ್ತೆತ್ತಿ, ಬಿಂಕದ ಕಿರುಚಲನೆಯಿಂದ ಮಾತ್ರ ಜಗತ್ತನ್ನು ವೀಕ್ಷಿಸುತ್ತಿದ್ದ ಗೋಸುಂಬೆಯೊಂದು ಅಸಾಧ್ಯವಾದ ಆತುರದಿಂದ ಚಕ್ಕನೆ ಕೆಳಗೆ ನೆಗೆದು ಸರಸರನೆ ಹತ್ತಿರದ ಗಿಡ್ಡ ಹೊಂಗೆಯ ಪೊದರೊಳಗೋಡಿ ಹುದುಗಿಕೊಂಡಿತ್ತು! ಈ ಗಲಾಟೆಗಳನ್ನು ಕೇಳಿ ಹಾರಿಬಂದಿದ್ದ ಗಂಡುತಿತ್ತಿರಿ ಮೇಲೇರಿ ಹೋಗುತ್ತಿದ್ದ ಹದ್ದು, ಕನಲಿ ಕ್ರೀಂಗುಡುತ್ತಿದ್ದ ತನ್ನ ಹೆಣ್ಣು, ಸನಿಹದಲ್ಲಿಯೇ ಸತ್ತಂತೆ ಸ್ಥಗಿತವಾಗಿ ಮುದುಡಿ ಮಲಗಿದ ಮರಿಗಳು ಇವುಗಳನ್ನು ನೋಡಿ, ಪ್ರಾಯಶಃ ಏನೂ ಆಗಿಲ್ಲವೆಂದು ಭಾವಿಸಿಯೋ, ಇಲ್ಲವೇ ಆದದ್ದು ಆಗಿಹೋಗಿದೆ ಇನ್ನೇನೂ ಮಾಡಲು ಸಾಧ್ಯವಿಲ್ಲವೆಂಬ ನಿರ್ವಿಕಾರದಿಂದಲೋ ಕಿಯೆಂಕ್ಯೊಕ್ಯೊಕೋಕೋ ಎಂದು ನಾಲ್ಕೈದು ಬಾರಿ ಉಲಿದು ಅಲ್ಲಿಯೇ ಠೀವಿಯಿಂದ ತಿರುಗಾಡಿತ್ತು.

ಇದನ್ನೆಲ್ಲ ನೋಡುತ್ತಿದ್ದ ಮಾದ ಲೆಕ್ಕಹಾಕತೊಡಗಿದ್ದ—ತನ್ನ ತಂದೆಯಂತೆ ತಾನೂ ನಾಳೆ ಪಾಜಿಯನ್ನು ತಂದು ಈ ಮರಿಗಳನ್ನ ಹಿಡೀಬೇಕು ಎಂದು.

*

ಗುಟ್ಟೆಯ ಅರೆಯ ಪೊದರಿನ ಹೊಂಡೆಯೊಂದರಲ್ಲಿ ಗುಳ್ಳೇ ನರಿಯ ಸಂಸಾರವೊಂದು ವಾಸವಾಗಿತ್ತು. ಎರಡು ಮೂರು ದಿನಗಳಿಂದ ಬೆಳಗು ಬೈಗೆಲ್ಲ ಆಹಾರಕ್ಕಾಗಿ ಅಲೆದು, ರಾತ್ರಿಯ ವೇಳೆ ಸುತ್ತಲಿನ ಹಳ್ಳಿಗಳ ಸರಹದ್ದನ್ನೆಲ್ಲಾ ತಡಕಿದರೂ, ಏನೂ, ಕಡೆಗೆ ಸತ್ತ ಜಂತುವೂ, ದಕ್ಕದೇ ತಾಯಿ ನರಿಯ ಹಾಲು ಇಂಗಿಹೋಗಿ ಹೊಂಡೆಯಲ್ಲಿದ್ದ ಅದರ ಹಾಲುಮರಿಗಳು ಹಸಿದು ಕಂಗಾಲಾಗಿದ್ದುವು ಹಿಂದಿನ ಸಂಜೆ ಅಳಲಿಗೆ, ಹಕ್ಕಿಪಕ್ಷಿಗಳಿಗೆ ಹೊಂಚಿ ಬೇಸತ್ತು, ರಾತ್ರಿಯೆಲ್ಲಾ ಗದ್ದೆ ಇಲಿಗಳನ್ನು ಹೊಂಚಿ ಹತಾಶವಾಗಿಹೋಗಿದ್ದ ತಾಯಿ ನರಿ ಬೆಳಗಾಗಿದ್ದರೂ ತನ್ನ ಹೊಂಡೆಯನ್ನು ಸೇರದೆ ಗುಟ್ಟೆಯ ಬಂಡೆಯೊಂದರ ಮೇಲೆ ಕುಕ್ಕರುಗಾಲಿನಲ್ಲಿ ಕುಳಿತು ನಾಲಿಗೆ ಹೊರಹಾಕಿ ನಿಡುಸುಯ್ಯುತ್ತಾ ಸುತ್ತಲಿನ ಜಗತ್ತನ್ನು ನಿರಾಸಕ್ತಿ ನಿರಾಶೆಗಳಿಂದ ವೀಕ್ಷಿಸುತ್ತಿತ್ತು. ಸೂರ್ಯ ಮೇಲೆರುತ್ತಲೂ ಕೆಳಗಿನ ಪೊದರೊಂದರಿಂದ ಹೊರಬಂದಿದ್ದ ಹುರವಾಗಿ ಬೆಳೆದ ಗಂಡುತಿತ್ತಿರಿಯ ಕಾಕನ್ನು ಕೇಳಿದೊಡನೆಯೇ ನರಿಯ ಆಸಕ್ತಿ ಕೆರಳಿತು. ಹೊರಬಂದಿದ್ದ ಗಂಡುತಿತ್ತಿರಿ ಠೀವಿಯಿಂದ ಅತ್ತಿತ್ತ ನಡೆದಾಡಿ ತನ್ನ ದುಂಡು ರೆಕ್ಕೆಗಳು ಕೊಂಡೊಯ್ಯುವಷ್ಟು ದೂರ ಹಾರಿ ಹೊಲದ ನಡುವೆ ಇಳಿಯುವಷ್ಟರಲ್ಲಿಯೇ ತನ್ನ ಹಿಂದೆ ಮುಂದೆ ಕೀಯ್‌ಗುಟ್ಟುತ್ತಿದ್ದ ಮರಿಗಳನ್ನು ಹೊರಡಿಸಿಕೊಂಡು ಹೊರಟಂತಿದ್ದ ತಾಯಿತಿತ್ತಿರಿಯ ಸಂಸಾರವನ್ನು ಅತ್ಯಂತ ಆಸಕ್ತಿಯಿಂದ ನೋಡಿ ನರಿ ತನ್ನ ಬೇಟೆಯ ಹೊಂಚಿನ ಸಂಚನ್ನು ನಿಯೋಜಿಸತೊಡಗಿತು. ತಾಯಿತಿತ್ತಿರಿ ಮರಿಗಳೊಡಗೂಡಿ ಅರೆಗಳನ್ನು, ಕುಪ್ಪ, ಪೊದರುಗಳನ್ನು ಬಳಸಿ ಹಾಸುಬಂಡೆಯೊಂದರ ತಗ್ಗಿನಲ್ಲಿ ಮಳೆನೀರನ್ನು ಒಂದೆರಡು ಗುಕ್ಕು ಕುಡಿಯುತ್ತಿದ್ದಾಗ, ಹಿಂಬಾಲಿಸಿ ಬಂದಿದ್ದ ಮರಿಗಳು ಹಾಸುಬಂಡೆಯ ಹಸಿರುಹುಲ್ಲಿನ ಮೇಲೆಯೇ ನಿಂತಿದ್ದವು. ಇದೀಗ ಸಮಯವೆಂದರಿತ ನರಿ ಕುಳಿತಲ್ಲಿಂದ ಸರ್ರನೆ ಜಿಗಿದು ನಿಶ್ಶಬ್ದವಾಗಿ ಬಂದಿದ್ದಿತು. ಒಂದೆರಡು ಗುಟುಕು ನೀರು ಕುಡಿದು ತನ್ನ ಮರಿಗಳನ್ನು ಕೂಡಿಕೊಂಡ ತಾಯಿತಿತ್ತಿರಿಗೆ ಅದೇಕೋ ಅನುಮಾನವಾದಂತಾಗಿ, ಅದು ಮೈಯೆತ್ತರಿಸಿ ಸುತ್ತಲೂ ನೋಡಿತ್ತು. ಏನೂ ಕಾಣಿಸದಿದ್ದರೂ ಯಾವುದೋ ಗಂಡಾಂತರ ಸನ್ನಿಹಿತವಾಗಿದೆಯೆಂದು ಅನಿಸಿ ಅದು ತನ್ನ ಮರಿಗಳೆಲ್ಲವನ್ನೂ ಕ್ರೀಕ್ ಎಂದು ಗದ್ದರಿಸಿ ಅಲ್ಲಿಯೇ ಘನಿಭೂತವಾಗುವಂತೆ ಮಾಡಿ, ತಾನು ರೆಕ್ಕೆಗಳನ್ನು ಸಶಬ್ದವಾಗಿಯೇ ಬಡಿದುಕೊಂಡು ಒಂದೆರಡು ಮಾರು ದೂರ ಹಾರಿ, ಪುಟ್ಟ ಬಂಡೆಯೊಂದರ ಮೇಲೆ ನಿಂತು ಸುತ್ತಲೂ ನೋಡಿತು ಮೇಲಿನಿಂದ ಅರೆಪೊದರುಗಳನ್ನು ಬಳಸಿ, ತೂರಿ, ಆದಷ್ಟು ನಿಶ್ಶಬ್ದವಾಗಿ ಬರುತ್ತಿದ್ದ ಗುಳ್ಳೇ ನರಿ ಅದರ ಕಣ್ಣಿಗೆ ಬಿದ್ದಿತು. ನರಿಯ ಆತುರದ ದೃಷ್ಟಿಗೆ ಹಸಿರು ಹುಲ್ಲಿನ ಮೇಲೆ ಘನೀಭೂತವಾಗಿದ್ದ ಮರಿಗಳು ಕಾಣಿಸಲಿಲ್ಲ. ಎತ್ತಲೋ ತನ್ನ ದೃಷ್ಟಿ ಹಾಕಿಕೊಂಡು ಪುಟ್ಟ ಬಂಡೆಯ ಮೇಲೆ ನಿಂತಿದ್ದ ಹುರವಾಗಿ ಬೆಳೆದ ತಾಯಿತಿತ್ತಿರಿ ಕಂಡಿತ್ತು. ಹಸಿದ ನರಿಯ ಬಾಯಿಯಲ್ಲಿ ನೀರೂರಿತು. ಅದು ನಿಶ್ಶಬ್ದ

ವಾಗಿ ಮುಂಬರಿದು ತಿತ್ತಿರಿಯನ್ನು ಸಮೀಪಿಸಿ ನಂತರ ಸರ್ರನೆ ಅದರ ಮೇಲೆ ನುಗ್ಗಿತು. ಈ ಆಕ್ರಮಣವನ್ನು ನಿರೀಕ್ಷಿಸಿಯೇ ಇದ್ದ ತಾಯಿ ತಿತ್ತಿರಿ, ನರಿ ತನ್ನ ಮೇಲೆ ಬೀಳುವವರೆಗೂ ಸುಮ್ಮನಿದ್ದು, ಕೊನೆಯ ಘಳಿಗೆಯಲ್ಲಿ ತನಗೇನೋ ಘಾಯವಾಗಿದೆ; ಹೆಚ್ಚಿಗೆ ದೂರ ಹಾರಲಾರೆ ಎನ್ನುವ ಭಾವವನ್ನು ಬಿಂಬಿಸಿ ಬಂದಷ್ಟು ದೂರ ಹಾರಿ ಬಿದ್ದಿತು. ನಿಷ್ಪ್ರಾಣವೆಂಬಂತೆ ಬಿದ್ದಿದ್ದ ಸುಪುಷ್ಟವಾದ ತಾಯಿ ತಿತ್ತಿರಿಯನ್ನು ಕಂಡ ನರಿಗೆ ಮರಿಗಳ ನೆನಪೇ ಮರೆತು ಅದು ತನ್ನ ಚೂಪು ಹಲ್ಲುಗಳನ್ನು ಪ್ರದರ್ಶಿಸುತ್ತ ತಾಯಿತಿತ್ತಿರಿಯ ಮೇಲೆ ಆತುರವಾಗಿ ನುಗ್ಗಿತು. ಸುಮ್ಮನೆ ಬಿದ್ದಿದ್ದ ತಾಯಿತಿತ್ತಿರಿ ಹಿಂದೆ ಮಾಡಿದಂತೆಯೇ ಕೊನೆಯ ಘಳಿಗೆಯ ಚುರುಕಿನಿಂದ ಮತ್ತಷ್ಟು ದೂರ ಹಾರಿ ರೆಕ್ಕೆ ಸೋತಂತೆ ಬಿದ್ದುಕೊಂಡಿತು. ಪುನಃ ನರಿ ಮೇಲೆ ನುಗ್ಗಿತು. ಪುನಃ ತಾಯಿತಿತ್ತಿರಿ ಇನ್ನಷ್ಟು ದೂರ ಹಾರಿ ಬಿದ್ದಿತು. ಈಗ ಗುಳ್ಳೆ ನರಿಗೆ ತಾಯಿತಿತ್ತಿರಿಯ ಉಪಾಯ ಅರಿವಾಗತೊಡಗಿ ಅತ್ಯಂತ ನಿರಾಶೆಯಿಂದ ಅದನ್ನು ಬಿಟ್ಟು ಹಿಂದಿರುಗತೊಡಗಿತು. ತಾಯಿತಿತ್ತಿರಿ ಸರ್ರನೆ ಪಾಸುಬಂಡೆಯೆಡೆಗೆ ಹಾರಿ ತನ್ನ ಮರಿಗಳನ್ನೆಬ್ಬಿಸಿ ಸನಿಹದ ಕಾರೆಮುಳ್ಳಿನ ಪೊದರಿನ ಆಶ್ರಯದೊಳಗೆ ಕರೆದುಕೊಂಡು ಹೋಗಿ ಹುದುಗಿಕೊಂಡಿತು. ಪರಿಸರವೆಲ್ಲವೂ ಶಾಂತ ಸಮಾಧಾನವಾದ ಮೇಲೆ ತನ್ನ ಮರಿಗಳನ್ನು ಪುನಃ ಹೊರಡಿಸಿಕೊಂಡು ಅದು ಮೇವುಣ್ಣಲು ಹೊರಟಿತು.

*

ಮನೆಯವರೆಲ್ಲರ ಕಣ್ಣುತಪ್ಪಿಸಿ ಸಣ್ಣ ದೊಡ್ಡ ಪಾಜಿಗಳ ಕಟ್ಟುಗಳೆರಡನ್ನು ಭುಜದ ಮೇಲೆ ಹೊತ್ತು, ಎಲೆಗಪ್ಪ ಸಾಕಿದ್ದ ಹೆಣ್ಣು ಗೌಜ ಲಕ್ಷ್ಮಿಯ ಪಂಜರವನ್ನು ಹಿಡಿದು ಮಾದ ಹೊರ ಹೊರಟಿದ್ದ. ನಿನ್ನೆ ಆಲದ ಮರದ ಸನಿಹದಲ್ಲಿ ತಿತ್ತಿರಿಗಳು ಮೇವುಣ್ಣುವುದನ್ನು ಕಂಡಿದ್ದ ಅವನು ಅವುಗಳು ಸಾಮಾನ್ಯವಾಗಿ ಓಡಾಡಬಹುದಾದ ಸ್ಥಳಗಳಲ್ಲಿ ಒಂದನ್ನು ಚುನಾಯಿಸಿ, ತಾನು ತಂದಿದ್ದ ಪಂಜರವನ್ನು ಅಲ್ಲಿ ಇರಿಸಿ, ಪಂಜರದ ಸಮೀಪದಲ್ಲಿಯೇ ಆಯಕಟ್ಟಿನ ಸ್ಥಳಗಳಲ್ಲಿ ದೊಡ್ಡ ಪಾಜಿಯನ್ನೂ ಚಿಕ್ಕ ಪಾಜಿಯನ್ನೂ ನೆಲದ ಮೇಲೆ ಉದ್ದವಾಗಿ ನಿಲ್ಲಿಸಿದ. ಸನಿಹದ ಪೊದರೊಂದರಲ್ಲಿ ಅಡಗಿ ಕುಳಿತು ತನ್ನ ತಂದೆ ಸಿಳ್ಳು ಹಾಕಿದಂತೆಯೇ ಆತ ಸಿಳ್ಳು ಹಾಕಿದಾಗ, ಲಕ್ಷ್ಮಿ ಕ್ರೀಕ್ ಕ್ರೀಕ್ ಎಂದು ತನ್ನ ಹೆಣ್ಣಿನ ದನಿಗೆ ಕಳ್ಳು ಬೆರಸಿ ಇಂಪಾಗಿ ಕೂಗತೊಡಗಿತು.

ತನ್ನ ಸಂಸಾರದ ಮೇಲೇರಿ ಬಂದಿದ್ದ ನರಿಯನ್ನು ಮೋಸಗೊಳಿಸಿ ನಂತರ ನಿರಾತಂಕವಾಗಿ ಮೇವುಣ್ಣತೊಡಗಿತ್ತು ತಾಯಿತಿತ್ತಿರಿ. ಮೊದಲು ಗೂಟ ಹೊಡೆದ ಶಬ್ದ, ನಂತರದ ವಿಚಿತ್ರ ಸಿಳ್ಳು, ನಂತರ ತಮ್ಮ ಕುಲದ್ದೇ ಆದ ಹೊಸ ಹೆಣ್ಣೊಂದರ ಉಲಿವು ಅದಕ್ಕೆ ಕೇಳಿಬಂತು. ಅದು ಸ್ವಾಭಾವಿಕವಾಗಿ ಮೊದಮೊದಲು ಶಂಕೆ ಸಂದೇಹಗಳಿಂದ ನಿಂತಿದ್ದರೂ ನಂತರ ತಡೆಯಲಾರದೆ ಅತ್ಯಂತ ಆಸಕ್ತಿಯಿಂದ ಆ ಹೊಸ ಹೆಣ್ಣಿನೊಡನೆ ಸಂಭಾಷಿಸುವ ಚಪಲದಿಂದ ಕ್ರೀಕ್ ಕ್ರೀಕ್ ಎಂದು ಉಲಿಯತೊಡಗಿತು. ಇದನ್ನು ಕೇಳಿಕೊಂಡು ಪಂಜರದ ಹೆಣ್ಣು ಇನ್ನೂ ಇಂಪಾಗಿ, ಸಸ್ನೇಹವಾಗಿ



ಉಲಿಯತೊಡಗಿತು. ಸನಿಹದ ಬೆದ್ದಲು ಹುತ್ತದಲ್ಲಿ ಮೇವುಣ್ಣುತ್ತ ಗಂಡುತಿತ್ತಿರಿ ಈ ಶಬ್ದಗಳೆರಡನ್ನೂ ಕೇಳಿ ಮೊದಲು ಅನುಮಾನಾಶ್ಚರ್ಯಗಳಿಂದ ನಂತರ ಗಂಡಿಗೆ ಸಹಜವಾದ ಮದದಿಂದ ಎದೆಯುಬ್ಬಿಸಿ ನಿಂತು ಉಲಿದಿತ್ತು- ಕಿಯೊ ಕ್ಕೊಕ್ಕೊಕ್ಕೋ ಕಿಯೊ ಕ್ಕೊಕ್ಕೊಕ್ಕೋ ಇದೇನೀ ಮಧುರ ಉಲಿವುಗಳು? ಇಷ್ಟು ಮೋಡಿ ಮಾಡುವ ಹೊಸಬಿ ಯಾರಿರಬಹುದು? ಎಂದು ನೋಡುವ ಕುತೂಹಲದಿಂದ ತನ್ನ ರೆಕ್ಕೆಗಳನ್ನು ಪಟಪಟನೆ ಬಡಿದುಕೊಂಡು ಗಂಡುತಿತ್ತಿರಿ ಓಡೋಡಿ ಬಂತು. ಗಂಡು ಓಡಿ ಹೋಗುತ್ತಿರುವುದನ್ನು ಕಂಡು ಕನಲಿದ ತಾಯಿ ತಿತ್ತಿರಿ ತನ್ನ ಮರಿಗಳನ್ನೂ ಬಿಟ್ಟು ಕ್ರಿಕ್‌ಕ್ರೀಕ್ ಎಂದು ರೋಷದಿಂದ ಕೂಗುತ್ತಾ ತಾನೂ ಭರಭರನೆ ಬೆಂಬತ್ತಿತು. ತಾಯಿ ಓಡಿದುದನ್ನು ಕಂಡು ಮರಿಗಳು ತಮ್ಮ ಎಳೆಯ ರಬ್ಬರು ಕಾಲುಗಳಿಂದ ಸಾಧ್ಯವಾದಷ್ಟು ವೇಗವಾಗಿ ಆ ಕಡೆಗೇ ಓಡಿದ್ದುವು.

ಪ್ರಾಯಶಃ ಎಲೆಗಪ್ಪನಷ್ಟು ಪಕ್ಷಿಸ್ವಭಾವವನ್ನು ಅರಿಯದ ಮಾದ ತೀರ ಮೈದಾನದಲ್ಲಿ ಪಾಜಿಗಳನ್ನು ಒಡ್ಡಿದ್ದುದರಿಂದಲೋ ಏನೋ, ಪಾಜಿಯ ಸಮೀಪಕ್ಕೆ ನೆಲದೆತ್ತರದಲ್ಲಿಯೇ ಹಾರಿ ಕೊಂಡೋಡುತ್ತಾ ಬಂದಿದ್ದ ಗಂಡುತಿತ್ತಿರಿ ಪಾಜಿ ಸಮೀಪಿಸುತ್ತಲೇ ಅದರೊಳಗೆ ತೂರದೆ ರೆಕ್ಕೆ ಬಡಿದು ಪಾಜಿಯ ಮೇಲೆ ಕುಪ್ಪಿ ಆಚೆ ಕಡೆ ಪಂಜರದಲ್ಲಿ ಬಂಧಿತವಾಗಿ ಉಲಿಯುತ್ತಿದ್ದ ಆ ಹೊಸಬಿಯನ್ನು ಸಂದೇಹ, ಭಯಾಶ್ಚರ್ಯಗಳಿಂದ ನೋಡಿ, ಪಟಪಟನೆ ರೆಕ್ಕೆ ಬಡಿದುಕೊಂಡು ಸರ್ರನೆ ಹೊರಟುಹೋಯಿತು. ಗಂಡಿನ ಹಿಂದೆ ಓಡಿ ಬಂದಿದ್ದ ತಾಯಿತಿತ್ತಿರಿಯೂ ಹಾಗೆಯೇ ತಪ್ಪಿಸಿಕೊಂಡು ಹಾರಿಹೋಗಿದ್ದಿತು. ಆದರೆ ಅದರ ಹಿಂದೆ ಕೀಯ ಕೀಯಗುಡುತ್ತಾ ನೆಲದ ಮೇಲೋಡಿ ಬಂದಿದ್ದ ಮರಿಗಳಲ್ಲಿ ಎರಡು ಮರಿಗಳು ಪಾಜಿಯ ಚದುರನ್ನ ಕಿಂಡಿಯಲ್ಲಿ ತೂರಹೋಗಿ, ಅದರಲ್ಲಿ ಸೂಕ್ಷ್ಮವಾಗಿ ಸಿಗಿಸಿದ್ದ ಉಂಗುರುದುರಳಿನ ಬೀರುಗುಣಿಕೆಗೆ ಸಿಕ್ಕಿಕೊಂಡು ಒದ್ದಾಡತೊಡಗಿದವು. ಮಿಕ್ಕ ಮೂರು ಮರಿಗಳು ಬೆದರಿ ಅತ್ತಿತ್ತ ಚದುರಿದ್ದುವು. ದೊಡ್ಡ ಹಕ್ಕಿಗಳು ತಪ್ಪಿಸಿಕೊಂಡದ್ದನ್ನು ಕಂಡು ರೇಗಿದರೂ ಮಾದ ಮರೆಯಿಂದ ಹೊರಬಂದು ಸಣ್ಣ ಪಾಜಿಯಲ್ಲಿ ಸಿಕ್ಕಿದ್ದ ಮರಿಗಳನ್ನು ಬಿಡಿಸಿ, ತಾನು ತಂದಿದ್ದ ಸಂಚಿಯಲ್ಲಿ ಅವುಗಳನ್ನಿರಿಸಿ ಪಾಜಿಗಳನ್ನು ಬಿಚ್ಚಿಕೊಂಡು, ಪಂಜರವನ್ನೆತ್ತಿಕೊಂಡು ತನ್ನ ಸಾಹಸವನ್ನು ಸಂಜೆಗೆ ತಂದೆಯ ಮುಂದೆ ಕೊಚ್ಚಿಕೊಳ್ಳಲು ಹಳ್ಳಿಯ ಕಡೆ ಹೆಜ್ಜೆ ಹಾಕಿದ.

*

ಕೇವಲ ಎರಡು ಮೂರು ವಾರಗಳಲ್ಲಿಯೇ ಮರಿಗಳ ರೆಕ್ಕೆ ಬಲಿತು ತುಸತುಸವೇ ಹಾರುವಂತಾಗಲು ಅಕ್ಕಿಯಲ್ಲಿದ್ದ ತೋಡೆಯನ್ನು ನರಿ ಇಲ್ಲವೇ ಹಾವು ಕಂಡುಕೊಂಡು ರಾತ್ರಿ ಧಾಳಿಯಿಡಬಹುದೆಂದು ಬಲ್ಲ ತಾಯಿತಿತ್ತಿರಿ ಬೆಳಗಿನ ಹೊತ್ತಿನಲ್ಲಿ ತನ್ನ ಅರಿಕೆಯಲ್ಲಿ ಅತ್ತಿತ್ತ ಚದುರಿಹೋಗಲು ಮರಿಗಳಿಗೆ ಅವಕಾಶ ಕೊಡತೊಡಗಿದ್ದರೂ ರಾತ್ರಿಯ ವೇಳೆ ಹತ್ತಿರ ಮರವೊಂದರ ಸುಪುಷ್ಟ ಸೊಂಟದ ಮೇಲೆ ಮರಿಗಳನ್ನು ಪುಸಲಾಯಿಸಿ ಕೂಗಿ ಕರೆದು ಹಾರಿಸಿ ಕೂರಿಸಿಕೊಳ್ಳತೊಡಗಿತ್ತು.

ಜ್ಯೇಷ್ಠಾಷಾಢಗಳ ಜಡಿಮಳೆಯ ಶೈತ್ಯದ ನರಕವನ್ನು ಅನುಭವಿಸಿ ಶ್ರಾವಣದ ರಾಗಿ ಬಿತ್ತನೆಯ ಹೊತ್ತಿಗೆ ಮೂರು ಮರಿಗಳಲ್ಲಿ ಗಂಡು ಮರಿಗಳೆರಡೂ ನೋಡಲು ತಮಗಿಂತ ಸೌಮ್ಯ ಗುಣಗಳುಳ್ಳ ತಂಗಿಯಂತೆಯೇ ಇದ್ದರೂ ಅವುಗಳ ಕಂದು ಮುಂಗಾಲುಗಳಲ್ಲಿ ಚೂಪನ್ನ ಅರೆಮುಳ್ಳು ಕಾಣಿಸಿಕೊಳ್ಳತೊಡಗಿದ್ದಿತು ದಿನ ಕಳೆದಂತೆ ಗಂಡುಗಳು ತಮ್ಮ ತಂಗಿಗಿಂತ ಬೇಗ ಬೇಗ ಎತ್ತರವಾಗಿ ಬೆಳೆದು ಗಂಡಿಗೆ ಸಹಜವಾದ ಆಢ್ಯತೆ, ಕಲಿತನಗಳನ್ನು ಕಲಿಕಾಳಗಗಳಲ್ಲಿ ತೋರುತ್ತಿದ್ದುವು. ರಾಗಿ ಪಯಿರು ಹಸಿರಲಗುಗಳಿಂದ ನಳನಳಿಸುವ ಅಶ್ವಯುಜದ ವೇಳೆಗೆ ಗಂಡು ಮಣಕಗಳು ತಮ್ಮ ತಂಗಿಗಿಂತ ಒಂದಂಗುಲಕ್ಕೂ ಮಿಕ್ಕಿ ಬೆಳೆದು, ಗಂಡಿಗೇ ಮೀಸಲಾದ ಜರ್ಬು ಹಮ್ಮಿನ ನಿಲುವಿನಲ್ಲಿ ನಿಂತು ಕಿಯೊ ಕ್ಕೊಕ್ಕೊಕ್ಕೋ ಎಂಬ ಕಾಳಗದುಲಿಪನ್ನು ರಣರಣಿಸಿ, ಮುಂಗಾಲುಗಳಲ್ಲಿ ಈಗ ಸುಮಾರು ಅರ್ಧಂಗುಲದವರೆಗೂ ಬೆಳೆದಿದ್ದ ಅರೆಮುಳ್ಳನ್ನು ಪ್ರಯೋಗಿಸಿ ಕಾದುವುದರಲ್ಲಿ ಪ್ರವೀಣವಾಗತೊಡಗಿದುವು.

ಈಗಲೀಗ ಮತ್ತೆ ಮೈ ಭಾರವಾಗಿ ತನ್ನ ಮರಿಗಳ ಮೇಲೆ ಅಷ್ಟಾಗಿ ಗಮನ ಕೊಡದೆ ತನ್ನ ಹೊಟ್ಟೆ ಹೊರೆದುಕೊಳ್ಳುವುದರಲ್ಲಿಯೇ ಹೆಚ್ಚು ಆಸಕ್ತಿಯನ್ನು ತೋರುತ್ತಿದ್ದ ತಾಯಿತಿತ್ತಿರಿಯ ಅಂಕೆಯನ್ನು ಗಂಡು ಮಣಕಗಳು ನಿರ್ಲಕ್ಷಿಸತೊಡಗಿದ್ದುವು. ಅವುಗಳನ್ನು ಅಂಕೆಯಲ್ಲಿಡಲು ಈಗ ಕುಟುಂಬದ ಯಜಮಾನನಾದ ಭವ್ಯ ನಿಲುವಿನ ಗಂಡಿನ ರೋಷರುದ್ರವಾದ ಕಿಯ್ಯ ಕ್ಕೊಕ್ಕೊಕೋ ಎಂಬ ಗದರಿಕೆಗೆ ಮಾತ್ರ ಸಾಧ್ಯವಾಗುತ್ತಿತ್ತು. ತಾಯಿಯನ್ನೆ ಹೆಚ್ಚಾಗಿ ಅಂಟಿಕೊಂಡಿದ್ದ ಹೆಣ್ಣು ಮಣಕ ತಾಯಿ ಈಚೆಗೀಚೆಗೆ ಅರೆಯ ತಾಣವೊಂದನ್ನು ಆಯ್ದು ಅಲ್ಲಿ ಗಿಡದ ಸಣ್ಣ ಪುಟ್ಟ ಟೊಂಗೆ, ತರಗೆಲೆ, ಒಣ ಹುಲ್ಲುಗಳನ್ನು ಶೇಖರಿಸತೊಡಗಿ ತೊಂಡೆಯೊಂದನ್ನು ನೇರ್ಪುಗೊಳಿಸುವುದರಲ್ಲಿ ನಿರತವಾಗಿರುವುದನ್ನು ಅಚ್ಚರಿಯಿಂದ ಗಮನಿಸುತ್ತಿತ್ತು. ಒಂದು ದಿನ ತಾಯಿ ತಾನು ನೇರ್ಪುಗೊಳಿಸಿದ್ದ ತೊಂಡೆಯೊಳಗೆ ಆರು ತಿಳಿ ನೀಲನ್ನ ಮೊಟ್ಟೆಗಳನ್ನಿಟ್ಟು, ಅವುಗಳ ಮೇಲೆ ಅತ್ಯಂತ ಸಹನೆಯಿಂದ ದಿನವಿಡೀ ಕಾವು ಕೊಡತೊಡಗಿತು. ರಾಗಿಯ ಪಯಿರು ಹೊಡೆಯಿಕ್ಕುವ ದಿನಗಳಲ್ಲಿ ಒಂದು ದಿನ ಇದ್ದಕಿದ್ದಂತೆಯೇ ತೊಂಡೆಯಲ್ಲಿ ಗಲಭೆ ಶುರುವಾಗಿ ಮೊಟ್ಟೆಗಳು ಒಂದೊಂದಾಗಿ ಒಡೆದು ರಬ್ಬರಿನಂತಹ ಕೊಕ್ಕು ಕಾಲುಗಳನ್ನು ಹೊಂದಿ, ನಿಂತಲ್ಲಿ ನಿಲ್ಲದೆ ಕೀಯ್‌ಗುಡುತ್ತಾ ಓಡಿಯಾಡಿ ಮುಲುಕುವ ಆರು ಹೂಮರಿಗಳು ಹೊರಬಂದವು. ಈಗ ತಾಯಿತಿತ್ತಿರಿ ತನ್ನ ದೊಡ್ಡ ಮರಿಗಳನ್ನು ಲಕ್ಷ್ಯಕ್ಕೂ ತಾರದೆ ತನ್ನ ಹೂಮರಿಗಳ ರಕ್ಷಣೆಯೇ ಆದ್ಯ ಕರ್ತವ್ಯವೆಂದು ಭಾವಿಸಿದಂತೆ ಓಡಿಯಾಡುತ್ತಿದ್ದುದರಿಂದ ಆ ಮೂರು ಪಡ್ಡೆ ಮಣಕಗಳೂ ಸುತ್ತಲಿನ ಸರಹದ್ದಿನಲ್ಲೆಲ್ಲಾ ದಿನದಿನವೂ ದೂರ ದೂರ ಚಲಿಸತೊಡಗಿದ್ದುವು.

*

ಎಲೆಗಪ್ಪನ ಮಗ ಮಾದ ಅದೆಷ್ಟೇ ಜೋಪಾನ ಮಾಡಿದರೂ ಒಡಿದು ತಂದ ಕೆಲ ದಿನಗಳಲ್ಲಿಯೇ ಒಂದು ಹೂಮರಿ ನಡುಗಿ ನಡುಗಿ ತೀರಿಕೊಂಡಿತು. ಉಳಿದಿದ್ದ ಒಂದು ಹೂಮರಿಯನ್ನು ಮಾದ ತನ್ನ ತಂದೆಯ ಆದೇಶದಂತೆ ಅತ್ಯಂತ ಜೋಪಾನವಾಗಿ ಸಾಕತೊಡಗಿದ್ದ. ದಿನಗಳೆದಂತೆ ಅದು ಬಂಧನದ ಜೀವನದಲ್ಲಿಯೂ ಮೇವುಂಡು ಭಾದ್ರಪದದ ಹೊತ್ತಿಗೆ ಮುಂಗಾಲಿನಲ್ಲಿ ಅರೆ-ಮುಳ್ಳು ಬೆಳಸಿಕೊಂಡು, ಗಂಡಿಗೆ ಸಹಜವಾದ ಕಿಯ್ಯ ಕ್ಕೊಕ್ಕೊಕ್ಕೋ ಎಂಬ ಉಲಿವನ್ನು ಕನಲಿ ಉಲಿಯತೊಡಗಿತು. ಮಾದ ಮರಿಗೆ ಪುಟ್ಟನೆಂದು ನಾಮಕರಣಮಾಡಿದ. ಮೇಕೆಗಳನ್ನಟ್ಟಿಕೊಂಡು ಗುಟ್ಟೆಗೆ ಹೋಗುವಾಗ ಮಾದ ಪುಟ್ಟನ ಪಂಜರವನ್ನೂ ಎತ್ತಿಕೊಂಡು ಹೋಗಿ ಹೊರ

ಸೀಮೆಯ ರೂಢಿಯನ್ನು ಮಾಡಿಸತೊಡಗಿದ. ಪುಟ್ಟ ಹೊಲದಲ್ಲಿ ತಾರಾಡಿ, ಮಣ್ಣಿನ ಧೂಳಿನಲ್ಲಿ ಸ್ವಚ್ಛಂದವಾಗಿ ಹೊರಳಾಡಿ ಲಕ್ಷ್ಮಿಯೊಡನೆ ಸರಸವಾಡಿ ಹಸಿರು ಹುಲ್ಲಿನ ಎಸಳು, ಗೆದ್ದಲುಗಳನ್ನು ಮೆದ್ದು, ಮಾದ ಶಿಳ್ಳೆಹಾಕಿ ಕರೆದಾಗ ಓಡಿಬಂದು ಪಂಜರ ಸೇರಿಕೊಳ್ಳುತ್ತಿತ್ತು. ಪುಟ್ಟನಿಗೂ ಬೇರೆಯ ಪಂಜರವನ್ನೇ ಮಾಡಿದ್ದಾಯಿತು. ಮಾದ ತಂದೆಯ ಆದೇಶದಂತೆ ಕಾಳಗದ ಉಲಿವನ್ನು ಅನುಕರಿಸುತ್ತಿದ್ದ. ಪುಟ್ಟ ಕನಲಿ, ಕಿಡಿಕಾರಿ, ಉಲಿದು, ರೆಕ್ಕೆಯಗಲಿಸಿ ಎಗರುತ್ತಾ ತನ್ನ ಅಂಗೈಯನ್ನೇ ತನ್ನ ಅರೆಮುಳ್ಳಿನಿಂದ ಮಥಿಸುತ್ತಾ, ರೆಕ್ಕೆಯಲ್ಲಿ ಬಡಿದು ಕೊಕ್ಕಿನಲ್ಲಿ ಕಚ್ಚುವಂತೆ ಕಾಳಗದ ವಿದ್ಯೆಗಳನ್ನೆಲ್ಲ ಕಲಿಸತೊಡಗಿದ. ಅಶ್ವಯುಜದ ಹೊತ್ತಿಗೆ ಪುಟ್ಟ ಹೊರವಾಗಿ ಬೆಳೆದು ಹುಲಿ–ಗಂಡಾಗುತ್ತಿದ್ದುದನ್ನು ಎಲೆಗಪ್ಪ ಕಂಡು, ತಾನೇ ಪುಟ್ಟನಿಗೆ ಜಾಗ್ರತೆಯಿಂದ ಕಾಳಗದ ತರಪೇತಿ ಕೊಡತೊಡಗಿದ.

*

ಹೊಲಗಳಲ್ಲಿ ರಾಗಿಯ ಪಯಿರು ಕಾರ್ತಿಕದ ಹಾಲು ತುಂಬಿದ ಹೊಡೆಗಳಿಂದ ಕಂಗೊಳಿಸುತ್ತಾ ಗಾಳಿಗೆ ಸಾಮೂಹಿಕವಾಗಿ ತಲೆ ತೂಗಿ ತೂಗಿ ನರ್ತಿಸುತ್ತಿದ್ದ ಒಂದು ದಿನ ಗುಟ್ಟೆಯ ಕೆಳಗಣ ಹೊಲವೊಂದರ ಬದುವಿನಿಂದ ಕ್ರೀಕ್ ಕ್ರೀಕ್ ಕ್ರೀಕ್ ಎಂಬ ಹೆಣ್ಣಿನ ಇನಿದನಿ ಕೇಳತೊಡಗಿತು. ತಮ್ಮ ಪಾಡಿಗೆ ತಾವು ಮೇವುಣ್ಣುತ್ತಿದ್ದ ಗಂಡು ತಿತ್ತಿರಿ, ಗುಟ್ಟೆ ಸೀಮೆಯಲ್ಲೆಲ್ಲ ಅಲೆದು ಸ್ವೇಚ್ಛೆಯಿಂದ ವಿಹರಿಸಿ ಹೊರವಾಗಿ ಬೆಳೆದಿದ್ದ ಎರಡು ಗಂಡು ಮರಿಗಳು, ಜೊತೆಯ ಹೆಣ್ಣು ಮಣಕ, ತಾಯಿತಿತ್ತಿರಿ, ಅದರ ಈಗಿನ ಮರಿಗಳು ಅಚ್ಚರಿಯಿಂದ ಕತ್ತು ಕೊಂಕಿಸಿ ಕೇಳತೊಡಗಿದ್ದುವು. ತಮ್ಮನ್ನೇ ಕರೆಯುತ್ತಿರಬಹುದಾದ ಈ ಹೊಸಬಿಯ ಕರ್ಣಾಹ್ಲಾದಕವಾದ ಕ್ರೀಕುಕ್ರೀಕುಗಳು ಒಂದೇ ಸಮನೆ ಗಾಳಿಯಲ್ಲಿ ತೀಡಿ ಬರುತ್ತಿರುವುದನ್ನು ಕೇಳಿ ಇಂತಹ ಇನಿದನಿಗೈಯುವ ಹೊಸಬಿ ಯಾರಿರಬಹುದೆಂಬ ಕುತೂಹಲವನ್ನು ತಣಿಸಲು ಗಂಡುತಿತ್ತಿರಿ ಯಜಮಾನನ ಗತ್ತಿನಿಂದ ಕಾಕು, ಮರುಕಾಕುಗಳನ್ನು ಕೊಟ್ಟು ನುಗ್ಗಿತು. ಇವುಗಳನ್ನೆಲ್ಲ ಅಚ್ಚರಿಯಿಂದ ನೋಡುತ್ತಿದ್ದ ಗಂಡುಮಣಕಗಳೂ ತಾವೇನು ಕಡಿಮೆಯೆಂಬ ಆಢ್ಯತೆಯಿಂದ ತಾವೂ ಗಂಡುಕಾಕನ್ನು ಕೊಟ್ಟು ನುಗ್ಗಿದವು. ಅವುಗಳ ಹಿಂದೆ ತಾಯಿತಿತ್ತಿರಿಯೂ ನುಗ್ಗಿತು. ಹೆಣ್ಣುಮಣಕವೂ ಸಂಭ್ರಮದಿಂದ ಓಡಿತು. ಮರಿಗಳು ಸರಸರನೆ ತಮ್ಮ ರಬ್ಬರು ಕಾಲುಗಳು ಕೊಂಡೊಯ್ಯುವಷ್ಟು ವೇಗವಾಗಿ ತಾಯಿಯನ್ನು ಬೆಂಬತ್ತಿ ಓಡಿ ಬಂದಿದ್ದುವು

ಮಗ ಮಾದನಂತೆ ತಪ್ಪು ಮಾಡದೆ ಹಕ್ಕಿ ಹಿಡಿಯುವುದರಲ್ಲಿ ನಿಷ್ಣಾತನಾದ ಎಲೆಗಪ್ಪ ಹೊಲಗಳ ಪಾಜಿಗಳನ್ನು ಬದುವಿನ ಆಯಕಟ್ಟಿನ ಸ್ಥಳದಲ್ಲಿ ಒಡ್ಡಿದ್ದ. ಕಾಡಿನಲ್ಲಿ ಸ್ವೇಚ್ಛೆಯಾಗಿ ಬೆಳೆದು, ಕಾಡಿನ ನಿರ್ದಯ ನಿಯತಿಗಳನ್ನು ಅನುಭವದಿಂದ, ಅಂತಃಪ್ರಜ್ಞೆಯಿಂದ ಬಲ್ಲ ತಿತ್ತಿರಿಗಳು ಯಾವುದೇ ಹೊಸ ಶಬ್ದವನ್ನು ಅನುಮಾನ ಶಂಕೆಗಳಿಂದಲೇ ಆಲಿಸಿ, ಸಂದೇಹ ದೃಢವಾದರೆ ಕಾಲು ಕೀಳುವವೆಂದು ಅವನಿಗೆ ಗೊತ್ತು. ಅವನು ಸಂಯಮದಿಂದ ಹೊತ್ತು ಕಾದು ತನ್ನ ತರಪೇತಾದ ಲಕ್ಷ್ಮಿಯಿಂದ ಸೊರು ಸೊರುವಾಗಿ ಇಂಪಾದ ಕ್ರೀಕುಗಳನ್ನು ಹೊರಡಿಸಿದ್ದ. ಅರ್ಧ ಗಂಟೆಯೊಳಗೆ ಮರುಕಾಕು ಕೊಟ್ಟುಕೊಂಡು ಒಂದರ ಹಿಂದೆ ಒಂದು ಅಸಾಧ್ಯ ರಭಸ ಪೈಪೋಟಿಗಳಿಂದ ತಿತ್ತಿರಿಗಳು ಓಡಿ ಬಂದಿದ್ದವು. ಎಲ್ಲಕ್ಕೂ ಮುಂದೆ ಓಡಿ ಬಂದಿದ್ದ ಎತ್ತರದ ನಿಲುವಿನ ಭವ್ಯಾಕಾರದ ತಿತ್ತಿರಿಗಳನ್ನು ನೋಡಿ ದೌಜನ ಹಕ್ಕಿಯನ್ನು ಸಾಕುವುದರಲ್ಲಿ ಅನುಭವವಿದ್ದ ಎಲೆಗಪ್ಪನಿಗೂ ಅಚ್ಚರಿಯಾಯಿತು. ಏನದು ಅದರ ನಿಲುವು! ಅದರ ಗರಿಗಳ ಹೊಳಪು! ಬಂದದ್ದೇ ಆ ಧೀರ ಗಂಡು ಹಿಂದೆ ಮುಂದೆ ನೋಡದೆ ದೊಡ್ಡ ಪಾಜಿಯ ಚೌಕಳಿಯೊಂದರೊಳಗೆ ನುಗ್ಗಿತು. ಅದರ ಕುತ್ತಿಗೆ ಉರುಳಿಗೆ ಸಿಕ್ಕಿಬಿದ್ದು, ಅದು ಮುಂಗಾಣದೆ ವಿಕಾರವಾಗಿ ಕಿರಿಚಿ, ಪಟಪಟನೆ ರೆಕ್ಕೆಯಿಂದ, ಕೊಕ್ಕು ಕಾಲುಗಳಿಂದ ಪಾಜಿಯನ್ನೇ ಘಾತಿಸತೊಡಗಿತ್ತು. ಅದರ ಹಿಂದೆಯೇ ಓಡಿ ಬಂದಿದ್ದ ಗಂಡುಮಣಕಗಳಲ್ಲಿ ಒಂದು ಹಾರಿ ತಪ್ಪಿಸಿಕೊಂಡರೂ ಇನ್ನೊಂದು ಪಾಜಿಗೆ ಸಿಕ್ಕಿ ಬಿದ್ದಿತು. ಇವುಗಳ ಹಿಂದೆ ಬಂದಿದ್ದ ತಾಯಿ ತಿತ್ತಿರಿ ತಪ್ಪಿಸಿಕೊಂಡಿತು. ಆದರೆ ಅದರ ಹಿಂದೆ ಓಡಿಬಂದಿದ್ದ ಹೂಮರಿಗಳಲ್ಲಿ ಮೂರು ಸಿಕ್ಕಿಕೊಂಡವು.

ಕಾದಲಿಕ್ಕೇ ಹುಟ್ಟಿದ್ದಂತೆ ಅತ್ಯಂತ ಪುಷ್ಟವಾಗಿ ಸೊಗಯಿಸಿ, ಈಗ ಉರುಳಿಗೆ ಸಿಕ್ಕಿಬಿದ್ದರೂ ಶೌರ್ಯ ರೋಷಗಳಿಂದ ಪಾಜಿಯನ್ನು ಘಾತಿಸುತ್ತಿದ್ದ ಆ ಭವ್ಯ ಗಂಡನ್ನು ಎಲೆಗಪ್ಪ ಉಪಾಯವಾಗಿ ಪಂಜರ ಸೇರಿಸಿ, ತರಪೇತಿಯ ವಯಸ್ಸು ಮೀರಿ ಸ್ವೇಚ್ಛೆಯಾಗಿ ಕಾಡಿನಲ್ಲಿ ಬೆಳೆದಿದ್ದ ಈ ಗಂಡನ್ನು ಬೇಟೆಯಲ್ಲಿ ಕೇವಲ ಷೋಕಿಗಾಗಿ ಹಕ್ಕಿ ಸಾಕುವ ಆಸ್ಥೆಯಿದ್ದ ಮುನಿಸ್ವಾಮಪ್ಪನಿಗೆ ಮಾರಲು ಯೋಚಿಸಿದ್ದ. ಅವನ ಮನ ಹೆಚ್ಚು ಕಡಿಮೆ ಮಾದನ ಮಣಕ ಪುಟ್ಟನಷ್ಟೇ ವಯಸ್ಸಿನ ಈಗ ಸಿಕ್ಕಿದ್ದ ಇನ್ನೊಂದು ಮಣಕವನ್ನೇ ಚಿಂತಿಸುತ್ತಿತ್ತು. ಸರಿಯಾಗಿ ತರಪೇತಿ ಕೊಟ್ಟರೆ ಬರುವ ವೈಶಾಖದೊಳಗೆ ಕೈಗೆ ಬರಬಹುದು. ಬರಲಿರುವ ಸೀಜನ್ನಿನಲ್ಲಿ ಇನ್ನು ಯಾರೂ ಮುಂದೆ ಬರದಿದ್ದರೂ ಈ ಮಣಕಕ್ಕೂ ಮಾದನ ಪುಟ್ಟನಿಗೂ ಪಂದ್ಯ ಕಟ್ಟಿಸಬಹುದು ಎಂದು ಅವನ ಮನ ಯೋಚಿಸುತ್ತಿತ್ತು. ಚಿಕ್ಕ ಪಾಜಿಗೆ ಸಿಕ್ಕಿಬಿದ್ದಿದ್ದ ಮೂರು ಹೂಮರಿಗಳಲ್ಲಿ ಎಲ್ಲವೂ ದೇವರ ದಯದಿಂದ ಬದುಕುಳಿದರೆ ಅವಕ್ಕೆ ಕಾಳಗಕ್ಕೆ ತರಬೇತಿ ನೀಡಿ ತಯಾರಾಗುವ ಹೊತ್ತಿಗೆ ಮುಂದಿನ ಆಶ್ವಯುಜವೇ ಆಗಬಹುದು.

•

ಇಷ್ಟು ಹಠಾತ್ತಾಗಿ ತನ್ನ ಸಂಸಾರ ಕುಂಠಿತವಾಗಿ ಹೋಗಿದ್ದುದು ತಾಯಿತಿತ್ತಿರಿಗೆ ಅತೀವ ವೇದನೆಯನ್ನೇ ತಂದಿದ್ದರೂ ತನಗುಳಿದಿದ್ದ ಮೂರು ಮರಿಗಳ ಪಾಲನೆ-ಪೋಷಣೆಗಳ ಜವಾಬುದಾರಿಯಲ್ಲಿ ಒಂದೆರಡು ದಿನಗಳಲ್ಲಿಯೇ ತನ್ನ ದುಃಖವನು ಮರೆಯತೊಡಗಿತು. ತಮ್ಮನ್ನು ಅಂಕೆಯಲ್ಲಿಡುತ್ತಿದ್ದ ಗಂಡುತಿತ್ತಿರಿ ಇಲ್ಲವಾದುದಕ್ಕಿಂತ ತಮ್ಮೊಡನೆ ಒಡನಾಡುತ್ತಿದ್ದ ಗಂಡುಮಣಕ ಇಲ್ಲವಾದುದಕ್ಕೆ ಖೇದಗೊಂಡಿದ್ದ ಉಳಿದೆರಡು ಮರಿಗಳು, ಹಠಾತ್ತಾಗಿ ತಮ್ಮ ನಡುವೆಯಿದ್ದ ಲೈಂಗಿಕ ವ್ಯತ್ಯಾಸವನ್ನು ಕಂಡುಕೊಂಡು, ಜೊತೆಜೊತೆಯೇ ಒಡನಾಡಿ, ಮೈಗೆ ಮೈ ತಿಕ್ಕಿ, ಒಟ್ಟಿಗೆ ಗೊತ್ತುಕೂತು, ಹೊಚ್ಚಹೊಸದಾದ ಅನುಭವಗಳನ್ನು ಪಡೆದುಕೊಳ್ಳತೊಡಗಿದ್ದುವು. ಮಾಘ ಕಳೆದು ಸುಗ್ಗಿಯಾಗಿ, ವಸಂತದ ಸಿಂಗಾರ ಗಿಡ ಮರಗಳಲ್ಲೆಲ್ಲ ಅತ್ಯಂತ ಸುಮನೋಹರವಾಗಿ ಸೊಗಯಿಸಿದ್ದಾಗ, ಈಗ ವರ್ಷದ ಗಂಡು ಮಣಕ ಹಾಗೂ ಹೆಣ್ಣು ಮಣಕಗಳ ಮೇಲೆ ಒಡನಾಟಗಳಲ್ಲಿ, ಕ್ರೀಡನೆ-ಖೇಡನೆಗಳಲ್ಲಿ, ಅಟ್ಟಾಟ-ಕೊಕ್ಕಾಟಗಳಲ್ಲಿ ಲೈಂಗಿಕ ವಿಕ್ರೀಡನೆಗಳಲ್ಲಿ ಆ ಗುಟ್ಟೆ ಸೀಮೆ ಜಗತ್ತಿನಲ್ಲೆ ಅತ್ಯಂತ ಆನಂದಮಯವಾದ ಎಡೆಯೆಂಬಂತೆ ವರ್ಣಿಸಲು ಅನುವು ಮಾಡಿದ್ದಿತು. ಆ ಮಣಕಗಳೆರಡೂ ತಮ್ಮ ತಾಯಿಯನ್ನು ಮರೆತು, ಗುಟ್ಟೆ ಸೀಮೆಯ ಇನ್ನೊಂದು ಪಾರ್ಶ್ವದಲ್ಲಿ ತಮ್ಮ ತಾಣವನ್ನು ಹೂಡಿಕೊಂಡಿದ್ದುವು. ಹೆಣ್ಣು ಮಣಕದ ಮೈ ಭಾರವಾಗಿ, ವಂಶಪಾರಂಪರ್ಯವಾಗಿ ಬಂದಿದ್ದ ಸ್ವಭಾವಾನುಗುಣವಾಗಿ ಅಕ್ಕಿಯ ಅರೆಕೋಟೆಯೊಂದರಲ್ಲಿ ಒಣ ಹುಲ್ಲು ತರಗುಗಳ ಹೊಂಡೆಯೊಂದನ್ನು ರಚಿಸಿತು. ಗಂಡುಮಣಕವೂ ರಾತ್ರಿಯ ವೇಳೆ ತಾವು ಜೊತೆಜೊತೆಯಾಗಿ ಗೊತ್ತುಕೊಡುತ್ತಿದ್ದ ಮರವನ್ನು ಬಿಟ್ಟು ಹೆಣ್ಣಿನ ಸಂಗಡವೇ ಹೊಂಡೆಯಲ್ಲಿ ಇರತೊಡಗಿತು.

ಇಷ್ಟರಲ್ಲಿಯೇ ಗುಟ್ಟೆಗೆ ಹಕ್ಕಿಸಿಕ್ಕರ ತಂಡವೊಂದು ಬಂದಿದ್ದಿತು. ಬೇಟೆಯಲ್ಲಿ ನಿಷ್ಣಾತರಾದ ಅವರು ತರಪೇತಿಯಾದ ನಾಯಿಗಳನ್ನು ಮುಂದೆ ಬಿಟ್ಟುಕೊಂಡು ಗುಟ್ಟೆಯ ಗವಿಯೊಂದರಲ್ಲಿ ತಾಣ ಹೂಡಿದ್ದ ನರಿ ಸಂಸಾರವೊಂದನ್ನು ಶೋಧಿಸಿ, ಗಂಡುನರಿ ಹೆಣ್ಣುನರಿ ಓಡಿಹೋಗಿದ್ದರೂ ನರಿಮರಿಗಳನ್ನು ಹಿಡಿದು ಬಡಿದು, ಸನಿಹದ ಲಂಟಾನ ಹೊದರನ್ನು ತರಿದು, ಬೆಂಕಿ ಮಾಡಿ ನರಿಮರಿಗಳನ್ನು ಹಸಿಗೆ ಮಾಡಿ ತಿಂದರು. ನಂತರ ಉರುಳುಗಳನ್ನೊಡ್ಡಿ ಪಾಜಿಗಳನ್ನೊಡ್ಡಿ, ಹಕ್ಕಿಗಳ ಕೂಗನ್ನು ತಮ್ಮ ಗಂಟಲಿನಲ್ಲಿಯೇ ಹೊರಡಿಸಿ, ನಾನಾ ಹಕ್ಕಿಗಳನ್ನು ಹಿಡಿದರು. ಕೆಲವನ್ನು ಕೊಂದು ತಿಂದರು; ಕೆಲವನ್ನು ಮಾರಲು ಇಟ್ಟುಕೊಂಡರು ಉರುಳಿಗೆ ಸಿಕ್ಕಿಬಿದ್ದಿದ್ದ ತಾಯಿತಿತ್ತಿರಿಯ ಗಾತ್ರ, ಭವ್ಯತೆಗಳನ್ನು ನೋಡಿ, ಇಂಥ ಹಕ್ಕಿಯನ್ನು ಪೇಟೆಯಲ್ಲಿ ಮಾರಿದರೆ ತನಗೆ ಸಿಗಬಹುದಾಗಿದ್ದ ರೂಪಾಯಿಗಳನ್ನು ನೆನೆದು ಹಕ್ಕಿಸಿಕ್ಕರ [illegible] ಧಾನ ಹೊಂದಿದ್ದ. ಆ [illegible] ಮೂರು ಹೂಮರಿಗಳನ್ನು ಅನಾಥವಾಗಿ[illegible]ದ್ದೇನೆ; ಇಂಥ ಗುಟ್ಟೆ ಸೀಮೆಯಲ್ಲೂ ಅತ್ಯಂತ

ಕಷ್ಟದಿಂದ ಜೀವಿಸಿಕೊಂಡಿದ್ದ ಯಾರಿಗೂ ಉಪದ್ರವ ಕೊಡದ ಈ ಬಡ ಜಂತುಗಳನ್ನು ತಾನು ಹಿಡಿದು ಹಿಂಸಿಸುತ್ತಿದ್ದೇನೆ ಎಂಬ ಚಿಂತೆಯು ಲವಲೇಶವೂ ಅವನಲ್ಲಿ ಇರಲಿಲ್ಲ.

*

ಸೆರೆಸಿಕ್ಕಿದ್ದ ಗಂಡುತಿತ್ತಿರಿಯನ್ನು ಎಣಿಸಿದ್ದಕ್ಕಿಂತ ಹೆಚ್ಚು ಬೆಲೆಗೇ ಪೇಟೆಯ ಮುನಿಸ್ವಾಮಪ್ಪನಿಗೆ ಮಾರಿದ ಮೇಲೆ ಗಂಡುಮಣಕಕ್ಕೆ ಎಲೆಗಪ್ಪ ಅತ್ಯಂತ ಆಸ್ಥೆಯಿಂದ ಕಾಳಗದ ತರಪೇತಿ ಕೊಡತೊಡಗಿದ್ದ. ತನ್ನ ಜೀವಿತದ ಮೊದಲ ಭಾಗಗಳನ್ನು ಕಾಡಿನಲ್ಲಿಯೇ ಸ್ವಚ್ಛಂದ-ಸ್ವೇಚ್ಛೆಯಿಂದ ಕಳೆದಿದ್ದುದರಿಂದಲೋ ಏನೋ, ತನ್ನ ಭವ್ಯ ನಿಲುವಿಗೆ ತಕ್ಕ ಗಡಸುತನ-ಕಲಿತನಗಳನ್ನು ಹೊಂದಿದ್ದ ಗಂಡುಮಣಕ ಮೊದಮೊದಲು ಎಲೆಗಪ್ಪನಿಗೂ ಸಗ್ಗಲಿಲ್ಲ. ಆದರೆ ಅವನ ನಿರಂತರ ಪೂಚಣಿಕೆಯಿಂದ ಅವನಿಂದ ಅಂಕ-ಕಾಳಗದ ಪಾಠಗಳನ್ನು ಕಲಿಯತೊಡಗಿತು. ಮಾದನ ಹಕ್ಕಿ ಪುಟ್ಟನಂತೆಯೇ ಇದ್ದರೂ ಗಡಸುತನ, ಕಲಿತನ, ಕಾಳಗದ ಸೆಣಸು-ಶಕ್ತಿಯಲ್ಲಿ ಅದನ್ನು ಮುರುಟಿ ಹಾಕುವ ತಾಖತ್ತು ತೋರತೊಡಗಿತ್ತು. ಈ ಹಕ್ಕಿಗೆ ರಾಮನೆಂದು ನಾಮಕರಣ ಮಾಡಿ, ಅದರ ತರಪೇತಿಗೆ ಎಲೆಗಪ್ಪ ತನ್ನ ಸಂಪೂರ್ಣ ಪರಿಶ್ರಮವನ್ನೇ ಧಾರೆಯೆರೆಯತೊಡಗಿದ್ದ. ರಾಮ ಕ್ರಮೇಣ ಎಲೆಗಪ್ಪನ ಪ್ರೀತಿಯ ಹಕ್ಕಿಯಾಗತೊಡಗಿತ್ತು. ರಾಮ-ಪುಟ್ಟರನ್ನು ಆಗಾಗ ಹುಸಿ ಪಂದ್ಯಕ್ಕೆ ಬಿಟ್ಟು ಸಮಸಮವಾಗಿ ಕಾದುವ ಅವುಗಳ ಕಾಳಗವನ್ನು ನೋಡಿ, ಪುಟ್ಟನ ತಾಖತ್ತಿಗೂ ಅಚ್ಚರಿಗೊಂಡಿದ್ದ.

ಗಂಡುಗಳಿಗೆ ಕಾಳಗದ ಮಸ್ತಿ ಬರುವ ವೈಶಾಖದ ಒಂದು ದಿನ ಪೇಟೆಯ ಮುಸಾಫಿರ್‌ಖಾನೆಯ ಹಿಂದಿದ್ದ ಹುಲ್ಲಿನಂಗಳದಲ್ಲಿ ಮೇಗನವಳ್ಳಿಯ ಸಾಬ್ಜಾನ್ ಸಾಬರ ಒಳ್ಳೇ ತಯಾರಾದ ಹಕ್ಕಿಗಳ ಮೇಲೆ ತನ್ನ ಹಕ್ಕಿಗಳನ್ನು ಕಾಳಗಕ್ಕೆ ಬಿಡಲು ಎಲೆಗಪ್ಪ ಒಪ್ಪಿದ. ಅಂಕದಲ್ಲಿ ಮೊದಲು ಎಲೆಗಪ್ಪನ ಅಭಿಮಾನದ ಹಕ್ಕಿ ಅನೇಕ ಪಂದ್ಯಗಳನ್ನು ಗೆದ್ದಿದ್ದ ಕಾಳಗದ ಕಲಿ ವೀರಭದ್ರನಿಗೂ ಸಾಬರ ಖ್ಯಾತವಾದ ಹಕ್ಕಿ ಉಸ್ಮಾನನಿಗೂ ಪಂದ್ಯವಾಯಿತು. ಎರಡೂ ಹಕ್ಕಿಗಳೂ ತೆಕ್ಕೆಮುರಿ ಬಿದ್ದು ಸಮಸಮಕ್ಕೆ ಕಾದತೊಡಗಿದ್ದರೂ, ಉಸ್ಮಾನನ ಹೊಡೆತಗಳನ್ನು ತಡೆಯಲಾರದೆ ಗಾಸಿಗೊಂಡು ವೀರಭದ್ರ ಹೆದರಿ ಹಿಮ್ಮೆಟ್ಟಿ ಅಂಕ ಬಿಟ್ಟು ಓಡಿಹೋಗಿತ್ತು. ಸಾಬರ ಹಕ್ಕಿ ಅಂಕ ಬಿಟ್ಟು ಕಿಂಚಿತ್ತೂ ಚಲಿಸದೆ, ಅಲ್ಲಿಯೇ ನಿಂತು ಧೀರನಂತೆ ಕಾಳಗದ ಕಾಕುಗಳನ್ನು ಉಲಿಯುತ್ತಿತ್ತು. ಸೋತ ಮೇಲೆ ಪಂದ್ಯದ ಪರತ್ತಿನಂತೆ ವೀರಭದ್ರನನ್ನು ಸಾಬರಿಗೆ ಒಪ್ಪಿಸಿ, ಎಲೆಗಪ್ಪ ಅವಮಾನ ನಷ್ಟಗಳಿಂದ ಕಂದಿ ಕುಳಿತಿದ್ದ.

ಎಲೆಗಪ್ಪನಿಗೆ ಅದೇನೋ ಅನ್ನಿಸಿ ಈಗ ಗೆಲುವಿನ ಹಮ್ಮಿನಲ್ಲಿದ್ದ ಉಸ್ಮಾನನ ಮೇಲೆ, ಅಷ್ಟು ವಯಸ್ಸಾಗಿಲ್ಲದ ಅಂಕದ ಪರಿಶ್ರಮವೂ ಇಲ್ಲದ ರಾಮನನ್ನೇ ಜೋಡಿ ಬಿಡುವುದಾಗಿ ಘೋಷಿಸಿದ. ಸುತ್ತಲಿನ ಜನ ಪಂದ್ಯದ ದೃಷ್ಟಿಯಿಂದ ತೂಗಿ ನೋಡಿ, ಕಾಳಗದಲ್ಲಿ ನುರಿತಿದ್ದು ಈಗ ಹಮ್ಮಿನಿಂದ ಏಗರಾಡುತ್ತಿದ್ದ ಉಸ್ಮಾನನ ಮೇಲೆಯೇ ಬಾಜಿ ಹಣವನ್ನು ಸೇರಿಸಿದ್ದರು. ಸುತ್ತಲಿನ ಜನಕ್ಕೆಲ್ಲರಿಗೂ ಅಚ್ಚರಿಯಾಗುವಂತೆ ಬಾಜಿ ಹಣವನ್ನು ಒಂದಕ್ಕೈದು ತಾನೇ ಏರಿಸಿ ಎಲೆಗಪ್ಪ ರಾಮನನ್ನು ಪಂಜರದಿಂದ ಹೊರದೆಗೆದು ಬಾಯಿಯಿಂದ ಕಾಕು ಗರೆದು, ಲೊಟ್ಟೆ ಹೊಡೆದು ಸೀಟಿ ಹಾಕಿದ. ಮೊದಲೇ ಜರ್ಬಿನಿಂದ ಮೆರೆಯುತ್ತಿದ್ದ ರಾಮ ಎಲೆಗಪ್ಪನ ಕೈಯಿಂದ ಬಿಡಿಸಿಕೊಂಡು ಸಾಬರ ಹಕ್ಕಿಯ ಮೇಲೆ ಹಾರಲು ತವಕದಿಂದ ಮುಲುಕಲು ತೊಡಗಿತು. ಅತ್ತ ಸಾಬರ ಹಕ್ಕಿ ಕಾಳಗದ ಕಹಳೆಯನ್ನು ಉಲಿದಿತ್ತು.

ರಾಮ ತನ್ನ ಮೈಯುಬ್ಬಿಸಿ ಎಲೆಗಪ್ಪನ ಕೈಯಲ್ಲೇ ಮುಲುಕಾಡಿ, ಗಂಟಲುಬ್ಬಿಸಿ ಕಿಡಿಕಾರುವ ಮರುಕಾಕನ್ನು ಕೊಟ್ಟಿತು

ಎಲೆಗಪ್ಪ ಸಾಬ್ಜಾನ್ ಸಾಬರುಗಳು ಒಬ್ಬರಿಗೊಬ್ಬರೆದುರಾಗಿ, ಹಕ್ಕಿಗಳನ್ನು ಅಂಕಕ್ಕೆ ಬಿಟ್ಟರು. ಪುಕ್ಕಗಳನ್ನು ಕೊಡವಿ, ಕತ್ತು ಬಾಗಿಸಿ, ಮೈಯನ್ನು ಉಬ್ಬಿಸಿ ನೆಲಕ್ಕೆ ಸಮಾನಾಂತರವಾಗಿ ಬಾಗಿಸಿ, ರೆಕ್ಕೆಗಳನ್ನು ಅರೆತೆರೆದು-ಅರೆ ಮುಚ್ಚಿ, ಒಂದನ್ನೊಂದು ಬದ್ಧದ್ವೇಷಿಗಳಂತೆ ಕಣ್ಣಿನಲ್ಲಿಯೇ ಸುಟ್ಟುಬಿಡುವಂತೆ ನೋಡುತ್ತಿದ್ದ ಆ ಹಕ್ಕಿಗಳು ಸೈನಿಕರ ದಿಟ್ಟತನದಿಂದ ಅಂಕದಲ್ಲಿ ಒಂದನ್ನೊಂದು ಎದುರಿಸಿ ಹತ್ತಿರ

ಹತ್ತಿರ ನಡೆದವು. ಕಾಳಗದಲ್ಲಿ ನುರಿತಿದ್ದ ಉಸ್ಮಾನ್ ಹಠಾತ್ತಾಗಿ ರೆಕ್ಕೆಯಗಲಿಸಿದ್ದೇ ಛಪ್ಪನೆ ಹಾರಿಬಂದು ರಾಮುನ ಮೇಲೆರಗಿ ಅದರ ತಲೆಯನ್ನು ತನ್ನ ಚೂಪು ಚುಂಚುಗಳಿಂದ ಹಿಡಿದು, ಅದರೆದೆಯನ್ನು ತನ್ನ ಕಾಲುಗಳ ಅರೆ ಮುಳ್ಳಿನಲ್ಲಿ ಮಥಿಸಹೊರಟಾಗ, ಉಸ್ಮಾನನಷ್ಟು ತೂಕವಿರದಿದ್ದರೂ ಹುಟ್ಟಿದ ಆರು ತಿಂಗಳೂ ಗುಟ್ಟೆಯಲ್ಲಿ ಸ್ವೇಚ್ಛೆಯಾಗಿ ಚುರುಕು ಚಟುವಟಿಕೆಗಳಲ್ಲಿ ಮೇಲುಗೈ ಪಡೆದಿದ್ದ ರಾಮು ಸರ್ರನೆ ಕತ್ತು ಕೊಂಕಿಸಿ, ತಾನೂ ರೆಕ್ಕೆಯಗಲಿಸಿ, ಸಾಬರ ಹಕ್ಕಿಯ ಚುಂಚು-ಹಿಡಿತದಿಂದ ತಪ್ಪಿಸಿಕೊಂಡು, ಅದರ ಪದಾಘಾತವನ್ನೂ ತಪ್ಪಿಸಿಕೊಂಡು, ಅದರ ಮೇಲೆ ತೂರಿ ಹೋಯಿತು. ತೂರಿ ಹೋಗಿದ್ದೇ, ಕ್ಷಣಾರ್ಧದಲ್ಲಿ ಹಿಂದಿರುಗಿ ಕಾಳಗದ ಕಹಳೆಯನ್ನು ಮೊಳಗುತ್ತಾ ಮಿಂಚಿನಂತೆ ಮುನ್ನುಗ್ಗಿ ಉಸ್ಮಾನನ ಮೇಲೆರಗಿ, ತನಗಿಂತ ತುಸು ಭಾರವಾಗಿ, ವಯಸ್ಸಾಗಿ ಮುಖದಲ್ಲಿ ಮುಖಮೀಸೆ ಕಾಣತೊಡಗಿದ್ದ ಅದರ ಶಿರಾಗ್ರವನ್ನು ತನ್ನ ಚುಂಚುಗಳ ವಜ್ರಹಿಡಿತದಲ್ಲಿ ಸಿಕ್ಕಿಸಿಕೊಂಡು ರೆಕ್ಕೆಗಳಿಂದ ಪಟಪಟನೆ ಬಡಿದು, ತನ್ನ ಮುಂಗಾಲುಗಳ ಅರೆಮುಳ್ಳುಗಳಿಂದ ಉಸ್ಮಾನನ ಹೊಟ್ಟೆಗೆ ಮಿಂಚಿನ ಹೊಡೆತಗಳನ್ನು ಕೊಟ್ಟು ಸರ್ರನೆ ಹಿಂದೆ ಹಾರಿತು. ಉಸ್ಮಾನ್ ರಾಮುನ ಘಾತಗಳಿಂದ ಬಸವಳಿಯದೆ ಹಿಂದೆ ದಾಟಿ, ಪುನಃ ಮುನ್ನುಗ್ಗಿ ಬಂದು ರೋಷದಿಂದ ಛಪ್ಪನೆ ರಾಮುನ ಮೇಲೆರಗಿತು. ಉಸ್ಮಾನನ ಘಾತಗಳಿಂದ ರಾಮು ತಪ್ಪಿಸಿಕೊಂಡು ಹಾರಿ, ಪುನಃ ಹಿಂದಿರುಗಿ ನುಗ್ಗಿ ಬಂದು ಸಾಬರ ಹಕ್ಕಿಯ ಜುಟ್ಟು ಹಿಡಿದು ಕಚ್ಚಿ, ಮುಂಗಾಲುಗಳ ಅರೆಗಳಿಂದ ಘಾತ ಮಾಡಲು ಉಪಕ್ರಮಿಸಿತ್ತು. ಎರಡು ಹಕ್ಕಿಗಳು ಒಂದಕ್ಕೊಂದು ತಕ್ಕಮೀರಿ ಬಿದ್ದು ತಮಗಾಗುತ್ತಿದ್ದ ಯಾವ ಪೆಟ್ಟಿಗೂ ಅಂಜದೆ, ಹಿಂದೆಗೆಯದೆ, ಕಾದುತ್ತಿರುವುದನ್ನು ಕಂಡು ಸಾಬರ ಹಕ್ಕಿಯ ಮೇಲೆಯೇ ಬಾಜಿಯ ಹಣವನ್ನು ಪೇರಿಸಿದ್ದ ಜನಗಳ ಮುಖಗಳಲ್ಲಿ ಆಗಲೇ ಶಂಕೆ ಕಾಣಿಸಿಕೊಳ್ಳತೊಡಗಿತು. ಕಾಳಗದಲ್ಲಿ ಅಷ್ಟು ಪರಿಶ್ರಮವಿರದಿದ್ದರೂ ಇಷ್ಟೊಂದು ಕಲಿತನದಿಂದ ಕಾದುತ್ತಿದ್ದ ತನ್ನ ರಾಮುನ ಶೌರ್ಯವನ್ನು ಕಂಡು ಎಲೆಗಪ್ಪ ಅತ್ಯಂತ ಖುಷಿಗೊಂಡ. ಜನ ನೋಡುತ್ತಿದ್ದಂತೆಯೇ ರಾಮು ಒಂದು ಸಲ ಹಾರಿ ಉಸ್ಮಾನನ ಕತ್ತಿಗೆ ತನ್ನ ಮುಂಗಾಲಿನ ಅರೆಯಿಂದ ಒದೆತ ಕೊಟ್ಟಿತು. ಉಸ್ಮಾನನ ಬಲಗಣ್ಣು ಕಿತ್ತು ಚಿಚ್ಚನೆ ಕೆಂಪು ರಕ್ತ ಹೊರಗೆ ಸೋರತೊಡಗಿತು. ಇದನ್ನು ಕಂಡಾಕ್ಷಣ ಸಾಬ್ಜಾನ್ ಸಾಬರು ಸರಕ್ಕನೆ ಮುನ್ನುಗ್ಗಿ ಉಸ್ಮಾನನನ್ನೆತ್ತಿಕೊಂಡು, ಈಗ ಕೊಟರೆಯಾಗಿದ್ದ ಅದರ ಕಣ್ಣಿನಿಂದ ಸುರಿಯುತ್ತಿದ್ದ ರಕ್ತವನ್ನು ನಿಲ್ಲಿಸಲು ಬಟ್ಟೆಯನ್ನು ಒತ್ತಿಕೊಟ್ಟು, ಸೋಲೊಪ್ಪಿಕೊಂಡರು. ತನ್ನ ರಾಮು ಗೆದ್ದಿತೆಂದು ತಿಳಿದೊಡನೆಯೇ ಎಲೆಗಪ್ಪ ಅಂಕದಲ್ಲಿ ಎಗರಾಡುತ್ತಿದ್ದ ರಾಮುನನ್ನು ಬಳಿಗೆ ಬರಲು ಕರೆದ. ಇನ್ನೂ ಕಾಳಗದ ಸಿಟ್ಟಿನಲ್ಲಿದ್ದ ರಾಮು ಛಪ್ಪನೆ ಹಾರಿ ಎಲೆಗಪ್ಪನ ಕೈಯನ್ನೇ ತನ್ನ ಅರೆಯಿಂದ ಮಥಿಸಿತು. ಅರೆ ಚುಚ್ಚಿದ್ದ ಜಾಗದಿಂದ ಬಸಿಯತೊಡಗಿದ್ದ ರಕ್ತದ ಹನಿಯನ್ನು ಗಮನಿಸದೆಯೇ ಎಲೆಗಪ್ಪ ತನ್ನ ಮುದ್ದಾದ ರಾಮುನನ್ನು ಉಪಾಯವಾಗಿ ರಮಿಸಿ ಪಂಜರಕ್ಕೆ ಸೇರಿಸಿದ.

ಅಂಕದ ಹುಚ್ಚು ಇನ್ನೂ ಬಿಡದಿದ್ದ ಜನ ಎಲೆಗಪ್ಪ ತಂದಿದ್ದ ಇನ್ನೊಂದು ಪಂಜರದಲ್ಲಿ ಪುಟ್ಟನ ಮೇಲೆ ಕಣ್ಣನ್ನು ಹಾಯಿಸಿದ್ದರು. ಹೆಚ್ಚುಕಡಿಮೆ ಈಗ ಕಾಳಗದಲ್ಲಿ ಗೆದ್ದಿದ್ದ ರಾಮುನಷ್ಟೇ ಎತ್ತರಗಾತ್ರವಾಗಿದ್ದ ಆ ಪುಟ್ಟನಿಗೂ ರಾಮುನಿಗೂ ಕಾಳಗ ಬಿಡಬೇಕೆಂದು ಎಲೆಗಪ್ಪನನ್ನು ಒತ್ತಾಯಿಸಿದರು. ಆದರೆ ಜೇಬಿನಲ್ಲಿ ರಾಮು ಹೊಡೆದ ಪಂದ್ಯದ ದುಡ್ಡು ತುಂಬಿ, ಪಂದ್ಯದ ಆಸೆ ಸದ್ಯಕ್ಕೆ ಅಡಗಿದ್ದ ಎಲೆಗಪ್ಪ ರಾಮು–ಪುಟ್ಟರ ಪಂದ್ಯವನ್ನು ಆಷಾಢ ಕಳೆದ ಮೇಲೆ ಇಡುವೆನೆಂದು ಹೇಳಿ ಜಾರಿಕೊಂಡ. ಜನ ಸುತ್ತಲೂ ಸಂದಣಿಸಿದ್ದರಿಂದ ಗಾಬರಿಗೊಂಡಿದ್ದರೂ ತಾನು ಲಟ್ಟೆ ಹೊಡೆದಾಗ ಪಂಜರದೆತ್ತರಕ್ಕೂ ನಿಂತು ಗಂಟಲುಬ್ಬಿಸಿ ಕೂಗು ಕೊಡುತ್ತಿದ್ದ ರಾಮು–ಪುಟ್ಟರನ್ನು, ಅವುಗಳ ದಿಟ್ಟ ನಿಲುವಿನ ಭವ್ಯತೆಯನ್ನು ಕಂಡು, ಬರಲಿರುವ ದಿನಗಳಲ್ಲಿ ಈ ಎರಡೂ ಹಕ್ಕಿಗಳು ತನಗೆ ದಕ್ಕಿಸಬಹುದಾದ ಕೀರ್ತಿ ಬಹುಮಾನಗಳನ್ನು ನೆನೆನೆನೆದು ಎಲೆಗಪ್ಪ ಸುಖಿಸಿದ.

# ಗೃಹೋಪಕರಣಗಳಿಗೆ

# ಕೆನರಾ ಸೇಲ್ಸ್

ಕೆನರಾ ಸೇಲ್ಸ್ ಕಾರ್ಪೊರೇಷನ್ ಲಿಮಿಟೆಡ್
ಕೊಡಿಯಾಲಬೈಲು, ಮಂಗಳೂರು-3

# ನೀವು ನಮ್ಮಲ್ಲಿ ವಿಶ್ವಾಸವಿಡಬಹುದು

## ತಯಾರಕರ ಆಯ್ಕೆ

ಪ್ರಸಿದ್ಧರಾದ ತಯಾರಕರು ತಮ್ಮ ಗೃಹೋಪಕರಣ ವಸ್ತುಗಳನ್ನು ಕೆನರಾ ಸೇಲ್ಸ್ ಕಾರ್ಪೊರೇಷನ್ ಮೂಲಕ ವಿತರಣ ಮಾಡುವುದರಿಂದ ಲಾಭವಿದೆಯೆಂದು ತಿಳಿಯುತ್ತಾರೆ. ಅದಕ್ಕಿರುವ ಕಾರಣ ಊಹಿಸಲು ಕಷ್ಟವಿಲ್ಲ. 55 ವರ್ಷಗಳ ಮಾರಾಟಾನುಭವ ನಮಗಿರುವುದೇ ಅದಕ್ಕೆ ಕಾರಣ. ಎಲ್ಲಕ್ಕಿಂತ ಮಿಗಿಲಾಗಿ ನಿಮ್ಮ ಮನೆಗೆ ಉಪಯುಕ್ತವಾದುದೇನೆಂಬುದು ನಮಗೆ ಚೆನ್ನಾಗಿ ತಿಳಿದಿದೆ.

## ವ್ಯಾಪಾರಿಗಳಿಗೆ ಸೂಚನೆ

ನೀವು ವ್ಯಾಪಾರಿಗಳಾಗಿದ್ದಲ್ಲಿ, ಸ್ಟಾಕಿನ ಬಗ್ಗೆ ಚಿಂತೆ ಮಾಡಬೇಡಿ. ನಿಮಗೆ ಬೇಕಾದ ವೇಳೆಯಲ್ಲಿ, ಒಳ್ಳೆಯ ಗೃಹೋಪಕರಣಗಳನ್ನು ನಾವು ನಿಮಗೊದಗಿಸುತ್ತೇವೆ. ದೀರ್ಘಾವಧಿಯ ಕಾಲದವರೆಗೆ ನಿಮ್ಮ ಬಂಡವಾಳವನ್ನು ತೊಡಗಿಸಿಡುವ ಅಗತ್ಯವಿಲ್ಲ. ನಿಮ್ಮ ಗ್ರಾಹಕರನ್ನೂ ನೀವು ಸಂತೋಷಪಡಿಸಬಹುದು.

## ಗ್ರಾಹಕರ ಗಮನಕ್ಕೆ

ಗ್ರಾಹಕರಾದ ನೀವು, ಲಾಭದಾಯಕ ಬೆಲೆಗಳಲ್ಲಿ ಗೃಹೋಪಕರಣಗಳನ್ನು ನಿಮಗೊದಗಿಸುವ ಬಗ್ಗೆ ನಮ್ಮಲ್ಲಿ ನೀವು ವಿಶ್ವಾಸವಿಡಬಹುದು. ಅದರಿಂದಲೇ ಅಧಿಕಸಂಖ್ಯೆಯಲ್ಲಿ ಗ್ರಾಹಕರು ತಮ್ಮ ಬೇಡಿಕೆಗಳಿಗಾಗಿ ನಮ್ಮತ್ತ ತಿರುಗುತ್ತಿದ್ದಾರೆ.



CSC-6780 Rev.

[illegible] ಸೀಸದ ಕಡ್ಡಿಯಲ್ಲಿರುವ ಗ್ರಾಫೈಟ್ ಇವುಗಳೂ ಇಂಗಾಲದ ಭಿನ್ನರೂಪಗಳೇ. ಹೆಪ್ಪುಗಟ್ಟಿದ ಶಿಲಾದ್ರವಗಳ ಎಳೆಗಳಲ್ಲಿ ಇಂಗಾಲ ಕೆಲವೆಡೆ ಗ್ರಾಫೈಟ್ ರೂಪದಲ್ಲಿ ದುಂಡಗೆ ಗೊಂಚಲು ಗೊಂಚಲಾಗಿಯೂ ಇನ್ನು ಕೆಲವೆಡೆ ಥಳಥಳಿಸುವ ವಜ್ರದಂತೆಯೂ ಕಂಡುಬರುವುದು. ಶಿಲಾದ್ರವಗಳಲ್ಲಿ ಕಂಡುಬರುವ ಇಂಗಾಲವು ಹೆಚ್ಚು ಭಾಗ ಅನಿಲ ರೂಪದಲ್ಲಿ ಹೈಡ್ರೋಕಾರ್ಬನ್‌ಗಳಾಗಿ ಹೊರಬರುವುದು. ಇನ್ನು ಸ್ವಲ್ಪ ಭಾಗ ಕಾರ್ಬೈಡ್ ರೂಪದಲ್ಲಿ ಬಿಡುಗಡೆಯಾಗಿ ಗ್ರಾಫೈಟಾಗಿ ಪರಿವರ್ತಿತವಾಗುವುದು. ಉಳಿದ ಭಾಗ ಆಮ್ಲಜನಕದೊಡನೆ ಸಂಯೋಗ ಹೊಂದಿ ಇಂಗಾಲದ ಡೈ-ಆಕ್ಸೈಡ್ ರೂಪದಲ್ಲಿ ಬಿಡುಗಡೆಯಾಗುವುದು.

# ಜೀವಾಧಾರ ಧಾತು ಇಂಗಾಲ

ಎಸ್. ವೆಂಕಟೇಶಮೂರ್ತಿ

ನೀವು ಕಲ್ಲಿದ್ದಲನ್ನು ನೋಡಿದ್ದೀರಾ? ಹಾಗಿದ್ದರೆ ಇಂಗಾಲವು ನಿಮಗೆ ಅಪರಿಚಿತವಲ್ಲ. ಇಂಗಾಲದ ಒಂದು ಭಿನ್ನ ರೂಪವೇ ಕಲ್ಲಿದ್ದಲು. ಕಲ್ಲಿದ್ದಲ್ಲಿನ ಪರಮಾಣುಗಳು ಜೀವಿಗಳಿಂದಲೇ ಉಂಟಾದವು. ಎಲ್ಲಾ ಸಜೀವ ವಸ್ತುಗಳಲ್ಲೂ ಇಂಗಾಲವಿದೆ. ಭೂಮಿಯಲ್ಲಿ ದೊರೆಯುವ ಇಂಗಾಲದ ಪ್ರಮಾಣ ಅತ್ಯಲ್ಪ (ಸೇಕಡಾ ಒಂದರಷ್ಟು ಮಾತ್ರ). ಈ ಇಂಗಾಲವು ಮಣ್ಣಿನಲ್ಲಿ ಸಂಯುಕ್ತ ರೂಪದಲ್ಲಿ ದೊರೆಯುವುದು. ಮ್ಯಾಗ್ನಸೈಟ್, ಸುಣ್ಣದ ಕಲ್ಲು ಮತ್ತು ಅಮೃತಶಿಲೆಗಳಲ್ಲಿಯೂ ಇಂಗಾಲವಿದೆ. ವಾಯುಮಂಡಲದಲ್ಲಿ ಇದು ಇಂಗಾಲದ ಡೈ-ಆಕ್ಸೈಡ್ ರೂಪದಲ್ಲಿ ಕಂಡುಬರುತ್ತದೆ.

ಥಳಥಳನೆ ಹೊಳೆಯುವ ಅಮೂಲ್ಯವಾದ


ಭೂಮಿಯ ಒಳಭಾಗದಲ್ಲಿ ಸಿಲಿಕಾನ್ ಡೈ-ಆಕ್ಸೈಡು ಮೇಲುಗೈಯಾದರೆ ಹೊರಭಾಗದಲ್ಲಿ ಇಂಗಾಲದ್ದೇ ಮೇಲುಗೈ. ಭೂಮಿಯ ಮೇಲ್ಭಾಗದಲ್ಲಿ ರಾಸಾಯನಿಕ ಪರಿವರ್ತನೆಗಳನ್ನುಂಟು ಮಾಡುವುದರಲ್ಲಿ ಇಂಗಾಲಾಮ್ಲದ ಪಾತ್ರ ಪ್ರಮುಖವಾದುದು. ಇಂಗಾಲಾಮ್ಲವು ಶಿಲೆಗಳನ್ನು ಶಿಥಿಲಗೊಳಿಸುವುದು. ಕ್ಯಾಲ್ಸಿಯಂ ಮತ್ತು ಮೆಗ್ನೀಷಿಯಂಗಳೊಡನೆ ಸಂಯೋಜನೆ ಹೊಂದಿ ಸುಣ್ಣಕಲ್ಲು, ಡಾಲಮೈಟ್ ಮೊದಲಾದವುಗಳನ್ನು ಶೇಖರಿಸುವುದು. ಜಲಾಶಯಗಳಲ್ಲಿ ಅಗಾಧ ಪ್ರಮಾಣದಲ್ಲಿ ಕಂಡುಬರುವ ಇಂಗಾಲಾಮ್ಲದ ಲವಣಗಳು ಜಲಚರಗಳ ಚಿಪ್ಪುಗಳ ರಚನೆಗೆ ಕಾರಣವಾಗಿವೆ.

ಇಂಗಾಲವಿಲ್ಲದ ಪ್ರಪಂಚವನ್ನು ನಾವು ಊಹಿ-


ಸಲೂ ಶಕ್ಯವಿಲ್ಲ. ಇಂಗಾಲವಿಲ್ಲದೇ ಒಂದು ಮರವಾಗಲಿ, ಒಂದೇ ಒಂದು ಹಸುರೆಲೆಯಾಗಲಿ, ಕೊನೆಗೆ ಒಂದು ಹುಲ್ಲುಕಡ್ಡಿ ಸಹ ಕಾಣಲಾರದು. ಸಸ್ಯಗಳಿಲ್ಲವೆಂದ ಮೇಲೆ ಅದನ್ನೇ ಅವಲಂಬಿಸಿರುವ ಪ್ರಾಣಿಗಳೂ ಇರುವುದಿಲ್ಲ. ಎಲ್ಲಿ ನೋಡಿದರಲ್ಲಿ ನಿರ್ಜೀವ ಮರಳು ಕಾಡುಗಳು, ಅವುಗಳ ನಡುನಡುವೆ ವಿಧ ವಿಧ ಶಿಲೆಗಳಿಂದುಂಟಾದ ಬೋಳು ಬೆಟ್ಟ ಗುಡ್ಡಗಳೇ ಕಂಡುಬರುವುವು. ಪ್ರಕೃತಿಗೆ ಮೆರಗು ಕೊಡುವ ಅಮೃತಶಿಲೆಗಳೂ ಇರುವುದಿಲ್ಲ. ಉಪಯುಕ್ತ ಇಂಧನವಾದ ಕಲ್ಲಿದ್ದಲು ಸಹ ಕಾಣಸಿಗುವುದಿಲ್ಲ. ಇಂಗಾಲವಿಲ್ಲದೆ ಜೀವವಿಲ್ಲ

ಇಂಗಾಲದ ಸಂಯುಕ್ತಗಳು ಲೆಕ್ಕವಿಲ್ಲದಷ್ಟು. ಜಲಜನಕ, ಸಾರಜನಕ, ಆಮ್ಲಜನಕ ಮುಂತಾದ ವಸ್ತುಗಳೊಡನೆ ಸಂಯೋಗಗೊಂಡು ಇಂಗಾಲವು ಅಸಂಖ್ಯಾತ ಸಂಯುಕ್ತಗಳನ್ನು ಕೊಡುವುದು. ಬೇರೆ ಯಾವ ಮೂಲ ವಸ್ತುವೂ ಇಂಗಾಲವು ಕೊಟ್ಟಷ್ಟು ಸಂಯುಕ್ತಗಳನ್ನು ಕೊಡುವುದಿಲ್ಲ. ಜೀವಿಗಳ ಅಂಗಾಂಗಗಳ ಕೋಶಗಳಲ್ಲಿ ಕಂಡು ಬರುವ ಬಹುಸಂಖ್ಯಾತ ಪ್ರೋಟೀನುಗಳು, ಕೊಬ್ಬುಗಳು, ಶರ್ಕರಪಿಷ್ಟಾದಿಗಳು, ಜೀವಸತ್ವಗಳು ಮತ್ತಿತರ ಅನೇಕ ಸಂಯುಕ್ತಗಳಿಗೂ ಇಂಗಾಲವೇ ಮೂಲ. ಜೀವಿಗಳಿಗೆ ಅತ್ಯಾವಶ್ಯಕವಾದ ಜಟಿಲವಾದ ಬೃಹತ್ ಅಣುಗಳನ್ನು ತಯಾರಿಸುವ ಸಾಮರ್ಥ್ಯ ಇಂಗಾಲಕ್ಕೆ ಮಾತ್ರ ಇರುವುದು. ಆದ್ದರಿಂದಲೇ ಅದನ್ನು 'ಸಮಸ್ತ ಜೀವಾಧಾರ ಮೂಲವಸ್ತು' ಎಂದು ಕರೆಯಲಾಗಿದೆ. ಇಂಗಾಲದ ಸಂಯುಕ್ತಗಳನ್ನು 'ಸಾವಯವ ಸಂಯುಕ್ತ' (ಆರ್ಗ್ಯಾನಿಕ್ ಸಂಯುಕ್ತ) ಗಳೆಂದೂ ಕರೆಯುತ್ತಾರೆ. ರಾಸಾಯನಿಕ ಪ್ರಯೋಗಶಾಲೆಗಳಲ್ಲಿ ಪ್ರಾಸಂಗಕ್ಕೊಳಪಟ್ಟಿರುವ ಇಂಗಾಲದ ಸಂಯುಕ್ತಗಳ ಸಂಖ್ಯೆ ಹತ್ತು ಲಕ್ಷಕ್ಕೂ ಮೀರಿದೆ. ಪ್ರಯೋಗಶಾಲೆಗಳಲ್ಲಿ ಪ್ರಕೃತಿಯಲ್ಲಿ ಕಾಣಸಿಗದಿರುವ ಅನೇಕ ಹೊಸ ಹೊಸ ಸಂಯುಕ್ತಗಳನ್ನೂ ತಯಾರಿಸಲಾಗುತ್ತಿದೆ. ಸಾವಯವ ಸಂಯುಕ್ತಗಳಿರುವಷ್ಟು ಹೆಚ್ಚಿನ ಸಂಖ್ಯೆಯಲ್ಲಿ ನಿರವಯವ (ಇನಾರ್ಗ್ಯಾನಿಕ್) ಸಂಯುಕ್ತಗಳಿಲ್ಲ. ಖನಿಜ ವರ್ಗಕ್ಕೆ ಸಂಬಂಧಪಟ್ಟ ಇಂಗಾಲದ ಸಂಯುಕ್ತಗಳ ಸಂಖ್ಯೆ ಸುಮಾರು ೩೦,೦೦೦ದಷ್ಟು.

ಈ ರೀತಿಯಾಗಿ ಅಸಂಖ್ಯಾತ ಸಂಯುಕ್ತಗಳನ್ನು ಕೊಡುವ ಇಂಗಾಲದ ಸಾಮರ್ಥ್ಯವೇ ಪ್ರಾಣಿಗಳ ಹಾಗೂ ಸಸ್ಯಗಳ ಅಸಾಧಾರಣವಾದ ವೈವಿಧ್ಯಕ್ಕೆ ಕಾರಣ. ಅಂದಾಕ್ಷಣ ಪ್ರಾಣಿಗಳ ಹಾಗೂ ಸಸ್ಯಗಳ ಹೆಚ್ಚು ಭಾಗವು ಇಂಗಾಲದಿಂದಾಗಿದೆಯೆಂದು ತಿಳಿಯುವುದು ತಪ್ಪಾದೀತು. ಇವುಗಳಲ್ಲಿರುವ



ವಜ್ರದ ಸ್ಫಟಿಕ ರಚನೆ



ಗ್ರಾಫೈಟಿನ ಸ್ಫಟಿಕ ರಚನೆ

ಇಂಗಾಲದ ಪ್ರಮಾಣ ಶೇಕಡಾ ೧೦ರಷ್ಟು ಮಾತ್ರ. ಉಳಿದ ಭಾಗವು ಜಲಜನಕ, ಆಮ್ಲಜನಕ, ಸಾರಜನಕ ಮುಂತಾದವುಗಳಿಂದಾಗಿರುವುದು.

ಜೀವಜಗತ್ತಿನಲ್ಲಿ ಇಂಗಾಲ ಚಕ್ರದಂತೆ ಸುತ್ತುತ್ತಿದೆ. ಇಂಗಾಲದ ಬಹುರೂಪಗಳಲ್ಲಿ ಒಂದಾದ ಇಂಗಾಲಾಮ್ಲವನ್ನು ಸಸ್ಯಗಳು ವಾತಾವರಣದಿಂದ ಮೊದಲು ಸೆಳೆಯುವುವು. ಸೂರ್ಯನ ಬೆಳಕಿದ್ದಾಗ ಸಸ್ಯಗಳ ಹಸುರೆಲೆಗಳು ಇಂಗಾಲಾಮ್ಲವನ್ನು ಸೆಳೆದುಕೊಂಡು ಅದನ್ನು ಜಟಿಲವಾದ ಇಂಗಾಲದ ಸಂಯುಕ್ತಗಳಾಗಿ ಪರಿವರ್ತಿಸುವವು*. ಈ ಸಂಯುಕ್ತಗಳೇ ಜೀವಲೋಕದ ಆಹಾರ. ಈ ಪರಿವರ್ತನೆಗೆ 'ದ್ಯುತಿ ಸಂಶ್ಲೇಷಣ'ವೆಂದು ಹೆಸರು. ಈ ಕ್ರಿಯೆಗೆ ಸಸ್ಯಗಳಲ್ಲಿರುವ ಕ್ಲೋರೋಫಿಲ್ ಎಂಬೊಂದು ಹಸುರು ಪದಾರ್ಥ ಮತ್ತು ಬೆಳಕು ಅವಶ್ಯಕ. ಹೀಗೆ ಸೆಳೆದುಕೊಳ್ಳಲ್ಪಟ್ಟು ವಾತಾವರಣದಿಂದ ಕಣ್ಮರೆಯಾದ ಇಂಗಾಲಾಮ್ಲವು ಪ್ರಾಣಿಗಳ ಉಸಿರಾಡುವಿಕೆಯಿಂದಲೂ, ಸಸ್ಯಗಳ ದಹನ ಮತ್ತು ಕೊಳೆಯುವಿಕೆಯಿಂದಲೂ ವಾತಾವರಣಕ್ಕೆ ಭರ್ತಿಯಾಗುವುದು. ಇದರಿಂದಾಗಿ ಗಾಳಿಯಲ್ಲಿನ ಇಂಗಾಲದ ಡೈ-ಆಕ್ಸೈಡಿನ ಪ್ರಮಾಣವು ಯಾವಾಗಲೂ ಸುಮಾರಾಗಿ ಒಂದೇ ಆಗಿರುವುದು.

ಇಂಗಾಲದ ಚಕ್ರಗತಿ ಇಲ್ಲಿಗೇ ಮುಗಿಯುವುದಿಲ್ಲ. ಗಾಳಿಯಲ್ಲಿನ ಇಂಗಾಲವು ಸಸ್ಯಗಳಿಂದ ಉಪಯೋಗಿಸಲ್ಪಟ್ಟು ಸಾವಯವ ಸಂಯುಕ್ತಗಳಾಗಿ ಪರಿವರ್ತಿತವಾಗುವುದು. ಸಸ್ಯಗಳ ಒಂದು ಭಾಗವು ಪ್ರಾಣಿಗಳಿಂದ ಉಪಯೋಗಿಸಲ್ಪಟ್ಟು ಪ್ರಾಣಿಗಳ ಅಂಗಾಂಗವಾಗುವುದು. ಸಸ್ಯಗಳೂ ಪ್ರಾಣಿಗಳೂ ಮೃತಿಹೊಂದಿ ಅವುಗಳ ಅವಶೇಷಗಳು ಕೆಲವೆಡೆಗಳಲ್ಲಿ ಕೊಳಗಳ, ಸರೋವರಗಳ, ಸಮುದ್ರಗಳ ತಳದಲ್ಲಿ ಅಗಾಧ ಪ್ರಮಾಣದಲ್ಲಿ ಶೇಖರವಾಗಿ ಕಾಲಕ್ರಮದಲ್ಲಿ ಕೊಳೆತು ಸೂಕ್ಷ್ಮಜೀವಿಗಳ ಕ್ರಿಯೆಗೊಳಗಾಗಿ 'ಪೀಟ್' ಆಗಿ ಪರಿವರ್ತಿತವಾಗುವವು. ಇನ್ನು ಕೆಲವೆಡೆಗಳಲ್ಲಿ ಜೀವಾವಶೇಷಗಳು ಮಣ್ಣು ಮತ್ತು ಮರಳುಗಳಿಂದ ಆವೃತವಾಗಿ ಒತ್ತಡ, ಶಾಖಗಳ ಪರಿಣಾಮವಾಗಿ ಕ್ರಮೇಣ ಕಲ್ಲಿದ್ದಲಾಗಿಯೋ ಕಲ್ಲೆಣ್ಣೆಯಾಗಿಯೋ ಪರಿವರ್ತಿತವಾಗುವುವು.

ಸಸ್ಯಗಳ ವಿಭಜನೆಯಿಂದುಂಟಾದ ಘನರೂಪದ ಇಂಗಾಲವು ಮೂರು ರೂಪಗಳಲ್ಲಿರುವುದು. ಆಂಥ್ರಸೈಟ್ (ಶೇಕಡಾ 95 ರಷ್ಟು ಇಂಗಾಲ), ಕಲ್ಲಿದ್ದಲು—ಕೋಲ್ (88% ಇಂಗಾಲ) ಮತ್ತು ಲಿಗ್ನೈಟ್ (67% ಇಂಗಾಲ) ಗಳೇ ಈ ಮೂರು ರೂಪಗಳು. ಇವುಗಳನ್ನು ಸೂಕ್ಷ್ಮದರ್ಶಕದಿಂದ ಪರೀಕ್ಷಿಸಿದರೆ ಇವು ಸಸ್ಯಾವಶೇಷಗಳೆಂದು ಸ್ಪಷ್ಟವಾಗುವುದು. ಕಲ್ಲಿದ್ದಲು ಪದರಪದರವಾಗಿದ್ದು ಈ ಪದರಗಳಲ್ಲಿ ಎಲೆಗಳ ಮತ್ತು ಬೀಜಗಳ ಆಕಾರವು ಮುದ್ರಿತವಾಗಿರುವುದು ಬರೀ ಕಣ್ಣಿಗೆ ಸಹ ಗೋಚರವಾಗುವುದು. ಮರವನ್ನು ಸುಟ್ಟಾಗ ಉತ್ಪತ್ತಿಯಾಗುವ ಶಾಖಕ್ಕಿಂತ ಕಲ್ಲಿದ್ದಲನ್ನು ಉರಿಸಿದಾಗ ಎರಡರಷ್ಟು ಶಾಖವು ಬಿಡುಗಡೆಯಾಗುತ್ತದೆ. ಆದ್ದರಿಂದ ಕಲ್ಲಿದ್ದಲು ಉತ್ತಮ ಘನ ಉರುವಲಾಗಿದೆ. ಕಲ್ಲಿದ್ದಲಿನಿಂದ ನಮಗೆ ಅವಶ್ಯವಾದ ಉಷ್ಣತೆಯನ್ನು ಪಡೆಯುವುದೊಂದೇ ಅಲ್ಲ, ಅದರಿಂದ ಅನೇಕ ವರ್ಣದ್ರವ್ಯಗಳು, ಔಷಧಿಗಳು, ಸ್ಫೋಟಕ ವಸ್ತುಗಳು, ಕ್ರಿಮಿನಾಶಕಗಳು ಇವೇ ಮೊದಲಾದ ಅನೇಕ ಉಪಯುಕ್ತ ವಸ್ತುಗಳನ್ನು ತಯಾರಿಸಬಹುದು.

ಏಕಕೋಶ ಜೀವಿಗಳಿಂದುಂಟಾದ ಕಲ್ಲೆಣ್ಣೆಯು ಉತ್ತಮ ದ್ರವ ಉರುವಲು. ಇದನ್ನು ಶುದ್ಧ ಮಾಡಿ ಪೆಟ್ರೋಲನ್ನು ಪ್ರತ್ಯೇಕಿಸುತ್ತಾರೆ. ಇದರ ಸಹಾಯದಿಂದಲೇ ಆಧುನಿಕ ಕ್ಷಿಪ್ರಗತಿಯ ನೌಕೆಗಳೂ ವಿಮಾನಗಳೂ ಸ್ವಯಂಚಾಲಿತ ಯಂತ್ರಗಳೂ ಕೆಲಸ ಮಾಡುವವು.

ಕಲ್ಲಿದ್ದಲಲ್ಲದೆ ಪ್ರಕೃತಿಯಲ್ಲಿ ಇಂಗಾಲವು ಇನ್ನೂ ಎರಡು ಅಸಾಧಾರಣ ರೂಪಗಳಲ್ಲಿ ದೊರೆಯುವುದೆಂದು ಈಗಾಗಲೇ ತಿಳಿಸಿದೆ. ವಜ್ರ

* ನೋಡಿರಿ: "ಎಲೆಯೊಳಗಿನ ಅದ್ಭುತ ಪ್ರಪಂಚ" —'ಕಸ್ತೂರಿ' ಡಿಸೆಂಬರ್ ೧೯೬೨

ಮತ್ತು ಗ್ರಾಫೈಟ್‌ಗಳೇ ಈ ಎರಡು ರೂಪಗಳು. ನಾವು ಬರೆಯುವ ಸೀಸದ ಕಡ್ಡಿಯಲ್ಲಿರುವ ಕಂದು ಬಣ್ಣದ ಗ್ರಾಫೈಟಿಗೂ ಥಳಥಳಿಸುವ ವಜ್ರಕ್ಕೂ ಎಷ್ಟೊಂದು ವ್ಯತ್ಯಾಸ! ಇವಕ್ಕೆ ಅವುಗಳ ರಚನಾ ವ್ಯತ್ಯಾಸವೇ ಕಾರಣ.

ಇಂಗಾಲದ ಸ್ಫಟಿಕ ರೂಪವೇ ಗ್ರಾಫೈಟು. ಗ್ರಾಫೈಟ್‌ನಲ್ಲಿ ಇಂಗಾಲದ ಪರಮಾಣುಗಳು ಸಮತಲವಾಗಿರುವ ಪದರಗಳ ರೂಪ ಹೊಂದಿರುವುವು. ಪ್ರತಿ ಪದರದ ಪ್ರತಿಯೊಂದು ಇಂಗಾಲದ ಪರಮಾಣುವೂ ಅದೇ ಪದರದಲ್ಲಿರುವ ಇತರ ಮೂರು ಪರಮಾಣುಗಳೊಡನೆ ದೃಢವಾಗಿ ಬಂಧಿತವಾಗಿರುವುದು. ಆದರೆ ನಾಲ್ಕನೆಯ ಬಂಧವು ಪಕ್ಕದ ಪದರದ ಒಂದು ಪರಮಾಣುವಿನೊಡನಿದ್ದು ದುರ್ಬಲವಾಗಿರುವುದು. ಇದರಿಂದ ಒಂದು ಪದರವು ಇನ್ನೊಂದು ಪದರದ ಮೇಲೆ ಜಾರುವಂತಿರುವುದು. ಇದರಿಂದಲೇ ಗ್ರಾಫೈಟ್ ಇಷ್ಟು ಮೃದು (ಕಾಗದದ ಮೇಲೆ ಗೀಚಿದಾಗ ಗುರುತು ಮೂಡಿಸುತ್ತದೆ) ಗ್ರಾಫೈಟನ್ನು ಚೆನ್ನಾಗಿ ಕಾಯಿಸಿದಾಗ ಇಂಗಾಲದ ಪರಮಾಣುಗಳ ಪದರಗಳು ಒಂದಕ್ಕೊಂದು ಹತ್ತಿರ ಬಂದು ಒಂದರ ಮೇಲೊಂದು ಒತ್ತುವುದರಿಂದ ಅದರ ಆಕಾರವೇ ಬದಲಾವಣೆಯಾಗಿ ಹೊಸದೊಂದು ಸ್ಫಟಿಕಾಕೃತಿಯ ಇಂಗಾಲವು ಉಂಟಾಗುತ್ತದೆ. ಈ ಹೊಸ ರೂಪದ ಇಂಗಾಲವು ನಾವು ಊಹಿಸಲೂ ಶಕ್ಯವಿಲ್ಲದಂಥ ವಿಶಿಷ್ಟ ರೂಪದಿಂದ ಕಂಗೊಳಿಸುತ್ತದೆ ಗ್ರಾಫೈಟು ಕಪ್ಪಾಗಿದ್ದು ಅ-ಪಾರದರ್ಶಕವಾಗಿದ್ದರೆ ಈ ಹೊಸ ಇಂಗಾಲವು ವರ್ಣರಹಿತವಾಗಿದ್ದು ಪಾರದರ್ಶಕವಾಗಿರುವುದು. ಗ್ರಾಫೈಟು ಬಹಳ ಮೃದುವಾದರೆ ಇದು ತದ್ವಿರುದ್ಧ. ನಮಗೆ ತಿಳಿದಿರುವ ವಸ್ತುಗಳಲ್ಲೆಲ್ಲಾ ಇದು ಅತ್ಯಂತ ಕಠಿಣವಾದದ್ದು. ಇಂಗಾಲದ ಈ ಹೊಸ ತೆರನ ಸ್ಫಟಿಕರೂಪವೇ ವಜ್ರ.

ವಜ್ರದ ಹರಳುಗಳಲ್ಲಿ ಇಂಗಾಲದ ಪರಮಾಣುಗಳು ಅತಿ ಸಮೀಪವಾಗಿರುವುವು. ಈ ನಿಕಟವರ್ತಿತ್ವವೇ ಇದರ ಸಾಂದ್ರತೆ, ಕಾಠಿಣ್ಯ ಮತ್ತು ಹೆಚ್ಚಿನ ವಕ್ರೀಭವನ ಸೂಚಕಗಳಿಗೆ ಕಾರಣ. ವಜ್ರದಲ್ಲಿ ಪ್ರತಿ ಇಂಗಾಲದ ಪರಮಾಣುವೂ ಒಂದು ಚತುರ್ಮುಖಿಯ (ಟೆಟ್ರಹೆಡ್ರನ್) ನಾಲ್ಕು ಮೂಲೆಗಳಲ್ಲಿರುವ ಇತರ ನಾಲ್ಕು ಇಂಗಾಲದ ಪರಮಾಣುಗಳೊಡನೆ ದೃಢವಾಗಿ ಬಂಧಿತವಾಗಿರುವುದು. ಕರಗಿದ ಶಿಲೆಯು ಸುಮಾರು ೩೦ ರಿಂದ ೬೦ ಸಾವಿರ ವಾಯುಮಂಡಲಗಳಷ್ಟು ಒತ್ತಡಕ್ಕೆ ಈಡಾದಾಗ ಮಾತ್ರ ಇಂಗಾಲವು ವಜ್ರವಾಗಿ ಪರಿವರ್ತಿತವಾಗುತ್ತದೆ. ಈ ಪ್ರಮಾಣದ ಒತ್ತಡವು ಭೂಗರ್ಭದಲ್ಲಿ ಸುಮಾರು ೫೦ ರಿಂದ ೮೦ ಮೈಲಿಗಳ ಆಳದಲ್ಲಿ ಇರುವುದು. ಇಷ್ಟು ಆಳದಿಂದ ಶಿಲೆಗಳು ಭೂಮಿಯ ಮೇಲ್ಭಾಗಕ್ಕೆ ಬರುವುದು ಅಪರೂಪ. ಆದುದರಿಂದಲೇ ಬಹುಶಃ ವಜ್ರಗಳು ಇಷ್ಟೊಂದು ವಿರಳ. ವಜ್ರದ ಉಜ್ವಲವಾದ ಕಾಂತಿ ಮತ್ತು ಕಾಠಿಣ್ಯ ಅದನ್ನು ಅತ್ಯಮೂಲ್ಯವಾದ ರತ್ನವನ್ನಾಗಿ ಮಾಡಿವೆ

ಪ್ರಪಂಚದಲ್ಲೆಲ್ಲಾ ಅತ್ಯಂತ ಹೆಚ್ಚಿನ ಪ್ರಮಾಣದ ವಜ್ರವು ದಕ್ಷಿಣ ಆಫ್ರಿಕದಲ್ಲಿ ಮಾತ್ರ ದೊರೆಯುವುದು. ೧೯೫೫ರಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನಗಳ ಪ್ರಯೋಗಶಾಲೆಗಳಲ್ಲಿ ಕೃತಕ ವಜ್ರವನ್ನು ತಯಾರಿಸುವ ವಿಧಾನವೊಂದನ್ನು ಕಂಡುಹಿಡಿಯಲಾಯಿತು. ಸಣ್ಣ ಸಣ್ಣ ಚೂರುಗಳಾಗಿ ಉತ್ಪತ್ತಿಯಾಗುವ ಕೃತಕ ವಜ್ರವು ಸ್ವಾಭಾವಿಕ ವಜ್ರದಂತೆಯೇ ಗುಣ ಲಕ್ಷಣಗಳನ್ನು ಹೊಂದಿದೆ. ಕೈಗಾರಿಕಾ ರಂಗದಲ್ಲಿ ಇದಕ್ಕೆ ವಿಶೇಷ ಬೇಡಿಕೆಯಿದೆ. ಅತ್ಯಂತ ಗಡುಸಾದ ಉಕ್ಕನ್ನೂ ಇದರಿಂದ ಕತ್ತರಿಸಬಹುದು.

ಇಂಗಾಲದ ಪರಮಾಣುಗಳು ಪರಸ್ಪರ ಸಂಯೋಜಿಸಿ ಅತಿ ದೀರ್ಘ ಶ್ರೇಣಿಯ ಇಂಗಾಲದ ಪರಮಾಣುಗಳನ್ನು ಹೊಂದಿರುವ ಸಂಯುಕ್ತಗಳನ್ನು ಕೊಡುವ ಅಸಾಧಾರಣ ಗುಣ ಸಾಮರ್ಥ್ಯವನ್ನು ಹೊಂದಿವೆ ಈ ಅಸಾಧಾರಣ ಗುಣವೇ ಇಂಗಾಲದ ಅಪರಿಮಿತ ಸಂಯುಕ್ತಗಳ ಅಸ್ತಿತ್ವಕ್ಕೆ ಕಾರಣ ಜೀವಿಗಳ ಅಸ್ತಿತ್ವಕ್ಕೂ ಇದೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ▲

# ಕೇಳಿದ್ದೀರಾ—ವಾರಕ್ಕೆ ನಾಲ್ಕೇ ದಿನ ಕೆಲಸ!

ಅನೇಕ ದೇಶಗಳು ಈ ಪ್ರಯೋಗವನ್ನು ನಡೆಸುತ್ತಿವೆ.

ರಾಧಾಕೃಷ್ಣ ರಾವ್

ಈಚೆಗೆ ಭಾರತದ ಕಾರ್ಮಿಕ ಮಂತ್ರಿಗಳಾದ ಶ್ರೀ ಹಾಡಿಲಕರರು ವಾರಕ್ಕೆ ಏಳೂ ದಿನ ಕೆಲಸ ಮಾಡುವ ರೂಢಿಯನ್ನು ತರಬೇಕು ಎಂದು ಹೇಳಿದರು. ಅಂದರೆ ವಾರದಲ್ಲಿ ಒಂದು ದಿನ ರಜೆಯನ್ನು ಅನುಭವಿಸುವುದಕ್ಕೂ ಸಮಾಪ್ತಿ ಬಂದ ಹಾಗೆ. ಬಹುಶಃ ಆ ಸ್ಥಿತಿ ಬರಲಾರದು. ಆದರೂ ಈ ದೇಶದ ಸಾಮಾನ್ಯ ಕಾರ್ಮಿಕ ವಾರದಲ್ಲಿ ಆರು ದಿನ ೪೮ ಗಂಟೆ ಕೆಲಸ ಮಾಡುತ್ತಾನೆ. ಕೆಲ ಪ್ರಸಂಗಗಳಲ್ಲಿ ಅವನನ್ನು ದಿನಕ್ಕೆ ಎಂಟು ಗಂಟೆಗಿಂತಲೂ ಹೆಚ್ಚು ದುಡಿಸುವುದಿದೆ. ಆದ್ದರಿಂದ ವಾರಕ್ಕೆ ನಾಲ್ಕೇ ದಿನ ಕೆಲಸ, ಮೂರು ದಿನ ರಜೆ ಎಂಬ ಸುದ್ದಿ ಕೇಳಿದರೆ ಆತ ಇದೇನು ಸ್ವಪ್ನಲೋಕದ ಸಂಗತಿಯೆಂದು ಭಾವಿಸುವುದು ಖಂಡಿತ. ಆದರೂ ಪಾಶ್ಚಾತ್ಯ ದೇಶಗಳಲ್ಲಿ—ವಿಶೇಷವಾಗಿ ಬ್ರಿಟನ್ ಮತ್ತು ಅಮೇರಿಕಗಳಲ್ಲಿ— ಅನೇಕ ಕಾರಖಾನೆಗಳಲ್ಲಿ ಕೆಲ ವರ್ಷಗಳಿಂದ ಮೆಲ್ಲಗೆ ವಾರಕ್ಕೆ ನಾಲ್ಕೇ ದಿನ ಕೆಲಸ ಪಾಡಿಕೆಯಾಗುತ್ತಿದೆ.

ವಾರಕ್ಕೆ ಐದು ದಿನ—೪೦ ಗಂಟೆ—ಮಾತ್ರ ಕೆಲಸ ಎಂಬುದು ಇಂಗ್ಲಂಡ್ ಅಮೇರಿಕ ಮೊದಲಾದ ದೇಶಗಳಲ್ಲಿ ರೂಢಿಗೆ ಬಂದು ಬಹಳ ಕಾಲವಾಯಿತು. ವಾರಾಂತ್ಯದ ಎರಡು ದಿನಗಳನ್ನು ಕಾರ್ಮಿಕರು ಸಂಚಾರ, ಪಿಕ್ನಿಕ್ ಮೊದಲಾದ ಸುಖವಿಲಾಸಗಳಿಗೆ ವಿನಿಯೋಗಿಸುತ್ತಿದ್ದಾರೆ. ಆದರೆ ವಾರಕ್ಕೆ ನಾಲ್ಕೇ ದಿನ ಕೆಲಸ ಎಂಬುದು ಈಗ ಆರೇಳು ವರ್ಷಗಳಿಂದ ಬೀಸುತ್ತಿರುವ ಗಾಳಿ.

ಈ ಗಾಳಿಯನ್ನು ಊದಿಬಿಟ್ಟವರು ಕಾರ್ಮಿಕರಲ್ಲ; ಇದಕ್ಕಾಗಿ ಬೇಡಿಕೆಗಳು ಬಂದೂ ಇರಲಿಲ್ಲ; ಮುಷ್ಕರ ಪ್ರದರ್ಶನಗಳೂ ಆಗಿರಲಿಲ್ಲ. ವಿಚಿತ್ರವೆನಿಸೀತು, ಆದರೆ ಅದಕ್ಕೆ ಚಾಲನೆ ಕೊಟ್ಟವನೊಬ್ಬ ಮಾಲಿಕ. ಇಂಗ್ಲಂಡಿನ ಯಾರ್ಕ್‌ಶೈರ್ ಪ್ರಾಂತದ ಬಾಟ್ಲೆ ಎಂಬಲ್ಲಿ ಫ್ರಾಂಕ್ ಸ್ಪೈಸರ್ ಎಂಬಾತ ಒಂದು ಲೋಹಸಾಮಗ್ರಿ ತಯಾರಿಸುವ ಕಾರಖಾನೆ ನಡೆಸುತ್ತಿದ್ದಾನೆ. ಅಲ್ಲಿಯೂ ವಾರಕ್ಕೈದು ದಿನ—೪೦ ಗಂಟೆಗಳ ಕಾಲ ಕೆಲಸ ನಡೆಯುತ್ತಿತ್ತು. ೧೯೬೫ ರ ಉತ್ತರಾರ್ಧದಲ್ಲೊಂದು ದಿನ ಬೆಳಗ್ಗೆ ಅವನು ತನ್ನ ಕಾರಖಾನೆಯ ನಲುವತ್ತು ಕಾರ್ಮಿಕರನ್ನು ಕರೆದು ಒಂದು ಅಪೂರ್ವ ಸೂಚನೆಯನ್ನು ಅವರ ಮುಂದಿಟ್ಟ.

"ತಮ್ಮಗಳಿರಾ, ನಿನ್ನೆ ಸಂಜೆ ಕಾರಖಾನೆಯ

ಕೆಲಸ ಮುಗಿದ ಮೇಲೆ ಮನೆಗೆ ಹೋಗುತ್ತಿದ್ದಾಗ ನೀವುಗಳೆಲ್ಲ ಬಸ್ಸಿಗಾಗಿ ಕಾಯುತ್ತ ನಿಂತಿದ್ದನ್ನು ಕಂಡೆ. ಮಳೆ ಬರುತ್ತಾ ಇತ್ತು. ಸುಮಾರು ಹೊತ್ತಿನ ನಂತರ ನಾನು ವಾಪಸು ಬರುತ್ತಿದ್ದಾಗ ನೀವು ಇನ್ನೂ ನೆನೆಯುತ್ತಾ ಅಲ್ಲೇ ನಿಂತಿದ್ದಿರಿ. ತುಂಬಿ ಬರುತ್ತಿದ್ದ ಬಸ್ಸುಗಳಲ್ಲಿ ನಿಮಗೆ ಜಾಗ ಸಿಗಲಿಲ್ಲವೆಂದು ಕೇಳಿದೆ. ಬೆಳಗ್ಗಿನಿಂದ ಮೈಮುರಿದು ಎಂಟು ಗಂಟೆ ದುಡಿದ ಮೇಲೆ ಸಂಜೆ ಹೀಗೆ ಬಸ್ಸಿಗಾಗಿ ಕಾಯುವುದೆಂದರೆ ನಿಮಗೆ ತೀರ ಕಷ್ಟವಾಗುತ್ತಿರಬೇಕು. ಅದರ ಆಂಶಿಕ ಪರಿಹಾರಕ್ಕೆ ನಾನೊಂದು ಹೊಸ ವಿಚಾರ ಮಾಡಿದ್ದೇನೆ. ನಿಮಗೆ ಒಪ್ಪಿಗೆ ಇದ್ದರೆ ಪ್ರಯೋಗ ಮಾಡಿ ನೋಡುವಾ."

ಸಂಕ್ಷೇಪವಾಗಿ, ವಾರಕ್ಕೆ ಐದರ ಬದಲು ನಾಲ್ಕು ದಿನ ಕೆಲಸ ಮಾಡುವುದಾದರೆ ಅಷ್ಟುಮಟ್ಟಿಗೆ ಕೆಲಸಗಾರರ ಕಷ್ಟ ನೀಗಿದಂತಾಗುತ್ತದೆ; ಆದರೆ ಕೆಲಸದ ನಾಲ್ಕು ದಿನ ಹತ್ತು ಹತ್ತು ಗಂಟೆ ದುಡಿದು ೪೦ ಗಂಟೆಯ ಕೆಲಸ ಭರ್ತಿ ಮಾಡಬೇಕು—ಎಂಬುದು ಸ್ಪೈಸರನ ಸೂಚನೆಯಾಗಿತ್ತು. ದಿನಕ್ಕೆ ಹತ್ತು ಗಂಟೆ ಕೆಲಸವೆಂದರೆ ಬಹಳ ಭಾರವೇ. ಆದರೆ ವಾರದ ಕೊನೆಗೆ ಮೂರು ದಿನ ಅಖಂಡವಾಗಿ ರಜಾ ಸಿಗುವುದು ಕೆಲಸದಾರರಿಗೆ ಹೆಚ್ಚು ಆಕರ್ಷಕವಾಗಿ ಕಂಡಿತು. ಒಂದಾನೊಂದು ಕಾಲದಲ್ಲಿ ತಾನೇ ಕಾರ್ಮಿಕನಾಗಿದ್ದ ಸ್ಪೈಸರ್ ಇದರಲ್ಲಿ ಒಳಕತ್ತರಿಯೇನೂ ಇಟ್ಟಿರಲಾರನೆಂದು ಕೆಲಸಗಾರರಿಗೆ ವಿಶ್ವಾಸವಿತ್ತು.

ಹೀಗೆ ಒಂದು ತಿಂಗಳ ಪ್ರಯೋಗವೆಂದು ಪ್ರಾರಂಭವಾದ ಈ ಹೊಸ ಪದ್ಧತಿ ಆ ಕಾರಖಾನೆಯಲ್ಲಿ ಏಳು ವರ್ಷಗಳಿಂದ ನಿರಂತರವಾಗಿ ನಡೆದುಬಂದಿದೆ. ಕೆಲಸಗಾರರು ಸೋಮವಾರದಿಂದ ಗುರುವಾರದ ವರೆಗೆ ದಿನಾ ಹತ್ತು ಗಂಟೆ ದುಡಿಯುತ್ತಾರೆ. ಮುಂದೆ ಮೂರು ದಿನ ಆರಾಮ ತೆಗೆದುಕೊಳ್ಳುತ್ತಾರೆ.

ಅಟ್ಲಾಂಟಿಕ್ ಸಾಗರದ ಆಚೆ ದಡದಲ್ಲಿ ಅಮೇರಿಕದಲ್ಲಿ ಸ್ಪೈಸರನ ಪ್ರಯೋಗದ ಸುದ್ದಿ ಕೇಳಿಯೋ ಸ್ವತಂತ್ರವಾಗಿಯೋ ಕೆಲ ಕಾರಖಾನೆಗಳು ನಾಲ್ಕು ದಿನಗಳ ವಾರದ ಪ್ರಯೋಗವನ್ನು ಪ್ರಾರಂಭಿಸಿದವು. ಮೊದಮೊದಲು ಇದೊಂದು ಹುಚ್ಚು ಪ್ರಯೋಗವೆಂದು ನಗೆಗೀಡಾದರೂ ಬರಬರುತ್ತ ಅದು ಬಂಡವಳಗಾರರಿಗೂ ಕೆಲಸಗಾರರಿಗೂ ಸೇರಿಯೇ ಇಷ್ಟವಾಗಿ ಕಂಡಿತು. ಅಮೇರಿಕದಲ್ಲೊಬ್ಬ ವ್ಯವಸ್ಥಾಪನಾತಜ್ಞಳು ೧೯೭೦ ರಲ್ಲಿ ಇಂಥ ೨೭ ಕಾರಖಾನೆಗಳೂ ಕಾರ್ಯಾಲಯಗಳೂ ಇದ್ದುದನ್ನು ಕಂಡುಹಿಡಿದು ಅದರ ಬಗ್ಗೆ ಒಂದು ಪುಸ್ತಕವನ್ನೇ ಬರೆದಳು. ಅದೀಗ ಬಿಸಿ ದೋಸೆಗಳಂತೆ ಮಾರಾಟವಾಗುತ್ತಿದೆ. ಅವಳು ನಾಲ್ಕು ದಿನಗಳ ವಾರದಿಂದಾಗುವ ಲಾಭಗಳನ್ನು ಉತ್ಸಾಹದಿಂದ ವಿವೇಚಿಸಿದ್ದಾಳೆ. ಇದರಿಂದ ಮಾಲಿಕರಿಗೆ ನಷ್ಟವಾಗುವುದಿಲ್ಲ; ಕಾರ್ಮಿಕರ ಜೀವನ ಹೆಚ್ಚು ಸುಭಗವಾಗುತ್ತದೆ; ಮಾತ್ರವಲ್ಲ, ಅವರ ದಾಂಪತ್ಯ ಜೀವನದ ಲೈಂಗಿಕ ಸುಖವೂ ಹೆಚ್ಚುತ್ತದೆ ಎಂಬುದಾಗಿ ಅವಳು ವರದಿ ಮಾಡಿದ್ದಾಳೆ. ಇಂದು ಅಮೇರಿಕದಲ್ಲಿ ಇಂಥ ೭೦೦೦ ಕಾರಖಾನೆಗಳಾದರೂ ಇರಬೇಕೆಂದು ಅವಳು ತರ್ಕಿಸುತ್ತಾಳೆ.

ಫ್ರಾಂಕ್ ಸ್ಪೈಸರನ ಅನುಭವದಲ್ಲಿ ವಾರಕ್ಕೆ ನಾಲ್ಕೇ ದಿನ ಕೆಲಸ ಮಾಡಿಸಿದ್ದರಿಂದ ಅವನಿಗೆ ಲಾಭವೇ ಆಗಿದೆ. ಉತ್ಪಾದನೆ ಪ್ರಥಮ ವರ್ಷದಲ್ಲಿ ಸೇಕಡಾ ೧೫ರಷ್ಟು ಹೆಚ್ಚಾಯಿತು. ಮುಂದಿನ ವರ್ಷಗಳಲ್ಲಿ ಅದು ಇನ್ನೂ ಹೆಚ್ಚುತ್ತ ಹೋಯಿತು. ಕಂಪನಿಗೆ ತನ್ನ ಸರಕುಗಳ ಬೆಲೆ ಏರಿಸುವ ಅಗತ್ಯ ಬರಲಿಲ್ಲ. "ಪೀಸ್ ವರ್ಕ್" ವಿಧಾನದಲ್ಲಿ ಸ್ಪೈಸರನ ಕೆಲಸಗಾರರು ಹೆಚ್ಚಾಗಿ ದುಡಿಯುತ್ತಾರೆ. ಅವರು ಐದು ದಿನಗಳಲ್ಲಿ ಮಾಡಿದ್ದಕ್ಕಿಂತ ನಾಲ್ಕು ದಿನಗಳಲ್ಲಿ ಹೆಚ್ಚು ಕೆಲಸ ಮಾಡಿದ್ದರಿಂದ ಅವರ ಆದಾಯವೂ ಹೆಚ್ಚಿತು. (ಕೆಲ ವೇಳೆ ಈ ಅಧಿಕ ಆದಾಯ ಸೇಕಡಾ ೩೦ ರಷ್ಟು ಆಗಿದೆ). ಗೈರು ಹಾಜರಿ ತೀರ ಕಡಿಮೆಯಾಗಿರುವುದು ಮಾಲೀಕನಿಗಾದ ಇನ್ನೊಂದು ಅನುಕೂಲ. ಸ್ಪೈಸರನಿಗಂತೂ ಇದು ಎಷ್ಟು

ತೃಪ್ತಿ ಕೊಟ್ಟಿದೆಯೆಂದರೆ ಅವನು ಇನ್ನು ಮೇಲೆ ತನ್ನ ಕೆಲಸಗಾರರನ್ನು ವಾರಕ್ಕೆ ೩೮ ಗಂಟೆ ಮಾತ್ರ ದುಡಿಸಬೇಕೆಂದಿದ್ದಾನೆ.

ಒಂದೇ ಸಮನೆ ದಿನಕ್ಕೆ ಹತ್ತು ಗಂಟೆ ದುಡಿಯುವುದು ಕೆಲಸಗಾರರಿಗೆ ಮೊದಲು ಕೆಲ ದಿನ ತುಸು ಶ್ರಮದಾಯಕವಾಗಿ ಕಾಣುತ್ತಾದರೂ ಬೇಗನೇ ಅವರು ಅದಕ್ಕೆ ಹೊಂದಿಕೊಂಡು ಬಿಡುತ್ತಾರೆ. ಗಂಡಸರು ಹೆಂಡಂದಿರೊಡನೆ ಮನೆಯಲ್ಲಿ ಹೆಚ್ಚು ಸಮಯ ಕಳೆದು ಅವರಿಗೆ ನೆರವಾಗುವುದರಿಂದ ಮಹಿಳೆಯರಿಗೂ ಅದು ಸ್ವಾಗತಾರ್ಹವೆನಿಸಿದೆ. ಪಾಶ್ಚಾತ್ಯ ಕಾರ್ಮಿಕನು ಹಿಂದಿನಂತೆ ಇಂದು ಬರೇ ಬದುಕುವ ಪೂರ್ತಿ ಕೂಲಿ ಪಡೆಯುವವನಾಗಿಲ್ಲವಾದ್ದರಿಂದ ಕೈಲಿ ನಾಲ್ಕು ದುಡ್ಡು ಉಳಿದದ್ದನ್ನು ಸುಮಾರು ದೂರ ದೂರದ ಊರುಗಳಿಗೆ ಸಕುಟುಂಬ ಪ್ರವಾಸ ಮಾಡಿಬರುವುದಕ್ಕೆ ವೆಚ್ಚ ಮಾಡಬಯಸುವುದಾದರೆ ಅದಕ್ಕೆ ಮೂರು ದಿನಗಳ ರಜೆ ಅನುಕೂಲ ಒದಗಿಸುತ್ತದೆ. ಅವರು ಹೆಚ್ಚು ಮನೋರಂಜನೆಯನ್ನು ಅನುಭವಿಸುತ್ತಾರೆ. ದುಡಿಯುವ ವಿವಾಹಿತ ಹೆಂಗಸರ ಸಂಸಾರದಲ್ಲಿ ಮಾತ್ರ ಇದರಿಂದ ಸ್ವಲ್ಪ ತೊಂದರೆಯಾಗಿದೆ. ಮನೆಗೆಲಸಕ್ಕೆ ಸಾಕಷ್ಟು ಸಮಯ ಸಿಗುವುದಿಲ್ಲ. ಹೆಂಡಂದಿರು ನಾಲ್ಕು ದಿನದ ಕಾರಖಾನೆಗಳಲ್ಲಿ ದುಡಿಯುವಾಗ ಗಂಡಂದಿರು ಐದು ದಿನದ ಕೆಲಸದವರಾಗಿದ್ದರೆ ಮನೆಗೆ ಬಂದೊಡನೆ ಹೆಂಡಂದಿರನ್ನು ಕಾಣದೆ ಇವರು ಕೆರಳುತ್ತಾರೆ. ಆದರೂ ನಾಲ್ಕು ದಿನದ ಕಾರಖಾನೆಗಳ ಕಾರ್ಮಿಕರು ಇತರರ ಈರ್ಷೆಗೆ ಪಾತ್ರರಾಗುತ್ತಿದ್ದಾರೆನ್ನುವುದು ಖಂಡಿತ. ಅಮೇರಿಕದಲ್ಲಿ ಕೂಡ ಮಾಲಿಕರು ನಾಲ್ಕೇ ದಿನಗಳ ವಾರ ಹೆಚ್ಚು ಲಾಭದಾಯಕವೆಂದು ಮನಗಾಣುತ್ತಿದ್ದಾರೆ.

ಈ ಕಲ್ಪನೆ ಜನಪ್ರಿಯವಾಗುತ್ತ ವಾರವಿಡೀ ಕೆಲಸವಿರುವ ಕಾರಖಾನೆಗಳೂ ಹಗಲೂ ರಾತ್ರಿ ನಿರಂತರ ಕೆಲಸ ನಡೆಯುವ ಕಾರಖಾನೆಗಳೂ ನಾಲ್ಕು ದಿನದ ವಾರಗಳನ್ನು ಅಂಗೀಕರಿಸುತ್ತಿವೆ. ಅವರು ತಮ್ಮ ಸರದಿ (ಶಿಫ್ಟ್) ವ್ಯವಸ್ಥೆಗಳನ್ನು ಬದಲಾಯಿಸಿ ಪ್ರತಿ ಕೆಲಸಗಾರನಿಗೆ ಮೂರು ದಿನ ರಜಾ ಸೌಕರ್ಯವನ್ನು ಒದಗಿಸತೊಡಗಿದ್ದಾರೆ. ಈ ವ್ಯವಸ್ಥೆಯಲ್ಲಿ ಬೇರೆ ಬೇರೆ ಕಾರ್ಮಿಕರಿಗೆ ಬೇರೆ ಬೇರೆ ದಿನಗಳಲ್ಲಿ ರಜಾ ಸಿಗುತ್ತದಷ್ಟೇ. ಆದರೆ ಎಲ್ಲರಿಗೂ ಪ್ರತಿ ವಾರ ಮೂರು ದಿನ ಬಿಟ್ಟೂಬಿಡದ ರಜೆ ಸಿಕ್ಕೇ ಸಿಗುತ್ತದೆ.

ಕಾರಖಾನೆಗಳಲ್ಲದೆ ಬಿಳಿಯಂಗಿ ಕೆಲಸಗಾರರುಳ್ಳ ಕಚೇರಿಗಳಲ್ಲಿಯೂ "ಚತುರ್ದಿನ ಸಪ್ತಾಹ"ವನ್ನು ಬಳಕೆಗೆ ತರಲು ಪ್ರಾರಂಭವಾಗಿದೆ. ಲಂಡನ್ನಿನ ಒಂದು ಪ್ರಮುಖ ಎಂಜಿನಿಯರಿಂಗ್ ಡಿಜೈನ್ ಸಲಹೆಗಾರ ಸಂಸ್ಥೆ ತನ್ನ ಕೆಲಸಗಾರರ ಪ್ರಜಾಸತ್ತಾತ್ಮಕ ಒಪ್ಪಿಗೆಯಿಂದ ಮಂಗಳವಾರದಿಂದ ಶುಕ್ರವಾರದ ವರೆಗೆ ಮಾತ್ರ ಒಟ್ಟು ವಾರಕ್ಕೆ ೩೭½ ಗಂಟೆ ಕೆಲಸವಾಗುವಂತೆ ಕಚೇರಿ ಕೆಲಸವನ್ನು ನಡೆಸುತ್ತಿದೆ. ಹೆಚ್ಚು ವಿರಾಮ ದಿನಗಳನ್ನು ಕೊಟ್ಟರೆ ಈ ಬೌದ್ಧಿಕ ಕೆಲಸಗಾರರು ಹೊಸ ಬಾಹ್ಯ ಪ್ರಭಾವಗಳಿಗೆ ಹೆಚ್ಚು ಉನ್ಮುಕ್ತರಾಗುತ್ತಾರೆಂದೂ ಇದರಿಂದ ಹೊಸ ಹೊಸ ಕಲ್ಪನೆಗಳು ಅವರ ತಲೆಗಳಲ್ಲಿ ರೂಪುಗೊಂಡು ಕಂಪನಿಗೆ ಅನುಕೂಲವೇ ಆದೀತೆಂದೂ ಅವರ ಲೆಕ್ಕಾಚಾರ. ಈ ವರೆಗಂತೂ ಕಚೇರಿಯ ಕೆಲಸದಲ್ಲಿ ಏನೊಂದೂ ಹಾನಿಯಾಗಿಲ್ಲವೆಂದು ಆಡಳಿತಗಾರರು ವರದಿ ಮಾಡಿದ್ದಾರೆ. ದಿನಕ್ಕೆ ಎರಡು ಗಂಟೆ ಹೆಚ್ಚು ಬೌದ್ಧಿಕ ಶ್ರಮ ಮಾಡುವುದು ಅನೇಕರಿಗೆ ಕಷ್ಟವಾಗುತ್ತಿದೆ. ಆದರೂ ಅನೇಕ ತಿಂಗಳುಗಳ ಅನುಭವದ ನಂತರ ಮತ ತೆಗೆದುಕೊಂಡಾಗ ಸೇಕಡಾ ೮೩ರಷ್ಟು ಜನ ಹೊಸ ವ್ಯವಸ್ಥೆ ಮುಂದುವರಿಯುವುದಕ್ಕೆ ಅನುಕೂಲರಾಗಿದ್ದುದು ಸಿದ್ಧವಾಯಿತು.

ಇದುವರೆಗೆ ಚತುರ್ದಿನ ಸಪ್ತಾಹದ ಈ ಹೊಸ ಗಾಳಿ ಅಮೇರಿಕದಲ್ಲಿರಲಿ ಇಂಗ್ಲಂಡಿನಲ್ಲಿರಲಿ ಚಿಕ್ಕ ಮತ್ತು ಮಧ್ಯಮ ಗಾತ್ರದ ಕಾರಖಾನೆ ಕಚೇರಿಗಳಲ್ಲಿ ಮಾತ್ರ ವೇಗವಾಗಿ ವಿಸ್ತರಿಸುತ್ತಿದೆ. ಈ ಸಂಸ್ಥೆಗಳಲ್ಲಿ ಹೆಚ್ಚಾಗಿ ಕಾರ್ಮಿಕ ಸಂಘಗಳಿಲ್ಲ.

ವೇರವಾದ ಮಾಲಿಕ ಕೆಲಸಗಾರ ಸಂಬಂಧವಿರುವುದರಿಂದ ಅಲ್ಲಿ ಅದು ಯಶಸ್ವಿಯಾಗುತ್ತಿರಬಹುದೆಂಬ ಭಾವನೆ ಇದೆ. ದೊಡ್ಡ ದೊಡ್ಡ ಕಾರ್ಮಿಕ ಸಂಘಟನೆಗಳು ಇದಕ್ಕೆ ಅಷ್ಟಾಗಿ ಆತುರವಾಗಿಲ್ಲ. ಆದರೆ ವಾರಕ್ಕೆ ಮೂರು ದಿನಗಳ ರಜೆಯ ಕಲ್ಪನೆ ಅವರಿಗೆ ಅಪಥ್ಯವಾಗಿದೆಯೆಂದು ಇದರ ಅರ್ಥವಲ್ಲ. ಅವರು ವಾರದ ಒಟ್ಟು ಕೆಲಸದ ಅವಧಿಯನ್ನೇ ೩೫ ಗಂಟೆಗಳಿಗೆ ಇಳಿಸಬೇಕೆಂದಿದ್ದಾರೆ. ಆ ಬಗ್ಗೆ ಅವರು ಶಾಂತವಾಗಿ ಪ್ರಚಾರವನ್ನೂ ನಡೆಸುತ್ತಿದ್ದಾರೆ. ದಿನಕ್ಕೆರಡು ಗಂಟೆ ಹೆಚ್ಚು ದುಡಿದು ಒಂದು ದಿನ ಹೆಚ್ಚು ರಜಾ ಗಿಟ್ಟಿಸುವುದು ಅವರಿಗೆ ಆಕರ್ಷಕವಾಗಿ ಕಾಣಿಸುತ್ತಿಲ್ಲ. ಅದರಿಂದ ಅತಿಶ್ರಮದ ಫಲವಾಗಿ ಅಪಘಾತಗಳ ಪ್ರಮಾಣ ಹೆಚ್ಚಬಹುದೆಂದು ಅವರ ಭಯ. ವಾರಕ್ಕೆ ೩೫ ಗಂಟೆಯ ಬೇಡಿಕೆ ಮಾನ್ಯವಾದ ಮೇಲೆ ನಾಲ್ಕು ದಿನಗಳ ವಾರದ ವಿಚಾರ ಎಂದು ಅವರು ಹೇಳುತ್ತಿದ್ದಾರೆ. ಅಮೇರಿಕದ ಪ್ರಚಂಡ ಮೋಟಾರು ನಿರ್ಮಾಪಕರಾದ ಕ್ರಿಸ್ಲರ್ ಕಂಪನಿಯವರು ಕಂಪನಿಗಾಗಬಹುದಾದ ಲಾಭದ ದೃಷ್ಟಿಯಿಂದ ಚತುರ್ದಿನ ಸಪ್ತಾಹದ ಪ್ರಸ್ತಾಪ ಎತ್ತಿದಾಗ ಕಾರ್ಮಿಕ ಸಂಘದವರು ವಾರಕ್ಕೆ ೩೨ ಗಂಟೆ ಕೆಲಸಕ್ಕೆ ಒಪ್ಪಿರಿ; ಆ ಮೇಲೆ ನಾಲ್ಕೇ ದಿನ ಕೆಲಸ ಮಾಡೋಣ ಎಂದರು.

ಆದರೂ ಬ್ರಿಟನ್ ಅಮೇರಿಕಗಳಿಂದ ಈ ಕಲ್ಪನೆ ಬೇರೆ ದೇಶಗಳಿಗೆ ಸಂಕ್ರಮಿಸುತ್ತಿದೆ. ಕಾರ್ಮಿಕ ಸಂಘಗಳೊಡನೆ ತಾತ್ಕಾಲಿಕ ಒಪ್ಪಂದ ಮಾಡಿಕೊಂಡು ಕೆನಡಾ, ಆಸ್ಟ್ರೇಲಿಯ, ನ್ಯೂಜೀಲಂಡ್, ಜಪಾನ್, ಪಶ್ಚಿಮ ಜರ್ಮನಿಯ ಕಂಪನಿಗಳು ಪ್ರಾಯೋಗಿಕವಾಗಿ ಚತುರ್ದಿನ ಸಪ್ತಾಹವನ್ನು ಜಾರಿಗೆ ತಂದಿವೆ. ಅತ್ತ ಪಶ್ಚಿಮ ಜರ್ಮನಿಯಲ್ಲಿ ಬೇರೆಯೇ ಪ್ರಯೋಗ—ಕಚೇರಿಗಳಲ್ಲಿ—ಮಾಡುತ್ತಿದ್ದಾರೆ. ದಿನಕ್ಕೆ ಇಂತಿಷ್ಟು ಗಂಟೆ ಕೆಲಸ ಎಂಬುದನ್ನು ಸ್ಥಿರಪಡಿಸಿ ಪ್ರತಿ ಕೆಲಸಗಾರನು ಕೆಲಸ ಆರಂಭಿಸುವ ವೇಳೆಯನ್ನು ತನಗಿಷ್ಟ ಬಂದಂತೆ ಗೊತ್ತುಪಡಿಸಿಕೊಳ್ಳಲು ಅವಕಾಶ ಕೊಡುವುದೇ ಈ ಪ್ರಯೋಗದ ಸಾರ.

ಹೊತ್ತು ಗೊತ್ತು ಇಲ್ಲದ ಪತ್ರಿಕಾ ವ್ಯವಸಾಯದಲ್ಲಿ ಕೂಡ ರಾತ್ರಿ ಸರದಿಯ ಮಟ್ಟಿಗೆ ಇಂಗ್ಲಂಡಿನಲ್ಲಿ ಚತುರ್ದಿನ ಸಪ್ತಾಹ ಜಾರಿಗೆ ಬಂದಿದೆ. ರಾತ್ರಿ ಸರದಿಯಲ್ಲಿ ದುಡಿಯುವ ಪತ್ರಿಕಾಕರ್ತರಿಗೆ ವಾರಾಂತ್ಯದಲ್ಲಿ ಮೂರು ಹಗಲಲ್ಲದಿದ್ದರೂ ಮೂರು ರಾತ್ರಿಗಳ ಬಿಡುವು ದೊರೆತು ಕೌಟುಂಬಿಕ ಸೌಖ್ಯ ವರ್ಧಿಸಲು ಅನುಕೂಲವಾಗುತ್ತಿದೆ.

ಚತುರ್ದಿನ ಸಪ್ತಾಹದ ವಿಷಯ ವಿವೇಚನೆಗೊಳಗಾದವರೆಂದರೆ ಸಮಾಜಶಾಸ್ತ್ರಿಗಳು. ಕೆಲಸವಿಲ್ಲದವನ ತಲೆ ದೆವ್ವಗಳ ಬೀಡು—ಎಂಬರ್ಥದ ಹಳೇ ಗಾದೆಯೊಂದಿದೆ. ಜನರಿಗೆ ದೊರೆತ ಹೆಚ್ಚಿನ ಒಂದು ದಿನದ ಬಿಡುವನ್ನು ಅವರು ಹೇಗೆ ಉಪಯೋಗಿಸುವರು? ಅದು ಯಾವಾಗಲೂ ಸದುಪಯೋಗಕ್ಕೇ ಬೀಳುವುದೆಂದು ನಂಬಲು ಎಡೆಯಿಲ್ಲ.

ಜನಕ್ಕೆ ಹೆಚ್ಚು ವಿರಾಮ ಸಿಕ್ಕಿದರೆ ಅವರು ಹೆಚ್ಚು ಓದಬಹುದು, ಹೆಚ್ಚು ಕಲಾತ್ಮಕತೆಯನ್ನು ಬೆಳಸಿಕೊಳ್ಳಬಹುದು, ಹೆಚ್ಚು ದೇಶ ಸಂಚಾರ ಮಾಡಿ ತಮ್ಮ ಮನಸ್ಸನ್ನು ವಿಸ್ತರಪಡಿಸಿಕೊಳ್ಳಬಹುದು, ಹೆಚ್ಚು ಸಾಂಸ್ಕೃತಿಕ ಪ್ರೌಢಿಮೆ ಸಂಪಾದಿಸಬಹುದು, ಹೆಚ್ಚು ಅಭ್ಯಾಸ ಮಾಡಿ ಅವಕಾಶಗಳನ್ನು ಸುಧಾರಿಸಿಕೊಳ್ಳಬಹುದು ಎಂಬುದು ಸತ್ಯವಾದರೂ ಪೂರ್ಣ ಸತ್ಯವಲ್ಲ. ಈ ರೀತಿ ವಿರಾಮವನ್ನು ಸದುಪಯೋಗಪಡಿಸಿಕೊಳ್ಳಲು ಬೇಕಾದ ಮಾನಸಿಕ ವೃತ್ತಿ ಇರುವವರು ಯಾವ ಸಮಾಜದಲ್ಲಿಯೂ ಕೆಲ ಕೆಲವರು ಮಾತ್ರ. ಸಾರ್ವತ್ರಿಕ ಶಿಕ್ಷಣದ ದೆಸೆಯಿಂದ ಉತ್ತಮ ಸಾಹಿತ್ಯದ ನಿರ್ಮಾಣದಲ್ಲಿ ಹೆಚ್ಚು ಹೆಚ್ಚು ಜನ ನಿರತರಾಗಬಹುದೆಂಬ ನಿರೀಕ್ಷೆ ಇತ್ತು. ಅದು ಪೂರ್ತಿಯಾಗಿಲ್ಲ. ಉನ್ನತ ಮಟ್ಟದ ಸಾಹಿತ್ಯದ ನಿರ್ಮಾಣವೂ ಅದಕ್ಕೆ ಬೇಡಿಕೆಯೂ ಈ ಐವತ್ತು ವರ್ಷಗಳಲ್ಲಿ ನಿರೀಕ್ಷಿಸಿದಷ್ಟು ಹೆಚ್ಚಿಲ್ಲ. ಕೀಳ್ಮಟ್ಟದ ಮನೋರಂಜನೆ ಎಲ್ಲ ಕಡೆ ಬೆಳೆದಿದೆ.

ವಿರಾಮ ವೇಳೆಯ ಹೆಚ್ಚಳದಿಂದ ಪರಿಹಾರ ಹೊಂದುವ ಸಮಸ್ಯೆಗಳಿಗಿಂತ ಅವುಗಳಿಂದ ಉದ್ಭವಿಸುವ ಸಮಸ್ಯೆಗಳೇ ಅಧಿಕವಾಗುವ ಭಯವಿದೆಯೆಂದು ಕೆಲ ಸಾಮಾಜಿಕ ಚಿಂತಕರು ಹೇಳುತ್ತಾರೆ. ಹೆಚ್ಚಿನ ವಿರಾಮ ವೇಳೆಯನ್ನು ಸದುಪಯೋಗಕ್ಕೆ ತರಲು ಎಲ್ಲರಿಗೂ ಇಚ್ಛೆಯಿದೆಯೆಂದುಕೊಂಡರೂ ಅದನ್ನೆಲ್ಲ ಪೂರೈಸುವ ಬಗೆ ಹೇಗೆ? ತೋಟಪಟ್ಟಿ ಬೆಳೆಸುವುದೇ? ಹತ್ತೋ ಹದಿನೈದೋ ಅಂತಸ್ತುಗಳ ಬೆಂಕಿ ಪೆಟ್ಟಿಗೆ ಬಿಡಾರಗಳಲ್ಲಿ ವಾಸಿಸುವವರಿಗೆ ಅದಕ್ಕೆ ಸ್ಥಳವೆಲ್ಲಿ? ಕೈಗಾರಿಕೆ ಕೆಲಸಮಾಡಿ ಮನೆಯನ್ನು ಸಿಂಗರಿಸಿಕೊಳ್ಳುವಿರೋ? ಅದಕ್ಕೆ ಕೆಲಸದ ಕೊಟ್ಟಿಗೆ ಬೇಕಲ್ಲವೇ? ರೇಡಿಯೋ ಕೇಳುವುದು, ಟೆಲಿವಿಜನ್ ನೋಡುವುದು ಇಂಥದರಲ್ಲಿ ಬಹಳ ವೇಳೆ ಕಳೆಯುವವನು ನೋಡುವವನಾಗುತ್ತಾನೇ ಹೊರತು ನೀಡುವವನಾಗುವುದಿಲ್ಲ. ಕೊನೆಗೆ ಈ ಕರ್ಮನಿಷ್ಠ ಮಾನವ ಜೀವನದಲ್ಲಿ ಮಾಡುವುದರಿಂದ ನೀಡುವುದರಿಂದರಿಂದಲೇ ವ್ಯಕ್ತಿ ತನ್ನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ, ತೃಪ್ತಿ ಹೊಂದುತ್ತಾನೆ. ಅದಕ್ಕೆ ಯೋಗ್ಯತೆಯಾಗಲಿ ಸೌಕರ್ಯಗಳಾಗಲಿ ಇಲ್ಲದ ಕೋಟ್ಯಂತರ ಜನರು ನಿರುದ್ಯೋಗದ ದಿನಗಳಲ್ಲಿ ಬಂದ ಬೇಜಾರನ್ನು ನೀಗಿಸಿಕೊಳ್ಳಲು ಹಿಂಸೆ, ಅತ್ಯಾಚಾರಗಳಿಗೆ ಮನಸ್ಸು ಕೊಡಲಿಕ್ಕಿಲ್ಲವೇ?

ಆದರೆ ಕಾರ್ಮಿಕ ನಾಯಕರು ಈ ಭಯಗಳನ್ನು ತಿರಸ್ಕರಿಸುತ್ತಾರೆ. ದಿನಕ್ಕೆ ಹನ್ನೆರಡೋ ಹದಿನಾಲ್ಕೋ ತಾಸು ದುಡಿಸಿಕೊಳ್ಳುತ್ತಿದ್ದ ಕಾಲದಲ್ಲಿ ಕೂಡ ಕಾರ್ಮಿಕರಿಗೆ ಹೆಚ್ಚು ವಿರಾಮ ಕೊಟ್ಟರೆ ಅನಾಹುತವಾದೀತೆಂದು ಮಾಲಿಕರು ವಾದಿಸುತ್ತಿದ್ದರು. ಈಗ ೪೦ ಗಂಟೆಗಳ ಐದು ದಿನಗಳ ವಾರ ಜಾರಿಗೆ ಬಂದದ್ದರಿಂದ ಅಂಥ ಪ್ರಳಯವೇನೂ ಆಗಿಲ್ಲವಲ್ಲ—ಎಂದು ಕಾರ್ಮಿಕ ಪ್ರತಿನಿಧಿಗಳು ಸಕಾರಣವಾಗಿಯೇ ವಾದಿಸುತ್ತಾರೆ.

ಆದರೆ ಜನತೆಗೆ ದೊರೆಯುತ್ತಿರುವ ಅಧಿಕಾಧಿಕ ವಿರಾಮ ವೇಳೆಯಿಂದ ಒಂದು ಪರಿಣಾಮವಂತೂ ಸ್ಪಷ್ಟವಾಗಿ ಗೋಚರಕ್ಕೆ ಬರುತ್ತಿದೆ. ಅದೆಂದರೆ ಮುಂದುವರಿದ ದೇಶಗಳಲ್ಲಿ "ಸ್ಫೋಟ"ಗೊಳ್ಳುತ್ತಿರುವ "ವಿರಾಮ ಕೈಗಾರಿಕೆ." ಪಿಕ್ನಿಕ್ ಹೋಗುವವರಿಗೆ, ಪ್ರವಾಸ ಮಾಡುವವರಿಗೆ, ಬೇಸತ್ತು ಮನೋರಂಜನೆಗೆ ಹಪಾಹಪಿಸುವವರಿಗೆ ಬೇಕಾದ್ದನ್ನು ಒದಗಿಸುವ ದೊಡ್ಡ ಉದ್ಯಮ ವ್ಯಾಪಾರಗಳೇ ಎದ್ದಿವೆ ತಿನ್ನಲು, ಕುಡಿಯಲು, ನೋಡಲು, ಧಾವಿಸಲು ಬೇಕಾದ ಸೌಕರ್ಯಗಳು ಡಬ್ಬಿಗಳಲ್ಲಿ, ಬಾಟಲಿಗಳಲ್ಲಿ, ವಾಹನಗಳಲ್ಲಿ, ಅಗ್ಗದ ಸೌಂದರ್ಯ ಸ್ಪರ್ಧೆ ಮೊದಲಾದವುಗಳಲ್ಲಿ ಲಭ್ಯವಾಗತೊಡಗಿವೆ. ಹಾಗೇ ರಜಾ ದಿನದ ಧಾಮಗಳಲ್ಲಿ, ಖಾಲಿ ಡಬ್ಬಿ, ಬಾಟಲಿ, ಕಾಗದ, ರಟ್ಟು, ಹೊಲಸು, ಹೊಗೆಗಳು ಕೂಡಿಬಿದ್ದ "ಸಾಂಸ್ಕೃತಿಕ ಮರುಭೂಮಿ"ಗಳೂ ನಿರ್ಮಾಣವಾಗುತ್ತಿವೆ.



ತನ್ನ ಸತ್ಯವಾದ ವಯಸ್ಸನ್ನು ಹೇಳುವ ಹೆಂಗಸನ್ನು ಎಂದೂ ನಂಬಬೇಡ. ಅವಳು ಏನು ಬೇಕಾದರೂ ಹೇಳಲು ಸಿದ್ಧಳಾದಾಳು.

* *

ನಮ್ಮ ಶತ್ರುಗಳನ್ನು ಆರಿಸಿಕೊಳ್ಳುವಾಗ ಎಷ್ಟು ಎಚ್ಚರವಾಗಿದ್ದರೂ ಕಡಿಮೆ.

—ಆಸ್ಕರ್ ವೈಲ್ಡ್

# ಎರಡು ಕೋಟಿಗಿಂತಲೂ ಹೆಚ್ಚು ಜನರು 501 ಸಾಬೂನನ್ನೇ ಉಪಯೋಗಿಸುತ್ತಾರೆ.

- ಏಕೆಂದರೆ, ಅವರಿಗೆ ಗೊತ್ತು, ಅದರಿಂದ ಒಗೆದ ಬಟ್ಟೆಗಳು ಸ್ವಚ್ಛವಾಗಿಯೂ, ಮತ್ತು ಹೊಸದಾಗಿಯೂ ಇರುತ್ತವೆ ವೆಂದು.
- **501** ಸಾಬೂನು ಹೆಚ್ಚು ಬಟ್ಟೆಗಳನ್ನು ಒಗೆಯುತ್ತದೆ; ಅದೂ ಅಲ್ಲದೆ, ಬಟ್ಟೆಗಳನ್ನು ಬಡಿಯುವ ಆವಶ್ಯಕತೆ ಇಲ್ಲ ಮತ್ತು ಶ್ರಮ ಕಡಿಮೆ.
- **501** ಸಾಬೂನು ಬೇರೆ ಬಾರ್ ಸಾಬೂನುಗಳಿಗಿಂತ ಹೆಚ್ಚು ಬಾಳಿಕೆ ಬರುತ್ತದೆ.




ಕೋಟಿಗಟ್ಟಳೆ ಜನರ ಮೆಚ್ಚಿನ ಸಾಬೂನನ್ನು ನೀವೂ ಉಪಯೋಗಿಸಿರಿ.

OBM-9508 KN

# ಮಾತೃಶಕ್ತಿ

ಮ್ಯಾಕ್ಸಿಂ ಗೋರ್ಕಿಯ
"ಇಟಲಿಯ ಡೈರಿ"ಯಿಂದ ಆರಿಸಿದ್ದು

ಬಹು ಕಾಲದ ಹಿಂದೆ ಏಶಿಯಾ ಖಂಡದಲ್ಲಿ ತೈಮೂರ್ ಎನ್ನುವ ಚಕ್ರವರ್ತಿ ಆಳುತ್ತಿದ್ದನು. ಅವನು ಸ್ವಭಾವತಃ ಬಹಳ ಕ್ರೂರ ತನಗೆ ಇದ್ದ ಒಬ್ಬ ಮಗನು ಸತ್ತ ಕೂಡಲೇ, ಸಿಟ್ಟಿಗೆದ್ದ ಚಕ್ರವರ್ತಿ ಇಡೀ ಪ್ರಪಂಚವನ್ನೇ ಧ್ವಂಸ ಮಾಡಿ ಹಾಳುಗೆಡಹುವುದಾಗಿ ಪಣ ತೊಟ್ಟ. ಸಾಧಾರಣ ೩೩ ವರ್ಷಗಳ ಕಾಲ ಅವನು ಭೂಮಿಯ ಮೇಲೆ ತನಗೆ ಕಂಡದ್ದನ್ನೆಲ್ಲಾ ಹೇಳಹೆಸರಿಲ್ಲದಂತೆ ಮಾಡಿದನು. ೩೩ ವರ್ಷಗಳ ಕಾಲದಲ್ಲಿ ಅವನು ಒಮ್ಮೆಯೂ ನಗಲಿಲ್ಲ.

ಒಮ್ಮೆ ತೈಮೂರ್ ಮತ್ತು ಅವನ ಪಡೆಯವರು ಒಂದು ಗುಲಾಬಿ ತೋಟದ ಬಳಿ ತಂಗಿದರು. ಜನರು ತೋಟದ ಆ ಗುಲಾಬಿಗಳಿಗೆ "ಪ್ರೇಮದ ಹೂಗಳು" ಎಂದು ಹೆಸರಿಟ್ಟಿದ್ದರು. ೫೦,೦೦೦ ಡೇರೆಗಳನ್ನು ನೆಟ್ಟು ಈ ಸೈನ್ಯದ ಪಡೆಗಳೆಲ್ಲಾ ವಿಶ್ರಾಂತಿಗೆ ಅಲ್ಲಿ ಉಳಿದವು. ಮಧ್ಯೆ ಚಕ್ರವರ್ತಿ ತೈಮೂರ್‌ನ ಡೇರೆ ಇತ್ತು. ಈ ಡೇರೆಯಲ್ಲಿ ರಾಜಾಧಿರಾಜ, ಚಕ್ರವರ್ತಿಗಳ ಚಕ್ರವರ್ತಿ ಎನಿಸಿದ್ದ ತೈಮೂರ್ ಉಚ್ಚಾಸನದಲ್ಲಿ ಕುಳಿತಿದ್ದ. ಅವನ ಅಕ್ಕಪಕ್ಕದಲ್ಲಿ ಇನ್ನಿತರ ಚಕ್ರಾಧಿಪತಿಗಳು ಕುಳಿತಿದ್ದರು. ಚಕ್ರವರ್ತಿಯ ಹತ್ತಿರದಲ್ಲೇ ಜಗತ್ಪ್ರಸಿದ್ಧ ಕವಿ ಕೇರ್ಮಾನಿ ಕುಳಿತಿದ್ದ.

ಕೇರ್ಮಾನಿ ಸತ್ಯಸಂಧ. ಯಾವಾಗಲೂ ನಿಜವನ್ನೇ ಇದ್ದ ಹಾಗೆ ಯಾರ ಭಯವೂ ಇಲ್ಲದೆ ಹೇಳುವವನು. ತೈಮೂರ್‌ನನ್ನು ಕಂಡರೆ ಎಲ್ಲರೂ ಹೆದರಿ ನಡುಗುತ್ತಿದ್ದರು. ಆದರೆ ಕೇರ್ಮಾನಿ ಎಳ್ಳಷ್ಟೂ ಚಕ್ರವರ್ತಿಗೆ ಹೆದರಿದವನಲ್ಲ. ಯಾಕೆಂದರೆ ಅವನ ಪ್ರಕಾರ ಅವನಿಗೆ ಒಂದೇ ದೇವರು— "ಸತ್ಯ". ಸಾಹಸವೇ ಯಶಸ್ಸು. ಅವನ ದೃಷ್ಟಿಯಲ್ಲಿ ಚಕ್ರವರ್ತಿಯ ಕೀರ್ತಿ ಯಶಸ್ಸು ಅವನ ಸಾವಿನ ಜೊತೆಯೇ ನಶಿಸಿ ಹೋಗುತ್ತದೆ. ಆದರೆ ಕವಿಯ ಕೀರ್ತಿ, ಯಶಸ್ಸು, ಅವನು ಸತ್ತರೂ ಅವನು ಸತ್ಯದ ಸ್ನೇಹಿತನಾದ ಕಾರಣ ಎಂದಿಗೂ ನಶಿಸುವುದಿಲ್ಲ. ಕವಿಯ ಕೀರ್ತಿ ಅಮರ. ಸತ್ಯಕ್ಕೆ ಸಾವಿಲ್ಲ. ಅದು ಅಮರ. ಅದು ಧೈರ್ಯದ ಪ್ರತೀಕ.

ಶಾಂತಿ ಕೆ. ಶಹಾ

ಕವಿಯ ಈ ಅರ್ಥವುಳ್ಳ ಕಾವ್ಯವಾಚನವನ್ನು ಆಸ್ಥಾನದಲ್ಲಿ ಎಲ್ಲರೂ ನಿಶ್ಯಬ್ದವಾಗಿ ಮೈಮರೆತು ಕೇಳುತ್ತಾ ಕುಳಿತಿದ್ದಾಗ, ಒಮ್ಮಿಂದೊಮ್ಮೆಯೇ ಒಬ್ಬ ಸ್ತ್ರೀಯ ಆಕ್ರೋಶ ಕೇಳಿಸಿತು.

"ಅವಳು ಏನಂತ ಕಿರಿಚಿಕೊಳ್ಳುತ್ತಾಳೆ? ಈ ದಿಟ್ಟ ಬಡ ಹೆಂಗಸಿಗೆ ನನ್ನಲ್ಲಿ ಏನು ಕೆಲಸ?" ಎಂದು ಕೂಗಿದ ತೈಮೂರ್.

"ನಿಮ್ಮ ಭೆಟ್ಟಿಗೆ ಬಂದಿದ್ದಾಳೆ."

"ಒಳಗೆ ಬಿಡಿ," ಎಂದು ಆಜ್ಞಾಪಿಸಿದ ತೈಮೂರ್.

ಆ ಬಡ ಹೆಂಗಸು ಸ್ವಲ್ಪವೂ ಹೆದರದೆ ಧೈರ್ಯದಿಂದ ತೈಮೂರನ ಬಳಿ ಬಂದು ಹೇಳಿದಳು :

"ಹಾಗೇ! ಅದು ಸರಿ! ಮಗು! ನಾ ಹೇಳುವುದನ್ನು ಖಂಡಿತಾ ನಂಬು. ಇದು ಸತ್ಯವಾದ ವಿಚಾರ.

"ನೀನು ಕೇವಲ (ಸಾಧಾರಣನಾದ) ಒಬ್ಬ ಮನುಷ್ಯ. ಆದರೆ ನಾನು ತಾಯಿ. ಮಾತೃ ಸ್ಥಾನ ಪಡೆದವಳು. ನೀನು ಮೃತ್ಯುವಿನ ಸೇವಕ

ಸಾವಿನ ಸೇವೆ ಮಾಡುವವ. ನಾನು ಪ್ರಾಣದ ಸೇವಕಿ. ಜೀವ ಕೊಡುವ ಸೇವೆ ಮಾಡುವವಳು. ಆದುದರಿಂದ ನಾನು ನಿನ್ನಲ್ಲಿ ಏನನ್ನೂ ಬೇಡಲು ಬಂದಿಲ್ಲ. ನನಗೆ ಇದ್ದ ಒಬ್ಬನೇ ಮಗನನ್ನು ವಾಪಸ್ಸು ಕೊಡು ಎಂದು ಅಪ್ಪಣೆ ಮಾಡುತ್ತಿದ್ದೇನೆ. ಇದು ನನ್ನ ಬೇಡಿಕೆಯಲ್ಲ—ಕಟ್ಟಪ್ಪಣೆ.

"ನನಗಿದ್ದವ ಕೇವಲ ಒಬ್ಬನೇ ಮಗ. ಬಹಳ ಸುಂದರವಾದ, ಮುದ್ದಾದ ಒಂದೇ ಒಂದು ಮಗು. ಅವನಿಗೆ ಆಗ ಆರೇ ವರ್ಷ. ಶತ್ರುಗಳು ದಾಳಿ ನಡೆಸಿದಾಗ ಸಾಕಷ್ಟು ಜನರನ್ನು ಕೊಂದರು, ಹಾಳು ಮಾಡಿದರು. ಆದರೆ ನನಗಿದ್ದ ಕೇವಲ ಒಂದೇ ಆಸ್ತಿ, ಆ ಆರು ವರ್ಷದ ಹುಡುಗನನ್ನು ಅಪಹರಿಸಿಕೊಂಡು ಹೋದರು. ಚಕ್ರವರ್ತಿಯಾದ ನೀನು ಅವರನ್ನು ಸೋಲಿಸಿ ಯುದ್ಧದಲ್ಲಿ ಜಯ ಪಡೆದೆ. ಅವರಲ್ಲಿ ಇದ್ದು-ಬಿದ್ದುದನ್ನೆಲ್ಲಾ ನೀನು ಕೊಳ್ಳೆಹೊಡೆದೆ. ನಿನಗೆ ಅವರ ಹತ್ತಿರವಿದ್ದ ನನ್ನ ಮಗು ಎಲ್ಲಿದೆ ಅಂತು ಖಂಡಿತಾ ಗೊತ್ತು. ನನ್ನ ಮಗು ಎಲ್ಲಿದೆ ?

"ನಾನು ಬಹಳ ದೂರದಿಂದ ಕಾಲ್ನಡಗೆಯಲ್ಲಿ ಪ್ರಯಾಣ ಮಾಡಿ, ನಿನ್ನನ್ನು ಕಾಣಲು ಬಂದಿದ್ದೇನೆ. ಕಾಡುಮೇಡು, ಊರು ಪಟ್ಟಣಗಳನ್ನು ಹುಡುಕುತ್ತಾ ಬಂದಿದ್ದೇನೆ. ಎಲ್ಲಿ ಸ್ವಲ್ಪವೂ ನೀರಿಲ್ಲವೋ ಅಂಥ ನದಿ, ಸರೋವರಗಳನ್ನು ದಾಟಿ, ಬಾಯಾರಿ ಬಳಲಿ, ಬೇಡಾಗಿ ನಿನ್ನಲ್ಲಿ ಬಂದಿದ್ದೇನೆ. ಹಾದಿಯಲ್ಲಿ ನಾನು ಬಹಳಷ್ಟು ಕಾಡು ಪ್ರಾಣಿಗಳನ್ನೂ ಕ್ರೂರಮೃಗಗಳನ್ನೂ ಕಂಡೆ. ಆದರೆ ನಾನು ಒಬ್ಬ ತಾಯಿ, ನನ್ನ ಮೇಲೆ ದಯೆಯಿಡಿ—ನನ್ನನ್ನು ಮುಟ್ಟಬೇಡಿ ಎಂದು ಬೇಡಿಕೊಂಡೆ. ಆ ಕಾಡುಪ್ರಾಣಿಗಳು ಸಹ ನನ್ನನ್ನು ಮುಟ್ಟಿ ತೊಂದರೆ ಕೊಡಲಿಲ್ಲ. ಅವರಿಗೂ ನನ್ನಲ್ಲಿ ಅಪಾರ ದಯೆ, ಕರುಣೆ ಹುಟ್ಟಿತು. ಯಾಕೆಂದರೆ ಆ ಪ್ರಾಣಿಗಳಿಗೂ ತಾಯಿಯಿದ್ದಾಳೆ. ತಾಯಿಯ ಪ್ರೀತಿ ಅವಕ್ಕೂ ಗೊತ್ತು. ನಿನಗೂ ಅವಳ ಪ್ರೀತಿ ಗೊತ್ತಿರಬೇಕು. ಯಾಕೆಂದರೆ ನಿನಗೂ ಒಬ್ಬ ತಾಯಿ ಇದ್ದಳು.

"...ಎಲ್ಲಿ ತಾಯಿಯಿಲ್ಲ— ಅಲ್ಲಿ ಕವಿಯಿಲ್ಲ, ವೀರನಿಲ್ಲ, ನಾಯಕನಿಲ್ಲ. ಎಲ್ಲಿ ಹೆಣ್ಣಿಲ್ಲ—ಅಲ್ಲಿ ಪ್ರೇಮವಿಲ್ಲ. ಎಲ್ಲಿ ಪ್ರೇಮವಿಲ್ಲ—ಅಲ್ಲಿ ಸುಖವಿಲ್ಲ.

"ನನ್ನ ಮಗುವನ್ನು ವಾಪಸ್ಸು ಕೊಡು. ಅದು ನನ್ನ ಪ್ರೇಮದ ಪ್ರತೀಕ. ನಾನು ತಾಯಿ, ನನ್ನ ಪ್ರೀತಿ—ಆ ಮಗು."

ಈ ಆಕ್ರೋಶವನ್ನು ಕೇಳಿದ ಚಕ್ರವರ್ತಿ ಬಹಳ ಕಾಲ ನಿಶ್ಶಬ್ದನಾದ; ಯೋಚಿಸಿ ಕಡೆಗೆ ಹೇಳಿದ;

"ಬಹಳ ವರ್ಷಗಳಿಂದ ನಾನು ಎಲ್ಲವನ್ನೂ ನಾಶಗೊಳಿಸಿದ್ದೇನೆ. ಬಹಳಷ್ಟು ಅನುಭವಿಸಿದ್ದೇನೆ. ಬಹಳ ಸಾವುಗಳನ್ನು ಕಂಡಿದ್ದೇನೆ. ನನಗೂ ಒಬ್ಬ ಮಗನಿದ್ದ. ಆದರೆ ವಿಧಿ ಅವನನ್ನು ಸೆಳೆದೊಯ್ದಿತು. ಅದರ ಮೇಲಿನ ಕೋಪಕ್ಕೆ ನಾನು ಪೃಥ್ವಿಯ ಮೇಲೆ ಎಲ್ಲವನ್ನೂ ಧ್ವಂಸ ಮಾಡುತ್ತಾ ಬಂದಿದ್ದೇನೆ. ಜನ, ಊರು, ದೇಶ ಒಂದನ್ನೂ ಬಿಡಲಿಲ್ಲ, ಬಿಟ್ಟಿಲ್ಲ. ನಾನು ಯಾವಾಗಲೂ ಜನ, ಊರು, ದೇಶಗಳೊಡನೆ ಕಾದಾಡಿದ್ದೇನೆ, ಯುದ್ಧ ಮಾಡಿದ್ದೇನೆ. ಆದರೆ ನಾನೆಂದೂ ಒಬ್ಬ ಮನುಷ್ಯನೊಡನೆ ಕಾದಾಡಿಲ್ಲ.

"ಆದರೆ ಈಗ ಈ ಹೆಂಗಸಿನೊಡನೆ ?...ಅವಳ ಸಂಕಟ ನನಗೂ ಅರ್ಥವಾಗುತ್ತದೆ. ಯಾಕೆಂದರೆ ಒಂದು ಕಾಲಕ್ಕೆ ನನಗೂ ಒಬ್ಬ ಮಗ ಇದ್ದ.

"ಅವಳ ದಿಟ್ಟತನ, ಧೈರ್ಯದ ಹಿಂದಿದ್ದ ಶಕ್ತಿ ಈಗ ನನಗೆ ತಿಳಿಯಿತು.

"ಅವಳ ಮಗನ ಮೇಲಿನ ಮಾತೃಪ್ರೇಮವೇ ಈ ಮಾತೃಶಕ್ತಿ.

"ನಾನು ನನ್ನ ಮಗನನ್ನು ಪ್ರೀತಿಸಿದಂತೆಯೇ ಅವಳೂ ತನ್ನ ಮಗುವನ್ನು ಪ್ರೀತಿಸುತ್ತಾಳೆ."

ಇದನ್ನು ಅರಿತ ಚಕ್ರವರ್ತಿ ಹೆಂಗಸನ್ನು ಶಿಕ್ಷಿಸದೆ ತನ್ನ ಪಡೆಗೆ, ಜನಕ್ಕೆ, ಎಲ್ಲಿದ್ದರೂ ಇವಳ ಮಗುವನ್ನು ಹುಡುಕಿ ತನ್ನಿ ಎಂದು ಕಟ್ಟಪ್ಪಣೆ ಮಾಡಿದ. ▲

# ದೀಪ

ಶಂಕರ ಪಾಟೀಲ

ಮನೆಯಲ್ಲಿ ದೀಪ. ಮನೆಗೆಲ್ಲಾ ಬೆಳಕು. ಹೊಸ ದೀಪಕ್ಕೆ ಎಣ್ಣೆ ಹಾಕಬೇಕು, ಬತ್ತೀ ಏರಿಸಬೇಕು, ಕಡ್ಡೀ ಕೊರೆದು ಹಚ್ಚಬೇಕು. ಉರಿದರೆ ಉರಿಯಿತು. ಉರಿಯದಿದ್ದರೆ ಬಕ್ ಬಕ್ ಎಂದು ಆರಿಹೋಯಿತು. ಬರ್ನರ್ ಬದಲಾಯಿಸಬೇಕು. ಎಣ್ಣೆ ಸೋರಿತೋ, ಬೆಸುಗೆ ಹಾಕಿಸಬೇಕು. ಗ್ಲಾಸಿಗೆ ಕಾಡಿಗೆ ಏರಿತೋ, ಉಜ್ಜಬೇಕು. ಕಾಲ ಕಾಲಕ್ಕೆ ಇದನ್ನೆಲ್ಲಾ ಮಾಡಲೇಬೇಕು. ಎಷ್ಟೊಂದು ಕೆಲಸವೆಂದು ಬಿಟ್ಟರೆ ಮನೆಯೆಲ್ಲಾ ಕತ್ತಲು ಮಾಡಿಕೊಂಡು ಇರಲು ಸಾಧ್ಯವೇ?

ಇದೆಲ್ಲಾ ಏಕೆ? ಎಲೆಕ್ಟ್ರಿಕ್ ದೀಪ ಹಾಕಿಸಿದರಾಯಿತು ಎಂದು ಹೇಳುವುದೇನೋ ಸುಲಭ. ಅದಕ್ಕೆ ಖರ್ಚು ಹೆಚ್ಚು. ಎಲ್ಲರಿಂದಲೂ ಆದೀತೆ? ಹೆಚ್ಚಿನ ದುಡಿಮೆ ಇದ್ದವರು ಹಾಕಿಸಬಹುದು. ಅದಕ್ಕೂ ಫ್ಯೂಜ್ ಹೋದಾಗ ಫ್ಯೂಜ್ ಹಾಕಿಸಬೇಕು; ಬಲ್ಬ್ ಹೋದಾಗ ಹೊಸ ಬಲ್ಬು ಹಾಕಿಸಬೇಕು. ಮೇಲಾಗಿ ದೀಪ ಹಚ್ಚಬೇಕಾದರೆ ಗುಂಡಿ ಒತ್ತಬೇಕು. ಅಂತೂ ಏನೇನೋ ಮಾಡಬೇಕು.

ಮನೆಗೆ ಬಂದ ಮಡದಿ ಮನೆಯ ದೀಪ. ಹಾಗೆಂದು ಹಗಲೂ ರಾತ್ರೀ ಉರಿಸೋದಕ್ಕಾಗುತ್ತದೆಯೋ? ದೀಪ ಯಾವುದೇ ಇರಲಿ, ಹೆಚ್ಚು ಖರ್ಚು. ಇದು ಎಲ್ಲರಿಗೂ ಗೊತ್ತಿದ್ದ ಮಾತು. ಖರ್ಚು ಕಡಿಮೆ ಬರಲಿ ಎಂದು ಮುರುಸಂಜೆಗೇನೆ ಊಟ ಮುಗಿಸಿ ಮಲಗುವವರೂ ಇದ್ದಾರೆ. ಖರ್ಚು ಎಷ್ಟಾದರೇನು ಮನೆ ತುಂಬಾ ಬೆಳಕು ಇರಬೇಕು ಎನ್ನುವವರೂ ಇದ್ದಾರೆ.

ಹಗಲ ಬೆಳಕಿನ ಖರ್ಚು ದೇವರಿಗೇ ಬಿಟ್ಟದ್ದು. ರಾತ್ರಿ ಬೆಳಕಿಗೆ ಮಾತ್ರ ನಮ್ಮ ಜೇಬಿನಿಂದಲೇ ಕೊಡಬೇಕು. ದೀಪಕ್ಕಾಗಿ ರಾತ್ರಿಯೋ ಅಥವಾ ರಾತ್ರಿಗಾಗಿ ದೀಪವೋ? ರಾತ್ರಿಗಾಗಿ ದೀಪ ಎಂಬುದು ಎಲ್ಲರಿಗೂ ಗೊತ್ತಿದ್ದರೂ ದೀಪಕ್ಕಾಗಿ ರಾತ್ರಿಯನ್ನು ಕಾಯುವರು, ಜನ. ದೀಪ ದೂರದಿಂದ ಬೆಳಕು ಕೊಡುವುದಾದರೂ ಹತ್ತಿರಕ್ಕೆ ಹೋದರೋ ಝಳ, ಮುಟ್ಟಿದರೋ ಸುಟ್ಟು ಬಿಡುವುದು.

ತನ್ನ ಕೆಳಗೆ ಕತ್ತಲೆಯನ್ನಿಟ್ಟುಕೊಂಡರೂ ದೀಪ ಕೊಡುವುದು ಬೆಳಕನ್ನೇ. ಕತ್ತಲೆ ದೀಪದ ಕೆಳಗೆ ಇರಬಹುದು, ದೀಪದ ಮೇಲೆ ಇರಬಹುದು. ಕಾಲ ಬದಲಾದಂತೆ ಕತ್ತಲೆಯ ಸ್ಥಾನ ಮಾತ್ರ ಬದಲಾಯಿತು, ಅಷ್ಟೇ. ಅಂತೂ ಕತ್ತಲೆ ಇದ್ದದ್ದೇ. ಆದರೆ ನಾವು ಉಪಯೋಗಿಸಿ ಆನಂದಿಸುವುದು ಬೆಳಕನ್ನು ಮಾತ್ರ.

ದೀಪವನ್ನು ಸೃಷ್ಟಿಸಿದವನು ಮಾನವನೇ? ಹಾಗಾದರೆ ಕತ್ತಲಿಲ್ಲದ ದೀಪವನ್ನವನು ಯಾಕೆ ಸೃಷ್ಟಿಸಲಾರ? ದೀಪವು ಮಾನವನಿರ್ಮಿತವಾದರೂ ಕತ್ತಲು ಬೆಳಕುಗಳು ಮಾತ್ರ ದೇವನಿರ್ಮಿತ. ಈ ನಿರ್ಮಾಣದ ಹಿನ್ನೆಲೆಯ ತತ್ತ್ವಜ್ಞಾನ ಯಾರಿಗೆ ಬೇಕು? ನಮಗೆ ಬೇಕಾದದ್ದು ದೀಪ, ಅದರ ಬೆಳಕು. ಕತ್ತಲೆ ಕೆಳಗಿದ್ದರೇನು ಮೇಲಿದ್ದರೇನು!

ಬತ್ತಿ ಏರಿಸಿದಂತೆ ದೀಪಕ್ಕೆ ಬೆಳಕು ಹೆಚ್ಚು. ಹಾಗೇ ಕಾಡಿಗೆಯೂ ಹೆಚ್ಚು. ಹೆಚ್ಚಿನ ಬೆಳಕು ತತ್ ಕ್ಷಣ ಕಾಣುವುದು, ಕಾಡಿಗೆಯ ಕಪ್ಪು ಕಾಣಲು ಸಮಯ ಬೇಕು. ಕಾಡಿಗೆಯ ಕಪ್ಪೂ ಸತ್ಯ, ಬೆಳಕೂ ಸತ್ಯ. ಕಾಡಿಗೆಯ ಕಪ್ಪನ್ನು ಕಣ್ಣಿನಿಂದ ನೋಡಲೂಬಹುದು, ಕೈಯಿಂದ ಮುಟ್ಟಲೂಬಹುದು. ಬೆಳಕನ್ನು ಮಾತ್ರ ಕಣ್ಣಿನಿಂದ ಅನುಭವಿಸುವುದು ಸಾಧ್ಯವೇ ಹೊರತು ಕೈಯಿಂದ ಮುಟ್ಟುವುದು ಅಸಾಧ್ಯ.

ಶರೀರವನ್ನು ಬಳಸಬಹುದು; ಆತ್ಮವನ್ನು ಬಳಸಲಾಗದು. ದೀಪ ಶರೀರ, ಬೆಳಕು ಆತ್ಮ. ನಿಜವಾಗಿಯೂ ನಮಗೆ ಬೇಕಾದದ್ದು ಬೆಳಕಾದರೂ ದೀಪ ಇಲ್ಲದೇ ಅದನ್ನು ಪಡೆಯುವುದು ಹೇಗೆ ಸಾಧ್ಯ? ಸತ್ಯ ಯಾವುದು, ಭ್ರಮೆ ಯಾವುದು ಅನುಭವಿಸಿಯೇ ಅರಿಯಬೇಕು.

# ನಗೆಮಲ್ಲಿಗೆ

"ಒಂಭತ್ತು ತಿಂಗಳು ಬಾಡಿಗೆ ಬಾಕಿ ಮಾಡಿಕೊಂಡದ್ದಕ್ಕೆ ಹಿಂದಿನ ಬಾಡಿಗೆದಾರನನ್ನು ನಾನು ಹೊರಗೆ ಹಾಕಿದೆ," ಎಂದು ಮನೆ ಹುಡುಕುತ್ತ ಬಂದ ಆಸಾಮಿಗೆ ಮಾಲಿಕ ಹೇಳಿದ.

"ತುಂಬಾ ನ್ಯಾಯ. ಅದೇ ಕರಾರಿನ ಮೇಲೆ ನನಗೂ ಈ ಮನೆ ಕೊಟ್ಟುಬಿಡಿ," ಎಂದ ಹೊಸ ಬಾಡಿಗೆದಾರ.

*

ಶಾಲೆಯಲ್ಲಿ "ಮೊಂಡ ಮೂಗು!" "ಮೆಳ್ಳೆಗಣ್ಣು!" ಅಂತ ಬೈದುಕೊಳ್ಳುವುದರಿಂದಾರಂಭವಾದ ಅವರ ವೈರ ಶಾಲೆ ಬಿಡುವ ದಿನದ ವರೆಗೂ ಸಜೀವವಾಗಿತ್ತು. ಶಾಲೆ ಬಿಟ್ಟು ತಮ್ಮಣ್ಣ ಸೈನ್ಯ ಸೇರಿದ. ಕೂರ್ಮಯ್ಯ ಕಾಲೇಜು ಸೇರಿದ.

ಮೂವತ್ತು ವರ್ಷಗಳ ನಂತರ ಜನರಲ್ ತಮ್ಮಣ್ಣ ರಿಟೈರ್ ಆಗಿ ಮನೆಗೆ ಮರಳಲು ರೈಲಿನ ಫಸ್ಟ್‌ಕ್ಲಾಸ್ ಡಬ್ಬಿ ಹತ್ತಿದಾಗ ಅದು ಶೂನ್ಯವಾಗಿತ್ತು. ಇನ್ನೇನು ಅದು ಹೊರಡಬೇಕು, ಅಷ್ಟರಲ್ಲಿ ಪ್ರೊಫೆಸರ್ ಕೂರ್ಮಯ್ಯನವರು ಒಳಗೆ ಬಂದು ಗಾಂಭೀರ್ಯದಿಂದ ಕುಳಿತರು. ರೈಲು ಹೊರಟಿತು. ಇಬ್ಬರೂ ಒಬ್ಬರನ್ನೊಬ್ಬರು ತತ್‌ಕ್ಷಣ ಗುರುತಿಸಿದರು.

"ಟಿಕೆಟ್ ಕಲೆಕ್ಟರ್ ಸಾಹೇಬ್, ಈ ರೈಲು ಕಲ್ಯಾಣದಲ್ಲಿ ನಿಲ್ಲುತ್ತದೆಯೇ?" ಪ್ರೊಫೆಸರರು ನಜಿನಿಂದ ಕೇಳಿದರು.

"ಮ್ಯಾಡಂ, ಅಲ್ಲಿ ನಿಲ್ಲುತ್ತೆ ಚಿಂತಿಸಬೇಡಿ," ಎಂದರು ಜನರಲ್ ತಮ್ಮಣ್ಣ

*

ಕೇರಳದಲ್ಲಿ ಕಮ್ಯುನಿಸ್ಟ್ ಮಂತ್ರಿಮಂಡಲ ಅಧಿಕಾರದಲ್ಲಿದ್ದಾಗ ಮಂತ್ರಿಯೊಬ್ಬರು ತಿರುವನಂತಪುರದ ಪದ್ಮನಾಭಸ್ವಾಮಿ ಮಂದಿರದ ಎದುರಿಗೆ ಹೋಗುತ್ತಿದ್ದರು. ಒಬ್ಬ ಮುದಿ ಭಿಕ್ಷುಕ ಕಣ್ಮುಚ್ಚಿಕೊಂಡು ದೇವರನ್ನು ಪ್ರಾರ್ಥಿಸುತ್ತಿರುವುದನ್ನು ಕಂಡು ಅವರು ಕಾರು ನಿಲ್ಲಿಸಿ ಅವನನ್ನು ಕೇಳಿದರು: "ಏನು ಮಾಡುತ್ತಿದ್ದಿ?"

"ಪ್ರಾರ್ಥನೆ ಮಾಡುತ್ತಿದ್ದೆ ಬುದ್ಧಿ."


"ಏನು ಪ್ರಾರ್ಥನೆ ಮಾಡುತ್ತಿದ್ದೆ?"

"ಕಮ್ಯುನಿಸ್ಟ್ ಸರಕಾರ ಚಿರಕಾಲ ಇರಲಿ ಅಂತ ಬುದ್ಧಿ."

ಮಂತ್ರಿಗಳು ನಕ್ಕರು. "ಕಮ್ಯುನಿಸ್ಟ್ ಸರಕಾರ ನಿನ್ನ ದೇವರ ದಯೆಯಿಂದ ಅಧಿಕಾರದಲ್ಲಿದೆ ಅಂತ ತಿಳಿದಿದ್ದೀಯಾ? ಬಹುಶಃ ಸರ್ ಸಿ. ಪಿ. ರಾಮಸ್ವಾಮಿ ಕಾಲದಲ್ಲಿಯೂ ನೀನು ಅವರ ಸರಕಾರದ ಪರವಾಗಿ ಪ್ರಾರ್ಥಿಸುತ್ತಿದ್ದಿ ಅಲ್ಲವೆ?"

"ನಿಜ ಬುದ್ಧಿ."

"ಅವರ ಸರಕಾರಕ್ಕೆ ಏನಾಯಿತು ಗೊತ್ತಿ-





ಮೈಸೂರ್ ಖ್ಯಾತಿ
ಪುಷ್ಪಾಂಜಲಿ
ಇತಿಹಾಸದಂತೆ
ಮನೋಹರ
ದಾವಣಗೆರೆ
ಬಟ್ಟೆಗಳು
.dcm/3/72 kan

ಲ್ಲವೆ?"

"ಗೊತ್ತಿದೆ ಬುದ್ಧಿ. ಅದಕ್ಕೇ ಈಗಲೂ ನಾನು ಪ್ರಾರ್ಥಿಸುತ್ತಿರೋದು—"

•

ಬೇಟೆಗಾರ ಹೇಳಿದ ಕಥೆ:

"ನಾನೊಮ್ಮೆ ಮಧ್ಯಪ್ರದೇಶದಲ್ಲಿ ಬೇಟೆಯಾಡುತ್ತಿದ್ದೆ. ನನ್ನ ಬಂದೂಕಿನಲ್ಲಿ ಒಂದೇ ಕಾಡತೂಸು ಉಳಿದಿತ್ತು. ಆಗ ಎದುರು ಬಂತೊಂದು ದೈತ್ಯ ಹುಲಿ. ನಾನು ಬಂದೂಕೆತ್ತಿ ಗುಂಡು ಹಾರಿಸಿದೆ. ಗುರಿ ತಪ್ಪಿತು. ಹುಲಿ ಕ್ಷಣಾರ್ಧದಲ್ಲಿ ನನ್ನ ಮೇಲೆ ಹಾರಿತು. ಮುಗಿದೇಹೋಯಿತು ಅಂತ ತಿಳಿದಿದ್ದೆ. ಆದರೆ ಹುಲಿಗೂ ಗುರಿ ತಪ್ಪಿ ಅದು ನನ್ನಿಂದ ಹದಿನೈದು ಅಡಿ ಹಿಂದಿದ್ದ ಮುಳ್ಳುಪೊದೆಯ ಮೇಲೆ ಹೋಗಿ ಬಿತ್ತು. ಅದು ಚೇತರಿಸಿಕೊಂಡು ನನ್ನ ಮೇಲೆ ಎರಗುವ ಮೊದಲು ನಾನು ಓಡಿ ನನ್ನ ಮಂಚಿಕೆಯನ್ನೇರಿ ಬದುಕಿಕೊಂಡೆ.

"ಮರುದಿನ ಮಂಚಿಕೆಯನ್ನೇರಿ ಸುತ್ತಲೂ ನಿರೀಕ್ಷಿಸುತ್ತಿದ್ದೆ. ನನಗೆ ಕಂಡದ್ದೇನು? ಸ್ವಲ್ಪ ದೂರದಲ್ಲಿ ಅದೇ ಹುಲಿ ತಾಲೀಮು ಮಾಡುತ್ತಿತ್ತು—ಕಡಿಮೆ ದೂರ ಹಾರುವ ತಾಲೀಮು."

•

ಹುಚ್ಚನೊಬ್ಬನಿಗೊಂದು ಪತ್ರ ಬಂತು. ಅದನ್ನೊಡೆದು ನೋಡಿದರೆ ಒಳಗೊಂದು ಖಾಲಿ ಕಾಗದ ಇತ್ತು. ಹುಚ್ಚ ಹೇಳಿದ: "ಇದು ನನ್ನ ಅಣ್ಣನ ಪತ್ರ ಇರಬೇಕು. ಆರು ತಿಂಗಳ ಕೆಳಗೆ ನಮಗೆ ಜಗಳವಾಗಿ ಮಾತು ಬಿಟ್ಟಿದ್ದೆವು."

*

"ಇದೇ ಈಗ ನಮ್ಮನ್ನು ದಾಟಿ ಹೋದ ಹೆಂಗಸನ್ನು ನೋಡಿದೆಯಾ?"

"ಯಾವ ಹೆಂಗಸು? ಜಾರ್ಜೆಟ್ ಸೀರೆ, ಹಂಸ ಪೆಂಡೆಂಟ್, ಅಜಂತಾ ತುರುಬು, ಸೀಮೇ ಕಮಲದ ಬೆಂಡೋಲೆ ಹಾಕಿಕೊಂಡವಳೆ?"

"ಹೌದು."

"ಇಲ್ಲ. ಸರಿಯಾಗಿ ನೋಡಲಿಲ್ಲ."

•

ಮಾಜಿ ಮಂತ್ರಿಯೊಬ್ಬರು ಅಸ್ವಾಸ್ಥ್ಯದಿಂದ ಹಾಸಿಗೆ ಹಿಡಿದರು. ಊರಲ್ಲಿಯ ಪ್ರಸಿದ್ಧ ಡಾಕ್ಟರು ಅವರನ್ನು ನೋಡಿಕೊಳ್ಳುತ್ತಿದ್ದರು. ಒಂದು ವಾರ ಕಳೆದರೂ ಅವರು ಚೇತರಿಸಿಕೊಳ್ಳದುದನ್ನು ಕಂಡು ಮಾಜಿ ಮಂತ್ರಿಗಳ ಸಹಧರ್ಮಿಣಿ ಯಾಕೆ ಹೀಗೆಂದು ಡಾಕ್ಟರನ್ನು ಕೇಳಿದರು.

"ನನ್ನ ಔಷಧೋಪಚಾರ ಇವರಿಗೆ ನಾಟದು. ಇವರು ಗುಣಹೊಂದಬೇಕೆಂದಿದ್ದರೆ ಒಂದೇ ಉಪಾಯ. ಈ ಕೂಡಲೆ ಯಾರಾದರೂ ಏನನ್ನಾದರೂ ಉದ್ಘಾಟಿಸಲೆಂದು ಇವರನ್ನು ಆಮಂತ್ರಿಸಬೇಕು," ಹೇಳಿದರು ಡಾಕ್ಟರು.




"ನಾನಂದುಕೊಂಡಿದ್ದಷ್ಟು ಜನ ಸಭೆಯಲ್ಲಿಲ್ಲ... ಆದ್ದರಿಂದ ನನ್ನ ಎಂಭತ್ತೇಳು ಪುಟಗಳ ಭಾಷಣದಲ್ಲಿ ಒಂದೆರಡು ಪುಟ ಕಡಿಮೆ ಓದಿಬಿಡಲೇ ?...

# ಸುಕುಮಾರ ಕವಿ

ಸಿಎಚ್. ಗೋಪಾಲಕೃಷ್ಣ ಭಟ್ಟ

ಕೇರಳದ ಮಲಬಾರು ಪ್ರದೇಶದವನಾದ ಸುಕುಮಾರನು ಪ್ರತಿಭಾನ್ವಿತ ಸಂಸ್ಕೃತ ಕವಿ. ಹದಿನೈದನೆಯ ಶತಮಾನದಲ್ಲಿ ಜೀವಿಸಿದ್ದ ಈ ಹೆಸರಾಂತ ಕವಿಯ ಸುಪ್ರಸಿದ್ಧ ಕೃತಿ "ಶ್ರೀಕೃಷ್ಣ ವಿಲಾಸಕಾವ್ಯ" ಎಂಬುದು. ನಾಲ್ಕು ಸರ್ಗಗಳ ಈ ಕಾವ್ಯದಲ್ಲಿ ಶ್ರೀಕೃಷ್ಣನ ಸಾಹಸ ಕಾರ್ಯಗಳನ್ನು ಸವಿಸ್ತಾರವಾಗಿ ಬಣ್ಣಿಸಲಾಗಿದೆ. ಸರಳತೆಯಲ್ಲಿ ಹಾಗೂ ಮಧುರತೆಯಲ್ಲಿ ಅದ್ವಿತೀಯವೆನಿಸಿರುವ ಶ್ರೀಕೃಷ್ಣ ವಿಲಾಸ ಕಾವ್ಯದ ಶ್ಲೋಕಗಳು ಕೇರಳದಾದ್ಯಂತ ಭಕ್ತ ಜನರ ನಾಲಿಗೆಯಲ್ಲಿ ದಿನನಿತ್ಯ ಕುಣಿದಾಡುವಂತಹವುಗಳು. ಕೇರಳದಲ್ಲಿ ಇದರಷ್ಟು ಜನಪ್ರಿಯತೆಗಳಿಸಿರುವ ಸಂಸ್ಕೃತ ಕಾವ್ಯ ಬೇರೊಂದಿಲ್ಲ.

ಸುಕುಮಾರ ಕವಿಯ ಕುರಿತಾದ ಒಂದು ದಂತ ಕಥೆ ಕೇರಳದಲ್ಲಿ ಪ್ರಚಲಿತದಲ್ಲಿದೆ. ಗುರುಸೇವೆ ಮಾಡುತ್ತಾ ವಿದ್ಯಾರ್ಜನೆ ಮಾಡುವ ಕಾಲವಾಗಿತ್ತದು. ಸುಕುಮಾರನು ಕೂಡ ಯೋಗ್ಯ ಗುರುಗಳೊಬ್ಬರ ಶುಶ್ರೂಷೆ ಮಾಡುತ್ತಾ ಸಕಲ ವೇದ, ಪುರಾಣ ಹಾಗೂ ಶಾಸ್ತ್ರಗಳ ಅಧ್ಯಯನದಲ್ಲಿ ನಿರತನಾಗಿದ್ದ.

ಆ ಗುರುಗಳ ಅನೇಕ ಶಿಷ್ಯರ ಪೈಕಿ ಗುರುಭಕ್ತಿ ಹಾಗೂ ವಿದ್ಯೆ ಕಲಿಯುವುದರಲ್ಲಿ ಇತರರನ್ನೆಲ್ಲಾ ಮೀರಿಸಿದ ವ್ಯಕ್ತಿ ಸುಕುಮಾರ. ಗುರುಗಳು ಹೇಳಿಕೊಡುವ ಪಾಠ ಪ್ರವಚನಗಳನ್ನೆಲ್ಲಾ ಶ್ರಮ ವಹಿಸಿ, ಶ್ರದ್ಧೆಯಿಂದ ಕಲಿತುಕೊಳ್ಳುತ್ತಿದ್ದನಲ್ಲದೆ ಗುರ್ವಾಜ್ಞೆಗಳನ್ನು ಚಾಚೂ ತಪ್ಪದೆ ಪರಿಪಾಲಿಸುತ್ತಿದ್ದ ಮಾತ್ರವಲ್ಲದೆ ಆಗಲೇ ಕವಿತಾರಚನೆಗೂ ತೊಡಗಿದ್ದನು. ಆದಾಗ್ಯೂ ಒಂದೇ ಒಂದು ಬಾರಿಯಾದರೂ ಗುರುಗಳ ಬಾಯಿಯಿಂದ ಹೊಗಳಿಸಿಕೊಂಡವನಲ್ಲ ಸುಕುಮಾರ. ದಿನಕ್ಕೊಂದೆರಡು ಬಾರಿ ಎಂಬಂತೆ ತನ್ನೆದುರಿನಲ್ಲೇ ತಮ್ಮ ಪತ್ನಿಯೊಡನೆ ಗುರುಗಳು ತನ್ನನ್ನು ಬಯ್ಯುತ್ತಿರುವುದು ಅವನ ಗಮನಕ್ಕೆ ಬಂದಿತ್ತು. ಅವನು ಪಾಠಗಳನ್ನು ಚೆನ್ನಾಗಿ ಅಭ್ಯಸಿಸುತ್ತಿಲ್ಲವೆಂದೂ ಅವನ ಕವಿತೆಗಳೆಲ್ಲಾ ಹುರುಳಿಲ್ಲದವುಗಳೆಂದೂ ಗುರುಗಳು ಆರೋಪಿಸುತ್ತಿದ್ದರು. ತನ್ನಷ್ಟು ಶ್ರದ್ಧೆಯಿಂದ ಕಲಿಯದ ಇತರ ಹುಡುಗರ ಕುರಿತಾಗಿ ಏನೆಂದೂ ಹೇಳದೆ ಸದಾ ತನ್ನನ್ನೇ ತೆಗಳುತ್ತಿರುವ ಗುರುಗಳ ವಿಚಾರದಲ್ಲಿ ಸುಕುಮಾರನಿಗೆ ದಿನ ಕಳೆದಂತೆಲ್ಲಾ ದ್ವೇಷ ಭಾವವೆ ಹೊಗೆಯಾಡತೊಡಗಿತು. ದಿನಾ ಇದೇ ವಿಚಾರದ ಗುಂಗಿನಲ್ಲಿದ್ದ ಅವನಲ್ಲಿ ಕೊನೆಗೊಂದು ದಿನ ಗುರುಗಳ ಮೇಲಿನ ರೋಷವು ಕುದಿದು ಉಕ್ಕೇರಿದಾಗ ಕ್ರೂರ ಯೋಚನೆ-

ಯೊಂದು ಮಿಂಚಿನಂತೆ ಹೊಳೆಯಿತು. ಗುರುಗಳು ನಿದ್ರಿಸುತ್ತಿರುವಾಗ ಯಾರಿಗೂ ತಿಳಿಯದಂತೆ ನಿರ್ದಯವಾಗಿ ಅವರನ್ನು ಕೊಂದುಹಾಕುವುದೇ ತಕ್ಕ ಪ್ರತೀಕಾರವೆಂದು ಸುಕುಮಾರ ಕಾರ್ಯ ಸನ್ನದ್ಧನಾದನು.

ಒಂದು ದಿನ ರಾತ್ರಿ ಭೋಜನಾನಂತರ ಗುರುಗಳು ಪತ್ನೀಸಮೇತರಾಗಿ ತಮ್ಮ ಶಯ್ಯಾಗೃಹಕ್ಕೆ ತೆರಳಿ ಏನೇನೋ ಸಂಭಾಷಣೆಗೆ ತೊಡಗಿದರು. ಆ ಮಾತು ಈ ಮಾತು ಆಡುತ್ತಾ ಸುಕುಮಾರನ ವಿಚಾರವೂ ಬಂತು. ಆಗ ಗುರುಪತ್ನಿ ಪತಿಯೊಡನೆ, "ಅಂದ್ಹಾಗೆ...ನನಗೊಂದು ಸಂದೇಹ ಬಂದಿದೆ. ಆಕಾಶಕ್ಕೊಬ್ಬನೇ ಚಂದ್ರನ ಶೋಭೆ ಎಂಬಂತೆ ನಮ್ಮ ಶಿಷ್ಯರ ಪೈಕಿ ಸುಕುಮಾರ ಸಕಲ ಗುಣ ಸಂಪನ್ನನಾಗಿ ಶೋಭಿಸುತ್ತಿದ್ದಾನೆ. ಮೇಲಾಗಿ ಕವಿತಾರಚನೆಯಲ್ಲೂ ಅವನದು ಎತ್ತಿದ ಕೈ. ಹೀಗಿದ್ದರೂ ಒಮ್ಮೆಯಾದರೂ ಅವನು ನಿಮ್ಮ ಹೊಗಳಿಕೆಗೆ ಪಾತ್ರನಾದವನಲ್ಲ. ಕಾರಣವಾದರೂ ಏನಿರಬಹುದೆಂದು ತಿಳಿಯಬಹುದೇ?"

ಗುರುಗಳು ಮುಗುಳ್ನಕ್ಕು ಉತ್ತರಿಸಿದರು: "ಹಾಗೋ ವಿಚಾರ! ನಮ್ಮ ಪರಮಾಪ್ತ ಶಿಷ್ಯ ಸುಕುಮಾರನ ಅಭ್ಯುದಯ ದೃಷ್ಟಿಯಿಂದಲೇ ನಾನು ಈ ರೀತಿ ಮಾಡುತ್ತಿದ್ದೇನೆಯೇ ಹೊರತು ಅನ್ಯಥಾ ಅಲ್ಲ. ಎದುರಿನಲ್ಲೇ ಹೊಗಳುವುದರಿಂದ ಇನ್ನೂ ವಿಕಸಿಸಬೇಕಾದ ಅವನ ಪ್ರತಿಭೆಗೆ ಕುಂದುಂಟಾಗಬಹುದು. ಇಂತಹ ದೂರದೃಷ್ಟಿಯನ್ನಿಟ್ಟುಕೊಂಡದ್ದೇ ಈ ತರಹದ ನನ್ನ ವರ್ತನೆಗೆ ಕಾರಣ."

ಗುರುಗಳನ್ನು ಕೊಂದೇತೀರುವೆನೆಂಬ ಘೋರ ಪ್ರತಿಜ್ಞೆಯನ್ನು ಕೈಗೊಂಡು ಅಲ್ಲೇ ಮೇಲಿನ ಅಟ್ಟದಲ್ಲಿ ಹರಿತವಾದ ಕತ್ತಿ ಸಹಿತ ಅವಿತಿಟ್ಟುಕೊಂಡಿದ್ದ ಸುಕುಮಾರನಿಗೆ ಗುರುಗಳ ಈ ಮಾತುಗಳನ್ನು ಕೇಳಿ ದಿಗ್ಭ್ರಮೆಯಾಯಿತು. ಗುರುಗಳಿಗೆ ತನ್ನ ಮೇಲಿದ್ದ ನಿರ್ವ್ಯಾಜ ಪ್ರೇಮವನ್ನು ಸ್ವತಃ ಕಿವಿಯಾರೆ ಕೇಳಿದ ಸುಕುಮಾರ ಪಶ್ಚಾತ್ತಾಪದ ಉರಿಯಲ್ಲೇ ಬೆಂದುಹೋದನು. ಹಿಂದು ಮುಂದು ಆಲೋಚಿಸದ ತನ್ನ ಅವಿವೇಕತನದ ವರ್ತನೆಗಾಗಿ ಗುರುಗಳಲ್ಲಿ ಕ್ಷಮಾಯಾಚನೆ ಮಾಡುವುದೇ ತಕ್ಕ ಪರಿಹಾರೋಪಾಯವೆಂದು ಆತ ಮನಗಂಡ.

ಈ ವಿಚಾರಗಳೊಂದನ್ನೂ ಅರಿಯದ ಗುರುಗಳು ಮರುದಿನ ಎಂದಿನಂತೆ ಪಾಠ ಪ್ರವಚನಗಳನ್ನಾರಂಭಿಸುತ್ತಿದ್ದಂತೆಯೇ ಸುಕುಮಾರನು ಮುಂದೆ ಬಂದು ಗುರುಗಳೆದುರು ಸಾಷ್ಟಾಂಗ ನಮಸ್ಕರಿಸಿ ಪ್ರಶ್ನಿಸಿದ: "ಗುರುಗಳೇ, ಒಬ್ಬಾತ ತನಗೆ ವಿದ್ಯೆ ಸದ್ಬುದ್ಧಿಗಳನ್ನು ಕಲಿಸಿ, ಅನ್ನ ಕೊಟ್ಟು ಸಲಹಿ ಅವನ ಶ್ರೇಯೋವೃದ್ಧಿಯನ್ನೇ ಬಯಸಿದ ಗುರುಗಳನ್ನೇ ಕೊಲ್ಲಬಯಸಿದರೆ



ಅಂತಹ ಪಾಪಿಗೆ ಕೊಡಬೇಕಾದ ಪ್ರಾಯಶ್ಚಿತ್ತ ಯಾವುದು ? ಅನುಗ್ರಹಿಸಬೇಕು."

ಗುರುಗಳು ತುಸುಹೊತ್ತು ಆಲೋಚಿಸಿ ಈ ರೀತಿ ಉತ್ತರಿಸಿದರು: "ಶಿಷ್ಯಾ, ಆ ಪಾಪಿಯಾರೇ ಆಗಲಿ, ಅವನಿಗೆ ತಕ್ಕ ಶಿಕ್ಷೆಯಾಗಬೇಕಾದರೆ ಚಿತ್ರವಧೆ ಹೊರತು ಅನ್ಯಮಾರ್ಗವೇ ಇಲ್ಲ. ಆದಕ್ಕಾಗಿ ತನ್ನ ಸುತ್ತಲೂ ಕುತ್ತಿಗೆಯ ತನಕ ಬೆರಣಿ (ಕುರುಳು)ಯ ರಾಶಿಯನ್ನು ನಿರ್ಮಿಸಿಕೊಂಡು ಅದಕ್ಕೆ ಬೆಂಕಿ ಹಚ್ಚಬೇಕು. ನಿಧಾನವಾಗಿ ಉರಿಯುವ ಆ ಬೆಂಕಿಯ ರಾಶಿಯಲ್ಲಿ ಅವನು ಯಾತನೆಯನ್ನನುಭವಿಸುತ್ತಾ ಸಾವನ್ನಪ್ಪಬೇಕು. ಇದೇ ಗುರುವಧೆಗೆ ಮನ ಮಾಡಿದ ಪಾಪಿಗೆ ತಕ್ಕ ಶಿಕ್ಷೆ "

ಗುರುಗಳ ಬಾಯಿಯಿಂದ ಈ ಮಾತುಗಳು ಹೊರಬೀಳುವುದೇ ತಡ, ಸುಕುಮಾರ ಪ್ರಾಯಶ್ಚಿತ್ತ ವಿಧಿಗೆ ಬೇಕಾದ ಸಿದ್ಧತೆ ಮಾಡತೊಡಗಿದ. ತನ್ನ ದೇಹದ ಸುತ್ತಲೂ ಕುತ್ತಿಗೆಯಿಂದ ಮೇಲಿನ ಭಾಗ ಮಾತ್ರ ಹೊರಕ್ಕುಳಿಯುವಂತೆ ಬೆರಣಿ ರಾಶಿಯನ್ನು ಕೂಡಿಕೊಂಡು ಬೆಂಕಿ ತಗಲಿಸಿದ. ಆಮೇಲೆ ನಿರ್ಮಲ ಮನಸ್ಸಿನಿಂದ ಏಕಾಗ್ರಚಿತ್ತನಾಗಿ ಶ್ರೀಹರಿಯನ್ನು ಕೊಂಡಾಡುತ್ತಾ ಅವನ ರಮ್ಯ ಜೀವನದ ಕಥೆಯನ್ನೂ ಸಾಹಸ ಕಾರ್ಯಗಳನ್ನೂ ಅದೆಷ್ಟೋ ಅಲೌಕಿಕ ಘಟನೆಗಳನ್ನೂ ಬಣ್ಣಿಸುತ್ತಾ ಶ್ಲೋಕಗಳನ್ನು ಹೇಳತೊಡಗಿದ. ಹೀಗೆ ಹೇಳಲ್ಪಟ್ಟ ಶ್ಲೋಕಗಳೇ ಶ್ರೀಕೃಷ್ಣವಿಲಾಸಕಾವ್ಯವಾದವು ಆದರೆ ಕಾವ್ಯ ಇನ್ನೂ ಪೂರ್ತಿಯಾಗುವುದಕ್ಕೆ ಮುಂಚೆಯೇ ಬೆಂಕಿ ಧಗಧಗಿಸುತ್ತಾ ತನ್ನ ಕೆನ್ನಾಲಿಗೆಯನ್ನು ಚಾಚಿ, ಸರಸ್ವತೀದೇವಿ ಕುಣಿದಾಡುತ್ತಿದ್ದ ಸುಕುಮಾರ ಕವಿಯ ನಾಲಿಗೆಯನ್ನೇ ಬಲಿ ತೆಗೆದುಕೊಂಡಿತು. ಶ್ರೀಕೃಷ್ಣನ ಅಮರಚರಿತ್ರೆಯನ್ನು ಹೇಳುತ್ತಿದ್ದಂತೆಯೇ ಸುಕುಮಾರ ಕವಿ ಇಹಲೋಕವನ್ನು ತ್ಯಜಿಸಬೇಕಾಯಿತು ಹೀಗೆ ಶ್ರೀಕೃಷ್ಣವಿಲಾಸ ಕಾವ್ಯವು ಅಪೂರ್ಣವೆಂದು ಪರಿಗಣಿಸಲ್ಪಟ್ಟಿದೆ.

ಒಮ್ಮೆ ಕಾಳಿದಾಸ ಮಹಾಕವಿಯು ಅದನ್ನು ಪೂರ್ಣ ಮಾಡುವ ಇಚ್ಛೆಯಿಂದ ಶ್ಲೋಕ ಬರೆಯಲು ಆರಂಭಿಸುತ್ತಿದ್ದಂತೆಯೇ ಈ ರೀತಿ ಅಶರೀರವಾಣಿಯಾಯಿತಂತೆ: "ಕಾಳಿದಾಸಾ, ಪುಟವಿಟ್ಟ ಬಂಗಾರದೊಂದಿಗೆ ಕಬ್ಬಿಣವನ್ನು ಸೇರಿಸುವ ಹವ್ಯಾಸಕ್ಕೆ ಮನ ಮಾಡಬೇಡ. ಸುಕುಮಾರ ಕವಿಯಿಂದ ರಚಿಸಲ್ಪಟ್ಟ ಸುಮಧುರ ಕಾವ್ಯರಸಕ್ಕೆ ಹುಳಿ ಹಿಂಡಬೇಡ." ಈ ಅಶರೀರ ವಾಣಿಯನ್ನು ಕೇಳಿದಾಕ್ಷಣ ಕಾಳಿದಾಸ ಮಹಾಕವಿ ತನ್ನ ಯೋಜನೆಯನ್ನು ಅಲ್ಲಿಗೇ ಕೈಬಿಟ್ಟನಂತೆ. (ಆದರೆ ಕಾಳಿದಾಸನು ಸುಕುಮಾರ ಕವಿಗಿಂತ ಎಷ್ಟೋ ಕಾಲ ಹಿಂದಿನವನೆಂದು ಪರಿಗಣಿಸಲ್ಪಟ್ಟಿರುವುದರಿಂದ ಈ ಘಟನೆ ಐತಿಹಾಸಿಕ ದೃಷ್ಟಿಯಿಂದ ಅಸಂಭಾವ್ಯವೇ ಸರಿ.) ▲




"ಈ ಬೋರ್ಡ್ ಹಾಕಿದ ಮಾರನೇ ದಿನವೇ ನಮ್ಮ ಕ್ಯಾಷಿಯರ್ ಸಾವಿರ ರೂಪಾಯಿ ತೆಗೊಂಡು ಕಂಬಿ ಕಿತ್ತ... ನಮ್ಮ ಲೇಡಿ ಟೈಪಿಸ್ಟ್ ಕ್ಲರ್ಕ್ ಜತೇಲಿ ಓಡಿ ಹೋದಳು... ಇನ್ನೂ ಏನೇನೋ ಆಯ್ತು... ಆಫೀಸ್ ಕೆಲ್ಸ ಒಂದು ಬಿಟ್ಟು..."




# ಕಸ್ತೂರಿ

## ಬಾರ್ ಸೋಪ್ ಬಳಸಿರಿ.

ಆಪ್ಟಿಕಲ್ ಬ್ರೈಟ್‌ನರ್‌ವುಳ್ಳ ಏಕಮಾತ್ರ ಕಸ್ತೂರಿಬಾರ್ ಸೋಪ್ ಬಟ್ಟೆಗಳನ್ನು ಅಧಿಕ ಹೊಳಪು, ಅಧಿಕ ಬಿಳುಪಾಗಿ ಒಗೆಯುತ್ತದೆ ಮತ್ತು ಕಡಿಮೆ ಬೆಲೆಯಲ್ಲಿ ಸಿಗುತ್ತದೆ. ಸುಲಭವಾಗಿ ಸ್ವಚ್ಛವಾಗಿ ಒಗೆಯಲು– ಇಂದೇ ಒಂದು ಬಾರನ್ನು ಕೊಳ್ಳಿರಿ.

**ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್, ಮಂಗಳೂರು–3.**

Pratibha SRO 721 Kan

ಎಸ್. ಕೆ. ಪುತ್ತೂರು

ಈಚೆಗಿನ ವರ್ಷಗಳಲ್ಲಿ ಜಗತ್ತಿನಲ್ಲೆಲ್ಲಾ ಆರೋಗ್ಯ ಚಿಂತಕರನ್ನು ಗಾಬರಿಗೊಳಿಸುತ್ತಿರುವ ವಿಷಯಗಳಲ್ಲಿ ಲೈಂಗಿಕ ರೋಗಗಳ ವೇಗವಾದ ಹಬ್ಬುಗೆ ಒಂದು. ಯಾರೂ ಬಹಿರಂಗವಾಗಿ ಚರ್ಚಿಸಲು ಹಿಂಜರಿಯುವ ಈ ರೋಗಗಳು ಒಂದೆರಡು ದಶಕಗಳ ಹಿಂದೆ ಇನ್ನೇನು ವೈದ್ಯಶಾಸ್ತ್ರದ ಹಿಡಿತಕ್ಕೆ ಸಿಕ್ಕಿ ನಾಮಶೇಷವಾಗಲಿವೆ ಎಂಬ ನಂಬಿಕೆ ಬಂದಿತ್ತು. ಅತಿ ಭಯಂಕರ ಎನಿಸುವ ಲೈಂಗಿಕ ರೋಗಗಳು ಆಧುನಿಕ ರಾಮಬಾಣ ಔಷಧಗಳಿಗೆ ಮಣಿಯುವಂತೆ ಕಂಡಿತ್ತು. ಆದರೆ ಇಂದು ಈ ಆಶೆಗಳೆಲ್ಲ ಮಣ್ಣುಪಾಲಾಗಿವೆ. ಇಂದು ಈ ರೋಗಗಳಿಗೆ ತುತ್ತಾಗುತ್ತಿರುವವರ ಸಂಖ್ಯೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಅನೈತಿಕ ಲೈಂಗಿಕ ಪ್ರವೃತ್ತಿಗಳ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ ತ್ವರಿತ ಗತಿಯಲ್ಲಿ ಹರಡುವ ಭೀಕರ ಅಂಟು ರೋಗಗಳನ್ನು ಲೈಂಗಿಕ ರೋಗಗಳು ಮೇಹರೋಗಗಳು, ಮೈಥುನ ರೋಗಗಳು ಇತ್ಯಾದಿಯಾಗಿ ಕರೆಯಲಾಗುತ್ತದೆ. ಗೊನೋರಿಯಾ (gonorrhoea), ಸಿಫಿಲಿಸ್ (syphilis), ಷಾಂಕ್ರೋಯಿಡ್ (chancroid), ನಾನ್-ಗೋನೋಕಾಕ್ಕಲ್ (non-gonococcal) ಯುರೇತ್ರೈಟಿಸ್, ಟ್ರೈಕೋಮೋನಿಯಾಸಿಸ್ (trichomoniasis), ಲಿಂಫೋಗ್ರ್ಯಾನುಲೋಮಾ ವೆನೀರಿಯಮ್ (lymphogranuloma venereum), ಮತ್ತು ಗ್ರ್ಯಾನುಲೋಮಾ ಇನ್ಗ್ವಿನಲ್ (granuloma inguinale) ಮುಂತಾದ ಹನ್ನೆರಡಕ್ಕಿಂತಲೂ ಹೆಚ್ಚು ಲೈಂಗಿಕ ರೋಗಗಳಿದ್ದರೂ ಅವುಗಳಲ್ಲಿ gonorrhoea (ಪೂಯಮೇಹ), (chancroid) (ಉಪದಂಶ), syphilis (ಫರಂಗಿ ರೋಗ) ಪ್ರಮುಖವಾದವು. ಈ ಲೈಂಗಿಕ ರೋಗಗಳಲ್ಲಿ ಸರ್ವೇಸಾಮಾನ್ಯವಾಗಿರುವ ಗೊನೋರಿಯಾ ಮತ್ತು ಮಾರಣಾಂತಿಕ ಸಿಫಿಲಿಸ್ ಇವೆರಡೂ ಒಂದೇ ರೋಗವೆಂಬ ಅಭಿಪ್ರಾಯವು ಹದಿನೆಂಟನೇ ಶತಮಾನದ ಕೊನೆಯವರೆಗೂ ಜನರಲ್ಲಿ ಇದ್ದುವು. ಆದರೆ ಅವುಗಳಿಗೆ ಕಾರಣವಾದ ರೋಗಾಣುಗಳನ್ನು ಕಂಡು ಹಿಡಿದ ಮೇಲೆ ಈ ಭ್ರಾಂತಿ ದೂರವಾಗಿದೆ.

ಲೈಂಗಿಕ ರೋಗಗಳು ಹೇಗೆ ಹುಟ್ಟಿಕೊಂಡುವು

ಎಂಬುದು ತಿಳಿದುಬಂದಿಲ್ಲವಾದರೂ ಅವು ಮನುಷ್ಯ ಇತಿಹಾಸದಷ್ಟೇ ಹಳೆಯವು. ಅವುಗಳು ಇತಿಹಾಸದಲ್ಲಿ ಆಡಿದ ಪಾತ್ರವೂ ಹಿರಿದು. ಈ ಸಾಂಕ್ರಾಮಿಕ ರೋಗಗಳನ್ನು ಕುರಿತು ಪುರಾತನ ಗ್ರೀಕ್, ಚೀನ, ಈಜಿಪ್ಟ್, ರೋಮ್ ಮುಂತಾದ ನಾಗರಿಕತೆಗಳಲ್ಲೂ ಉಲ್ಲೇಖಗಳು ಕಂಡುಬರುತ್ತವೆ. ಜಗಜ್ಜೇತರಾದ ಸೀಜರ್, ನೆಪೋಲಿಯನ್, ಸೌಂದರ್ಯಮೋಹಿನಿಯಾದ ಕ್ಲಿಯೋಪಾತ್ರ, ಕವಿ ಶ್ರೇಷ್ಠರಾದ ಗೇಥೆ, ಕೀಟ್ಸ್, ಸಾಹಿತಿಗಳಾದ ದೋಸ್ತೋವೆಸ್ಕಿ, ಆಸ್ಕರ್‌ವೈಲ್ಡ್, ಸ್ಕುಬರ್ಟ್, ಕಲಾವಿದ ಮ್ಯಾನೆಟ್, ತತ್ವಜ್ಞಾನಿ ನೀತ್ಸೆ, ರಾಣಿ ಕ್ಯಾಥರೀನ್, ಸರ್ವಾಧಿಕಾರಿ ಹಿಟ್ಲರ್ ಮುಂತಾದ ಚರಿತ್ರೆಯ ಮಹಾಮಹಾ ವ್ಯಕ್ತಿಗಳನ್ನೂ ಅವು ಬಾಧಿಸದೆ ಬಿಟ್ಟಿಲ್ಲ.

ಸ್ತ್ರೀಪುರುಷರ ಮೈಥುನ ಅಥವಾ ಸಂಭೋಗದಿಂದ ಉಂಟಾಗುವ, ಸಂಪರ್ಕ, ಸಂಸರ್ಗದಿಂದ ಬಹುದೂರ ತನಕ, ಬಹು ಹೆಚ್ಚು ಜನರಲ್ಲಿ ಹರಡುವ ಮೇಹರೋಗಗಳ ಹಿಂದೆ ಲೈಂಗಿಕ ಅನಾಚಾರದ ಕಥೆ ಇರುವುದರಿಂದ ಸಾಮಾನ್ಯವಾಗಿ ಅದು ತಗಲಿದ ವ್ಯಕ್ತಿ ವಿಷಯವನ್ನು ಗೋಪ್ಯವಾಗಿಯೇ ಇರಿಸುತ್ತಾನೆ. ಅಲ್ಲದೆ ಅವು ತಗಲಿದ ವ್ಯಕ್ತಿಗೆ ಕೆಲವು ತಿಂಗಳುಗಳ ತನಕ ತಾನು ಗ್ರಸ್ತನಾಗಿದ್ದೇನೆಂಬುದೇ ತಿಳಿದಿರುವುದಿಲ್ಲ! ತಿಳಿದು ಬಂದರೂ ಅವನ್ನು ಕಡೆಗಣಿಸಿ ಪುನಃ ವ್ಯಭಿಚಾರವನ್ನು ಮುಂದುವರಿಸುವುದರಿಂದಲೂ ತಡವಾದ ಚಿಕಿತ್ಸೆಯಿಂದಲೂ ಅದು ಉಲ್ಬಣವಾಗುತ್ತದೆ. ಅನೀತಿಯನ್ನು ಸಹಿಸುವ ಇಂದಿನ ಸಮಾಜದಲ್ಲಿ ರೋಗದ ಹರಡುವಿಕೆ ಅಧಿಕವಾಗಿದೆ. ಸಾಲದ್ದಕ್ಕೆ ಕೆಲವರಲ್ಲಿ ಈ ರೋಗ ಕೇವಲ ಸ್ತ್ರೀಯರಿಂದಲೇ ಉಂಟಾಗುತ್ತದೆಂಬ ತಪ್ಪು ತಿಳುವಳಿಕೆ ಇದೆ. ಆದರೆ ಕೆಲವೆಡೆ ೨೦%ಕ್ಕಿಂತಲೂ ಅಧಿಕ ಜನ ಈ ಜಾಡ್ಯಕ್ಕೊಳಗಾದುದು ಸಲಿಂಗ ಪ್ರವೃತ್ತಿಯಿಂದ ಎಂದು ಗೊತ್ತಾಗಿದೆ.

ಲೈಂಗಿಕ ರೋಗದ ಘೋರ ಪರಿಣಾಮ ಸಾಮಾನ್ಯವಾಗಿ ಪುರುಷರಿಗಿಂತ ಸ್ತ್ರೀಯರಲ್ಲಿ ಅಧಿಕವಾಗಿ ಕಂಡುಬರುತ್ತದೆ. ಗೊನೋರಿಯಾವೇ ಇರಲಿ, ಸಿಫಿಲಿಸ್ಸೇ ಆಗಿರಲಿ, ಲೈಂಗಿಕ ರೋಗಗಳು ತಮ್ಮಷ್ಟಕ್ಕೇನೇ ಉಂಟಾಗಲು ಸಾಧ್ಯವಿಲ್ಲ. ಸಂಪರ್ಕ, ಸಂಸರ್ಗಗಳಿಂದಲೇ ಮನುಷ್ಯರಲ್ಲಿ ಮಾತ್ರ ಅವು ಉಂಟಾಗುತ್ತವೆ; ಹರಡುತ್ತವೆ.

ಅತ್ಯಂತ ಪ್ರಚಲಿತವಾದ ಲೈಂಗಿಕ ರೋಗ ಗೊನೋರಿಯಾ gonococcus ಎಂಬ ಅತಿ ಸೂಕ್ಷ್ಮ ಜೀವಾಣುವಿನ ಸೋಂಕಿನಿಂದ ಉಂಟಾಗುತ್ತದೆ. ಇದು ಮರಣಾಂತಿಕವಲ್ಲದಿದ್ದರೂ ತೀವ್ರ ಹಾನಿಕಾರಕ ಮತ್ತು ಆಯುಷ್ಯ ಹ್ರಾಸಕಾರಕವಾದದ್ದು. ರೋಗದ ಪ್ರಥಮ ಲಕ್ಷಣ ಮೂತ್ರ ದ್ವಾರದಿಂದ ದಪ್ಪ ಹಾಗೂ ನಸು ಹಳದಿ ಬಣ್ಣದ ಕೀವಿನ ಸ್ರಾವದಿಂದ ವ್ಯಕ್ತವಾಗುತ್ತದೆ. ಎರಡರಿಂದ ಐದು ದಿನಗಳಲ್ಲಿ ರೋಗ ಪರಿಪಕ್ವ ಸ್ಥಿತಿಗೇರುವುದು. ರೋಗದ ಹೊರ ಲಕ್ಷಣಗಳು ಸಾಮಾನ್ಯವಾಗಿ ಪುರುಷರಲ್ಲಿ ಕಂಡುಬರುತ್ತವೆಯೇ ಹೊರತು ಸ್ತ್ರೀಯರಲ್ಲಲ್ಲ. ಸ್ತ್ರೀಯರಲ್ಲಿ ಯಾವುದೇ ತರದ ರೋಗದ ಬಾಹ್ಯ ಲಕ್ಷಣಗಳು ಕಂಡುಬಾರದೇನೇ ರೋಗ ಬೆಳೆಯುವ ಅವಕಾಶವಿದೆಯಾದ್ದರಿಂದ, ಸರಿಯಾದ ಚಿಕಿತ್ಸೆಯಾಗದಿದ್ದಲ್ಲಿ ಸಂದುಗಳಲ್ಲಿ ನೋವು, ಕಣ್ಣು ರೋಗ, ಬಂಜೆತನ, ಬಾವು, ಹೃದ್ರೋಗ ಮೊದಲಾದವುಗಳಲ್ಲಿ ಪರಿಣಮಿಸಬಹುದು. ಕೆಲ ವೇಳೆ ಮಕ್ಕಳಿಗೆ ಕುರುಡುತನವುಂಟಾಗಲು, ಸ್ತ್ರೀಯರಿಗೆ ಮಕ್ಕಳಾಗದಿರಲು ಗೊನೋರಿಯಾ ಕಾರಣವಾಗಬಹುದು. ಪ್ರಾಯಪ್ರಬುದ್ಧರಲ್ಲಿ ಗೊನೋರಿಯಾ ಸಂಭೋಗ ಕ್ರಿಯೆಯಿಂದ ಉಂಟಾಗುವುದೇ ಹೆಚ್ಚು. ಆದರೂ ಹೆಣ್ಣುಮಕ್ಕಳಿಗೆ ತಾಯಿ ಇಲ್ಲವೆ ದಾದಿಯರ ಮೂಲಕ ಅದು ಸೋಂಕುವ ಸಾಧ್ಯತೆ ಇದೆ. ಸೂಕ್ಷ್ಮದರ್ಶಕದಲ್ಲಿ ಸ್ರಾವವನ್ನು ಪರೀಕ್ಷಿಸಿದರೆ ಗೊನೋರಿಯಾದ ಲಕ್ಷಣಗಳನ್ನು ಕಂಡುಹಿಡಿಯಬಹುದು. ಇಂದು ಸೇಕಡಾ ೯೦ ರಷ್ಟು ಗೊನೋರಿಯಾ ಪ್ರಕರಣಗಳು ಪ್ರಬಲ ಪೆನಿಸಿಲಿನ್ ಚುಚ್ಚುಮದ್ದಿನಿಂದ ನಿವಾರಿಸಲ್ಪಡಬಲ್ಲವು.

ಅತ್ಯಂತ ವಿನಾಶಕಾರಿ ಹಾಗೂ ಪ್ರಾಣಘಾತಕ

ಲೈಂಗಿಕರೋಗ ಸಿಫಿಲಿಸ್. ಸ್ಪೈರೋಕೀಟ್ ಎಂಬ ಅತಿ ಸೂಕ್ಷ್ಮಾಣು ಚರ್ಮದ ಮೂಲಕ ಶರೀರವನ್ನು ಪ್ರವೇಶಿಸುವುದರಿಂದ ಅದು ಉಂಟಾಗುತ್ತದೆ. ಪ್ರಬಲ ಸೂಕ್ಷ್ಮದರ್ಶಕದಲ್ಲಿ ಮಾತ್ರ ಗೋಚರವಾಗಬಲ್ಲ ಸೂಕ್ಷ್ಮಾಣು ಅದು. ರೋಗಾಣುಗಳು ರೋಗಿ ಉಪಯೋಗಿಸಿದ ಸಾಬೂನು, ನೀರು ಹಾಗೂ ಸೌಮ್ಯ ಆ್ಯಂಟಿ ಸೆಪ್ಟಿಕ್ ಮುಂತಾದುವುಗಳಲ್ಲಿ ಸೇರಿಕೊಳ್ಳುವ ಸಾಧ್ಯತೆಯಿರುವುದರಿಂದ ಸಿಫಿಲಿಸ್ ಕೇವಲ ಅದಕ್ಕೆ ತುತ್ತಾದವನ ನೇರ ಸಂಪರ್ಕದಿಂದ ಇಲ್ಲವೆ ಸಂಭೋಗದಿಂದ ಮಾತ್ರ ಪಸರಿಸುವುದಲ್ಲ. ಚುಂಬನ ಮುಂತಾದ ಬಾಹ್ಯ ಕೇಳಿಗಳಿಂದಲೂ ಅದು ಹರಡುವ ಸಾಧ್ಯತೆ ಇದೆ. ಒಂಭತ್ತರಿಂದ ೯೦ ದಿನಗಳ ಅವಧಿಯಲ್ಲಿ ರೋಗಲಕ್ಷಣಗಳು ಅದು ಸೋಂಕಿದ ವ್ಯಕ್ತಿಯಲ್ಲಿ ಪ್ರಕಟವಾಗುತ್ತವೆ. ಪ್ರಥಮವಾಗಿ ಬಾಯಿ, ಗುದದ್ವಾರ ಇಲ್ಲವೆ ಮರ್ಮಸ್ಥಾನಗಳಲ್ಲಿ ಇದಕ್ಕೆ ಸಂಬಂಧಿಸಿದ 'Chancre' ಎನ್ನುವ ಕುರು ಇಲ್ಲವೆ ಹುಣ್ಣು ಕಂಡುಬರುವುದು. (ರೋಗಾಣುಗಳು ದೇಹಾದ್ಯಂತ ಲಕ್ಷೋಪಲಕ್ಷವಾಗಿ ವೃದ್ಧಿಹೊಂದಿ ಸೂಕ್ಷ್ಮ ರಕ್ತನಾಳಗಳಲ್ಲೂ ತುಂಬಿಕೊಳ್ಳುವುದರಿಂದ ಚರ್ಮ ತುರಿಕೆ, ಸಂದು ನೋವು, ಕುರುಡುತನ, ಬೀಗುವಿಕೆ, ಕಿವುಡುತನ, ಪಕ್ಷವಾತ, ಹೃದ್ರೋಗ, ಬುದ್ಧಿಭ್ರಮಣೆ ಹಾಗೂ ಅಕಾಲ ಮೃತ್ಯು ಮುಂತಾದ ಭೀಕರ ಪರಿಣಾಮಗಳನ್ನುಂಟುಮಾಡಬಲ್ಲವು. ವರ್ಷಂಪ್ರತಿ ಸಿಫಿಲಿಸ್ ರೋಗದಿಂದ ಐದು ಕೋಟಿಗಿಂತಲೂ ಅಧಿಕ ಜನರು ಬುದ್ಧಿಭ್ರಮಣೆಗೊಳಗಾಗುತ್ತಿದ್ದಾರೆ, ಅವಕ್ಕಿಂತಲೂ ಹೆಚ್ಚು ಜನರು ಕುರುಡರಾಗುತ್ತಿದ್ದಾರೆ. ಬಗೆಬಗೆಯ ಸಿಫಿಲಿಸ್ ರೋಗಗಳಿಂದಲೇ ೧೯೦೦ ರಿಂದೀಚೆಗೆ ೧೦ ಕೋಟಿಗಿಂತ ಹೆಚ್ಚು ಜನರು ಪ್ರಾಣ ಕಳೆದುಕೊಂಡಿರಬಹುದು! ೧೯೪೩ರ ನಂತರವೇ ಈ ರೋಗಕ್ಕೆ ಚುಚ್ಚುಮದ್ದು ಕಂಡುಹಿಡಿಯಲ್ಪಟ್ಟದ್ದು. ರೋಗದ ಪ್ರಾಥಮಿಕ ಹಂತದಲ್ಲಿಯೇ ಸರಿಯಾದ ಚಿಕಿತ್ಸೆಯನ್ನು ಹೊಂದಿದಲ್ಲಿ ಇಂದು ಈ ರೋಗ ಪೂರ್ಣ ಗುಣ ಹೊಂದುತ್ತದೆ. ಕ್ರಮಾಗತ ಪರೀಕ್ಷೆಗಳಿಂದ ರೋಗದ ಬಾಧೆ ಇದೆಯೋ ಇಲ್ಲವೋ ಎಂಬುದನ್ನು ತಿಳಿಯಬಹುದು.

ಟ್ರೈಕೋಮೋನಿಯಾಸಿಸ್ ವೆಜಿನಿಟಿಕ್ಸ್ (trichomoniasis vaginitics) ಎಂಬುದು ಸ್ತ್ರೀಯರಲ್ಲಿ ಅತಿ ಸಾಮಾನ್ಯವಾಗಿ ಬರುವ ಲೈಂಗಿಕ ರೋಗ. ಅದು ಬಾಧಿಸುವ ವ್ಯಕ್ತಿಯ ಯೋನಿನಾಳದೊಳಗೆ ಹಾಗೂ ಸುತ್ತಲೂ ತುರಿಕೆ ಮತ್ತು ಉರಿ ಹಾಗೂ ನಸು ಹಳದಿ ಸ್ರಾವವೂ ಉಂಟಾಗುತ್ತದೆ. ಸಂಭೋಗ ಕ್ರಿಯೆಗಳಿಲ್ಲದೆಯೇ ಇದು ಹುಟ್ಟಿಕೊಳ್ಳಲು ಸಾಧ್ಯತೆಯಿಲ್ಲದಿಲ್ಲ. ಆದರೆ ಅದರ ಹರಡುವಿಕೆ ಲೈಂಗಿಕ ಸಂಪರ್ಕದಿಂದಲೇ. ಪರಿಣಾಮಕಾರಿ ಪ್ರತೀಕಾರೋಪಾಯಗಳಿದ್ದರೂ ಪತಿ ಪತ್ನಿಯರಿಬ್ಬರೂ ಚಿಕಿತ್ಸೆ ಮಾಡಿಸಿಕೊಳ್ಳಬೇಕಾಗುತ್ತದೆ. chanc-




"ನಿಮ್ಮ ಆಫೀಸ್‌ನಲ್ಲಿ ಏನಾದರೂ ಕೆಲಸವಿದ್ದರೆ ಹೇಳಿ ಸಾರ್..."

"ನಮ್ಮ ಆಫೀಸ್‌ನಲ್ಲಿ ಬೇಕಾದಷ್ಟು ಕೆಲಸವಿದೆ. ಅದನ್ನೆಲ್ಲಾ ನಿಮ್ಮಂದೆ ಎನ್ರೀ ಹೇಳೋದು...?"

roid ರೋಗ ನಗರಗಳಲ್ಲಿನ ಹೆಚ್ಚು ಸಂಕೀರ್ಣ ಲೈಂಗಿಕ ಪ್ರವೃತ್ತಿಯಲ್ಲಿ ನಿರತರಾದ ಜನರಲ್ಲಿ ಕಂಡುಬರುತ್ತದೆ. ಇನ್ನೊಂದು ಲೈಂಗಿಕ ರೋಗ ವಾದ lymphogranuloma venereum ಕೂಡ ಅತಿ ಮಾರಕವಲ್ಲದಿದ್ದರೂ ಕಡೆಗಣಿಸುವಂತಹದಲ್ಲ. ಅದು ತಾಗಿದ ೫–೨೧ ದಿನಗಳೊಳಗೆ ಜನನೇಂದ್ರಿಯಗಳ ಮೇಲೆ ನೋವಿಲ್ಲದ ಚಿಕ್ಕ ಬೊಕ್ಕೆಗಳು ಎದ್ದು ಕಾಣುತ್ತವೆ.

ರೋಗಗ್ರಸ್ತರಿಗೆ ಮಾತ್ರವಲ್ಲದೆ ಅವರ ಮಕ್ಕಳಿಗೂ ಅಪಾಯಕಾರಿಗಳಾದ ಲೈಂಗಿಕ ರೋಗಗಳ ಕ್ಷಿಪ್ರ ಬೆಳವಣಿಗೆಗೆ ಆಧುನಿಕ ಜನಜೀವನದ ವಿಕೃತ ರೀತಿ ನೀತಿಗಳೂ ಹವ್ಯಾಸಗಳೂ ಪೂರಕವಾಗಿವೆ. ಅನೀತಿಯನ್ನು ಅನುಮೋದಿಸುವ ಇಂದಿನ ಸಮಾಜದಲ್ಲಿ ಅತಿಯಾದ ಲೈಂಗಿಕ ಸ್ವೇಚ್ಛಾಚಾರಗಳಿಂದ ಅದಕ್ಕೆ ಪುಟ ದೊರೆಯುತ್ತಿದೆ. ಕಿರಿಯರಲ್ಲಿ ಲೈಂಗಿಕತೆಯ ವಿಚಾರವಾಗಿ ಸರಿಯಾದ ತಿಳುವಳಿಕೆ ಇಲ್ಲದಿರುವುದೂ ಹೆತ್ತವರ ಹಿಡಿತ ತಪ್ಪಿ ಇಂದಿನ ಮಕ್ಕಳು ಅಶ್ಲೀಲ ಸಾಹಿತ್ಯ, ಕಾಮ ಸಂಬಂಧ ವಿಷಯಗಳಲ್ಲಿ ಹೆಚ್ಚೆಚ್ಚು ಆಸಕ್ತರಾಗುತ್ತಿರುವುದೂ ಜನರಲ್ಲಿನ ಅಜ್ಞಾನ, ಸ್ಥಳ ಬದಲಾವಣೆ, ಸಂಸಾರ ಜೀವನದ ಅಸಾರತೆ, ಮಾನಸಿಕ ಆಂದೋಲನ ಇವುಗಳೂ ಮನುಷ್ಯನನ್ನು ಹೆಚ್ಚು ಹೆಚ್ಚಾಗಿ ಅನೈತಿಕ ಲೈಂಗಿಕ ಪ್ರವೃತ್ತಿಗಳಲ್ಲಿ ನಿರತನನ್ನಾಗಿಸುತ್ತಿವೆ. ಗರ್ಭನಿರೋಧಕ ಸಲಕರಣೆಗಳೂ ಇತರ ಗುಳಿಗೆಗಳೂ ಇಂದು ಗರ್ಭಧಾರಣೆಯ ಹೆದರಿಕೆಯನ್ನು ದೂರ ಮಾಡಿರುವುದರಿಂದ ಲೈಂಗಿಕ ಪ್ರವೃತ್ತಿ ಒಂದು ಮನೋರಂಜನೆಯ ರೀತಿಯಲ್ಲಿ ಪ್ರಚಲಿತವಾಗಲೂ ಸಾಧ್ಯವಾಗಿದೆ.

ಇಂದು ಪ್ರಪಂಚದಾದ್ಯಂತ ಲೈಂಗಿಕ ರೋಗಗಳ ವಿಸ್ತರಣೆ ಹೊಸತೊಂದು ಸಮಸ್ಯೆಯಾಗಿದೆ. ಈ ರೋಗದಿಂದ ಬಳಲುವವರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ೧೫ರಿಂದ ೨೫ರ ಹರೆಯದೊಳಗಿನ ತರುಣ ಜನಾಂಗ. ನಗರಗಳಲ್ಲಿ ಪ್ರತಿ ಹತ್ತು ಮಂದಿಯಲ್ಲಿ ಒಬ್ಬರು ಈ ರೋಗ ಸೋಂಕಿಸವರೆಂದು ಶಂಕಿಸಬಹುದಾಗಿದ್ದರೆ ಅಮೇರಿಕೆಯಲ್ಲಿ ಪ್ರತಿ ಹದಿನಾರು ಸೆಕೆಂಡಿಗೆ ಓರ್ವ ತರುಣ ಇಲ್ಲವೆ ತರುಣಿ ಅದರ ಸೋಂಕಿಗೆ ಬಲಿಯಾಗುತ್ತಿದ್ದಾರೆ.

ತರುಣ ಜನಾಂಗ ಕ್ಷಣಿಕ ಸುಖಲೋಲುಪತೆಯಿಂದ ಜೀವಮಾನವಿಡೀ ಬೇಯುವುದಕ್ಕೆ ಸ್ವೇಚ್ಛಾಕಾಮವೇ ಕಾರಣ. ಅನೈತಿಕ ಸಂಪರ್ಕದಿಂದ ದೂರವಿರುವ ದಂಪತಿಗಳಿಗೆ ಈ ರೋಗದ ಯಾವ ಭಯವೂ ಇಲ್ಲ. ಆದುದರಿಂದಲೇ ಡಾಕ್ಟರ್ ಕ್ಲಾಡ್ ಸ್ಕಾಟ್ ನಿಕೋಲ್ ಎಂಬ ಪ್ರಮುಖ ಬ್ರಿಟಿಷ್ ಲೈಂಗಿಕರೋಗ ತಜ್ಞರು ಹೇಳುವಂತೆ, "ಒಂದೇ ಹೆಣ್ಣಿನೊಡನೆ ಕಾಮಸಂಬಂಧವಿಡುವ ವಿಷಯ ಬೇರೆ; ಆದರೆ ಕಾಮಕೇಳಿಯಲ್ಲಿ (ಬೇರೆ ಬೇರೆ ಜನರೊಡನೆ) ಪ್ರಯೋಗ ಮಾಡುವವರು ಬದುಕನ್ನು ದುರ್ಭರವಾಗಿ ಮಾಡುತ್ತಾರೆ."

ಕಡುಬಡತನ ಕೆಲವು ಸ್ತ್ರೀಯರನ್ನು ವೇಶ್ಯಾಜೀವನಕ್ಕೆ ತಳ್ಳುತ್ತದೆ. ಜೀವನ ನಿರ್ವಹಣೆಗಾಗಿ ಅನೈತಿಕ ಸಂಬಂಧವಿರಿಸಿಕೊಂಡ ಓರ್ವಳಿಂದ ಆಕೆ ಈ ರೋಗವನ್ನು ಅಂಟಿಸಿಕೊಂಡಲ್ಲಿ ಮುಂದೆ ಸಾವಿರಾರು ಮಂದಿಯಲ್ಲಿ ಆ ರೋಗವನ್ನು ಹರಡುವ ಮಾಧ್ಯಮವಾಗಿ ಪರಿಣಮಿಸುತ್ತಾಳೆ. ಆದರಿಂದು ಲೈಂಗಿಕ ರೋಗಗಳು ಪಸರಿಸುವುದು ವೇಶ್ಯೆಯರಿಂದ ಮಾತ್ರವಲ್ಲ. ಲೈಂಗಿಕ ಮತ್ತು ಇತರ ಸಂಭೋಗ ಮೂಲಕ ಹಬ್ಬುವ ರೋಗಗಳಿಗೂ ದಾರಿದ್ರ್ಯ, ಕೊಳೆ, ಸ್ವಚ್ಛತಾವ್ಯವಸ್ಥೆಯ ಅಭಾವ, ಶಾರೀರಿಕ ಸ್ವಚ್ಛತೆ ಇಲ್ಲದಿರುವುದೇ ಮೊದಲಾದವುಗಳಿಗೂ ಏನೂ ಸಂಬಂಧವಿಲ್ಲ. ಅವು ತಂತಾನೆ ಹುಟ್ಟುವ ರೋಗಗಳಲ್ಲ. ಹೊಲೆಗೇರಿಗಳಲ್ಲಿ ಕೂಡ ಅವು ತಾವಾಗಿ ತಲೆದೋರುವುದಿಲ್ಲ. ಸ್ವಚ್ಛವಾಗಿರುವ ಮೇಲ್ವರ್ಗದ ಕುಟುಂಬಗಳಲ್ಲಿರುವ ತರುಣಿಯರು ಕೂಡ ಈ ರೋಗದಿಂದ ಬಳಲುತ್ತಿರುವುದು ವಿಚಿತ್ರಪಟ್ಟಿದೆ.

ವಿಶ್ವದಾದ್ಯಂತ ವ್ಯಾಪಿಸಿದ ಲೈಂಗಿಕ ರೋಗ-

ಗಳು ಭಾರತದಲ್ಲೂ ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಪ್ರಚಲಿತವಾಗಿವೆ. ಈ ದೇಶದಲ್ಲಿ ಎರಡು ಕೋಟಿಗಿಂತಲೂ ಅಧಿಕ ಜನರು ಈ ರೋಗಗಳ ಬಾಧೆಗೊಳಗಾದವರಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಡಾಕ್ಟರ್ ಟಿ. ಗುಥೆಯವರ ಪ್ರಕಾರ ಮುಂಬಯಿ ವಿಶ್ವದ ಲೈಂಗಿಕ ರೋಗಬಾಧಿತ ಪ್ರಮುಖ ಹತ್ತು ಮಹಾನಗರಗಳಲ್ಲಿ ಒಂದು. ಪುರಾತನ ಕಾಲದಿಂದಲೇ ಭಾರತೀಯರಿಗೆ ಈ ರೋಗದ ಅರಿವು ಇತ್ತು. ಭಾರತೀಯ ಆಯುರ್ವೇದ ಶಾಸ್ತ್ರವು ಲೈಂಗಿಕ ರೋಗ ಚಿಕಿತ್ಸಾಕ್ರಮವನ್ನು ಹೇಳುತ್ತದೆ. ಆದರೆ ಸಿಫಿಲಿಸ್ ಅಥವಾ ಫರಂಗಿ ರೋಗ ಮಾತ್ರ ಹದಿನಾರನೇ ಶತಮಾನದಲ್ಲಿ ನಮ್ಮ ದೇಶಕ್ಕೆ ವ್ಯಾಪಾರಕ್ಕೆ ಬಂದ ಪೋರ್ಚುಗೀಸರಿಂದ ಬಂದುದಾಗಿದೆ. ಲೈಂಗಿಕ ರೋಗಗಳ ನಿಗ್ರಹಕ್ಕಾಗಿ ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೂ ಕೇಂದ್ರಾಡಳಿತ ಪ್ರದೇಶಗಳಿಗೂ ಸವಲತ್ತುಗಳನ್ನು ಒದಗಿಸುತ್ತಿದೆ. ಆದರೆ ಈಗ ಇರುವ ೩೦೦ ಚಿಕಿತ್ಸಾಲಯಗಳು ಭರದಿಂದ ವ್ಯಾಪಿಸುತ್ತಿರುವ ಈ ರೋಗಗಳನ್ನು ಹತೋಟಿಯಲ್ಲಿರಿಸಲು ಏನೇನೂ ಸಾಲವು. ಅವರ ಅಧ್ಯಯನಕ್ಕೂ ಬೇಕಾದ ಸವಲತ್ತುಗಳು ಕಂಡುಬರುವುದಿಲ್ಲ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬೇಕಾದ ಎಲ್ಲಾ ಚಿಕಿತ್ಸಾಸವಲತ್ತುಗಳಿದ್ದರೂ ಬೃಹತ್ ಪ್ರಮಾಣದಲ್ಲಿ ಅದರ ಏರಿಕೆ ಕಂಡುಬರುತ್ತದೆ.

ಒಂದೇ ಇಂಜಕ್ಷನ್ನಿನಿಂದ ಈ ರೋಗಜಂತುಗಳನ್ನು ಕೊಲ್ಲಬಲ್ಲ ಪ್ರಬಲ ಔಷಧಗಳು ಅನೇಕವಿದ್ದರೂ ಪ್ರಾರಂಭದ ಕೆಲ ಕಾಲ ಇಳಿಮುಖವಾದ ಲೈಂಗಿಕ ರೋಗಗಳು ಜಗತ್ತಿನ ಅನೇಕ ಕಡೆ ಗಾಬರಿಗೊಳಿಸುವಷ್ಟು ವೇಗವಾಗಿ ಈಚೆಗೆ ಹಬ್ಬುತ್ತಿವೆ.

"ಇಂದು ಪ್ರಪಂಚದಾದ್ಯಂತ ಸುಮಾರು ೨೦ ಕೋಟಿಗಿಂತಲೂ ಅಧಿಕ ಜನರು ಲೈಂಗಿಕ ರೋಗಗಳ ಬಾಧೆಗೊಳಗಾಗಿದ್ದಾರೆ. "ಸುಮಾರು ೩ರಿಂದ ೫ ಕೋಟಿ ಸಿಫಿಲಿಸ್ ಪ್ರಕರಣಗಳಿಂದಲೂ ೧೫ ಕೋಟಿ ಗೊನೆರಿಯಾ ಪ್ರಕರಣಗಳಿಂದಲೂ ಇಂದು ಲೈಂಗಿಕ ರೋಗಗಳು ಹತೋಟಿ ಮೀರಿದ ಉಲ್ಬಣಾವಸ್ಥೆಗೇರಿದುದನ್ನು ಕಾಣಬಹುದು" ಎಂದು ವಿಶ್ವ ಆರೋಗ್ಯ ಸಂಸ್ಥೆಯ ವರದಿಯೊಂದು ಎನ್ನುತ್ತದೆ. ವಲಸೆಗಾರರು, ನಾವಿಕರು ಹಾಗೂ ಪ್ರವಾಸಿಕರಿಂದ ಈ ರೋಗ ಒಂದೆಡೆಯಿಂದ ಇನ್ನೊಂದೆಡೆಗೆ ಹರಡುವ ಕಾರ್ಯ ನಡೆದೇ ಇದೆ. ಹೀಗೆ ಕೋಟ್ಯಂತರ ಜನರ ಜೀವನಕ್ಕೆ ಮಾರಕವಾಗಿ ಪರಿಣಮಿಸುವ ಈ ಮೌನ ಸಾಂಕ್ರಾಮಿಕ ರೋಗದ ಬಗ್ಗೆ ಎಚ್ಚತ್ತು ಅದರ ಸೋಂಕಿನಿಂದ ಮುಕ್ತರಾಗಲು ಹವಣಿಸದಿದ್ದಲ್ಲಿ ಮುಂದೊಂದು ದಿನ ಈ ರೋಗದ ವಿಪತ್ತಿಗೆ ಎದುರೇ ಇಲ್ಲದಂತಾದಲ್ಲಿ ಆಶ್ಚರ್ಯವಿಲ್ಲ.

ನೈತಿಕ ಅಧಃಪತನವು ಹೆಚ್ಚಾಗಿರುವುದರಿಂದಲೇ ಲೈಂಗಿಕ ರೋಗಗಳು ಅತಿಯಾಗಿ ಬೆಳೆಯುತ್ತಿವೆ ಎಂಬುದು ಸರ್ವರ ಏಕಾಭಿಪ್ರಾಯ. ಈ ಘಾತಕ ಸಮಸ್ಯೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ವೈದ್ಯಕೀಯ ತಜ್ಞರೊಬ್ಬರು, "ಲೈಂಗಿಕ ರೋಗಿಗೆ ಆಮೂಲಾಗ್ರವಾಗಿ ನೈತಿಕ ಪುನರ್ ಶಿಕ್ಷಣವೀಯುವುದು ಅಗತ್ಯವಾಗಿದೆ" ಎಂದು ವೈದ್ಯಕೀಯ ಪತ್ರಿಕೆಯೊಂದರಲ್ಲಿ ಅರುಹಿದ್ದಾರೆ. ನೈತಿಕಪ್ರಜ್ಞೆ ಬೆಳೆದು ಅನೈತಿಕ ಲೈಂಗಿಕ ಪ್ರವೃತ್ತಿ ಹಾಗೂ ಇನ್ನಿತರ ಫ್ಯಾಶನೇಬಲ್ ಮನೋವೃತ್ತಿ ಬದಲಾಗಿ, ಅವುಗಳಿಂದಾಗುವ ವಿಪತ್ತಿನ ಕಡೆಗೆ ಆಧುನಿಕತೆಯ ಬಿರುಗಾಳಿಗೆ ಕೊಚ್ಚಿ ಹೋಗುವ ಯುವಜನಾಂಗದ ಕಣ್ಣು ಹೊರಳಿದ ದಿನಕ್ಕೆ ಈ ರೋಗದ ವ್ಯಾಪಕತೆ ತಗ್ಗಬಹುದೇನೋ. ▲



# ಹೆಚ್ಚು ಮಕ್ಕಳೆಂದರೆ, ಮುಂದೆ ಹೆಚ್ಚು ಆದಾಯ ಬರುವುದೆ?

ಪ್ರತಿಯೊಂದು ಮಗುವು ತನ್ನ ಹುಟ್ಟಿನೊಡನೆ ಒಂದು ಜೊತೆ ದುಡಿಯುವ ಕೈಗಳನ್ನೂ ತರುವುದು, ಎಂದು ಆಗಾಗ ಹೇಳುವುದುಂಟು.

ಆದರೆ ನೆನಪಿಡಿ — ಮನುಷ್ಯ ತನ್ನ ಜೀವಮಾನದುದ್ದಕ್ಕೂ ತಿನ್ನುತ್ತಾನೆ. ಆದರೆ ತನ್ನ ಜೀವನದ ನಿರ್ದಿಷ್ಟ ವರ್ಷಗಳಲ್ಲಿ ಮಾತ್ರ ದುಡಿಯುತ್ತಾನೆ, ಗಳಿಸುತ್ತಾನೆ.

ಆಧುನಿಕ ವಿಧಾನಗಳಿಂದ ನೀವು ಹೆಚ್ಚು ಬೆಳೆಯಬಲ್ಲಿರಿ, ನಿಜ. ಆದರೆ ಈ ವಿಧಾನಗಳನ್ನು ಬಳಸಲು ಹೆಚ್ಚಿನ ಕೌಶಲ್ಯ, ಶಿಕ್ಷಣ ಬೇಕು. ಕಾಲಕ್ರಮದಲ್ಲಿ, ಸುಶಿಕ್ಷಿತ ಮನುಷ್ಯನ ಜೀವನ ಹೆಚ್ಚು ಯಶಸ್ವಿ ಜೀವನವಾಗುವದು.

ನಿಮ್ಮ ಮಕ್ಕಳ ಸಂಖ್ಯೆ ದೊಡ್ಡದಾಗಿದ್ದರೆ, ಅವರೆಲ್ಲರಿಗೆ ಉತ್ತಮ ರೀತಿಯಿಂದ ಶಿಕ್ಷಣ ನೀಡಲು, ಹಾಗು ಉಣ್ಣಲು ಕೊಡಲು ಸಹ, ನಿಮಗೆ ಕಷ್ಟವಾಗುವುದು.

ಶಿಕ್ಷಣಸಿಗದ, ಆರೋಗ್ಯವಿರದ ಹಿಂಡು ಮಕ್ಕಳಿಗಿಂತ, ಪರಿಮಿತ ಸಂಖ್ಯೆಯ, ಶಿಕ್ಷಿತ ಹಾಗು ಆರೋಗ್ಯ ಸಂಪನ್ನ ಮಕ್ಕಳು ಹೆಚ್ಚು ಗಳಿಸಲು ಸಮರ್ಥರಾಗುವರು.

davp 72/382

# ಇದುವೇ ಜೀವ ಇದು ಜೀವನ

ಈ ವರ್ಷದ ದೀಪಾವಳಿಯ ಪಾಡ್ಯದ ದಿನ ಸಾಯಂಕಾಲ ಮನೆಯವರೊಂದಿಗೆ ನಗರದಲ್ಲಿಯ ಪೂಜಾಸಮಾರಂಭಗಳನ್ನು ನೋಡಲೆಂದು ಹೊರಟಿದ್ದೆ. ನಗರ ಸಭೆಯ ಕಚೇರಿಯ ಎದುರು ಬಂದಾಗ, ನಗರದಲ್ಲಿಯ ಗೌಳಿಗರು ತಮ್ಮ ಎಮ್ಮೆಗಳ ದೊಡ್ಡ ಮೆರವಣಿಗೆಯನ್ನು ತೆಗೆದಿದ್ದುದನ್ನು ನೋಡಿದೆವು. ಮೈಯನ್ನೆಲ್ಲ ಚೆನ್ನಾಗಿ ಜೋಳಿಸಿಕೊಂಡು ಕೊಂಬುಗಳಿಗೆ ಬಣ್ಣ ಬಳಿದುಕೊಂಡು ಎಮ್ಮೆಗಳು ಓಡುತ್ತ ನಡೆದಿದ್ದವು. ಈ ಸಮೂಹದ ಮುಂದುಗಡೆ ತಿಂದು ಕೊಬ್ಬಿದ ದೈತ್ಯ ಕೋಣ ನೆಗೆಯುತ್ತ ಕೆನೆಯುತ್ತ ನಡೆದಿದ್ದಿತು.

ರಾತ್ರಿ ಮನೆಗೆ ವಾಪಸಾದಾಗ ನನ್ನ ಇಬ್ಬರು ಮಕ್ಕಳು ತಾವು ಕಂಡ ಈ ಎಮ್ಮೆಗಳ ಮೆರವಣಿಗೆಯನ್ನು ತಮ್ಮದೇ ಬಾಲಭಾಷೆಯಲ್ಲಿ ತಮ್ಮ ತಾಯಿಗೆ ವರ್ಣಿಸಿ ಹೇಳತೊಡಗಿದರು. ಹತ್ತು ವರ್ಷದ ದೊಡ್ಡ ಮಗ ರಾಜು, ತಾನು ನೋಡಿದ ಕೋಣವನ್ನು ಎಮ್ಮೆಗಳ ವರ್ಗದ "ಮಾನಿಟರ್" ಎಂದು ಬಣ್ಣಿಸಿದ. ಅವನು ೫ ನೇ ಕ್ಲಾಸಿನಲ್ಲಿ ಓದುತ್ತಿದ್ದಾನೆ ತನ್ನ ಕ್ಲಾಸಿನ "ಮಾನಿಟರ" ಉಳಿದ ವಿದ್ಯಾರ್ಥಿಗಳನ್ನು ಪ್ರಾರ್ಥನಾಸ್ಥಳಕ್ಕೆ ಕರೆದೊಯ್ಯುವುದನ್ನು ನೆನೆಸಿಕೊಂಡು ಆತ ಹಾಗೆ ಹೇಳಿರಬೇಕೆಂದು ನಾನು ಊಹಿಸಿದೆ.

ಚಿಕ್ಕ ಮಗ ನಿರಂಜನ ಇನ್ನೂ ನರ್ಸರಿ ಕ್ಲಾಸಿನಲ್ಲಿ ಓದುತ್ತಿದ್ದಾನೆ. ತನ್ನ ಅಣ್ಣ ಕೋಣವನ್ನು "ಮಾನಿಟರ್"ನಿಗೆ ಹೋಲಿಸಿ ಹೇಳಿದ ನಂತರ, ಬಹುಶಃ ತಾನೂ ಆ ಕೋಣದ ಬಗ್ಗೆ ಏನಾದರೊಂದು ಹೇಳಲೇಬೇಕೆಂದು ಆತನಿಗೆ ಅನಿಸಿರಲಿಕ್ಕೆ ಸಾಕು. ಒಂದೆರಡು ನಿಮಿಷಗಳ ನಂತರ ಆತ ಇದ್ದಕ್ಕಿದ್ದಂತೆ, "ಅಮ್ಮಾ, ಅವನು ಆ ಕೋಣ ಮಾನಿಟರ್ ಏನೂ ಅಲ್ಲ. ಅದು ಮುಂಖ್ಯ ಮಂತ್ರಿ", ಎಂದು ಉದ್ಗಾರ ತೆಗೆದ. (ಮುಖ್ಯ ಮಂತ್ರಿಯನ್ನು ಆತ ಮುಂಖ್ಯ ಮಂತ್ರಿ ಎಂದು ಉಚ್ಚರಿಸುತ್ತಾನೆ.)

ಕೋಣವೊಂದನ್ನು ಮುಖ್ಯ ಮಂತ್ರಿಗೆ ಹೋಲಿಸಿದ ಐದು ವರ್ಷದ ನನ್ನ ಮಗನ ಬಾಲಬುದ್ಧಿಗೆ ನಾನೇ ಆಶ್ಚರ್ಯಪಡುವಂತಾಯಿತು. ಈಗಿನ ಬಾಲಕರ ಬುದ್ಧಿ ನಿಜವಾಗಿಯೂ ಪ್ರಚಂಡ ಎಂಬ ಸತ್ಯ ಮನವರಿಕೆಯಾಯಿತು. —ಜಯದೇವ ಪುರಾಣಿಕ

ಆಗ ನಾನು ಕರ್ನಾಟಕ ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನದ ವಿದ್ಯಾರ್ಥಿಯಾಗಿದ್ದೆ. ಶೈಕ್ಷಣಿಕ ಪ್ರವಾಸಕ್ಕಾಗಿ ನಾವು ಮುಂಬಯಿ, ಅಹಮದಾಬಾದ, ಆಗ್ರಾ ಹಾಗೂ ದಿಲ್ಲಿಗಳಿಗೆ ಹೋಗಿದ್ದೆವು. ಮುಂಬಯಿಯ ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ (TIFR)ಗೆ ಭೇಟಿ ನೀಡುವುದೂ ನಮ್ಮ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು. ಅಲ್ಲಿ ಆಗ ಸಹಾಯಕ ಗ್ರಂಥಭಂಡಾರಿಯಾಗಿದ್ದ ಡಾ. ಶ್ರೀನಿವಾಸ ಹಾವನೂರ ಅವರು ನಮಗೆ ಸಂಸ್ಥೆಯ ವಿವಿಧ ಭಾಗಗಳನ್ನು ಪರಿಚಯಿಸಿ ಕೊಡುತ್ತಾ, ಅಲ್ಲಿರುವ "ಯಾಂತ್ರಿಕ ಮಿದುಳು" (ಕಂಪ್ಯೂಟರ್), ಅದರ ಕಾರ್ಯವಿಧಾನ, ಉಪಯೋಗ ಮುಂತಾದವುಗಳನ್ನು ವಿವರಿಸಿದರು. ಯಾರು ಯಾವುದೇ ಪ್ರಶ್ನೆಯನ್ನು ಕೇಳಿದರೂ ಅದು ತಕ್ಷಣ ಉತ್ತರಿಸುತ್ತದೆ ಎಂದು ಹೇಳಿ ನಮಗೆ ಯಾರಿಗಾದರೂ ಪ್ರಶ್ನಿಸಲು ಕೇಳಿದರು.

ಮೊದಲ ಪ್ರಶ್ನೆಯನ್ನೇ ತಪ್ಪಾಗಿ ಕೇಳೋಣ, ಅದು ಹೇಗೆ ಉತ್ತರಿಸುತ್ತದೆಯೋ ನೋಡೋಣ ಎಂದು ನಮ್ಮನಮ್ಮೊಳಗೆ ವಿಚಾರಿಸಿಕೊಂಡು ಒಂದು ಪ್ರಶ್ನೆ ಕೇಳಿದೆವು. What was the day on

29 th Feb 1966 ? (೨೯ ನೇ ಫೆಬ್ರುವರಿ ೧೯೬೬ ಯಾವ ವಾರವಾಯಿತು ?) ಗಣಕ ಯಂತ್ರ ತಕ್ಷಣ ಉತ್ತರಿಸಿತು. The question in perhaps wrong. (ಪ್ರಶ್ನೆ ಬಹುಶಃ ತಪ್ಪಿದೆ.) ಎಲ್ಲರೂ ಬೆರಗಾದೆವು. ಅದರ ಬುದ್ಧಿಯನ್ನು ಪರೀಕ್ಷಿಸಿಯೇ ಬಿಡೋಣ ಎಂದು ನಿರ್ಧರಿಸಿ ಮತ್ತೆ ಅದೇ ಪ್ರಶ್ನೆ ಹಾಕಿದೆವು. ಆಗ ಅದು, Again the question in perhaps wrong (ಪ್ರಶ್ನೆಯಲ್ಲಿ ಮತ್ತೆ ತಪ್ಪಿದೆ) ಎಂದು ಉತ್ತರಿಸಿತು. ನಮಗೆಲ್ಲ ಹೆಚ್ಚಿನ ಆಶ್ಚರ್ಯವಾಯಿತು. ಪಕ್ಕದಲ್ಲೇ ನಿಂತಿದ್ದ ಶ್ರೀ ಶ್ರೀನಿವಾಸರು ಪುನಃ ಅದೇ ತಪ್ಪು ಪ್ರಶ್ನೆ ಕೇಳಬೇಡಿರಿ ಎಂದು ಹೇಳಿದರೂ ನಾವು ಅದನ್ನೇ ಕೇಳುತ್ತೇವೆ ಎಂದಾಗ, ಅವರು ನಿರುಪಾಯರಾಗಿ ಹಾಗಾದರೆ ತಾವು ಹೋಗುತ್ತೇವೆ, ನಂತರ ನೀವೆಲ್ಲ ಬನ್ನಿ ಎಂದು ಹೇಳಿ ಹೊರಟೇಹೋದರು. ಕೊನೆಯ ಬಾರಿ ಎಂಬಂತೆ ಅದೇ ಪ್ರಶ್ನೆಯನ್ನು ಕೇಳಿದೆವು. ಆಗ ಅದು ಕೊಟ್ಟ ಉತ್ತರ You are all fools (ನೀವೆಲ್ಲ ಮೂರ್ಖರು) ಎಂದಿತ್ತು. ಶ್ರೀ ಶ್ರೀನಿವಾಸರು ಅಷ್ಟು ಲಗುಬಗೆಯಿಂದ ಏಕೆ ಆ ಜಾಗ ಬಿಟ್ಟುಹೋದರು ಎನ್ನುವುದು ನಮಗೆ ಆಗ ಅರ್ಥವಾಯಿತು.

—ಧನ್ಯಕುಮಾರ ಮಿಣಜಗಿ

"ಒಂದು ದಿನ ನಾನು ನನ್ನ ಸ್ನೇಹಿತ ಇಬ್ಬರೂ ಊಟ ಮಾಡಲು ಉಡುಪಿ ಕೃಷ್ಣ ಭವನಕ್ಕೆ ಹೋಗುತ್ತಿದ್ದೆವು. ನಾನು ನನ್ನ ಮನೆಯ ವಿಷಯದಲ್ಲಿ ಮಾತನಾಡುತ್ತಾ ಇದ್ದೆ. ಮನೆಯಿಂದ ಬಹಳ ದಿವಸಗಳಿಂದ ಪತ್ರ ಬಂದಿರಲಿಲ್ಲ. ನನಗೆ ಬಹಳ ಚಿಂತೆಯಾಗಿತ್ತು. ನಾನು ಆ ಈ ವಿಷಯ ಮಾತನಾಡುತ್ತಿದ್ದಂತೆ ಹೋಟೆಲ್ ಸ್ಟೇಲಾಂಗ್ ಬಳಿ ನಮ್ಮ ಎಡಗಡೆಯಿಂದ ಒಂದು ಬೆಕ್ಕು ಹಾದು ಗವರ್ನಮೆಂಟ್ ಕಾಲೇಜು ಕಡೆ ಹೋಯಿತು. ಅದು ಎಡಗಡೆಯಿಂದ ಹೋದದ್ದನ್ನು ನೋಡಿ ನಾನು, "ಈ ದರಿದ್ರ ಬೆಕ್ಕು ನಾನು ಈ ಮಾತನ್ನಾಡ್ತಾ ಇರ್ಬೇಕಾದ್ರೆ ಹೀಗೆ ಹಾದು ಹೋಗಬೇಕೆ? ಏನು ಗ್ರಹಚಾರವೋ ನಮ್ಮಂದೇದು" ಎನ್ನುತ್ತಾ ಅದನ್ನು ಶಪಿಸಿದೆ. ಇದನ್ನೆಲ್ಲಾ ಅಷ್ಟಾಗಿ ಲೆಕ್ಕಿಸದ ನನ್ನ ಸ್ನೇಹಿತ ಹಾಸ್ಯವಾಗಿ "ಯಾರಿಗಪ್ಪಾ ಗ್ರಹಚಾರ! ನಿನಗೋ ಬೆಕ್ಕಿಗೋ!" ಎನ್ನುತ್ತಾ ನಕ್ಕ. ಹೀಗೆ ಅವನು ಹೇಳುತ್ತಿರುವಾಗಲೇ ಪಕ್ಕದಲ್ಲಿ ರಸ್ತೆಯಿಂದ 'ಕ್ರೀ...ಕ್'' ಎಂದು ಬಲವಾಗಿ ಬ್ರೇಕ್ ಹಾಕಿದ ಶಬ್ದ ಕೇಳಿತು. ಹಿಂತಿರುಗಿ ಸರಕ್ಕನೆ ನೋಡಿದೆವು. ರಸ್ತೆಯನ್ನು ಹಾಯ್ದು ಅತ್ತ ಕಡೆಗೆ ಓಡುತ್ತಿದ್ದ ಬೆಕ್ಕಿನ ಮೇಲೊಂದು ಬಸ್ ಹರಿದಿತ್ತು. ಅದು ವಿಲವಿಲನೆ ಹಾರಾಡುತ್ತಾ ಒದ್ದಾಡುತ್ತಿರುವಷ್ಟರಲ್ಲೇ ಮತ್ತೆರಡು ಬಸ್ಸುಗಳು ಅದರ ಮೇಲೆ ಒಂದರ ನಂತರ ಒಂದು ವೇಗವಾಗಿ ಹಾಯ್ದು ಅದರ ಆ ಐದು ನಿಮಿಷಗಳ ಮರಣ ವೇದನೆಯನ್ನು ಕೊನೆಗೊಳಿಸಿದವು.

ನಾನೂ ನನ್ನ ಸ್ನೇಹಿತನೂ ನಿಶ್ಚೇಷ್ಟಿತರಾಗಿ ದಿಗ್ಭ್ರಮೆಯಿಂದ ನೋಡುತ್ತಾ ನಿಂತಿದ್ದೆವು.

—ಕೆ.ವಿ. ವಿಷ್ಣುವರ್ಧನ

"ಮಾತೃಭಾಷೆ ಎಂಬ ಶಬ್ದ ಹೇಗೆ ಹುಟ್ಟಿಕೊಂಡಿತು? ಮತ್ತು ಪಿತೃಭಾಷೆ ಎಂಬ ಶಬ್ದ ಏಕೆ ಹುಟ್ಟಿಕೊಳ್ಳಲಿಲ್ಲ?"

"ಏಕೆಂದರೆ ಅಮ್ಮ ಮಾತಾಡಲಿಕ್ಕೆ ಪ್ರಾರಂಭಿಸಿದ ಕೂಡಲೆ ಅಪ್ಪ ಮಾತಾಡಬೇಕೆಂದಿದ್ದ ಎಲ್ಲ ಶಬ್ದಗಳೂ ಅವನ ಗಂಟಲಲ್ಲೆ ಉಳಿದು ಹೋಗುವುದರಿಂದ."



# ಹಸಿರು ಗಡ್ಡದ ಫಕೀರ

ವ್ಲಾದಾನ್ ದೇಸ್ನಿಕಾನ ಯುಗೊಸ್ಲಾವ್ ಕಥೆ

ಇದು ತೀರಾ ಮಾಮೂಲಿ ಕಥೆಯೆಂದು ನಾನು ಮೊದಲೇ ಹೇಳಿಬಿಡುತ್ತೇನೆ. ಕಥೆಯಲ್ಲಿ ಬರುವ ಘಟನೆ ಯಾರ ಜೀವನದಲ್ಲಾದರೂ ಸಂಭವಿಸಬಹುದು.

ಎಲ್ಲರಿಗೂ ಬೀಳುವ ಹಾಗೆ ಒಬ್ಬನಿಗೆ ಕನಸು ಬೀಳುತ್ತದೆ ಎಂದಿಟ್ಟುಕೊಳ್ಳಿ. ಹೇಳಿ ಕೇಳಿ ಕನಸು. ಕನಸಿನಲ್ಲಿ ಆತ ಏನು ಬೇಕಾದರೂ ಕಾಣಬಹುದು; ಏನು ಬೇಕಾದರೂ ಯೋಚಿಸಬಹುದು. ಆದರೆ ಅದಕ್ಕೆಲ್ಲಾ ಅರ್ಥ ಹಚ್ಚುವುದು ಜಾಣತನವಾದೀತೆ? ಒಬ್ಬನಿಗೆ ಹಸಿರು ಗಡ್ಡದ ಸಂನ್ಯಾಸಿಯಾಗಲಿ ಒಕ್ಕಣ್ಣನಾದ ಫಕೀರನಾಗಲಿ ಕನಸಿನಲ್ಲಿ ಕಾಣಿಸಿಕೊಳ್ಳುತ್ತಾನೆ ಎಂದು ಭಾವಿಸಿ. ಆತ ಏನನ್ನೇ ಕಾಣಲಿ, ಅದು ಕನಸೆಂಬುದು ಸುಳ್ಳಾದೀತೆ?

ಹಾಂ, ಆತ ಏನನ್ನೇ ಕಾಣಲಿ ಎಂದು ಹೇಳಿದೆನಲ್ಲವೆ? ಅದು ಮುಖ್ಯ ನೋಡಿ. ಜಾಗ್ರತಾವಸ್ಥೆಯಲ್ಲಿದ್ದಾಗ ನೂರಾರು ವರ್ಷಗಳ ಅವಧಿಯಲ್ಲಿ ಕೂಡ ಕಲ್ಪಿಸಲಾರದ್ದನ್ನು ಅವನು ಒಂದೇ ಕನಸಿನಲ್ಲಿ ಕಲ್ಪಿಸಿಬಿಡಬಲ್ಲ. ಉದಾಹರಣೆಗಾಗಿ ಒಬ್ಬನಿಗೆ 'ಬಟನ್‌ಲೆಸ್' ಮನುಷ್ಯ ಕನಸಿನಲ್ಲಿ ಕಾಣಿಸಿಕೊಳ್ಳುತ್ತಾನೆ ಎಂದಿಟ್ಟುಕೊಳ್ಳಿ. 'ಬಟನ್‌ಲೆಸ್' ಎಂದರೆ ಅವನ ಉಡುಪಿನ ಬಿರುಡೆಗಳು ಹರಿದು ಹೋಗಿ ಆ ಸ್ಥಳದಲ್ಲಿ ಆತ ಪಿನ್ನುಗಳನ್ನು ಸಿಕ್ಕಿಸಿಕೊಂಡಿದ್ದಾನೆಂದಾಗಲಿ ಬಿರುಡೆ ಹರಿದ.ಹೋದ ಸ್ಥಳದಲ್ಲಿ ದಾರ ಕಟ್ಟಿದ್ದಾನೆಂದಾಗಲಿ ಅರ್ಥವಲ್ಲ; ಬದಲು ಬಿರುಡೆಗಳೇ ಇಲ್ಲದ ಬಟ್ಟೆಗಳನ್ನು ದೀರ್ಘಾವಧಿಯಿಂದ ತೊಟ್ಟುಕೊಳ್ಳುತ್ತಾ ಬಂದಿದ್ದಾನೆ ಎಂದರ್ಥ.

ದಿನನಿತ್ಯ ನೋಡುತ್ತಾ ಬಂದ, ತೀರಾ ಸಾಧಾರಣ ತೆರನಾದ ಪದಾರ್ಥಗಳನ್ನು ಕಂಡು ಅಭ್ಯಸ್ತನಾದವನಿಗೆ ಅಕಸ್ಮಾತ್ತಾಗಿ ಇಂಥ ಬಟನ್ ಲೆಸ್ ಮನುಷ್ಯ ಕಾಣಸಿಕ್ಕಿದರೆ ಅವನು

ಆಶ್ಚರ್ಯದಿಂದ ಸ್ತಂಭೀಭೂತವಾಗಿ ಹೋಗುವುದು ಖಂಡಿತ. ಆದರೆ ಕನಸಿನ ಮಾತು ಹಾಗಲ್ಲ. ಆಗ ಅವನು ಆ ಬಿರುಡೆಹೀನ ಮನುಷ್ಯನಿಗೂ ಜಲಮಾನವನಿಗೂ ಸಾಮ್ಯ ಕಾಣಬಹುದು. ಅಥವಾ ಕೆಂಪು ಬಣ್ಣದ, ದಷ್ಟಪುಷ್ಟವಾದ ನೇತ್ರಹೀನ ಮೀನಿಗೂ ಬಿರುಡೆಹೀನ ಮನುಷ್ಯನಿಗೂ ಯಾವುದೇ ಅಂತರವಿದ್ದ ಹಾಗೆ ಅವನಿಗೆ ಆಗ ಅನಿಸಲಿಕ್ಕಿಲ್ಲ.

ಎಲಾ! ಮಾತಾಡುತ್ತಾ ಮಾತಾಡುತ್ತಾ ಹಿಡಿದ ಜಾಡನ್ನೆ ಬಿಟ್ಟು ಸಾಗಿದೆನಲ್ಲ! ಹಸಿರು ಗಡ್ಡದ ಫಕೀರನ ಬಗೆಗೆ ಪ್ರಸ್ತಾಪಿಸಿದ್ದರಿಂದ ಅವನ ಬಗ್ಗೆ ಮಾತ್ರ ನಾನು ಮಾತಾಡಬೇಕು.

ಒಬ್ಬಾತ ಹಸಿರುಗಡ್ಡದ ಫಕೀರನನ್ನು ಕನಸಿನಲ್ಲಿ ಕಂಡ. ಒಳ್ಳೆಯದು, ಇಂಥಾ ಎಷ್ಟೋ ವಿಚಿತ್ರ ಕನಸುಗಳನ್ನು ನಾವೂ ಕಾಣುತ್ತೇವೆ. ಅದರಲ್ಲೇನು ವಿಶೇಷ? ಎಂದು ನೀವನ್ನಬಹುದು. ಇರಲಿ ಮರುದಿನ ಹಾಸಿಗೆ ಬಿಟ್ಟೆದ್ದಾಗ ಅವನಿಗೆ ಈ ವಿಷಯ ಸಂಪೂರ್ಣವಾಗಿ ಮರೆತುಹೋಗಿತ್ತು. ಆದರೆ ರಾತ್ರಿ ಆಫೀಸಿನಿಂದ ಒಂದವಸೆ ಕಾಲುಚೀಲಗಳನ್ನು ತೆಗೆಯುತ್ತಿದ್ದಾಗ ಕನಸು ಕಂಡಿದ್ದು ನೆನಪಾಯಿತು. ಈ ದಿನವೂ ಹಸಿರುಗಡ್ಡದ ಫಕೀರನನ್ನು ಕನಸಿನಲ್ಲಿ ಕಾಣಬಹುದು ಎಂದು ಅವನೆಂದುಕೊಂಡ. ಆದರೆ ಹಾಗಾಗಲಿಲ್ಲ

ಘಟನಾಕ್ರಮ ಹೀಗೆಯೆ ನಡೆಯಬೇಕೆಂದೇನೂ ಇಲ್ಲ. ತದ್ವಿರುದ್ಧವಾಗಿಯೂ ಅದು ನಡೆಯಬಹುದು. ಅರ್ಥಾತ್ ಆ ಮನುಷ್ಯನಿಗೆ ಹಸಿರು ಗಡ್ಡದ ಫಕೀರನ ನೆನಪು ದಿನದಲ್ಲಿ ಒಂದು ಬಾರಿಯಾದರೂ ಆಗಲಿಕ್ಕಿಲ್ಲ; ಆದರೂ ಫಕೀರ ಆ ದಿನ ರಾತ್ರಿ ತಪ್ಪದೆ ಆತನ ಕನಸಿನಲ್ಲಿ ಕಾಣಿಸಿಕೊಳ್ಳಬಹುದು. ಹಾಗೆ ನೋಡಿದರೆ ಅವನು ಹಸಿರು ಗಡ್ಡದ ಫಕೀರನನ್ನು ನೆನಪು ಮಾಡಿಕೊಳ್ಳುವುದಾಗಲಿ ಇಲ್ಲವೆ ಆತನ ಕನಸನ್ನು ಕಾಣುವುದಾಗಲಿ ಒಂದೇ. ಏಕೆಂದರೆ ಇವೆರಡೂ ಪ್ರಸಂಗಗಳಲ್ಲಿ ಆ ಫಕೀರನ ಪ್ರಸ್ತಾಪ ಇದ್ದೇ ಇರುತ್ತದೆ.

ಹಾಂ, ಆ ರಾತ್ರಿ ಅವನಿಗೆ ಆ ಫಕೀರನ ನೆನಪಾಯಿತು. ಆದರೆ ಆತ ಕನಸಿನಲ್ಲಿ ಅಂದು ಕಾಣಿಸಿಕೊಳ್ಳಲಿಲ್ಲ. ಇದೇ ಘಟನಾಕ್ರಮ ಮುಂದೆ ಮೂರುನಾಲ್ಕು ದಿನಗಳ ವರೆಗೂ ಮುಂದುವರಿಯಿತು. ಪ್ರತಿ ದಿನ ಮುಂಜಾನೆ ಅವನು ಮುಖಮಾರ್ಜನ ಮಾಡಿಕೊಳ್ಳುವಾಗಲೋ ದಾಡಿ ಮಾಡಿಕೊಳ್ಳುವಾಗಲೋ ಹಸಿರುಗಡ್ಡದ ಫಕೀರನ ಕನಸನ್ನು ತಾನು ಹಿಂದಿನ ರಾತ್ರಿ ಕಂಡಿಲ್ಲ ವೆಂಬುದು ಆತನ ಗಮನಕ್ಕೆ ಬರುತ್ತಿತ್ತು. ಮತ್ತು ಅದು ಗಮನಕ್ಕೆ ಬಂದ ಕೂಡಲೆ ಹುಂಡಿ ಕುಡಿಕೆಯಲ್ಲಿ ಒಂದು ನಾಣ್ಯ ಹಾಕಿದಷ್ಟು ಆನಂದ ವಾಗುತ್ತಿತ್ತು. ಆ ಫಕೀರನ ಬಗ್ಗೆ ಮೇಲಿಂದ ಮೇಲೆ ಯೋಚನೆ ಬರುತ್ತಿದ್ದುದರಿಂದ ಅವನ ವೈಚಾರಿಕ ಜಗತ್ತಿನಲ್ಲಿ ಹಸಿರು ಗಡ್ಡದ ಫಕೀರ, ನಿಜವಾದ, ಪರಿಚಿತ ವ್ಯಕ್ತಿಯಷ್ಟೆ ಮಹತ್ವವನ್ನು ಪಡೆದಿದ್ದ.

ಆದರೆ ಒಂದು ದಿನ ಮುಂಜಾನೆ ಆ ಫಕೀರನ ನೆನಪು ಕೂಡ ಅವನಿಗೆ ಆಗಲಿಲ್ಲ. ಅಂದು ರಾತ್ರಿ ಆತ ಅವನ ಕನಸು ಕಂಡ. ಎಷ್ಟೋ ದಿನ ಹೀಗೆಯೆ ನಡೆಯಿತು: ಒಂದೋ ಆತನಿಗೆ ಹಸಿರು ಗಡ್ಡದ ಫಕೀರನ ನೆನಪು ಹಗಲಲ್ಲಿ ಒಂದು ಬಾರಿಯಾದರೂ ಆಗುತ್ತಿತ್ತು ಇಲ್ಲವೆ ಆತ ರಾತ್ರಿ ತಪ್ಪದೆ ಕನಸಿನಲ್ಲಿ ಕಾಣಿಸಿಕೊಳ್ಳುತ್ತಿದ್ದ. ಆದರೆ ಹಗಲು ಫಕೀರನನ್ನು ಸ್ಮರಿಸಿದಂದು ರಾತ್ರಿ ಆತನ ಕನಸು ಕಂಡ ದಿನಗಳೂ ಸಾಕಷ್ಟಿದ್ದವು.

ಒಂದು ದಿನ ಆತನ ಆಫೀಸಿನಲ್ಲಿ ಹಣ ಅಫರಾತಫರಾ ಆಗಿದ್ದು ಬೆಳಕಿಗೆ ಬಂತು. ದುರ್ವಿನಿಯೋಗವಾದ ಹಣದ ಮೊತ್ತ ದೊಡ್ಡದಾಗಿತ್ತಲ್ಲದೆ, ಅದು ಅವನ ವಿಭಾಗದಲ್ಲೇ ಸಂಭವಿಸಿತ್ತು. ಇದಕ್ಕೆ ಕಾರಣರಾದವರು ಯಾರು ಎಂಬುದನ್ನು ಕಂಡುಹಿಡಿಯಲು ವಿಚಾರಣೆಯನ್ನು ಆರಂಭಿಸಲಾಯಿತು. ಈ ಗಡಿಬಿಡಿಯಲ್ಲಿ ಅವನಿಗೆ ಹಸಿರುಗಡ್ಡದ ಫಕೀರನ ನೆನಪು ಹಾರಿ ಹೋಗಿತ್ತು. ಮೇಲಧಿಕಾರಿಗಳು ವಿಚಾರಣೆಗೆ ಬಂದಾಗ ಅವನು ಶಾಂತಭಾವದಿಂದಿದ್ದ. ಅಧಿಕಾರಿಗಳ ಮೊದಲ ಪ್ರಶ್ನೆಯಿಂದಲೆ ಮೇಲಧಿಕಾರಿಗಳಿಗೆ

ತನ್ನ ಮೇಲೆ ಸಂಶಯವಿಲ್ಲೆಂಬುದು ಖಾತ್ರಿಯಾಗಿ ಹೋಯಿತು. ಅವನೂ ನಿರ್ದೋಷಿಯಾಗಿದ್ದರೂ ತನ್ನ ಮೇಲೆ ವಿಚಾರಣೆ ನಡೆಸಿದ್ದಕ್ಕೆ ಕೆಡುಕೆನಿಸುವುದು ಸ್ವಾಭಾವಿಕವೇ ಆಗಿತ್ತು.

ಇದಾಗಿ ಸುಮಾರು ಒಂದು ವಾರ ಕಳೆದಿರಬಹುದು. ಒಂದು ದಿನ ಮಧ್ಯಾಹ್ನದ ಊಟ ಮುಗಿಸಿ ಅವನು ಪ್ರಾಣಿಸಂಗ್ರಹಾಲಯದಲ್ಲಿ ಸುತ್ತಾಡುತ್ತಿದ್ದ. ಆಗ ಅಕಸ್ಮಾತ್ತಾಗಿ ಒಬ್ಬ ಪಾದರಿ ಅವನೆದುರು ಹಾದುಹೋದ. ಹಸಿರುಗಡ್ಡದ ಮಾತಿರಲಿ, ಕರಿಯ ನಾಲ್ಕು ಕೂದಲು ಸಹ ಅವನ ಗಡ್ಡದ ಮೇಲಿರಲಿಲ್ಲ. ಆದರೂ ಅವನನ್ನು ನೋಡಿದಾಕ್ಷಣ ಹಸಿರು ಗಡ್ಡದ ಫಕೀರನ ನೆನಪು ಮರುಕಳಿಸಿ ಬಂತು. ಹೌದು, ಹಣದ ದುರ್ವಿನಿಯೋಗವಾದ ಬಗ್ಗೆ ಆಫೀಸಿನಲ್ಲಿ ವಿಚಾರಣೆ ನಡೆಯುತ್ತಿದ್ದ ದಿನಗಳಲ್ಲಿ ಅವನಿಗೆ ಫಕೀರನ ನೆನಪು ಬಂದಿರಲಿಲ್ಲ, ಅವನನ್ನು ಕನಸಿನಲ್ಲೂ ಕಂಡಿರಲಿಲ್ಲ. ಈ ವಿಚಾರದಿಂದಾಗಿ ಅವನಿಗೆ ತುಂಬಾ ನೆಮ್ಮದಿಯೆನಿಸಿತು.

ನಮ್ಮ ಸ್ಮರಣಶಕ್ತಿಯಲ್ಲಿ ಇರುವ ತೊಂದರೆಯೆಂದರೆ ಇದೇ. ಒಮ್ಮೆ ಎರಡು ವಸ್ತುಗಳ ನಡುವಿರುವ ಸಾಮ್ಯವನ್ನು ನೋಡಿ ಯಾವುದೇ ವಸ್ತುವಿನ ನೆನಪಾದರೆ ಮತ್ತೊಮ್ಮೆ ಎರಡು ವಸ್ತುಗಳಲ್ಲಿನ ಅ-ಸಾಮ್ಯವನ್ನು ಕಂಡು ಯಾವುದೋ ವಸ್ತುವಿನ ನೆನಪು ಮರುಕಳಿಸುತ್ತದೆ. ಅ-ಸಾಮ್ಯದಿಂದಲೆ ಮರೆತ ವಿಷಯ ನೆನಪಾಗುವ ಸಾಧ್ಯತೆ ಹೆಚ್ಚು ಎಂದು ನನಗನಿಸುತ್ತದೆ. ಉದಾಹರಣೆಗೆ, ನನ್ನ ಬೆಕ್ಕಿನ ಎಡಗಣ್ಣು ಕಿತ್ತು ಹೋಗಿದೆ ಎಂದಿಟ್ಟುಕೊಳ್ಳಿ. ಬಲಗಣ್ಣಿಲ್ಲದ ಬೆಕ್ಕು ಕಾಣಸಿಕ್ಕಿದರೆ, ಪಾಪ, ಇದಕ್ಕೂ ಒಂದು ಕಣ್ಣಿಲ್ಲ. ನನ್ನ ಬೆಕ್ಕಿಗೆ ಎಡಗಣ್ಣಿಲ್ಲವಾದರೆ ಈ ಬೆಕ್ಕಿಗೆ ಬಲಗಣ್ಣಿಲ್ಲ, ಅಂದುಕೊಳ್ಳುತ್ತೇವೆ. ಒಂದೇ ಕಣ್ಣು ಕಿತ್ತುಹೋಗಿರಲಿ, ಎರಡು ಕಣ್ಣುಗಳೂ ಕಿತ್ತು ಹೋಗಿರಲಿ, ಅದನ್ನು ನೋಡಿದಾಕ್ಷಣ ನಮ್ಮ ಬೆಕ್ಕಿನ ನೆನಪು ಬರುವುದು ಖಂಡಿತ.

ಅದೇ ರೀತಿ, ಬಲಗಣ್ಣಿಲ್ಲದ ಬೆಕ್ಕು ಸಿಕ್ಕಿದರೆ, ತೂತ್ಸಿಯ ಹಾಗೆ ಇದಕ್ಕೂ ಒಂದು ಕಣ್ಣಿಲ್ಲ. ಆದರೆ ಇದಕ್ಕೆ ಬಲಗಣ್ಣಿಲ್ಲವಾದರೆ ತೂತ್ಸಿಗೆ ಎಡಗಣ್ಣಿಲ್ಲ. ಇವೆರಡರಲ್ಲಿರುವ ಅಂತರವೆಂದರೆ ಇದು ಬೆಕ್ಕು, ನನ್ನ ತೂತ್ಸಿ ನಾಯಿ, ಅಂದುಕೊಳ್ಳುತ್ತೇವೆ. ಎರಡು ಕಣ್ಣುಗಳಿರುವ ನಾಯಿ ಸಿಕ್ಕಿದರೆ, ಇದೂ ತೂತ್ಸಿಯ ಹಾಗೆಯೇ ಇದೆ. ಆದರೆ ತೂತ್ಸಿಗೆ ಒಂದೇ ಕಣ್ಣಿದ್ದರೆ ಇದಕ್ಕೆ ಎರಡೂ ಕಣ್ಣುಗಳಿವೆ, ಅಂದುಕೊಳ್ಳುತ್ತೇವೆ.

ಜಗತ್ತಿನ ಪ್ರತಿಯೊಂದು ವಸ್ತುವಿನಲ್ಲಿ ಸಾಮ್ಯ ಅಥವಾ ಅ-ಸಾಮ್ಯವಿರುವುದು ಅನಿವಾರ್ಯವಾಗಿರುವುದರಿಂದ ಒಂದು ಪದಾರ್ಥವನ್ನು ನೋಡಿದರೆ ಮತ್ತೊಂದು ಪದಾರ್ಥದ ನೆನಪಾಗುವುದು ಸಹಜ. ಹೀಗೆ ಯಾವುದೋ ಪದಾರ್ಥದ ನೆನಪಾಗಲು ಬೇರೆ ವಸ್ತುವಿನಲ್ಲಿ ಸಾಮ್ಯ ಅಥವಾ ಅ-ಸಾಮ್ಯವಿರುವುದು ಅವಶ್ಯವಲ್ಲ ಎಂಬ ವಾದಕ್ಕೇ ತಿರುಗಿ ಬರುತ್ತೇವೆ. ನೆನಪು ಕೊಡಲು ಅವಶ್ಯವಾದದ್ದು ಬೇರೆಯೆ. ಅದೇನೆಂಬುದು ನನಗೆ ಗೊತ್ತಿಲ್ಲ. ಆದರೆ ಸಾಮ್ಯ-ಅಸಾಮ್ಯಗಳಿಂದ ತಟಸ್ಥವಾಗುಳಿದ ಅದು ಸಾಗರದಲ್ಲಿ ಹಾಕಿದ ತಂತಿಯ ಹಾಗೆಯೆ ಆಳದಲ್ಲಿರುತ್ತದೆ.

ಆ ದಿನ ರಾತ್ರಿ ಬಟ್ಟೆ ಬದಲಿಸುವಾಗ ಆತನಿಗೆ ಮತ್ತೆ ಆ ಹಸಿರು ಗಡ್ಡದ ಫಕೀರನ ನೆನಪಾಯಿತು. ಮರುದಿನ ಮುಂಜಾನೆ ಅವನು ದಾಡಿ ಮಾಡಿಕೊಳ್ಳುತ್ತಾ ತನ್ನಷ್ಟಕ್ಕೆ ತಾನೆ ಅಂದುಕೊಂಡ: "ಆಶ್ಚರ್ಯ! ನಿನ್ನೆ ದಿನವಿಡೀ ಆತನನ್ನು ಜ್ಞಾಪಿಸಿಕೊಳ್ಳುತ್ತಾ ಇದ್ದರೂ ಆತ ಕನಸಿನಲ್ಲಿ ಕಾಣಿಸಿಕೊಳ್ಳಲಿಲ್ಲ. ಬದಲು, ಇಡೀ ದಿನದಲ್ಲಿ ಒಂದು ಬಾರಿಯಾದರೂ ಆತನ ನೆನಪಾಗದ ದಿನ ಆತ ತಪ್ಪದೆ ಕನಸಿನಲ್ಲಿ ಕಾಣಿಸಿಕೊಳ್ಳುತ್ತಾನೆ. ಅರ್ಥಾತ್ ಆ ಫಕೀರ ಕನಸಿನಲ್ಲಿ ಕಾಣಿಸಿಕೊಳ್ಳಬಾರದೆಂದರೆ ನಾನು ದಿನವಿಡೀ ಅವನ ಧ್ಯಾನದಲ್ಲಿ ಇರಬೇಕು ಎಂದಂತಾಯಿತು."

"ಎಲ್ಲಾ ಹುಚ್ಚುಚಾಟ," ಎಂದಾತ ಕೊನೆಗೊಮ್ಮೆ ತಲೆ ಕೊಡವಿಕೊಂಡ.

ಆಫೀಸಿಗೆ ಹೋದ ಕೂಡಲೆ ಮೇಜಿನ ಮೇಲಿದ್ದ

ಡೈರಿಯ ಹಾಳೆಗಳನ್ನು ತಿರುವಿ ಒಂದೆಡೆ 'ಫಕೀರ' ಎಂದು ಬರೆದ. ಅವನು ಹೀಗೇಕೆ ಮಾಡಿದ ? ಅದಕ್ಕೆ ಕಾರಣವಿಲ್ಲದಿಲ್ಲ. ಚಿಕ್ಕವನಿದ್ದಾಗ ಒಮ್ಮೆ ಅವನಿಗೆ ಇನ್‌ಫ್ಲುಯೆಂಜಾ ಆಗಿತ್ತು. ಇನ್-ಫ್ಲುಯೆಂಜಾದಿಂದ ಗುಣಮುಖನಾದರೂ ಜ್ವರ ಮಾತ್ರ ನಿಂತಿರಲಿಲ್ಲ. ದಿನದ ಇಪ್ಪತ್ತುನಾಲ್ಕು ಗಂಟೆಗಳಲ್ಲೂ ಸ್ವಲ್ಪವಾದರೂ ಜ್ವರ ಇದ್ದೇ ಇರುತ್ತಿತ್ತು. "ಡಾಕ್ಟರ್ ಸಾಹೇಬ್, ಜ್ವರ ನಿಲ್ಲಲಿಲ್ಲವಲ್ಲಾ, ಏನು ಮಾಡುವುದು ?" ಎಂದು ಅವನ ತಾಯಿ ಚಿಂತಿತಳಾಗಿ ಕೇಳಿದಳು. ಡಾಕ್ಟರ ವೃದ್ಧನೂ ಅನುಭವಿಕನೂ ಆಗಿದ್ದ. ಅವನ ಶರೀರ ಪೈಲವಾನರ ಹಾಗೆ ಭಾರಿ ಗಾತ್ರದ್ದಿತ್ತು. ಅವನೇನು ತಾಯಿಯ ಹಾಗೆ ಚಿಂತಿತನಾಗಿರಲಿಲ್ಲ. ಬದಲು ಶಾಂತಭಾವದಿಂದ ಅವಳಿಗೆ ಹೇಳಿದ: "ಥರ್ಮಾಮಿಟರ್ ಹಚ್ಚಿ ಜ್ವರ ನೋಡುವುದನ್ನು ಇನ್ನು ಬಿಟ್ಟುಬಿಡು. ಮಗು ಮತ್ತೆ ಶಾಲೆಗೆ ಹೋಗಲಿ, ಮೈದಾನದಲ್ಲಿ ಚೆನ್ನಾಗಿ ಆಟವಾಡಲಿ ಕೆಲ ದಿನಗಳ ನಂತರ ಥರ್ಮಾಮೀಟರ್ ಹಚ್ಚಿ ನೋಡಿದರೆ ಜ್ವರದ ಲವಲೇಶವೂ ಇರುವುದಿಲ್ಲ." ತಾಯಿ ಹಾಗೆಯೆ ಮಾಡಿದಳು. ಡಾಕ್ಟರ ಹೇಳಿದ ಹಾಗೆ ಜ್ವರ ಬರುವುದು ಸಂಪೂರ್ಣವಾಗಿ ನಿಂತುಹೋಯಿತು. "ಹುಂ ! ಇನ್ನು ಮೇಲೆ ನಾನು ಆ ಹಸಿರು ಗಡ್ಡದವನ ಬಗ್ಗೆ ವಿಚಾರಿಸುವುದೇ ಇಲ್ಲ. ಹೇಗೂ ದಿನಾಲೂ ಡೈರಿಯ ಹಾಳೆಗಳನ್ನು ಬದಲಿಸುತ್ತೇನೆ. ನನ್ನ ತಾಯಿ ಥರ್ಮಾಮೀಟರ ಹಚ್ಚುವುದನ್ನು ಕೆಲ ದಿನಗಳವರೆಗೆ ಬಿಟ್ಟಹಾಗೆ, ನಾನು ಕೆಲ ದಿನಗಳ ವರೆಗೆ ಆ ಫಕೀರನ ಬಗ್ಗೆ ವಿಚಾರಿಸುವುದನ್ನು ಬಿಟ್ಟು, 'ಫಕೀರ' ಎಂದು ಬರೆದ ಪುಟ ಎದುರಿಗೆ ಬಂದ ದಿನ ಆತನನ್ನು ಜ್ಞಾಪಿಸಿಕೊಳ್ಳುತ್ತೇನೆ. ಆ ವೇಳೆಗಾಗಲೆ ಫಕೀರ ನನ್ನಿಂದ ಮರೆಯಾಗಿರುತ್ತಾನೆ," ಎಂದು ಅವನೆಂದುಕೊಂಡ.

ಯುಕ್ತಿ ಫಲಿಸಿತು. ಫಕೀರನ ಜ್ಞಾಪಕದ ಆವೇಗ ಕ್ರಮೇಣ ಕಡಿಮೆಯಾಗುತ್ತಾ ಹೋಯಿತು. ಕೊನೆಗೆ ಫಕೀರನ ನೆನಪು ಬರುವುದೇ ನಿಂತುಹೋಯಿತು. ಹೀಗೆಯೆ ಸುಮಾರು ಎರಡು ತಿಂಗಳು ಕಳೆದುಹೋದವು. ಒಂದು ದಿನ ಆಫೀಸಿಗೆ ಹೋದವನೆ ಡೈರಿಯ ಹಾಳೆಗಳನ್ನು ಬದಲಿಸಿದ ಕೂಡಲೆ ಫಕೀರ ಮತ್ತೆ 'ಪ್ರತ್ಯಕ್ಷ'ನಾದ.

ಫಕೀರನ ನೆನಪಿನ ಆವರ್ತನ ಮತ್ತೆ ಹೆಚ್ಚಾಗತೊಡಗಿತು. ಯಾವಾಗಲೂ ಆ ಹಸಿರುಗಡ್ಡದವನ ನೆನಪಾಗುತ್ತಿರಲಿಲ್ಲವಾದರೂ ಕ್ಯಾಲೆಂಡರನ್ನು ನೋಡಿದಾಕ್ಷಣ ಫಕೀರ ಅವನ ತಲೆ ತುಂಬಿಕೊಂಡುಬಿಡುತ್ತಿದ್ದ. ಕೊನೆಗಂತೂ ಕ್ಯಾಲೆಂಡರಿನೊಡನೆ ಅತಿ ದೂರದ ಸಂಬಂಧವಿರುವ ಪದಾರ್ಥಗಳೂ ಅವನಿಗೆ ಫಕೀರನ ನೆನಪನ್ನು ತಂದು ಕೊಡಲಾರಂಭಿಸಿದವು. ಉದಾಹರಣೆಗೆ ಹೇಳುವುದಾದರೆ, ಚರ್ಚ್ ಆಗಲಿ ಪೂಜಾಸ್ಥಳವಾಗಲಿ ಅವನಿಗೆ ಕ್ಯಾಲೆಂಡರನ್ನು, ಅದರೊಟ್ಟಿಗೆ ಫಕೀರನ ನೆನಪನ್ನು ತಂದುಕೊಡುತ್ತಿದ್ದವು. ಕೃಷಿ ಕೋ-ಆಪರೇಟಿವ್ ಸೊಸಾಯಿಟಿಯ ಶೋರೂಮ್‌ನಲ್ಲಿಟ್ಟ ಕೃಷಿಯಂತ್ರವನ್ನು ನೋಡಿದಾಗ ಮತ್ತೆ ಫಕೀರ ಪ್ರತ್ಯಕ್ಷನಾಗುತ್ತಿದ್ದ. ಆಫೀಸಿನಲ್ಲಿ ಕಾಗದಪತ್ರಗಳ ಮೇಲೆ ಸಹಿ ಮಾಡಿಕೊಳ್ಳಲು ಸಾಹೇಬರ ಕೋಣೆಗೆ ಹೋದಾಗ ಅಲ್ಲಿನ ಕ್ಯಾಲೆಂಡರ್, ವಾಲ್‌ಕ್ಲಾಕ್, ಬ್ಯಾರೋಮೀಟರುಗಳು ಅವನ ಕಣ್ಣಿಗೆ ಬೀಳುತ್ತಿದ್ದವು. ಹೀಗಾದಷ್ಟೇ ತಡ, ಆ ಹಸಿರುಗಡ್ಡದ ಫಕೀರ ಅವನ ತಲೆಯ ಮೇಲೆ ಸವಾರಿ ಮಾಡಲು ಪ್ರಾರಂಭಿಸುತ್ತಿದ್ದ.

ಆದರೆ ಆತ ಫಕೀರನ ಕನಸು ಕಾಣುವುದು ಈಗ ಕಡಿಮೆಯಾಗಿತ್ತು. ಇದ್ದಲಿ ಮಾರುವವ ಈ ತಾರೀಖಿಗೆ ಬರುತ್ತಾನೆ, ಇಲೆಕ್ಟ್ರಿಸಿಟಿ ಬೋರ್ಡಿನ ಮೀಟರ್ ರೀಡರ್ ಈ ತಾರೀಖಿನಂದು ಬರುತ್ತಾನೆ ಎಂಬುದು ಗೊತ್ತಾಗುತ್ತಿದ್ದಂತೆಯೆ ಆ ಫಕೀರ ಇಂಥಾ ದಿನವೇ ಕನಸಿನಲ್ಲಿ ಕಾಣಿಸಿಕೊಳ್ಳುತ್ತಾನೆ ಎಂಬುದೂ ಗೊತ್ತಾಗುತ್ತಿತ್ತು.

ಕೆಲ ದಿನ ಹೀಗೆಯೆ ನಡೆಯಿತು. ಆದರೆ ಒಂದು ದಿನ ಅವನ ತರ್ಕಶಕ್ತಿಯೆ ಅವನಿಗೆ ಕೈಕೊಟ್ಟಿತು. ಹೌದು ಸ್ವಾಮಿ, ಸೈತಾನನಾಗಲಿ

ತರ್ಕಬುದ್ಧಿಯಾಗಲಿ ಒಮ್ಮೆ ಯಾವೊಂದು ವಿಷಯದಲ್ಲಿ ಕೈಹಾಕಿ ಕೆಡಿಸಿದ್ದನ್ನು ತರ್ಕಹೀನತೆ ಎಂದೂ ಸರಿಪಡಿಸಲಾರದು.

ಈಗವನು ತನ್ನ ಕನಸಿನಲ್ಲಿ ಫಕೀರ ಕಾಣಿಸಿಕೊಂಡನೋ ಇಲ್ಲವೋ ಎಂಬುದನ್ನು ವಿಚಾರಿಸುವುದನ್ನೆ ಬಿಟ್ಟುಬಿಟ್ಟಿದ್ದ. ಏಕೆಂದರೆ, 'ಸ್ವಪ್ನದಲ್ಲಿ ಫಕೀರ ಕಾಣಿಸಿಕೊಂಡ' ಎಂಬುದಕ್ಕೂ 'ಕಾಣಿಸಿಕೊಳ್ಳಲಿಲ್ಲ' ಎಂಬದಕ್ಕೂ ಇರುವ ಅಂತರ ಕೇವಲ 'ಕಾಣಿಸಿಕೊಂಡ' ಹಾಗೂ 'ಕಾಣಿಸಿಕೊಳ್ಳಲಿಲ್ಲ' ಎಂಬುದಕ್ಕೆ ಮಾತ್ರ ಸೀಮಿತವಾಗಿದೆ; ಈ ಎರಡೂ ಪ್ರಸಂಗಗಳಲ್ಲಿ ಫಕೀರನ ಅಸ್ತಿತ್ವ ಇದ್ದೇ ಇದೆ ಎನ್ನುವುದು ಅವನಿಗೆ ತಿಳಿದು ಹೋಗಿತ್ತು.

ಮುಂಜಾನೆ ದಾಡಿ ಮಾಡಿಕೊಳ್ಳುವಾಗ 'ಫಕೀರ ಕನಸಿನಲ್ಲಿ ಕಾಣಿಸಿಕೊಂಡ'ನೆಂಬುದನ್ನು ಜ್ಞಾಪಿಸಿಕೊಳ್ಳುತ್ತಿದ್ದ ದಿನಗಳು ನೆನಪಾದವು ಹಾಗೆಯೆ ಆತ ಕನಸಿನಲ್ಲಿ ಕಾಣಲಿಲ್ಲವಷ್ಟೆ ಅಲ್ಲ, ಹಿಂದಿನ ದಿನ ಆತನನ್ನು ನೆನಪಿಸಿಕೊಳ್ಳಲೇ ಇಲ್ಲ ಅಂದುಕೊಂಡು ಸಂತೋಷಿಸಿದ ದಿನಗಳೂ ಸ್ಮರಣೆಗೆ ಬಂದವು. "ನಾನೆಂಥಾ ಮೂರ್ಖ! ನನಗೆ ಫಕೀರನ ನೆನಪಾಗಲಿಲ್ಲವೆಂದುಕೊಂಡರೆ ಫಕೀರನನ್ನು ಸ್ಮರಿಸಿಕೊಂಡಂತಾಗಲಿಲ್ಲವೆ?" ಎಂದವನು ವಿಷಾದದ ನಗೆಯನ್ನು ನಕ್ಕ. ಈ ವಿಚಾರ ಅವನ ತಲೆಯಲ್ಲಿನ ಉಳಿದೆಲ್ಲಾ ವಿಚಾರಗಳನ್ನು ಕಿತ್ತುಹಾಕಿತು.

ಪರಿಣಾಮವಾಗಿ ಹಸಿರು ಗಡ್ಡದ ಫಕೀರ ಮತ್ತೆ ಬೆನ್ನು ಹತ್ತಿದ. ಆತ ಎಲ್ಲಿಯೆ ಹೋಗಲಿ, ಏನೇ ಮಾಡಲಿ ಫಕೀರ ಅವನನ್ನು ಬಿಡುತ್ತಿರಲಿಲ್ಲ. ಆಫೀಸಿನಲ್ಲಿ ಹಣದ ದುರ್ವಿನಿಯೋಗವಾದ ಬಗ್ಗೆ ವಿಚಾರಣೆ ನಡೆದಾಗಲೂ ಡೈರಿಯಲ್ಲಿ 'ಫಕೀರ'ನೆಂದು ಬರೆದ ಪುಟವನ್ನು ಬದಲಿಸುವಾಗಲೂ ಫಕೀರ ಅವನನ್ನು ಬಿಟ್ಟು ಹೋಗಿರಲೇ ಇಲ್ಲ; ಬದಲು ಆಗ ಅವನು ಪರದೆಯ ಹಿಂದೆ ಅಡಗಿದ ಹಾಗೆ ಮರೆಯಾಗಿದ್ದ ಎಂಬ ಭಾವನೆ ಬರತೊಡಗಿತು.

ಒಂದು ದಿನ ಬಚ್ಚಲು ಮನೆಯಲ್ಲಿ ದಾಡಿ ಮಾಡಿಕೊಳ್ಳುತ್ತಾ "ಅಯ್ಯೋ, ನನಗೆ ಆ ಫಕೀರನನ್ನು ಮರೆಯಲು ಸಾಧ್ಯವಾದರೆ...ಮರೆಯಲು ಸಾಧ್ಯವಾದರೆ..." ಎಂದು ಹಲುಬಿದ. ಅನಂತರ ತನ್ನ ವಿಚಾರದಲ್ಲಿ ಮಗ್ನನಾಗಿಯೆ ಎಷ್ಟೋ ಸಲ ಬ್ಲೇಡನ್ನು ಕಪಾಳದ ಮೇಲೆ ಎಳೆದುಕೊಂಡ. ಮತ್ತೆ ಆತ ವಿಚಾರತಂದ್ರಿಯಲ್ಲಿ ಮುಳುಗಿದ: "ಮರೆಯುವುದು ಅಂದರೇನು? ಯಾರಿಗಾದರೂ ಎಂದಾದರೂ ಸಂಪೂರ್ಣ ಶಾಂತಿ ಸಿಕ್ಕೀತೆ? ಶಾಂತಿ ಸಿಕ್ಕರೂ ಅದು ಯಥಾರ್ಥವಾದದ್ದೊ ಅಥವಾ ಶಾಂತಿಯ ವೇಷ ಧರಿಸಿದ ನಿರಾಶಾಭಾವವೋ ಎಂಬುದನ್ನು ಹೇಗೆ ಕಂಡುಹಿಡಿಯುವುದು? ಇಂಥಾ ದಿನ, ಇಂಥಾ ಘಟನೆ ಅಥವಾ ಪದಾರ್ಥವನ್ನು ಕಂಡಾಗ ಫಕೀರನ ನೆನಪು ಮರುಕಳಿಸುವುದಿಲ್ಲವೆಂದು ಖಾತ್ರಿಯಾಗಿ ಹೇಗೆ ಹೇಳಲಾದೀತು?"

ವಾಶ್‌ಬೇಸಿನ್ನಿನ ಕಟ್ಟೆಯ ಮೇಲೆ ಅವನು ಬ್ಲೇಟನ್ನು ಇಟ್ಟ. ಎದುರಿಗಿನ ಕನ್ನಡಿಯಲ್ಲಿ ತನ್ನ ಜೋಲುಮುಖ, ಗುಳಿಬಿದ್ದ ಕಣ್ಣುಗಳನ್ನು ನೋಡಿ "ನನಗೆ ಈತನಿಂದ ಮುಕ್ತಿಯೇ ಇಲ್ಲ," ಎಂದು ಜೋರಾಗಿ ಹೇಳಿದ; ತನ್ನ ಧ್ವನಿಯನ್ನು ಕೇಳಿ ತಾನೆ ಬೆಚ್ಚಿಬಿದ್ದ.

ಆದರೆ ಸ್ವಾಭಾವಿಕವಾಗಿಯೆ ಮನುಷ್ಯ ಜಿಗುಟು ಪ್ರಾಣಿ. ಸುಲಭವಾಗಿ ಸೋಲನ್ನೊಪ್ಪುವುದು ಆತನ ಜಾಯಮಾನಕ್ಕೇ ಒಗ್ಗಿದ್ದಲ್ಲ. ತನ್ನ ತಾರ್ಕಿಕ ಶಕ್ತಿಯಿಂದಾತ ತನ್ನಲ್ಲಿ ಧೈರ್ಯ ತುಂಬಿಕೊಳ್ಳಲು ಪ್ರಾರಂಭಿಸಿದ: ಫಕೀರನ ಬಗೆಗೆ ಯೋಚಿಸುವುದೂ ಫಕೀರನಿಗೆ ಸಂಬಂಧಿಸಿದ ವಸ್ತುಗಳ ಬಗೆಗೆ ಯೋಚಿಸುವುದೂ ಹೊರನೋಟಕ್ಕೆ ಒಂದಾಗಿ ಕಂಡರೂ ಅವು ಪರಸ್ಪರ ಭಿನ್ನವಾಗಿವೆ. ಮೊದಲ ಸ್ಥಿತಿಯಲ್ಲಿ ಫಕೀರ ನನ್ನ ಸ್ವಾಮಿ, ನನ್ನ ಮೇಲೆ ಅಧಿಕಾರ ನಡೆಸಬಲ್ಲ. ಆಗ ನಾನವನ ದಾಸ. ಆದರೆ ಎರಡನೆ ಸ್ಥಿತಿಯಲ್ಲಿ ನಾನೇ ಮಾಲಿಕ ಆತ ನನ್ನ ಗುಲಾಮ. "ಹೌದು, ನಾನೇ ಅವನ ಮಾಲಿಕ" ಎಂದಾತ ಕನ್ನಡಿಯ ಮುಂದೆ ನಿಂತು ಜೋರಾಗಿ ಹೇಳಿದ.

ಇದೊಂದು ಸಾಧ್ಯತೆಯಾಗಿತ್ತು. ಎಲ್ಲಾ ಕಷ್ಟದಿಂದ ಪಾರಾಗಲು ಇದೊಂದೇ ದಾರಿ ಉಳಿದಿತ್ತು. ವಾಸ್ತವವಾಗಿ, ಅವನೀಗ ಸಂಪೂರ್ಣವಾಗಿ ಶಾಂತನಾಗಿದ್ದ. ಸೆಕೆಯಿದ್ದ ದಿನ ಸಂಜೆಯ ಮುಂದೆ ವಾಯುವಿಹಾರಕ್ಕೆಂದು ಪ್ರಾಣಿಸಂಗ್ರಹಾಲಯಕ್ಕೆ ಹೋಗುತ್ತಿದ್ದ. ಅವನ ತೂಕ ಹೆಚ್ಚಾಗುತ್ತಾ ಹೋಯಿತು. ಪ್ರತಿ ತಿಂಗಳೂ ಅವನು ತನ್ನ ತೂಕವನ್ನು ನೋಡಿಕೊಳ್ಳಲಾರಂಭಿಸಿದ. ಈಗ ಆಗಾಗ ನಿಶ್ಚಿಂತನಾಗಿ ಹಸಿರು ಗಡ್ಡದ ಫಕೀರನನ್ನು ನೆನಪಿಸಿಕೊಳ್ಳುತ್ತಿದ್ದರೂ ಅದರಿಂದೇನೂ ದುಷ್ಪರಿಣಾಮವಾಗುತ್ತಿರಲಿಲ್ಲ. ಸಮಯ ಕಳೆದ ಹಾಗೆ ಫಕೀರನ ನೆನಪು ಮನಃಪಟಲದಿಂದ ಅಳಿಸಿ ಹೋಗುವುದು ಎಂದಾತ ತನ್ನಷ್ಟಕ್ಕೆ ತಾನು ಸಮಾಧಾನ ಮಾಡಿಕೊಳ್ಳುತ್ತಿದ್ದ.

ಫಕೀರನ ನೆನಪಿನ ಆವರ್ತ ಕಡಿಮೆಯಾಗುವುದೂ ಅವನ ಮಹತ್ವ ಕಡಿಮೆಯಾಗುವುದೂ ಒಂದೇ ಎಂದಾತ ಭಾವಿಸಿದ್ದ. ಹಾಗೆ ನೋಡಿದರೆ ಅವನ ಪಾಲಿಗೆ ಇದು ಪ್ರೇಮ ಪ್ರಕರಣದಲ್ಲಿ ತೊಡಕಿಕೊಂಡಂತೆ ಇತ್ತು. ಪ್ರೇಯಸಿಯು ನಿಮ್ಮನ್ನು ಪ್ರೇಮಿಸುತ್ತಾಳೆ ಅಂದಾಗ ನಿಮ್ಮಲ್ಲಿ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಅನಂತರ ಅವಳ ಬಗ್ಗೆ ಯೋಚಿಸುವುದೂ ಯೋಚಿಸದೆ ಇರುವುದೂ ನಿಮ್ಮ ಇಚ್ಛೆಯನ್ನೆ ಅವಲಂಬಿಸಿರುತ್ತದೆ. ಮತ್ತು ಇಂಥಾ ಸಂದರ್ಭದಲ್ಲಿ ಆಗಾಗ ವಿಷಯ ಪರಿವರ್ತನೆಗಾಗಿ ನೀವು ಅವಳ ಬಗ್ಗೆ ಯೋಚಿಸುವುದೂ ಇದೆ. ಈಗಿರುವ ಪ್ರಶ್ನೆಯೆಂದರೆ ಬಲಶಾಲಿ ಯಾರು? ಮಾಲಿಕನಾರು? ನೀವೋ ಅವಳೋ ಅಥವಾ ಅವನೋ? ತಾನೋ ಅಥವಾ ಆ ಹಸಿರು ಗಡ್ಡದ ಫಕೀರನೋ?

ಒಂದು ಶನಿವಾರ ದಾಡಿ ಮಾಡಿಕೊಳ್ಳುವ ಮುಂಚೆ ಬ್ಲೇಡನ್ನು ಮಸೆಯುತ್ತಿದ್ದ. ಮಸೆಯುತ್ತಲೆ ತನಗರಿವಿಲ್ಲದೆ ಸೀಟಿ ಹಾಕುತ್ತಿದ್ದ. ಅಚಾನಕವಾಗಿ ಇದು ಅವನ ಗಮನಕ್ಕೆ ಬಂದಾಗ, "ಎಲಾ, ಎಷ್ಟೋ ದಿನಗಳ ನಂತರ ಸೀಟಿ ಹಾಕುತ್ತಿದ್ದೇನಲ್ಲಾ, ಆಶ್ಚರ್ಯ!" ಅಂದುಕೊಂಡ. ದಾಡಿ ಮುಗಿಸಿ ಸಿನಿಮಾಕ್ಕೆ ಹೋದ. ಬಹು ಅರ್ಥಹೀನ, ಕೀಳುದರ್ಜೆಯ ಸಿನೆಮಾ; ಕೇವಲ ಹಜಾಮರು ಹಾಗೂ ಅಡಿಗೆಭಟ್ಟರು ಮಾತ್ರ ವಾಹವ್ಹಾ ಅನ್ನುವ ಸಿನೆಮಾ ಅದಾಗಿತ್ತು.

ರಾತ್ರಿ ಬಟ್ಟೆ ಬದಲಿಸುವಾಗ ಅಕಸ್ಮಾತ್ತಾಗಿ ಏನೋ ಕಾರ್ಪೆಟ್ಟಿನ ಮೇಲೆ ಬಿತ್ತು. ಆತ ಕೆಳಗೆ ಬಗ್ಗಿ ಅದನ್ನು ಹೆಕ್ಕಿಕೊಂಡ–ಅದು ಅವನ ತೂಕದ ಕಾರ್ಡು ಆಗಿತ್ತು. ತೂಕ ಮೊದಲಿಗಿಂತ ಹೆಚ್ಚಾಗಿದ್ದುದನ್ನದು ಸೂಚಿಸುತ್ತಿತ್ತು. ಅದನ್ನು ನೋಡಿ ಅವನು ಸಂತೋಷದಿಂದ ಕುಣಿದಾಡಿದ. 'ಹಾಗಾದರೆ, ಆ ಸುಡುಗಾಡು ಫಕೀರ ದೆವ್ವ ಬಿಟ್ಟು ಹೋದಂತೆ ಹೋದ,' ಎಂದುಕೊಂಡು ಸಂತೋಷಪಟ್ಟ.

ಆದರೆ ಆ ರಾತ್ರಿಯೆ ಮತ್ತೆ ಆ ಹಸಿರು ಗಡ್ಡದ ಫಕೀರನ ಕನಸು ಬಿತ್ತು. ಅದರಲ್ಲಿ ಫಕೀರ ದುರ್ಬಲನಾಗಿದ್ದ. ಅವನ ಮುಗುಳ್ನಗೆಯಲ್ಲಿ ವಿಷಾದಛಾಯೆ ಎದ್ದುಕಾಣುತ್ತಿತ್ತು. ಆ ಫಕೀರ ಕಣ್ಣು ಹಾರಿಸುತ್ತಾ, "ಮಿತ್ರಾ, ನನ್ನ ಬಗ್ಗೆ ನೀನು ತಪ್ಪು ತಿಳಿದುಕೊಂಡಿರುತ್ತೀಯಪ್ಪಾ. ನಾನು ಎಂದೂ ನಿನ್ನನ್ನು ಬಿಟ್ಟು ಹೋಗಿಯೇ ಇಲ್ಲ; ನಾನು ಮೊದಲಿನಿಂದಲೂ ನಿನ್ನಲ್ಲೆ ಇದ್ದೇನೆ, ಮುಂದಾದರೂ ನಿನ್ನಲ್ಲೆ ಇರುತ್ತೇನೆ. ನನ್ನನ್ನು ಹೊರದಬ್ಬುವುದು ನಿನಗೆ ಎಂದಿಗೂ ಸಾಧ್ಯವಾಗದಪ್ಪಾ," ಎಂದು ಹೇಳುತ್ತಿದ್ದ.

ಇದಾದ ನಂತರ ಆ ಹಸಿರು ಗಡ್ಡದ ಫಕೀರನಿಂದ ಪಾರಾಗುವ ದಾರಿಯೆ ಅವನಿಗುಳಿಯಲಿಲ್ಲ. ▲

ಪ್ರತಿಯೊಬ್ಬ ಸ್ಥೂಲ ಮನುಷ್ಯನೊಳಗೂ ಒಬ್ಬ ಕೃಶ ಮನುಷ್ಯ ಅಡಗಿರುತ್ತಾನೆ. ಅವನು ತನ್ನ ಬಿಡುಗಡೆಗಾಗಿ ಹಂಬಲಿಸುತ್ತಿರುತ್ತಾನೆ.


—ಹಾಲಿನೂರಸ


# ಮೈಕ್ರೋಫೈನ್ಡ್
# ಆಸ್ಪ್ರೋ

## ಅಧಿಕ ಶೀಘ್ರವಾಗಿ ಕರಗುತ್ತದೆ,
## ಅಧಿಕ ಶೀಘ್ರವಾಗಿ ಹೀರಲ್ಪಡುತ್ತದೆ.

ಆದ್ದರಿಂದಲೇ ಅದು ನೋವು ನಿವಾರಿಸುವ ಸಾಮಾನ್ಯ ಮಾತ್ರೆಗಳಿಗಿಂತ

## ಎರಡರಷ್ಟು ಹೆಚ್ಚು ಶೀಘ್ರವಾಗಿ ನೋವನ್ನು ಉಪಶಮನಗೊಳಿಸುತ್ತದೆ



ಆಸ್ಪ್ರೋದಲ್ಲಿನ ಸೂಕ್ಷ್ಮ ಕಣಗಳು ಬಲು ಬೇಗ ಹೀರಲ್ಪಡುತ್ತವೆ, ನೋವಿನ ಮೂಲ ಸ್ಥಾನವನ್ನು ಅಧಿಕ ಶೀಘ್ರವಾಗಿ ತಲುಪುತ್ತವೆ. ನೋವನ್ನು ಬಲು ಬೇಗ ಉಪಶಮನಗೊಳಿಸುತ್ತವೆ. ಈ ಗುಣ ಸಾಮಾನ್ಯ ಮಾತ್ರೆಗಳಲ್ಲಿಲ್ಲ.

ತಲೆನೋವು • ಮೈಕೈನೋವು • ಶೀತ • ಫ್ಲೂ • ಸಂದುನೋವು • ಗಂಟಲುನೋವು • ಹಲ್ಲುನೋವು — ಇವುಗಳಿಗೆ ಮೈಕ್ರೋಫೈನ್ಡ್ **ಆಸ್ಪ್ರೋ** ಸೇವಿಸಿರಿ.

ಪ್ರಮಾಣ: ದೊಡ್ಡವರಿಗೆ — 2 ಮಾತ್ರೆಗಳು. ಅವಶ್ಯವಿದ್ದರೆ ಪುನಃ ತೆಗೆದುಕೊಳ್ಳಿರಿ. ಮಕ್ಕಳಿಗೆ — ಒಂದು ಮಾತ್ರೆ ಅಥವಾ ನಿಮ್ಮ ಡಾಕ್ಟರರ ಸಲಹೆಯ ಪ್ರಕಾರ.

## ಕೇವಲ ಆಸ್ಪ್ರೋ ಮಾತ್ರವೇ ಮೈಕ್ರೋಫೈನ್ಡ್ ಮಾಡಲಾಗಿದೆ, ನೋವನ್ನು ಶೀಘ್ರವಾಗಿ ನಿವಾರಿಸುವುದಕ್ಕಾಗಿ

A G 57

# ದಾರಿದೀಪ

ಸದಾನಂದ ಹೆಗಡೆಕಟ್ಟೆ

೧೮೬೫ ರ ಸಮಯ. ಬಂಗಾಲದಲ್ಲಿ ಎಲ್ಲೆಲ್ಲೂ ಬರಗಾಲ. ಜನ ಹಸಿವೆಯಿಂದ ಕಂಗಾಲಾಗಿದ್ದರು. ದಿನಂಪ್ರತಿ ನೂರಾರು ಜನ ಹೊಟ್ಟೆಗಿಲ್ಲದೆ ಸಾಯುತ್ತಿದ್ದರು. ಇಂತಹ ದುರ್ದಿನಗಳಲ್ಲಿ ಒಮ್ಮೆ ಈಶ್ವರಚಂದ್ರ ವಿದ್ಯಾಸಾಗರರು ಬರದ್ವಾನದ ಬೀದಿಯಲ್ಲಿ ಸಾಗುತ್ತಿದ್ದಾಗ ಹಸಿವೆಯಿಂದ ಬಳಲುತ್ತಿದ್ದ ಬಾಲಕನೊಬ್ಬ ಅವರ ಬಳಿ ಬಂದು, "ಸ್ವಾಮಿ, ಹೊಟ್ಟೆಗೇನೂ ಇಲ್ಲ, ದಯವಿಟ್ಟು ಕಾಲಾಣೆ ಭಿಕ್ಷೆ ಕೊಡುತ್ತೀರಾ ?" ಎಂದು ಅತಿ ದೈನ್ಯಭಾವದಿಂದ ಕೇಳಿದ.

"ಕಾಲಾಣೆ ಏಕೆ, ಒಂದು ಆಣೆಯನ್ನೇ ಕೊಡುತ್ತೇನೆ; ಆದರೆ ಅದನ್ನು ಹೇಗೆ ಖರ್ಚು ಮಾಡುತ್ತೀ ?" ಎಂದು ಈಶ್ವರಚಂದ್ರರು ಕೇಳಿದರು. ಕಾಲಾಣೆ ಕೇಳಿದರೆ, ಯಾರಾದರೂ ಒಂದು ಆಣೆ ಕೊಡುತ್ತಾರೆಯೆ ? ಅವರು ತನ್ನನ್ನು ಹಾಸ್ಯ ಮಾಡುತ್ತಿದ್ದಾರೆ ಎಂದು ಆ ಬಾಲಕ ಭಾವಿಸಿದ. ಅವನು, "ನಾನು ಹಸಿವೆಯಿಂದ ಸಂಕಟ ಪಡುತ್ತಿರುವಾಗ ತಮಾಷೆ ಮಾಡುತ್ತೀರಲ್ಲ, ಸ್ವಾಮಿ. ಕಾಲಾಣೆ ಭಿಕ್ಷೆ ಹಾಕಿ ಪುಣ್ಯ ಕಟ್ಟಿಕೊಳ್ಳಿ," ಅಂದ, ಇನ್ನೂ ದೈನ್ಯಭಾವದಿಂದ.

ಈಶ್ವರಚಂದ್ರರು ಸಮಾಧಾನದಿಂದಲೆ ಕೇಳಿದರು : "ತಮಾಷೆಯಲ್ಲ ತಮ್ಮಾ, ನಿಜ ಹೇಳು. ನಾನು ಒಂದಾಣೆ ಕೊಟ್ಟರೆ ಅದನ್ನೇನು ಮಾಡುತ್ತೀ ?"

"ಅರ್ಧ ಆಣೆಗೆ ಬರುವಷ್ಟು ತಿಂಡಿ ತಿಂದು ಉಳಿದ ಅರ್ಧ ಆಣೆಯನ್ನು ಅಮ್ಮನಿಗೆ ಕೊಡುತ್ತೇನೆ "

"ಹೀಗೋ, ಒಂದು ವೇಳೆ ನಾನು ನಿನಗೆ ಎರಡು ಆಣೆ ಕೊಟ್ಟರೆ ?"

ಸರಿ, ಇವರು ಕೇವಲ ತಮಾಷೆ ಮಾಡುವವರೇ ವಿನಾ ದುಡ್ಡು ಕೊಡುವವರಲ್ಲ ಅಂದುಕೊಂಡು ಬಾಲಕ ಈಶ್ವರಚಂದ್ರರನ್ನು ಅವರ ಪಾಡಿಗೆ ಬಿಟ್ಟು ತನ್ನ ದಾರಿ ಹಿಡಿದ. ಈಶ್ವರಚಂದ್ರರು ಅವನ ಕೈ ಹಿಡಿದು, "ಹೆದರಬೇಡ, ನಾನು ಎರಡಾಣೆ ಕೊಟ್ಟರೆ ಏನು ಮಾಡುತ್ತಿ ?" ಎಂದು ವಾತ್ಸಲ್ಯದಿಂದ ಕೇಳಿದರು.

ಆತ ಅಳುತ್ತಾ, "ಒಂದಾಣೆಗೆ ಬರುವಷ್ಟು ಅಕ್ಕಿಯನ್ನಾಗಲಿ ತಿಂಡಿಯನ್ನಾಗಲಿ ಕೊಂಡು ಉಳಿದ ಇನ್ನೊಂದಾಣೆಯನ್ನು ಅಮ್ಮನಿಗೆ ಕೊಡುತ್ತೇನೆ," ಅಂದ.

"ಒಂದು ವೇಳೆ ನಾನು ನಿನಗೆ ನಾಲ್ಕು ಆಣೆಗಳನ್ನು ಕೊಟ್ಟರೆ ?"

"ಎರಡಾಣೆಯಿಂದ ಎರಡು ದಿನಕ್ಕೆ ಸಾಲುವಷ್ಟು ತಿಂಡಿಯನ್ನಾಗಲಿ ಅಕ್ಕಿಯನ್ನಾಗಲಿ ಕೊಳ್ಳುತ್ತೇನೆ. ಉಳಿದ ಎರಡು ಆಣೆಗಳಿಂದ ಮಾವಿನ ಹಣ್ಣು ಕೊಂಡು ಅದನ್ನು ನಾಲ್ಕು ಆಣೆಗೆ ಮಾರುತ್ತೇನೆ."

ಇದನ್ನು ಕೇಳಿ ಈಶ್ವರಚಂದ್ರರಿಗೆ ತುಂಬಾ ಸಂತೋಷವಾಯಿತು. ಅವರು ನಾಲ್ಕಾಣೆಯ ಬದಲು ಒಂದು ರೂಪಾಯಿಯನ್ನು ಆ ಬಾಲಕನ ಕೈಗಿತ್ತು ಮುಂದೆ ನಡೆದರು.

ಇದಾಗಿ ಸುಮಾರು ಎರಡು ವರ್ಷಗಳು ಕಳೆದಿರಬೇಕು. ಈಶ್ವರಚಂದ್ರ ವಿದ್ಯಾಸಾಗರರು ಬರದ್ವಾನದ ದಾರಿಯಲ್ಲಿ ಸಾಗುತ್ತಿರುವಾಗ ಅಚ್ಚುಕಟ್ಟಾಗಿ ಉಡುಪು ತೊಟ್ಟ ಎಳೆ ತರುಣನೊಬ್ಬ ಒಂದು ಅಂಗಡಿಯಿಂದ ಹೊರಬಂದು, "ಸ್ವಾಮಿ, ಒಂದೈದು ನಿಮಿಷಗಳ ಮಟ್ಟಿಗಾದರೂ ನನ್ನ ಈ ಚಿಕ್ಕ ಹಣ್ಣಿನ ಅಂಗಡಿಗೆ ಬರುತ್ತೀರಾ ?" ಎಂದು ಕೇಳಿದ.

"ನೀವು ಯಾರು ? ಗುರುತೇ ಸಿಗಲಿಲ್ಲವಲ್ಲ ?" ಅಂದರು ಈಶ್ವರಚಂದ್ರರು ವಿಸ್ಮಯದಿಂದ.

"ಸ್ವಾಮಿ. ಈಗೆರಡು ವರ್ಷಗಳ ಹಿಂದೆ ಬರಗಾಲ ಬಿದ್ದಾಗ ನಾನು ಭಿಕ್ಷೆ ಬೇಡುತ್ತಿದ್ದೆ. ಆ ದಿನ ನಾನು ಕಾಲಾಣೆ ಭಿಕ್ಷೆ ಬೇಡಿದಾಗ ನೀವು ದೊಡ್ಡ ಮನಸ್ಸು ಮಾಡಿ ಒಂದು ರೂಪಾಯಿಯನ್ನು ಕೊಟ್ಟಿರಿ. ಅದರಿಂದಲೇ ಇಷ್ಟೆಲ್ಲಾ ಸಾಧ್ಯವಾಯಿತು ನೋಡಿ," ಎಂದು ತನ್ನ ಅಂಗಡಿಯನ್ನು ಈಶ್ವರಚಂದ್ರರಿಗೆ ತೋರಿಸಿ ಕೈ ಜೋಡಿಸಿದ.

● ಶ್ರೀನಿಧಿರಾವ್

# ಕೊಂದವರು ಯಾರು ?

ಒಂದು ರಹಸ್ಯ ಪ್ರಕರಣ

೧೯೧೪ಕ್ಕಿಂತ ಸ್ವಲ್ಪ ಮುಂಚೆ ಅಮೇರಿಕದಲ್ಲಿ ಆಗ ಪ್ರಖ್ಯಾತಳಾದ ರಹಸ್ಯಕಥಾ ಲೇಖಕಿ ಮೇರಿ ರಾಬರ್ಟ್ಸ್ ರೇನ್‌ಹಾರ್ಟಳು ಹೊಸ ಹೊಸ ಕಥಾನಕಗಳಿಗಾಗಿ ಹುಡುಕುತ್ತಿದ್ದಾಗ ಒಂದು ಅಪೂರ್ವವಾದ ಸತ್ಯಕಥೆಯನ್ನು ಕೇಳಿದಳು. "ಹರ್ಬರ್ಟ ಫುಲ್ಲರ್" ಎಂಬ ಅಮೇರಿಕನ್ ಹಡಗಿನಲ್ಲಿ ೧೮೯೬ರಲ್ಲಿ ನಡೆದ ಮೂರು ಕೊಲೆಗಳ ಮತ್ತು ಅದರ ಸಂಬಂಧದಲ್ಲಿ ಅಜೀವ ಸೆರೆಮನೆ ವಾಸ ಅನುಭವಿಸುತ್ತಿದ್ದ ನಾವಿಕನ ಸಮಾಚಾರವಾಗಿತ್ತದು ಈ ಪ್ರಕರಣದಲ್ಲಿ ಅವಳು ಎಷ್ಟು ಉತ್ಸುಕಳಾದಳೆಂದರೆ ಸ್ನೇಹಿತರ ಮೂಲಕ ಹತ್ತಾರು ವರ್ಷ ಹಿಂದಿನ ಕೋರ್ಟ್ ದಾಖಲೆಗಳ ಪ್ರತಿಗಳನ್ನು ಅವಳು ಸಂಪಾದಿಸಿ ಜತನದಿಂದ ಅಭ್ಯಸಿಸಿದಳು. ಓದಿದಷ್ಟು ಅವಳಿಗೆ ಈ ಕೊಲೆಗಳಿಗಾಗಿ ಶಿಕ್ಷೆ ಅನುಭವಿಸುತ್ತಿರುವ ಬಡಪಾಯಿ ನಿರಪರಾಧಿಯೆಂದೇ ಮನವರಿಕೆಯಾಗುತ್ತಿತ್ತು. ರಹಸ್ಯಮಯ ಅಪರಾಧಗಳ ಅಸಂಖ್ಯ ಪ್ರಕರಣಗಳನ್ನು ಸಂಶೋಧಿಸಿದ್ದ ಅವಳಿಗೆ ಅತ್ಯಂತ ಸೂಕ್ಷ್ಮವಾದ ವಿವೇಚನಾ ಶಕ್ತಿ ಬಂದಿತ್ತು. ಮತ್ತು ಈ ಪ್ರಕರಣವನ್ನು ಆಧರಿಸಿ ಅವಳು ಬರೆದ ಕಾದಂಬರಿಯ ಪರಿಣಾಮವಾಗಿ ೧೨ ವರ್ಷಗಳನ್ನು ಸೆರೆಮನೆಯಲ್ಲಿ ಕಳೆದ ಕೈದಿ ಬಿಡುಗಡೆ ಹೊಂದಿದ.

ಪ್ರಕರಣ ಭಯಂಕರವೇ ಆಗಿತ್ತು. ೧೮೯೬ ಮೇ ತಿಂಗಳಲ್ಲಿ "ಹರ್ಬರ್ಟ್ ಫುಲ್ಲರ್" ಎಂಬ ದುರ್ದೈವಿ ಹಡಗು ಬಾಸ್ಟನ್ ನಗರದಿಂದ ಅರ್ಜೆಂಟೈನ್ ಕಡೆ ಹೊರಟಿತ್ತು. ಅದರಲ್ಲಿ ನಾವಿಕರು ಸೇರಿ ಹನ್ನೊಂದು ಜನ ಗಂಡಸರು ಮತ್ತು ಕ್ಯಾಪ್ಟನ್ನ ತರುಣ ಪತ್ನಿ ಇದ್ದರು. ಹೆಚ್ಚಿನವರು ನಾವಿಕರೇ. ಅವರೂ ಪರಸ್ಪರ ಪರಿಚಯವಿಲ್ಲದ ಅಲ್ಲಲ್ಲಿ ಹೆಕ್ಕಿ ತಂದವರು. ಅದೇನು ಪ್ರವಾಸಿಗರ ಹಡಗವಾಗಿದ್ದಿಲ್ಲ. ಆದರೆ ಲೆಸ್ಟರ್ ಹಾಥಾರ್ನ್ಸ್ ಮಾಂಕ್ಸ್ ಎಂಬೊಬ್ಬ ೨೦ ವಯಸ್ಸಿನ ತರುಣ ವಿದ್ಯಾರ್ಥಿ ಆರೋಗ್ಯದ ಸಲುವಾಗಿ ಅದರಲ್ಲಿ ಪ್ರವಾಸಿಕನಾಗಿದ್ದ.

ಮೇ ೧೪ರ ರಾತ್ರಿ ಅನಿರೀಕ್ಷಿತವಾಗಿ ಗಾಳಿ ಮಳೆ ಹಡಗನ್ನು ತತ್ತರಗೊಳಿಸಿತು. ಅದರ ನಡುವೆ ತನ್ನ ಕ್ಯಾಬಿನ್ನಿನಲ್ಲಿ ನಿದ್ರಿಸುತ್ತಿದ್ದ ಮಾಂಕ್ಸ ನಿಗೆ ಭಯಂಕರ ದುಃಸ್ವಪ್ನ ಬಿದ್ದಂತಾಗಿ ಭಯಗ್ರಸ್ತನಾಗಿ ಎಚ್ಚರಗೊಂಡ ಹಡಗದ ವಿಪರೀತ ಕಿಲಿಕಿಲಿ ಶಬ್ದದ ನಡುವೆ ಯಾವುದೋ ಘೋರ ನರಳಾಟ ಮತ್ತು ಸಾಯುವವರ ಗಂಟಲ ಗೊರಗೊರವನ್ನು ಹೋಲುವ ಶಬ್ದ ಕೇಳಿಸುತ್ತಿತ್ತು. ಸ್ವಲ್ಪ ಹೊತ್ತು ಕೈಕಾಲೇ ಏಳದಂತಿದ್ದು ಕೊನೆಗೆ ಪ್ರಯತ್ನಪೂರ್ವಕ ಎದ್ದು ಆತ ತನ್ನ ಕ್ಯಾಬಿನ್ ಬಾಗಿಲು ತೆರೆದು ಹೊರಗೆ ಹಣಕಿದ.


ಹೊರಗೆ ಗಾಳಿಗೆ ತೊನೆಯುತ್ತಿದ್ದ ಲಾಟೀನಿನ ಹೊರತು ಉಳಿದದ್ದೆಲ್ಲ ಸ್ತಬ್ಧ ನಿಶ್ಶಬ್ದವಾಗಿತ್ತು. ಗೊರಗೊರ ಶಬ್ದ ಇದ್ದಿಲ್ಲ. ಹತ್ತಿರದಲ್ಲಿದ್ದ ಕ್ಯಾಪ್ಟನ್ ಮತ್ತು ಇತರ ಅಧಿಕಾರಿಗಳ ಕ್ಯಾಬಿನ್ನುಗಳು ಮುಚ್ಚಿದ್ದು ಅವರು ನಿಶ್ಚಿಂತೆಯಿಂದ ನಿದ್ರಿಸುತ್ತಿರುವಂತಿತ್ತು.

ಬಾಗಿಲು ಮುಚ್ಚಿ ಅಗಳಿ ಜಡಿದು ಮಾಂಕ್ಸ್ ಮತ್ತೆ ನಿದ್ದೆ ಹೋಗಲು ಯತ್ನಿಸಿದ. ಆದರೆ ಯಾವುದೋ ಅವ್ಯಕ್ತ ಭೀತಿ ಅವನನ್ನು ನಿದ್ರಿಸಗೊಡಲಿಲ್ಲ. ಅರ್ಧತಂದ್ರಿಯಲ್ಲಿರುವಂತೆ ಮತ್ತೆ ಭೀಕರ ಸ್ವಪ್ನ ಬಿದ್ದಂತಾಗಿ ಮತ್ತೆ ಅದೇ ಹೃದಯವಿದ್ರಾವಕ ಮೃತ್ಯುಸ್ವರ ಅವನನ್ನು ಅಲುಗಿಸಿತು. ಹೇಗೋ ಧೈರ್ಯ ತಂದುಕೊಂಡು ಬದಿಯ ಕ್ಯಾಬಿನ್ನಿನಲ್ಲೇ ಮಲಗಿದ್ದ ಕ್ಯಾಪ್ಟನ್ನನನ್ನು ಕೂಗಿ ಕರೆದ. ಉತ್ತರ ಬರಲಿಲ್ಲ. ಭಯದಿಂದ ಬೆಮ್ಮನೆ ಬೆವತಿದ್ದ ಮಾಂಕ್ಸ್ ತನ್ನ ರಿವಾಲ್ವರನ್ನು ಸೆಳೆದುಕೊಂಡು ಅದನ್ನು ಮುಂದೆ ಮಾಡಿಕೊಂಡು ಬಾಗಿಲು ತೆರೆದು ಹೊರಬಂದ.

ಲಾಟೀನ್ ಬೆಳಕಿನಲ್ಲಿ ಅವನು ಕಂಡದ್ದು ಕ್ಯಾಪ್ಟನ್ ನ್ಯಾಶನ ತಲೆಯೊಡೆದು ರಕ್ತದ ಮಡುವಿನಲ್ಲಿ ಬಿದ್ದ ಕಳೇವರ. ಅವನ ಹೆಂಡತಿಯನ್ನು ಎಬ್ಬಿಸೋಣವೆಂದು ಕ್ಯಾಬಿನ್‌ನೊಳಗೆ ಹೋದರೆ ಅಲ್ಲಿ ಶ್ರೀಮತಿ ಲ್ಯಾರಾ ನ್ಯಾಶ್‌ಳ ಬತ್ತಲೆ ಶರೀರ ಭಾರಿ ಸೆಣಸಾಟದ ಲಕ್ಷಣಗಳೊಡನೆ ರಕ್ತಸಿಕ್ತವಾಗಿ ಬಿದ್ದಿತ್ತು.

ರಿವಾಲ್ವರನ್ನು ಎದುರು ಹಿಡಿದುಕೊಂಡೇ ಹೊರಗೆ ಬಂದು ಮಾಂಕ್ಸ್ ಮೇಲಟ್ಟದಲ್ಲಿ ಗಸ್ತಿ ತಿರುಗುತ್ತಿದ್ದ ಹಡಗಿನ ಫರ್ಸ್ಟ್ ಮೇಟ್ (ಕ್ಯಾಪ್ಟನ ನಂತರದ ನೌಕಾಧಿಕಾರಿ) ಬ್ರಾಮ್‌-ನನ್ನು ಕಂಡ. ಅವನೂ ಈತನನ್ನು ಕಂಡು ಇವನ ಮೇಲೊಂದು ಕೊರಡನ್ನು ಬೀಸಿದ. ಅದ-ರಿಂದ ತಪ್ಪಿಸಿಕೊಂಡು ಮಾಂಕ್ಸ್ ಅವನನ್ನು ಕೂಗಿ





ನಡೆದದ್ದನ್ನು ಹೇಳಿದ. ಹೆದರುತ್ತಾ ಕೆಳಗೆ ಬಂದವನೇ ಬ್ರಾಮ್, "ಹಡಗಿನಲ್ಲಿ ದಂಗೆ ಎದ್ದಿದೆ. ಎರಡನೇ ಮೇಟ್ ಕ್ಯಾಪ್ಟನ್ನನ್ನು ಕೊಂದಿದ್ದಾನೆ. ಅವನೇ ಉಳಿದವರೊಡನೆ ಹಡಗನ್ನು ವಶಪಡಿಸಿಕೊಂಡಿರಬೇಕು. ಇನ್ನು ಅವನು ನನ್ನನ್ನೂ ತೀರಿಸುತ್ತಾನೆ," ಎಂದು ಗಳಗಳನೆ ಅಳತೊಡಗಿದನು. ಯಾವಾಗಲೂ ದುರಹಂಕಾರದಿಂದ ಬೀಗಿರುತ್ತಿದ್ದ ಈ ಮಹಾಶಯ ಎರಡನೇ ಮೇಟನು ಅವನ ಕ್ಯಾಬಿನ್ನಿನಲ್ಲಿದ್ದಾನೋ ಎಂದು ನೋಡುವ ಗೊಡವೆಗೂ ಹೋಗದೆ ಹೀಗೆ ವಿಲಾಪಿಸುತ್ತಿರುವುದನ್ನು ನೋಡಿ ಮಾರ್ಕ್ಸನಿಗೆ ಸೋಜಿಗವಾಗದಿರಲಿಲ್ಲ. "ನೀವು ಈ ಹಡಗದಲ್ಲಿ ಬಂದದ್ದು ಒಳ್ಳೆಯದಾಗಲಿಲ್ಲ," ಎಂದು ಬ್ರಾಮ್ ಮೊದಲೇ ಒಮ್ಮೆ ಮಾರ್ಕ್ಸನಿಗೆ ಹೇಳಿದ್ದ. "ಈ ಮುದುಕ ಕ್ಯಾಪ್ಟನ್ನನಿಗೇಕಯ್ಯಾ ಈ ಸುಂದರಿ ತರುಣ ಹೆಂಡತಿ?" ಎಂದು ನಡುನಡುವೆ ಬ್ರಾಮ್ ಹೇಳುತ್ತಿದ್ದುದನ್ನೂ ಕ್ಯಾಪ್ಟನ್ನನಿಗೂ ಅವನಿಗೂ ಸರಿಯಿಲ್ಲ ಎಂಬುದನ್ನೂ ತರುಣ ಮಾರ್ಕ್ಸ ಗಮನಿಸಿದ್ದ. ಮೇಲಾಗಿ ಆತ ಕೊರಡನ್ನು ತನ್ನ ತಲೆಗೆ ಬೀಸಿದ್ದೂ ಮಾರ್ಕ್ಸನ ಮನಸ್ಸಿನಲ್ಲಿ ಸಂದೇಹವನ್ನು ಬಿತ್ತಿತ್ತು.

ಇಬ್ಬರೂ ಶಿವಜಪ ಮಾಡುತ್ತ ರಾತ್ರಿಯನ್ನು ಕಳೆದರು. ನಸುಕು ಹರಿದೊಡನೆಯೇ ಇಬ್ಬರೂ ರಿವಾಲ್ವರು ಸಮೇತರಾಗಿ ನಾವಿಕರ ವಿಭಾಗಕ್ಕೆ ಹೋದರು. ದಂಗೆಯ ಲಕ್ಷಣವಿರಲಿಲ್ಲ. ಎಲ್ಲರೂ ನಿದ್ರಿಸುತ್ತಿದ್ದರು. ಸ್ಟುವರ್ಡ್‌ನಿಂದ ಸ್ಪೆನ್ಸನನ್ನೆಬ್ಬಿಸಿ ನಾಲ್ವರೂ ಎರಡನೇ ಮೇಟನ ಕೋಣೆಯೊಳಗೆ ನುಗ್ಗಿದರು. ಅಲ್ಲಿ ಅವನೂ ಅದೇ ರೀತಿ ಸತ್ತು ಬಿದ್ದುದನ್ನು ಕಂಡು ಅವರು ಹೌ ಹಾರಿದರು.

ಎಲ್ಲರೂ ಅಲ್ಲಿಂದ ಓಡಿಬಂದರು. ಡೆಕ್ಕಿನ ಮೇಲೆ ಕಿಂಕರ್ತವ್ಯವಿಮೂಢರಾಗಿ ನಿಂತಿದ್ದರು. ಕೆಲ ಕ್ಷಣಗಳ ನಂತರ ಬ್ರಾಮ್, "ಹಾ! ಸಿಕ್ಕಿತು" ಎಂದು ಹಲಿಗೆಗಳ ಸಂದಿನಿಂದ ಒಂದು ಕೊಡಲಿಯನ್ನು ಹೊರದೆಗೆದ. ಅದು ರಕ್ತಸಿಕ್ತವಾಗಿತ್ತು. ಉಳಿದವರು ಅದರತ್ತ ಕೈನೀಡುವ ಮೊದಲು ಬ್ರಾಮ್ ಅದನ್ನು ಬೀಸಿ ಸಮುದ್ರಕ್ಕೆ ಒಗೆದು ಬಿಟ್ಟ. ಮಾರ್ಕ್ಸನ ಸಂಶಯಕ್ಕೆ ಇದರಿಂದ ಪುಟ ದೊರೆಯಿತು. ಬ್ರಾಮ್ ಹೆಣಗಳನ್ನೂ ಸಮುದ್ರಕ್ಕೆ ಅರ್ಪಿಸಿಬಿಡಬೇಕೆಂದು ಸೂಚಿಸಿದ. ಆದರೆ ಸ್ಟುವರ್ಡ್ ದಡ ತಲುಪಿದೊಡನೆ ಕೊರೋನರರ ಪರೀಕ್ಷೆಗೆ ಹೆಣಗಳನ್ನು ಒಪ್ಪಿಸದಿದ್ದರೆ ಎಲ್ಲರಿಗೂ ಅಪಾಯವಿದೆಯೆಂದು ಹೇಳಿದ್ದರಿಂದ ಅವುಗಳನ್ನು ಕ್ಯಾನ್‌ವಾಸಿನಲ್ಲಿ ಸುತ್ತಿ ಡೆಕ್ಕಿನ ಹಿಂಬದಿಯಲ್ಲಿ ಮುಚ್ಚಿಡುವುದಾಯಿತು.

ಹಡಗಿನಲ್ಲಿ ಉಳಿದಿದ್ದ ಒಂಭತ್ತು ಜನ ಸಭೆ ಸೇರಿದರು. ಸತ್ತವರಿಗಾಗಿ ಬ್ರಾಮನೇ ಪ್ರಾರ್ಥನೆಯನ್ನು ಪಠಿಸಿದ. ಮುಂದೇನು ಮಾಡಬೇಕೆಂದು ಚರ್ಚೆಯಾಯಿತು. ಒಂಭತ್ತರಲ್ಲಿ ಅತಿ ಕಿರಿಯನಾದ ಮಾರ್ಕ್ಸ ಅಪೂರ್ವ ಧೈರ್ಯದಿಂದ ನಾಯಕತ್ವ ವಹಿಸಿದ. ನಡೆದುದೆಲ್ಲವನ್ನು ಅವನೇ ಯಥಾವತ್ತಾಗಿ ಬರೆದು ತೆಗೆದ ಒಂಭತ್ತೂ ಜನ ಸಹಿಗಳನ್ನು ಹಾಕಿದರು. ಕೊಲೆಯ ರಾತ್ರಿ ಚುಕ್ಕಾಣಿ ಚಕ್ರವನ್ನು ನಡೆಸುವ ಕೆಲಸದಲ್ಲಿದ್ದ ಚಾರ್ಲಿ ಬ್ರಾನನೆಂಬವನ ಮೇಲೆ ರಕ್ತದ ಕಲೆಗಳನ್ನು ಕಂಡೆವೆಂದು ಕೆಲವರು ಗುಸುಗುಟ್ಟಿದರು. ಆದರೆ ಬ್ರಾಮ್, ಹೇಗಸಿನ ಸಲುವಾಗಿ ಕ್ಯಾಪ್ಟನ್ ನ್ಯಾಶನಿಗೂ ಎರಡನೇ ಮೇಟನಿಗೂ ಮಾರಾಮಾರಿಯಾಗಿ ಈ ಹತ್ಯಾಕಾಂಡ ಸಂಭವಿಸಿರಬೇಕೆಂಬ ವಿಚಿತ್ರ ವಾದವನ್ನು ಮುಂದೊಡ್ಡಿ ತನ್ನ ಮೇಲಿನ ಸಂಶಯವನ್ನು ಇನ್ನಷ್ಟು ಹೆಚ್ಚಿಸಿಕೊಂಡ.

ಹಡಗು ಅರ್ಜೆಂಟೈನ್ ಕಡೆ ಮುಂದೆ ಸಾಗುವುದರಿಂದ ಫಲವಿಲ್ಲವೆಂದು ನಿಶ್ಚಯಿಸಿ ಅವರು ನೋವಾಸ್ಕೋಶಿಯಾದ ಹ್ಯಾಲಿಫಾಕ್ಸ್ ಬಂದರದತ್ತ ತಿರುಗಿಸಿದರು. ತಮಗಾರಿಗೂ ಗೊತ್ತಿಲ್ಲದಂತೆ ಬಾಸ್ಟನ್ನಿನಲ್ಲೇ ಹಡಗು ಹತ್ತಿ ಎಲ್ಲಾದರೂ ಅಡಗಿ ಕೂತು ಅಜ್ಞಾತ ಘಾತಕಿ ಈ ಕೃತ್ಯವನ್ನು ಮಾಡಿರಬಹುದೇ ಎಂಬೊಂದು ಸಂಶಯವನ್ನು ತೀರಿಸಲು ಹಡಗಿನ ಸಂದಿಸಂದಿಯನ್ನು ಬುಡಮೇಲು ಮಾಡಿದ್ದಾಯಿತು. ಈ

# ಬಾಣ ಬಿರುಸುಗಳೆಂದರೆ ಮೋಜು —ಆದರೆ ನಿಮ್ಮ ಅಡಿಗೆಮನೆಯಲ್ಲಲ್ಲ!

ಬಾಣ ಬಿರುಸುಗಳನ್ನು ನೋಡುವುದೆಂದರೆ ಎಲ್ಲರಿಗೂ ಖುಶಿ—ಆದರೆ ಅವುಗಳ ಆಟ ನಿಮ್ಮ ಅಡಿಗೆಮನೆಯಲ್ಲಿ ನಡೆಯಕೂಡದು. ನೀವು ಸಿಲಿಂಡರನ್ನು ಬರ್ನರ್‌ಗೆ ಜೋಡಿಸುವ ರಬ್ಬರ್ ಕೊಳವೆಯನ್ನು ಅಲಕ್ಷಿಸಿದರೆ ನಿಮ್ಮ ಅಡಿಗೆಮನೆಯಲ್ಲಿಯೇ ಬಾಣ ಬಿರುಸುಗಳ ದೃಶ್ಯ ನಿಮಗೆ ಕಂಡುಬರುವುದು. ಸಿಲಿಂಡರನ್ನು ಬದಲಾಯಿಸುವಾಗ ಪ್ರತಿ ಸಲವೂ ರಬ್ಬರ್ ಕೊಳವೆಯ ಸ್ಥಿತಿಯನ್ನು ಪರೀಕ್ಷಿಸಿ ನೋಡಿರಿ. ಅದು ಹಾಳಾಗಿರುವುದು ಕಂಡು ಬಂದಾಕ್ಷಣ ಅದನ್ನು ಬದಲಾಯಿಸಿರಿ.



ನಿಮ್ಮ ಮನೆಯಲ್ಲಿ ಬೆಂಕಿಯಿಂದ ಉಂಟಾಗಬಹುದಾದ ಅವಗಢಗಳನ್ನು ತಪ್ಪಿಸುವುದಕ್ಕಾಗಿ ನೀವು **ಮಾಡತಕ್ಕ** ಮತ್ತು **ಮಾಡಬಾರದಾದ** ಕೆಲವು ಮುಖ್ಯ ಸಂಗತಿಗಳನ್ನು ಇಲ್ಲಿ ಕೊಡಲಾಗಿದೆ:

**ಮಾಡತಕ್ಕ ಸಂಗತಿಗಳು** ■ ಉಪಯೋಗಿಸದಿರುವಾಗ ಸಿಲಿಂಡರ್ ವಾಲ್ವ್ ಮತ್ತು ಬರ್ನರ್ ನಾಬ್‌ಗಳನ್ನು ಬಿಗಿಯಾಗಿ ಮುಚ್ಚಿಡಿರಿ ■ ಒಂದು ಸಿಲಿಂಡರ್ ಮುಗಿದು ಇನ್ನೊಂದನ್ನು ಜೋಡಿಸುವ ಮೊದಲು, ಉರಿಯುತ್ತಿರುವ ಜ್ವಾಲೆಗಳೆಲ್ಲ ನಂದಿಹೋಗಿವೆ ಎಂದು ಖಾತ್ರಿಮಾಡಿಕೊಳ್ಳಿರಿ ■ ಸಿಲಿಂಡರನ್ನು ಜೋಡಿಸಿದ ಮೇಲೆ ರೆಗ್ಯುಲೇಟರ್ ಜಾಯಿಂಟ್‌ಗಳನ್ನು ಸಾಬೂನಿನ ದ್ರಾವಣ ಬಳಸಿ ತಾಳೆ ನೋಡಿರಿ ■ ಸಿಲಿಂಡರ್ ವಾಲ್ವ್ ತೆರೆಯುವುದಕ್ಕೆ, ಸ್ವಲ್ಪ ಒತ್ತಡ ಮಾತ್ರ ಹಾಕಿ, ಕೈ-ಚಕ್ರ (ಹ್ಯಾಂಡ್ ವ್ಹೀಲ್)ವನ್ನು ಬಲದಿಂದ ಎಡಕ್ಕೆ ಅರ್ಧ ಸುತ್ತು ತಿರುಗಿಸಿರಿ ■ ನಾಬ್ ತಿರುಗಿಸುವ ಮೊದಲು ಪ್ರಥಮವಾಗಿ, ಉರಿಯುತ್ತಿರುವ ಬೆಂಕಿಕಡ್ಡಿಯನ್ನು ಬರ್ನರ್‌ಗೆ ಹಚ್ಚಿರಿ ■ ಮುಗಿದು ಹೋದ ಸಿಲಿಂಡರ್‌ನ ಬದಲು ಹೊಸ ಸಿಲಿಂಡರನ್ನು ಅಳವಡಿಸುವಾಗ ಪ್ರತಿ ಸಲವೂ ರಬ್ಬರ್ ಕೊಳವೆಯ (ಫ್ಲೆಕ್ಸಿಬಲ್ ಹೋಸ್) ಸ್ಥಿತಿಯನ್ನು ಪರೀಕ್ಷಿಸಿ ನೋಡಿರಿ ಮತ್ತು ಅದನ್ನು ಸ್ವಚ್ಛವಾಗಿಡಿರಿ.

**ಮಾಡಬಾರದಾದ ಸಂಗತಿಗಳು** ■ ಸಿಲಿಂಡರನ್ನು ಅಡ್ಡವಾಗಿ ಇಡಬೇಡಿರಿ ■ ಗ್ಯಾಸ್ ಸಿಲಿಂಡರನ್ನು ಬೇರ್ಪಡಿಸುವ ಅಥವಾ ಜೋಡಿಸುವ ಕೆಲಸವನ್ನು ನೀವೇ ಮಾಡಬೇಡಿರಿ. ಮನೆ ಬದಲಾಯಿಸುವಾಗಲೂ ಸಿಲಿಂಡರನ್ನು ಬೇರ್ಪಡಿಸಲು ಮತ್ತು ಜೋಡಿಸಲು ನಿಮ್ಮ ಗ್ಯಾಸ್‌ನ ವಿತರಕರಿಗೇ ಹೇಳಿರಿ ■ ಸಿಲಿಂಡರ್‌ನ ವಾಲ್ವ್‌ಗಳನ್ನಾಗಲೀ, ಪ್ರೆಶರ್ ರೆಗ್ಯುಲೇಟರ್ ಅಥವಾ ಬರ್ನರ್‌ನ್ನಾಗಲೀ ಸರಿಪಡಿಸುವ ಅಥವಾ ರಿಪೇರಿ ಮಾಡುವ ಕೆಲಸವನ್ನು ನೀವೇ ಮಾಡಬೇಡಿರಿ ■ ರಬ್ಬರ್ ಕೊಳವೆಯನ್ನು ರೆಗ್ಯುಲೇಟರ್‌ನಿಂದ ಅಥವಾ ಬರ್ನರ್‌ನಿಂದ ಎಳೆಯಬೇಡಿರಿ—ಹಾಗೆ ಮಾಡಿದರೆ ಅವಗಢಗಳು ಆಗಬಹುದು ■ ರಬ್ಬರ್ ಕೊಳವೆಯನ್ನು ಬೆಂಕಿಯ ಹತ್ತಿರ ಇಡಬೇಡಿರಿ.

**ಸಲಹೆಗಳ ಕಾರ್ಡನ್ನು ನಿಮ್ಮ ವಿತರಕರಿಂದ ಪಡೆದುಕೊಳ್ಳಿರಿ, ಮತ್ತು ಆ ಸಲಹೆಗಳನ್ನು ಅನುಸರಿಸಿರಿ.**

# ಸಣ್ಣದೊಂದು ಕಿಡಿಯೂ ದೊಡ್ಡ ಜ್ವಾಲೆಯಾಗಬಹುದು!

ಸಿಲಿಂಡರನ್ನು ಬರ್ನರ್‌ಗೆ ಜೋಡಿಸುತ್ತಿರುವಾಗ ಸಿಗರೇಟ್ ಹಚ್ಚುವುದು ಕೂಡ ಅಪಾಯಕರ. ಜೋಡಿಸುವುದಕ್ಕೆ ಮೊದಲೇ ಉರಿಯುತ್ತಿರುವ ಬೆಂಕಿಯನ್ನು ನಂದಿಸಿಬಿಡಿರಿ,





**Indane** ಇಂಡೇನ್—ಅಡಿಗೆಯ ಯಾವುದೇ ಇಂಧನಕ್ಕೆ ಸಮಾನವಾಗಿ ನಿರಪಾಯಕರವಾದುದು


ನೂರಾರೆಕ್ಕೆ ಒದಗಿಸುವವರು:

ಇಂಡಿಯನ್ ಆಯಿಲ್ ಕಾರ್ಪೊರೇಶನ್ ಲಿಮಿಟೆಡ್


KANARESE

Dattaram ioc-30a

ಇಂಡೇನ್ ಸುರಕ್ಷತಾ ಪ್ರಕಟಣೆ-1-2

# ಅಡಿಗೆಯ ಗ್ಯಾಸನ್ನು  ಜತೋಪಟಿಯಲ್ಲಿಟ್ಟುಕೊಳ್ಳಿರಿ!

ಸಾಮಾನ್ಯವಾಗಿ, ಅಡಿಗೆಯ ಗ್ಯಾಸ್ ಎಂದು ಹೇಳಲ್ಪಡುವ, ದ್ರವೀಕರಣ ಮಾಡಲ್ಪಟ್ಟ ಪೆಟ್ರೋಲಿಯಂ ಗ್ಯಾಸನ್ನು ಜತೋಪಟಿಯಲ್ಲಿ ಇಟ್ಟುಕೊಂಡಿರದಿದ್ದರೆ ಬಹಳ ಅಪಾಯಕ್ಕೆ ಕಾರಣವಾಗಬಹುದು. ಅದನ್ನು ತಪ್ಪಿಸಲು ನಿಶ್ಚಿತ ಕ್ರಮುವೆಂದರೆ, ಗ್ಯಾಸನ್ನು ಉಪಯೋಗಿಸದಿರುವಾಗ ಸಿಲಿಂಡರ್ ವಾಲ್ವ್ ಮತ್ತು ಬರ್ನರ್ ನಾಬ್‌ಗಳನ್ನು ಬಿಗಿಯಾಗಿ ಮುಚ್ಚಿಡುವುದು.



[illegible] ಅವಘಡಗಳನ್ನು [illegible] ಮಾಡತಕ್ಕ ಮತ್ತು ಮಾಡಬಾರದ ಕೆಲವು ಮುಖ್ಯ [illegible]


ಮಾಡತಕ್ಕ ಸಂಗತಿಗಳು ■ ಉಪಯೋಗಿಸದಿರುವಾಗ ಸಿಲಿಂಡರ್ ವಾಲ್ವ್ [illegible] ನಾಬ್‌ಗಳನ್ನು ಬಿಗಿಯಾಗಿ ಮುಚ್ಚಿಡಿರಿ ■ ಒಂದು ಸಿಲಿಂಡರ್ [illegible] ಉರಿಯುತ್ತಿರುವ ಜ್ವಾಲೆಗಳೆಲ್ಲ [illegible] ■ ಸಿಲಿಂಡರನ್ನು [illegible] ದ್ರಾವಣ ಬಳಸಿ ತಾಳೆ [illegible] ■ ಸಿಲಿಂಡರ್ ವಾಲ್ವ್ ತೆರೆಯುವುದಕ್ಕೆ ಸ್ವಲ್ಪ ಒತ್ತಡ ಮಾತ್ರ ಹಾಕಿ, [illegible] (ಹ್ಯಾಂಡ್ ವ್ಹೀಲ್)ನ್ನು ಬಲದಿಂದ ಎಡಕ್ಕೆ ಅರ್ಧ ಸುತ್ತು ತಿರುಗಿಸಿರಿ ■ ನಾಬ್ ತಿರುಗಿಸುವ ಮೊದಲು ಸ್ಪಷ್ಟವಾಗಿ, ಉರಿಯುತ್ತಿರುವ ಬೆಂಕಿಕಡ್ಡಿಯನ್ನು ಬರ್ನರ್‌ಗೆ ಹಚ್ಚಿರಿ ■ ಮುಗಿದು ಹೋದ ಸಿಲಿಂಡರ್‌ನ ಬದಲು ಹೊಸ ಸಿಲಿಂಡರನ್ನು ಅಳವಡಿಸುವಾಗ ಪ್ರತಿ ಸಲವೂ ರಬ್ಬರ್ ಕೊಳವೆಯ (ಫ್ಲೆಕ್ಸಿಬಲ್ ಹೋಸ್) ಸ್ಥಿತಿಯನ್ನು ಪರೀಕ್ಷಿಸಿ ನೋಡಿರಿ ಮತ್ತು ಅದನ್ನು ಸ್ವಚ್ಛವಾಗಿಡಿರಿ.

ಮಾಡಬಾರದಾದ ಸಂಗತಿಗಳು ■ ಸಿಲಿಂಡರನ್ನು [illegible] ಇಡಬೇಡಿರಿ ■ ಗ್ಯಾಸ್ ಸಿಲಿಂಡರನ್ನು ಬೇರ್ಪಡಿಸುವ ಅಥವಾ ಜೋಡಿಸುವ ಕೆಲಸವನ್ನು ನೀವೇ ಮಾಡಬೇಡಿರಿ. ಮನೆ ಬದಲಾಯಿಸುವಾಗಲೂ ಸಿಲಿಂಡರನ್ನು ಬೇರ್ಪಡಿಸಲು ಮತ್ತು ಜೋಡಿಸಲು ನಿಮ್ಮ ಗ್ಯಾಸ್‌ನ ವಿತರಕರಿಗೇ ಹೇಳಿರಿ ■ ಸಿಲಿಂಡರ್‌ನ ವಾಲ್ವ್‌ಗಳನ್ನಾಗಲೀ, ಪ್ರೆಶರ್ ರೆಗ್ಯುಲೇಟರ್ ಅಥವಾ ಬರ್ನರ್‌ನ್ನಾಗಲೀ ಸರಿಪಡಿಸುವ ಅಥವಾ ರಿಪೇರಿ ಮಾಡುವ ಕೆಲಸವನ್ನು ನೀವೇ ಮಾಡಬೇಡಿರಿ ■ ರಬ್ಬರ್ ಕೊಳವೆಯನ್ನು ರೆಗ್ಯುಲೇಟರ್‌ನಿಂದ ಅಥವಾ ಬರ್ನರ್‌ನಿಂದ ಎಳೆಯಬೇಡಿರಿ — ಹಾಗೆ ಮಾಡಿದರೆ ಅವಘಡಗಳು ಆಗಬಹುದು ■ ರಬ್ಬರ್ ಕೊಳವೆಯನ್ನು ಬೆಂಕಿಯ ಹತ್ತಿರ ಇಡಬೇಡಿರಿ.

ಸಲಹೆಗಳ ಕಾರ್ಡನ್ನು ನಿಮ್ಮ ವಿತರಕರಿಂದ ಪಡೆದುಕೊಳ್ಳಿರಿ, ಮತ್ತು ಆ ಸಲಹೆಗಳನ್ನು ಅನುಸರಿಸಿರಿ.

# 'ಎಲ್ಲ-ಕಸಬುದಾರ'ನಿಗೆ ಕೈಹಾಕಲು ಬಿಡಬೇಡಿರಿ!

ಎಲ್ಲ ಕೆಲಸಗಳನ್ನು ನಾವು ನಾವೇ ಮಾಡಿಕೊಳ್ಳಬೇಕೆಂದು ಹೇಳುವ 'ಸರ್ವಜ್ಞ' ಆತ! ಆದರೆ ಅವನನ್ನು ಮರೆತುಬಿಡಿ! ಸಿಲಿಂಡರನ್ನು ಜೋಡಿಸುವ ಮತ್ತು ಬೇರ್ಪಡಿಸುವ ಕೆಲಸವನ್ನು ಅದೇ ವೃತ್ತಿಯಲ್ಲಿರುವ ತಂತ್ರಜ್ಞನಿಗೆ ಒಪ್ಪಿಸಿಬಿಡುವುದು ಲೇಸು! ಸಿಲಿಂಡರ್ ವಾಲ್ವ್, ಪ್ರೆಶರ್ ರೆಗ್ಯುಲೇಟರ್ ಅಥವಾ ಬರ್ನರ್‌ನ್ನು ಸರಿಹೊಂದಿಸುವುದು, ರಿಪೇರಿ ಮಾಡುವುದು ಮುಂತಾದ ಕೆಲಸಗಳಿಗೂ ಅವನನ್ನೇ ಕರೆಯಿರಿ. ಯಾವಾಗಲೂ ವಿತರಕನ ಸಹಾಯವನ್ನು ಪಡೆಯಿರಿ!



**Indane** ಇಂಡೇನ್-ಅಡಿಗೆಯ ಯಾವುದೇ ಇಂಧನಕ್ಕೆ ಸಮಾನವಾಗಿ ನಿರಪಾಯಕರವಾದುದು

ಮಾರಾಟಕ್ಕೆ ಒದಗಿಸುವವರು: ಇಂಡಿಯನ್ ಆಯಿಲ್ ಕಾರ್ಪೊರೇಶನ್ ಲಿಮಿ

KANARESE
Dattaram-IOC-29e

ಒಂಭತ್ತರ ಹೊರತು ಒಂದು ಜಂತುವೂ ಹಡಗಿನಲ್ಲಿರಲಿಲ್ಲ.

ಹಗಲು ಹೇಗೋ ಸಂದಿತು. ಮದ್ಯದ ಧಾರೆ ಅವರ ಧೈರ್ಯವನ್ನು ಕಾಪಾಡುತ್ತಿತ್ತು. ಆದರೆ ರಾತ್ರಿಯ ಕತ್ತಲೆ ಆವರಿಸುತ್ತಲೇ ಪ್ರತಿಯೊಬ್ಬರ ಹೃದಯವೂ ಭಯದಿಂದ ತತ್ತರಿಸತೊಡಗಿತು. ಮೂರು ಕೊಲೆಗಳು ಆಗಿದ್ದವು. ಈಗ ಹಡಗಿನಲ್ಲಿ ಉಳಿದಿದ್ದ ಒಂಭತ್ತರಲ್ಲಿ ಒಬ್ಬನು ಅದನ್ನು ಮಾಡಿರಬೇಕು. ಆದರೆ ಯಾರು? ಯಾವ ಉದ್ದೇಶದಿಂದ? ಆತನಿಗೆ ಇನ್ನೂ ಯಾರನ್ನಾದರೂ ಕೊಲ್ಲುವ ಉದ್ದೇಶವುಂಟೆ? ಎಲ್ಲರನ್ನೂ ನಾಶಮಾಡಿ ಹಡಗನ್ನು ಬ್ರಾಮ್ ಹೇಳುವಂತೆ ವಶಪಡಿಸಿಕೊಂಡು ಸಮುದ್ರಗಳ್ಳನಾಗುವ ಯೋಜನೆಯನ್ನು ಆತ ಹಾಕಿಕೊಂಡಿರಬಹುದೆ?

ಪ್ರತಿಯೊಬ್ಬನೂ ಜೀವಭಯದಿಂದ ವ್ಯಗ್ರನಾಗಿದ್ದನು. ಅಪರಂಪಾರ ಸಾಗರದಲ್ಲಿ ಅಪಾಯಕಾರಿ ಕೊಲೆಗಡುಕನೊಡನೆ ಅವರು ಇನ್ನೂ ಎಷ್ಟೋ ದಿನ ಕಳೆಯಬೇಕಾಗಿತ್ತು. ಯಾವನೊಬ್ಬನಿಗೂ ಈ ಸ್ಥಿತಿಯಲ್ಲಿ ಕಣ್ಣಿಗೆ ಕಣ್ಣು ಹತ್ತುವುದು ಸಾಧ್ಯವಿರಲಿಲ್ಲ. ಎಲ್ಲರೂ ತಮ್ಮ ಬಂದೂಕುಗಳ ಕುದುರೆಗಳ ಮೇಲೆ ಬೆರಳಿಟ್ಟುಕೊಂಡೇ ಶಿವರಾತ್ರಿ ಮಾಡುತ್ತ ಉಳಿದರು.

ಹೀಗೆ ಆರು ಹಗಲು ಆರು ರಾತ್ರಿ ಕಳೆದವು. ಯಾರೂ ಒಂದು ನಿಮಿಷವೂ ನಿದ್ರಿಸಲಿಲ್ಲ. ಎಲ್ಲರ ಮುಖಗಳಲ್ಲೂ ಹೆಣದ ಕಳೆ ಸುರಿಯುತ್ತಿತ್ತು. ಬ್ರಾಮನ ಹೊರತು ಯಾರೂ ತುಟಿ ಬಿಚ್ಚುತ್ತಿರಲಿಲ್ಲ. ಆದರೆ ಕಡೆಗೊಬ್ಬ ನಾವಿಕ ಕೊಲೆಯ ರಾತ್ರಿ ಕರ್ಣ (ಚುಕ್ಕಾಣಿ) ಧಾರನಾದ ಚಾರ್ಲಿ ಬ್ರೌನ್ ಒಟ್ಟೆ ಬದಲಿಸುತ್ತಿದ್ದುದನ್ನು ತಾನು ಕಂಡುದಾಗಿ ಹೇಳಿದ. ಬ್ರೌನನು ಸುಳ್ಳು ಹೆಸರಲ್ಲಿ ಕೆಲಸಕ್ಕೆ ಸೇರಿದ್ದಾನೆಂದೂ ಅವನ ಹೆಸರು ನಿಜವಾಗಿ ಜಸ್ಟಿನ್ ಲಿಯೋಪಾಲ್ಡ್ ವೆಸ್ಟರ್‌ಬರ್ಗನೆಂದೂ ಇನ್ನೊಬ್ಬ ಬಾಯಿಬಿಟ್ಟ. ಆದರೆ ಚುಕ್ಕಾಣಿ ಹಿಡಿದಿದ್ದಾತ ಆ ಮಳೆಗಾಳಿ ರಾತ್ರಿಯಲ್ಲಿ ತನ್ನ ಸ್ಥಳ ಬಿಟ್ಟು ಈ ಖೂನಿಗಳನ್ನು ಮಾಡಲು ಸಾಧ್ಯವೇ ಎಂಬ ಪ್ರಶ್ನೆ ಇತ್ತು. ಆದರೂ ಸುರಕ್ಷಿತತೆಯ ದೃಷ್ಟಿಯಿಂದ ಬ್ರಾಮ್, ಸ್ಪೆನ್ಸ್ ಮತ್ತು ಮಾಂಕ್ಸ್ ನಿರ್ಣಯ ಕೈಕೊಂಡು ಬ್ರೌನನನ್ನು ಬಂಧಿಸಲು ಅಪ್ಪಣೆ ಕೊಟ್ಟರು. ಆತ ಪ್ರತಿಭಟಿಸಲಿಲ್ಲ. "ಅನ್ಯಾಯ ಮಾಡುತ್ತಿದ್ದೀರಿ," ಎಂದಷ್ಟೇ ಗೊಣಗಿದ.

ಇದಾದ ಬಳಿಕ ಅಪರಾಧಿ ಸಿಕ್ಕಿಬಿದ್ದಿರುವುದರಿಂದ ಇನ್ನು ಅಂದು ಬರೆದ ಕಾಗದವನ್ನು ಹರಿದುಹಾಕಿಬಿಡೋಣ ಎಂದು ಬ್ರಾಮ್ ಮತ್ತೊಂದು ಅಧಿಕಪ್ರಸಂಗ ಮಾಡಿದ. ಅನಂತರ ಸೆರೆಯಾಳು ಬ್ರೌನ್ ತಾನು ಆ ಕರಾಳ ರಾತ್ರಿಯಲ್ಲಿ ಏನೋ ಸಪ್ಪಳ ಕೇಳಿ ಕೂತಲ್ಲೇ ತಿರುಗಿ ನೋಡಿದಾಗ ಕೊಡಲಿ ಏರಿಳಿಯುವುದನ್ನು ಕಂಡದ್ದಾಗಿಯೂ ಬ್ರಾಮ್ ಚಾರ್ಟ್ ರೂಮಿನಿಂದ ಹೊರಬರುವುದನ್ನು ತಾನು ಕಂಡಿದ್ದೇನೆಂದೂ ಉಸುರಿದ. ಆ ರಾತ್ರಿ ಬ್ರಾಮ್‌ನನ್ನೂ ಹಿಡಿದು ಬೇಡಿ ತೊಡಿಸಿದರು. ಅವನು ಕ್ಯಾಪ್ಟನ್ನನ ಹೆಂಡತಿಯ ಮೇಲೆ ಕಣ್ಣಿಟ್ಟಿದ್ದನೆಂಬುದನ್ನು ಎಲ್ಲರೂ ಬಲ್ಲವರಾಗಿದ್ದರು. "ನಾನು ನಿರಪರಾಧಿ," ಎಂದು ಬ್ರಾಮ್ ಅತ್ತ.

ಇಬ್ಬರಲ್ಲಿ ಒಬ್ಬರಂತೂ ಕೊಲೆಗಡುಕನಾಗಿರಬೇಕು. ಇನ್ನು ನಿಶ್ಚಿಂತೆಯಿಂದ ನಿದ್ರಿಸಬಹುದೆಂಬುದು ಅವರ ಆಶೆಯಾಗಿತ್ತು. ಆದರೆ ಕತ್ತಲು ದಟ್ಟೈಸುತ್ತಿದ್ದಂತೆ ಮತ್ತೆ ಸಂದೇಹ ಕಾಡತೊಡಗಿತು. ಈ ಇಬ್ಬರಲ್ಲೊಬ್ಬನೇ ಕೊಲೆಗಡುಕ ಎಂಬುದು ಅಷ್ಟು ಖಂಡಿತವೇ? ಬ್ರಾಮ್ ಕೊಂದವನಾಗಿದ್ದರೆ, ಅದೂ ಕೊಡಲಿಯಿಂದ, ಅವನ ಮೈಗೆ ಒಂದು ಹನಿ ರಕ್ತ ಕೂಡ ಸಿಡಿಯದಿರುವುದು ಸಾಧ್ಯವೇ? ಕರ್ಣಧಾರ ಕೊಲೆ ಮಾಡಿದ್ದರೆ ಅವನು ಚಕ್ರವನ್ನು ಬಿಟ್ಟು ಅಷ್ಟೆಲ್ಲ ಹೊತ್ತು ಈ ಆತತಾಯಿತನದಲ್ಲಿ ಮಗ್ನನಾಗಿರುವಾಗ ಹಡಗು ತನ್ನ ಗತಿಯಲ್ಲಿ ಅಕ್ಷುಣ್ಣವಾಗಿ ಸಾಗುವುದು ಸಾಧ್ಯವಿತ್ತೇ? ಅವನು ನಾಮಾಂತರ ಮಾಡಿಕೊಂಡಿದ್ದ ಮಾತ್ರಕ್ಕೆ ಅವನು ಈ ಘೋರ ಕೃತ್ಯಕ್ಕಿಳಿದನೆಂದು ನಂಬುವುದು ಹೇಗೆ? ಇವ-

ರಿಬ್ಬರಲ್ಲದೆ ಉಳಿದ ಏಳು ಜನರಲ್ಲೇ ನಿಜವಾದ ಅಪರಾಧಿ ನಿರಾಪದವಾಗಿ ತಿರುಗುತ್ತ ಇನ್ನೂ ಏನೇನಾದರೂ ಹೊಂಚು ಹಾಕುತ್ತಿರಬಹುದೇ?

ಹೀಗೆ ಪ್ರಾಣಭೀತರಾದ ಆ ಜನರು ಏಳನೇ ರಾತ್ರಿಯನ್ನು ಕಣ್ಣಿನಲ್ಲೇ ಬೆಳಗು ಮಾಡಿದರು. ಎಂಟು, ಒಂಭತ್ತು, ಹತ್ತು, ಹನ್ನೊಂದು, ಹನ್ನೆರಡು, ಹದಿಮೂರನೇ ರಾತ್ರಿ ಕೂಡ ನಿರ್ವಿಘ್ನವಾಗಿಯೇ ಕಳೆದವು. ಹದಿನಾಲ್ಕನೇ ದಿನ ಈ ಒಂಭತ್ತು ಜನರು ಹ್ಯಾಲಿಫಾಕ್ಸಿನಲ್ಲಿ ಯಂತ್ರ ನಿಯಂತ್ರಿತರಂತೆ ಶೂನ್ಯ ದೃಷ್ಟಿಗಳನ್ನೂ ಕೃಶ ಶರೀರಗಳನ್ನೂ ಒಡಗೊಂಡು ಬಂದಿಳಿದಾಗ ಅವರಿಗೆ ಕೊನೆಗೊಮ್ಮೆ ತಮ್ಮ ಜೀವ ಸುರಕ್ಷಿತವೆನಿಸಿತು.

ಬಾಸ್ಟನ್ನಿನ ಫೆಡರಲ್ ನ್ಯಾಯಾಲಯದಲ್ಲಿ ವಿಚಾರಣೆ ಆರಂಭವಾಯಿತು. ಇಬ್ಬರು ಕೈದಿಗಳಲ್ಲಿ ಒಬ್ಬನು ಅಪರಾಧಿಯೆಂಬುದರಲ್ಲಿ ಜೂರಿಗಳಿಗೂ ಸಂಶಯ ಬರಲಿಲ್ಲ. ಚಾರ್ಲಿ ಬ್ರೌನನ ವಿಷಯದಲ್ಲಿ ಅವನು ಸುಳ್ಳು ಹೆಸರಿಂದ ಸಂಚರಿಸುತ್ತಿದ್ದನೆಂಬುದೊಂದಲ್ಲದೇ ಹಿಂದೆ ನರಹತ್ಯೆ ಮಾಡುವ ಮನೋವೃತ್ತಿಯುಳ್ಳವನಾಗಿದ್ದನೆಂದೂ ಸಾಕ್ಷ್ಯಗಳು ಬಂದವು. ಆದರೆ ಜೂರಿಗಳು ಕೊನೆಗೆ ಆರೋಪ ಹೊರಿಸಿದ್ದು ಬ್ರ್ಯಾಮನ ಮೇಲೆಯೆ. ತನ್ನ ಚರ್ಯೆಯಿಂದಲೇ ಅವನು ಸಂಶಯವನ್ನು ತಂದುಕೊಳ್ಳುತ್ತಿದ್ದ.

ತುಂಬಾ ಉದ್ಧಟತನದಿಂದ ಯಾವಾಗಲೂ ವರ್ತಿಸಿ ಎಲ್ಲ ನಾವಿಕರಿಗೂ ಅಪ್ರಿಯನಾಗಿದ್ದ ಆತ ಕೊಲೆಯ ಕ್ಷಣದಿಂದ ತೀರ ಸಪ್ಪನೂ ಅಳುಬುರುಕನೂ ಆಗಿದ್ದ. ಹಿಂದೊಮ್ಮೆ ಅವನು ಹಡಗಿನಲ್ಲಿ ದಂಗೆಯೆಬ್ಬಿಸಲು ಪ್ರಯತ್ನಿಸಿದ್ದನೆಂದು ಕೆಲ ಸಾಕ್ಷ್ಯಗಳು ದೊರೆತವು. ದಂಗೆಯೆಬ್ಬಿಸಿ ಎಲ್ಲಾ ನಾವಿಕರನ್ನು ಕೊಂದು ಹಡಗನ್ನು ವಶಪಡಿಸಿಕೊಂಡು ಕಡಲಗಳ್ಳತನದಿಂದ ಹಣ ಶೇಖರಿಸಿ ಚೈನಿಯಾಗಿ ಬದುಕುವ ಮಹತ್ವಾಕಾಂಕ್ಷೆ ಅವನಿಗಿತ್ತೆಂದೂ ಹೇಳಲಾಯಿತು.

"ನೀನು ನಿರಪರಾಧಿಯಾಗಿದ್ದರೆ ಕೊಲೆಯ ಸುದ್ದಿ ತಿಳಿಯುವುದಕ್ಕೂ ಮೊದಲು ಮಂಕನನ್ನು ಕಂಡೊಡನೆ ಅವನ ಮೇಲೆ ಕೊರಡನ್ನೇಕೆ ಬೀಸಿದೆ?" ಎಂದು ಅವನಿಗೆ ಪ್ರಶ್ನಿಸಲಾಯಿತು.

"ರಿವಾಲ್ವರ್ ಹಿಡಿದುಕೊಂಡು ಹೊರಟವನನ್ನು ಕಂಡು ನಾನು ಮತ್ತೇನು ಮಾಡಬಹುದಿತ್ತು?" ಎಂದು ಬ್ರ್ಯಾಮ್ ಸಹಜವಾಗಿಯೇ ಉತ್ತರವಿತ್ತ.

"ಕೊಲೆ ಮಾಡಿದ ಕೊಡಲಿ ಸಿಕ್ಕಿದ ಕೂಡಲೇ ನೀವು ಅದನ್ನು ಸಮುದ್ರಕ್ಕೆ ಒಗೆದದ್ದು ಯಾಕೆ?"

"ಅದರಿಂದ ಇನ್ನೂ ಯಾರಾರ ಕೊಲೆಯಾದೀತೋ ಎಂಬ ಭಯದಿಂದ." ಇದೂ ನ್ಯಾಯವಾದ ಉತ್ತರವೇ ಆಗಿತ್ತು.

ಆದರೆ ಕ್ಯಾಪ್ಟನ್ನನ ಹೆಂಡತಿಯ ಬಗ್ಗೆ ಆತ ಆಡುತ್ತಿದ್ದ ಮಾತು, ಮೊದಲವೇ ಎರಡನೇ ಮೇಟರ ಮೇಲೆ ಆತ ಹೊರಿಸುತ್ತಿದ್ದ ಮಿಥ್ಯಾರೋಪ ಮೊದಲಾದ ಸಂಗತಿಗಳು ಜೂರಿಗಳ ಸಂದೇಹವನ್ನು ದೃಢಪಡಿಸಲು ಕಾರಣವಾದವು. ಚಾರ್ಲಿ ಬ್ರೌನನ ಹೇಳಿಕೆಗಳಲ್ಲಿನ ಅಸಾಂಗತ್ಯವಾಗಲಿ ಅವನು ಚುಕ್ಕಾಣಿ ಚಕ್ರವನ್ನು ಬಿಗಿಯಾಗಿ ಹಗ್ಗದಿಂದ ಕಟ್ಟಿಬಿಟ್ಟು ಹಡಗು ನಿಶ್ಚಿತ ಪಥದಲ್ಲಿ ಸಾಗುವಂತೆ ಮಾಡಿ ಅಲ್ಲಿಂದೆದ್ದು ಬಂದು ಕೊಲೆ ಮಾಡುವುದು ಅಸಾಧ್ಯವಾಗಿರಲಿಲ್ಲ ಎಂದು ಪಳಗಿದ ನಾವಿಕರು ಕೊಟ್ಟ ಸಾಕ್ಷ್ಯಗಳಾಗಲಿ ಜೂರಿಗಳ ಮನಸ್ಸಿಗೆ ನಾಟಲಿಲ್ಲ. ಬದಲಿಗೆ ಚಾರ್ಲಿ ಕಿಡಕಿಯಿಂದ ಕೊಲೆ ನಡೆಯುವುದನ್ನು ಕಂಡೆ ಎಂದು ಹೇಳಿದ್ದನ್ನು ಅನುಲಕ್ಷಿಸಿ, ಅವರು ಹಡಗನ್ನೇರಿ ಹೋಗಿ ಚುಕ್ಕಾಣಿ ಚಕ್ರದ ಹತ್ತಿರ ಕೂತವನಿಗೆ ಕಿಟಕಿಯಿಂದ ಕೊಲೆಯಾದ ಸ್ಥಳ ಕಾಣಿಸಲು ಸಾಧ್ಯವೇ ಎಂದು ಪರೀಕ್ಷಿಸಿ ನೋಡಿದರು. ಸಾಧ್ಯವೆಂದು ಅವರಿಗೂ ಅನಿಸಿತು. ರಕ್ತದ ಕಲೆ ಇತ್ಯಾದಿಗಳು ಮಹತ್ವ ಪಡೆಯಲೇ ಇಲ್ಲ.

ಆದರೂ ಹನ್ನೆರಡು ಜನ ಜೂರಿಗಳಲ್ಲಿ ಅಭಿಪ್ರಾಯ ಏಕರೂಪವಾಗಿರಲಿಲ್ಲ. ಅವರು ಇಪ್ಪತ್ತಾರು ತಾಸುಗಳ ವರೆಗೆ ಮುಚ್ಚಿದ ಕೋಣೆಯಲ್ಲಿ ಚರ್ಚಿಸಿದರು. ಐವತ್ತು ಸಲ ಮತಗಳನ್ನು

ತೆಗೆದುಕೊಂಡರು. ಕೊನೆಗೆ ಆ ಸ ಹ ಸೀ ಯ ಆಯಾಸದಿಂದಲೋ ಏನೋ ಬ್ರಾಮನನ್ನು ತಪ್ಪಿತಸ್ಥನೆಂದು ತೀರ್ಮಾನಿಸಿ ಹೊರಬಿದ್ದರು. ಇಂಥ ಖೂನಿಗಳಿಗೆ ಮರಣದಂಡನೆಗಿಂತ ಕಡಿಮೆಯ ಶಿಕ್ಷೆ ಕಾನೂನಿನಲ್ಲಿ ಇದ್ದಿಲ್ಲವಾಗಿ ಅವನನ್ನು ಸಾಯುವ ವರೆಗೆ ಗಲ್ಲಿಗೇರಿಸಬೇಕು ಎಂದು ನ್ಯಾಯಾಧೀಶರು ೧೯೦೭ ರ ಹೊಸ ವರ್ಷದ ದಿನ ತೀರ್ಪು ಕೊಟ್ಟು ಕೈತೊಳೆದುಕೊಂಡರು.

ಕೇಸು ಅಪೀಲಿಗೆ ಹೋಯಿತು. ಅಲ್ಲಿ ಬಾಸ್ಟನ್ ಕೋರ್ಟು ಮಾಡಿದ್ದ ಕೆಲ ತಪ್ಪುಗಳನ್ನು ವರಿಷ್ಠ ನ್ಯಾಯಾಲಯದವರು ಎತ್ತಿ ತೋರಿಸಿದ್ದರಿಂದ ಬ್ರಾಮನ ಮರುವಿಚಾರಣೆಯಾಗಬೇಕಾಯಿತು. ಅಷ್ಟರಲ್ಲಿ ಕಾನೂನು ಬದಲಾಗಿ ಆಜೀವ ಸೆರೆಮನೆ ವಾಸಕ್ಕೆ ಆಸ್ಪದ ಮಾಡಿಕೊಟ್ಟಿತ್ತು. ಈ ಸಲದ ಜೂರಿಗಳು ಬೇರೆಯೇ ಆಗಿದ್ದರೂ ಅವರು ಮೊದಲಿನ ತೀರ್ಪಿಗೇ ಬಂದರು. ಆದರೆ ಬ್ರಾಮನಿಗೆ ಆಜೀವ ಸೆರೆಮನೆ ವಾಸ ವಿಧಿಸಲು ಶಿಫಾರಸು ಮಾಡಲಾಯಿತು. ೧೯೦೮ ಎಪ್ರಿಲಿನಲ್ಲಿ ಬ್ರಾಮನನ್ನು ಕೈಬೇಡಿ ತೊಡಿಸಿ ಅಟ್ಲಾಂಟಾ ಸೆರೆಮನೆಗೆ ಸಾಗಿಸಲಾಯಿತು. ಈ ಸಲ ಬ್ರಾಮ್ಸ್ ತನ್ನ ಹಳೇ ಸ್ವಭಾವದಂತೆ ತಿರಸ್ಕಾರ–ಅಹಂಕಾರ ಬೆರತ "ಹುಂ"ಕಾರ ಹೊರಡಿಸಿ ತನ್ನನ್ನು ಹಿಡಿದಿಡುವ ಸೆರೆಮನೆಯೇ ಇಲ್ಲ ಎಂದು ಜಂಬ ಕೊಚ್ಚಿಕೊಂಡ.

ಹದಿನೇಳು ವರ್ಷಕಾಲ ಅವನು ಅಟ್ಲಾಂಟಾ ಸೆರೆಮನೆಯಲ್ಲಿ ಕೊಳೆಯುತ್ತ ಇದ್ದ. ಫರಾರಿಯಾಗುವ ಪ್ರಯತ್ನವನ್ನೇನೂ ಅವನು ಮಾಡಲಿಲ್ಲ.

ಈ ನಡುವೆ ಅವನ ಪ್ರಕರಣ ಕಾದಂಬರಿಕೀರ್ತಿ ರೇನ್‌ಹಾರ್ಟಳ ಗಮನಕ್ಕೆ ಬಂದಿತ್ತು. ಈ ಪ್ರಕರಣದಲ್ಲಿ ನ್ಯಾಯದಾನ ದಾರಿತಪ್ಪಿತ್ತೆಂದು ಅವಳಿಗೆ ಮನವರಿಕೆಯಾಗಿ ಬಿಟ್ಟಿತು. ಅದರ ಮೇಲೊಂದು ಕಾದಂಬರಿಯನ್ನವಳು ಬರೆದಳು. ಕಥೆಯಲ್ಲಿ ಕಾಲ್ಪನಿಕ ಪಾತ್ರಗಳೂ ಪ್ರೇಮ ಪ್ರಕರಣಗಳೂ ಇದ್ದರೂ ಸಾಗರ ಮಧ್ಯದಲ್ಲಿ ರಹಸ್ಯಪೂರ್ಣ ಹತ್ಯಾಕಾಂಡವೇ ಅದರ ಕೇಂದ್ರ ವಸ್ತುವಾಗಿತ್ತು. ಅದರಲ್ಲಿ ಕೊಲೆಗಡುಕ ಪ್ರಥಮ ಮೇಟನಾಗಿರಲಿಲ್ಲ—ಚುಕ್ಕಾಣಿ ಹಿಡದ ಚಾರ್ಲಿಯಾಗಿದ್ದ. ಅವಳು ಆತನಿಗೆ ಚಾರ್ಲಿ ಜೋನ್ಸ್ ಎಂಬ ಸ್ವಲ್ಪ ಮಾತ್ರ ವ್ಯತ್ಯಸ್ತವಾದ ಹೆಸರು ಕೊಟ್ಟಿದ್ದಳಷ್ಟೇ.

೧೯೧೪ರಲ್ಲಿ After the House ಎಂಬ ಈ ಕಾದಂಬರಿ ಹೊರಬಿದ್ದೊಡನೆಯೆ ರೇನ್‌ಹಾರ್ಟಳ ಮನೆಗೊಂದು ಮುಂಜಾನೆ ಅಮೇರಿಕದ ಹಿಂದಿನ ಅಧ್ಯಕ್ಷ ಥಿಯೊಡೋರ್ ರೂಜವೆಲ್ಟ್ ಆಗಮಿಸಿದ. ಆತ ಅವಳ ಕಾದಂಬರಿಯಿಂದ ಪ್ರಭಾವಿತನಾಗಿದ್ದ. ಚಾರ್ಲಿಯನ್ನೇ ನಿಜವಾದ ಹಂತಕನಾಗಿ ಭಾವಿಸಲು ಕಾರಣವೇನೆಂದು ಕೇಳಿದ. ಅವಳು ತನ್ನ ಸಂಶೋಧನೆಗಳ ವಿವರಗಳನ್ನೆಲ್ಲ ನೀಡಿದಳು.

ರೇನ್‌ಹಾರ್ಟಳ ಕಾದಂಬರಿಯನ್ನು ಓದಿ ಕಸಿವಿಸಿಗೊಂಡವರಲ್ಲಿ ಆಗಿನ ಅಧ್ಯಕ್ಷ ವಿಲ್ಸನ್ನನೂ ಒಬ್ಬ. ಈ ಇಬ್ಬರು ಮಹಾಪುರುಷರ ಪ್ರಯತ್ನದಿಂದಲೇ ಇರಬೇಕು, ೧೯೧೫ರಲ್ಲಿ ಬ್ರಾಮನನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಿದರು. ಮುಂದೆ ವಿಲ್ಸನ್ ಆತನಿಗೆ ಪೂರ್ಣ ಕ್ಷಮಾದಾನ ಮಾಡಿದನು.


ಬಹುಶಃ ತನ್ನ ದುರಾಚಾರದ ಅಧಿಕ ಪ್ರಸಂಗದಿಂದಲೇ ಈ ಅನರ್ಥ ಪರಂಪರೆಗೆ ಗುರಿಯಾದ ಬ್ರಾಮ್ ಬಹುಕಾಲ ಅದೇ ಅಟ್ಲಾಂಟಾದಲ್ಲಿ ಅತ್ಯಂತ ನಿಷ್ಕಲ್ಮಷವಾದ ಜೀವನವನ್ನು ಕಳೆದ. ರೇನ್‌ಹಾರ್ಟಳಿಗೆ ಬರೆದ ಪತ್ರದಲ್ಲಿ ದೇವರಾಣೆಗೂ ತಾನು ನಿಷ್ಕಾರಣವಾಗಿ ಕಷ್ಟ ಅನುಭವಿಸಿದೆ ಎಂದು ಹೇಳಿದ್ದಾನೆ. ಅತ್ತ ರೇನ್‌ಹಾರ್ಟಳು ನಿಜವಾದ ಅಪರಾಧಿಯೆಂದು ಚಿತ್ರಿಸಿದ ವ್ಯಕ್ತಿ ಬ್ರೌನ್ ಅವಳು ಚಿತ್ರಿಸಿದಂತೆಯೆ ನರಹತ್ಯಾ ಪ್ರವೃತ್ತಿಯುಳ್ಳವನಾಗಿದ್ದ. ಸ್ಟಾಕ್‌ಹೋಂ (ಅವನ ಹುಟ್ಟುನಾಡು ಸ್ವೀಡನ್ ಆಗಿತ್ತು) ನ ಒಂದು ಆಸ್ಪತ್ರೆಯಲ್ಲಿ ಒಬ್ಬ ನರ್ಸಳನ್ನು ಇರಿದುಕೊಲ್ಲಲು ಯತ್ನಿಸಿದನೆಂದು ಸುದ್ದಿ ಆಮೇಲೆ ಬಂತು. ▲

# ಪೃಥ್ವೀರಾಜ ಕಪೂರ್

ಕೆ. ಟಿ. ವೇಣುಗೋಪಾಲ

ಈ ಶತಮಾನದ ಮೊದಲ ದಶಕದೊಂದಿಗೆ ಈ ಕತೆಯು ಆರಂಭವಾಗುತ್ತದೆ. ಪಂಜಾಬಿನ ಸಮುಂದ್ರಿ ಎಂಬ ಒಂದು ಚಿಕ್ಕ ಪಟ್ಟಣ. ದಿವಾನ್ ಸಾಹಬ್ ಕೇಶೋಮಲ್ ಕಪೂರ್ ಎಂಬ ಗಣ್ಯವ್ಯಕ್ತಿ ಅಲ್ಲಿನ ತಹಶೀಲದಾರ. ತಹಶೀಲದಾರನೆಂದರೆ ದೊರೆಗೆ ಸಮಾನನೆಂದು ಭಾವಿಸಲಾಗುತ್ತಿದ್ದ ಕಾಲವದು. ತನ್ನ ನ್ಯಾಯನಿಷ್ಠೆಯಿಂದ ದಿವಾನ್ ಕೇಶೋಮಲ್ ಕಪೂರ್ ಆ ಪ್ರದೇಶದಲ್ಲೆಲ್ಲಾ ಜನಪ್ರಿಯ ಅಧಿಕಾರಿಯಾಗಿದ್ದ. ಆದರೆ ಈ ಕತೆ ಆತನ ಮೊಮ್ಮಗನಿಗೆ ಸಂಬಂಧಿಸಿದ್ದು. ೧೯೦೬ ರ ನವೆಂಬರ್ ೩ ರಂದು ಆತನ ಜನನ. ಪೋಲೀಸು ಪಡೆಯಲ್ಲಿದ್ದ ತಂದೆಗೆ ಆಗಾಗ್ಗೆ ವರ್ಗವಾಗುತ್ತಿದ್ದುದರಿಂದ ಈ ಹುಡುಗನನ್ನು ಅಜ್ಜನ ರಕ್ಷಣೆಯಲ್ಲಿ ಇರಿಸಲಾಗಿತ್ತು.

ಪೃಥ್ವೀರಾಜ ಎಂದವನ ಹೆಸರು. ಆದರೆ ಮನೆಯವರಿಗೆ ಆತ ಪ್ರೀತಿಯ 'ಪೃಥಿ'. ಸುಖ ಸಮೃದ್ಧಿಯ ಜೀವನ. ಆದರೆ ಪೃಥಿಯನ್ನು ಅಜ್ಜ, 'ಅಜ್ಜ ಸಾಕಿದ ಮಗು'ವಾಗಿ ಬೆಳೆಸಲಿಲ್ಲ. ಮುಂದೆ ಭಾರತೀಯ ಚಿತ್ರರಂಗದ ಮಹಾ ಕಲಾವಿದನಾಗಲಿದ್ದ ಈ ಹುಡುಗ ಚಿಕ್ಕಂದಿನಲ್ಲಿ ಬಹಳ ಕಟ್ಟುನಿಟ್ಟಿನಲ್ಲಿ ಬೆಳೆದ. ಆ ಬಗ್ಗೆ ಪೃಥ್ವೀರಾಜರೇ ಹೇಳಿದ ಒಂದು ಘಟನೆ: "ತಾತನ ಭವನದಲ್ಲಿ ಸಾಕಷ್ಟು ಆಳುಕಾಳುಗಳಿದ್ದರೂ ಅಲ್ಲಿರುವ ದೀಪಗಳನ್ನೆಲ್ಲಾ ಬೆಳಗಿಸುವ ಜವಾಬ್ದಾರಿಯನ್ನು ನನಗೆ ವಹಿಸಲಾಗಿತ್ತು. ಒಂದು ಸಂಜೆ ಮನೆಗೆ ಬಂದ ಹಿರಿಯರೊಬ್ಬರು ನನ್ನ ಕೆಲಸವನ್ನು ಕಂಡು ತಾತನಲ್ಲಿ ಈ ಬಗ್ಗೆ ಕೇಳಿದರು. ತಾತ ಉತ್ತರಿಸಿದರು: 'ಆತನ ಮುಂದಿನ ಜೀವನವನ್ನು ರೂಪಿಸಲು ಈ ಚಿಕ್ಕ ಪಾಠ ಕಾರಣವಾಗುತ್ತದೆ. ಯಾವುದೇ



ಸಣ್ಣ ಕೆಲಸವಾದರೂ ಅದರಲ್ಲಿ ಶ್ರದ್ಧೆಯಿಡಲು ಆತ ಕಲಿಯುತ್ತಾನೆ. ಮತ್ತೆ, ದೀಪದ ಬುರುಡೆಗಳನ್ನು ಸ್ವಚ್ಛ ಮಾಡುತ್ತಾ ಮಾಡುತ್ತಾ ಆತ ತನ್ನ ಹೃದಯದ ಬುರುಡೆಯನ್ನೂ ಸ್ವಚ್ಛವಾಗಿರಿಸಲು ಕಲಿಯುತ್ತಾನೆ.' ಈ ಎರಡು ಪಾಠಗಳನ್ನು ಪೃಥ್ವೀರಾಜ ಎಂದೂ ಮರೆಯಲಿಲ್ಲ. ಪ್ರಸಿದ್ಧಿಯ ತುತ್ತತುದಿಯನ್ನು ಏರಿದ ಬಳಿಕ ಕೂಡ, ತಮ್ಮ ಪಾತ್ರ ಎಷ್ಟೇ ಚಿಕ್ಕದಾಗಿದ್ದರೂ ಅದರಲ್ಲಿ ಅಶ್ರದ್ಧೆ ತೋರಿಸುತ್ತಿರಲಿಲ್ಲ. ಬೆಡಗಿನ ಚಿತ್ರರಂಗದಲ್ಲಿದ್ದೂ ತಮ್ಮ ಹೃದಯವನ್ನು ಕೊನೆಯವರೆಗೂ ಸ್ವಚ್ಛವಾಗಿರಿಸಿದ್ದರು.

ಸಮುಂದ್ರಿಯ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗಿನಿಂದಲೂ ಪೃಥ್ವಿಗೆ ಅಭಿನಯದ ಹುಚ್ಚು. ಅಧ್ಯಾಪಕ ಲಲ್ಲಾ ನಾರಾಯಣ ದಾಸ ದುಆ ಹುಡುಗನ ಈ ಹುಚ್ಚಿಗೆ ಒತ್ತಾಸೆ ಕೊಡುತ್ತಿದ್ದರು. ಶಾಲಾನಾಟಕದಲ್ಲಿ ಲಕ್ಷ್ಮಣನಾಗಿ ಮೊದಲ ಬಾರಿ ಬಣ್ಣ ಹಚ್ಚಿ ರಂಗಕ್ಕೆ ಬಂದಾಗ ಪೃಥ್ವಿಗೆ ಬರೇ ಎಂಟು ವರ್ಷಗಳು. ಮುಂದೆ ಪೇಶಾವರದ ಎಡ್ವರ್ಡ್ಸ್ ಕಾಲೇಜಿನಲ್ಲಿ ಎತ್ತರದ ಆಕರ್ಷಕ ನಿಲುವಿನ ಈ ಯುವಕ ಹೆಚ್ಚಾಗಿ ಅಭಿನಯಿಸಿದ್ದು ಸ್ತ್ರೀಪಾತ್ರಗಳನ್ನು ಎಂಬುದು ತುಸು ಸೋಜಿಗದ್ದು.

೧೬ ನೇ ವಯಸ್ಸಿಗೆ ಪೃಥ್ವೀರಾಜ್ ಮೊದಲ ದರ್ಜೆಯಲ್ಲಿ ಮೆಟ್ರಿಕ್ ಪಾಸಾದ. ಆ ಕಾಲದ ಸಂಪ್ರದಾಯದಂತೆ ೧೭ನೆಯ ವಯಸ್ಸಿಗೆ ರಾಮ ಶರಣಿಯೊಂದಿಗೆ ಪೃಥ್ವಿಯ ವಿವಾಹವಾಯಿತು. ಕಾಲೇಜು ಮೆಟ್ಟಲು ಹತ್ತಿದೊಡನೆ ಮೊದಲ ಮಗ ರಣಧೀರ ಹುಟ್ಟಿದ (ಮುಂದೇ ಇದೇ ಮಗು ರಾಜ ಕಪೂರ್ ಎಂಬ ಹೆಸರಿನಲ್ಲಿ ಹಿಂದಿ ಚಿತ್ರರಂಗದ ಪ್ರಸಿದ್ಧ ನಟ, ನಿರ್ದೇಶಕ, ನಿರ್ಮಾಪಕನಾದ). ೧೯೨೭ರಲ್ಲಿ ಎರಡನೆಯ ದರ್ಜೆಯಲ್ಲಿ ಪೃಥ್ವಿ ಬಿ. ಎ. ಪಾಸಾದ. ಮುಂದೆ ಲಾಹೋರಿಗೆ ಕಾಯದೆಯ ಅಧ್ಯಯನಕ್ಕೆಂದು ಪ್ರಯಾಣ. ಆದರೆ ಮೊದಲ ವರ್ಷ ಅನುತ್ತೀರ್ಣವಾದುದರೊಂದಿಗೆ ಪೃಥ್ವಿ ತನ್ನ ಜೀವನದಲ್ಲಿನ ಅತಿ ದೊಡ್ಡ ನಿರ್ಧಾರವನ್ನು ಕೈಕೊಂಡ—ಅಭಿನಯವನ್ನೇ ಜೀವನ ವೃತ್ತಿಯನ್ನಾಗಿಸಿಕೊಳ್ಳುವುದು.

ಯಾರಿಂದಲೋ ೨೦೦ ರೂಪಾಯಿ ಸಾಲ ತೆಗೆದುಕೊಂಡು ಚಿತ್ರರಂಗದಲ್ಲಿ ತನ್ನ ಭವಿಷ್ಯವನ್ನು ನಿರ್ಧರಿಸಲು ಪೃಥ್ವೀರಾಜ್ ಲಾಹೋರಿಂದ ಹೊರಟ. ಅಲ್ಲಿ ಏನೂ ಸಾಗಲಿಲ್ಲ. ಅಲ್ಲಿಂದ ಕಲಕತ್ತಾದತ್ತ. ಅಲ್ಲೂ ನಿರಾಶೆ ಕಾದಿತ್ತು. ಮುಂದೆ ಮುಂಬಯಿಯತ್ತ ಪ್ರಯಾಣ.

೧೯೨೯ರ ಸಪ್ಟೆಂಬರ್ ೨೯ರಂದು ಪೃಥ್ವೀರಾಜ್ ಕುಲಾಬಾ ನಿಲ್ದಾಣ*ದಲ್ಲಿ ಕಾಲಿರಿಸಿದ. ಕೈಯಲ್ಲಿ ೭೦ ರೂಪಾಯಿಗಳು ಮತ್ತು ಒಂದಿಷ್ಟು ಆತ್ಮವಿಶ್ವಾಸ ಮಾತ್ರ ಇದ್ದುವು. ಗೆಳೆಯರೊಬ್ಬರ ನೆರವಿನಿಂದ ಅಂದಿನ ಪ್ರಸಿದ್ಧ ನಿರ್ಮಾಪಕ, ನಿರ್ದೇಶಕ ಅರ್ದೇಶಿರ್ ಇರಾಣಿಯೊಂದಿಗೆ ಸಂದರ್ಶನವಾಯಿತು. ಫಲ, ಇಂಪೀರಿಯಲ್ ಫಿಲಂ ಕಂಪೆನಿಯಲ್ಲಿ ಎಕ್ಸ್ಟ್ರಾ ಆಗಿ ಪ್ರವೇಶ. ಆದರೆ ಪ್ರತಿಫಲ ಶೂನ್ಯ! ಅದೇ ರೀತಿ 'ಚಾಲೆಂಜ್', 'ವೆಡಿಂಗ್ ನೈಟ್' ಇತ್ಯಾದಿ ಮೂರು ಚಿತ್ರಗಳಲ್ಲಿ ಎಕ್ಸ್ಟ್ರಾ ಆಗಿ ಅಭಿನಯಿಸಿದ—ಅದನ್ನು ಅಭಿನಯ ಎನ್ನಬಹುದಾದರೆ. ಕೈಯಲ್ಲಿನ ಹಣ ಖರ್ಚಾಗುತ್ತಿತ್ತು. ಆಗ ಪೃಥ್ವೀರಾಜ್ ಹೊಸತೊಂದು ತಂತ್ರವನ್ನು ಹೂಡಿದರು. ತಮ್ಮ ಅಂಗಸೌಷ್ಠವ ಇತರರ ಮೇಲೆ ಪ್ರಭಾವ ಬೀರುವಂತೆ ಸ್ಟುಡಿಯೊದಲ್ಲಿ ಅರೆಬತ್ತಲೆಯಾಗಿ ಸಂಚರಿಸಹತ್ತಿದರು. ಉದ್ದೇಶ ಫಲಿಸಿತು. ಕಡೆದ ಗ್ರೀಕ್ ಪ್ರತಿಮೆಯಂತಿದ್ದ ಈ ಯುವಕನನ್ನು ನಾಯಕನನ್ನಾಗಿ ಆರಿಸಲಾಯಿತು. ತಿಂಗಳಿಗೆ ೭೦ ರೂಪಾಯಿ ವೇತನ. ಆ ಕಾಲದ ಪ್ರಸಿದ್ಧ ನಟಿ ಎರ್ಮೆಲಿನ್‌ಳೊಂದಿಗೆ 'ಸಿನೆಮಾ ಗರ್ಲ್' ಚಿತ್ರದಲ್ಲಿ ಅಭಿನಯಿಸುವುದರೊಡನೆ ಚಿತ್ರರಂಗದಲ್ಲಿ ಪೃಥ್ವೀರಾಜರ ಭವಿಷ್ಯ ನಿರ್ಧಾರವಾಯಿತು. ಈ ಯಶಸ್ಸಿನಿಂದ ಉತ್ಸಾಹಿತನಾದ

---

* ಅಂದು ಮುಂಬಯಿಯಲ್ಲಿ ಇಂದಿನ ಚರ್ಚ್ ಗೇಟ್ ದಾಟಿ ಕುಲಾಬದಲ್ಲಿ ರೈಲು ಕೊನೆಗೊಳ್ಳುತ್ತಿತ್ತು.

ಈ ತರುಣ ತನ್ನ ಕುಟುಂಬದವರನ್ನು ಮುಂಬಯಿಂದ ಕರೆಸಿಕೊಂಡ. ೧೯೨೯ರಿಂದ ೧೯೩೧ರ ವರೆಗೆ ಪೃಥ್ವೀರಾಜ ಒಟ್ಟು ೯ ಮೂಕ ಚಿತ್ರಗಳಲ್ಲಿ ಅಭಿನಯಿಸಿದರು.

೧೯೩೧. ಇಂಪೀರಿಯಲ್ ಫಿಲಂ ಕಂಪೆನಿಯವರಿಂದಲೇ ನಿರ್ಮಿತವಾದ ಪ್ರಥಮ ಭಾರತೀಯ ವಾಕ್ಚಿತ್ರದಲ್ಲಿ ಪೃಥ್ವೀರಾಜ ಅಭಿನಯಿಸಿದರು. ಈಗ ಪೃಥ್ವೀರಾಜ್ ವೇತನ ೨೦೦ ರೂಪಾಯಿಗಳಿಗೇರಿತು.

ಚಿತ್ರರಂಗವನ್ನು ವೃತ್ತಿಯಾಗಿಸಿಕೊಂಡರೂ ಪೃಥ್ವೀರಾಜರ ಮೊದಲ ಪ್ರೇಮ ನಾಟಕರಂಗ. ಅದೇ ಸಮಯದಲ್ಲಿ ಮುಂಬಯಿಗೆ ಬಂದ ಪ್ರಸಿದ್ಧ ಇಂಗ್ಲೀಷು ನಟ ಗ್ರಾಂಟ್ ಆ್ಯಂಡರ್ಸನ್ ಭಾರತೀಯ ತರುಣರನ್ನು ಸೇರಿಸಿ ಒಂದು ನಾಟಕ ಕಂಪೆನಿ ರೂಪಿಸಿದ. ಪೃಥ್ವೀರಾಜ ಈ ಸಂಘದ ಪ್ರಧಾನ ನಟನಾಗಿ ಸೇರಿ ಷೇಕ್ಸ್‌ಪಿಯರನ ಹಲವು ನಾಟಕಗಳೊಂದಿಗೆ ಸಂಸ್ಕೃತ ನಾಟಕಗಳ ಇಂಗ್ಲೀಷು ರೂಪಗಳಲ್ಲಿ ಅಭಿನಯಿಸಿದರು. ಜೂಲಿಯಸ್ ಸೀಜರ್‌ನಲ್ಲಿನ ಕ್ಯಾಶಿಯಸ್ ಪಾತ್ರ, ಮೃಚ್ಛಕಟಿಕದ ಆಧಾರದಿಂದ ರೂಪಿಸಿದ 'ಟಾಯ್ ಕಾರ್ಟ್' (Toy Cart) ನಲ್ಲಿನ ಚಾರುದತ್ತನ ಪಾತ್ರಗಳಲ್ಲಿ ಪೃಥ್ವಿರಾಜ ಬಹಳ ರಂಜಿಸಿದರು.

ನಾಟಕಗಳು ಜನಪ್ರಿಯವಾದರೂ ಆರ್ಥಿಕ ಅಡಚಣೆ ತಪ್ಪದೆ ೧೯೩೨ರಲ್ಲಿ ಕಲಕತ್ತಾದಲ್ಲಿ ಕಂಪನಿ ಕೊನೆಯುಸಿರೆಳೆದ ಮೇಲೆ ಹಿಂದೊಮ್ಮೆ ಈ ಕಲಾವಿದನನ್ನು ಬರಿಗೈಯಲ್ಲಿ ಹಿಂತಿರುಗಿಸಿದ ಕಲಕತ್ತಾ ಚಿತ್ರರಂಗ ಈ ಬಾರಿ ಆದರದಿಂದ ಸ್ವಾಗತಿಸಿತು. ನ್ಯೂ ಥಿಯೇಟರ್ಸ್‌ನ ಹಲವು ಚಿತ್ರಗಳಲ್ಲಿ, ದೇವಕಿ ಬೋಸ್, ಪಿ. ಸಿ. ಬರುವಾ, ಎ. ಆರ್. ಕರ್ದಾರ್ ಮುಂತಾದ ಪ್ರಸಿದ್ಧ ವ್ಯಕ್ತಿಗಳ ನಿರ್ದೇಶಕತ್ವದಲ್ಲಿ ಪೃಥ್ವೀರಾಜ ಅಭಿನಯಿಸಿದರು. 'ಸೀತಾ', 'ಅಭಾಗಿನ್' 'ಮಂಜಿಲ್', 'ದುಷ್ಮನ್' ಮುಂತಾದವು ಪೃಥ್ವೀರಾಜ ಕಲಕತ್ತಾದಲ್ಲಿ ಅಭಿನಯಿಸಿದ ಚಿತ್ರಗಳು.

ಏಳು ವರ್ಷಗಳ ಕಲಕತ್ತಾ ವಾಸದ ಬಳಿಕ ಪ್ರಸಿದ್ಧಿ ಮತ್ತು ಕೈತುಂಬಾ ಹಣವಾದೊಡನೆ ಪೃಥ್ವಿರಾಜ್ ಮುಂಬಯಿಗೆ ಹಿಂತಿರುಗಿದರು. ರಣಜಿತ್ ಮೂವಿಟೋನಿನ ಚಂದೂಲಾಲ್ ಶಹಾ ತಮ್ಮ ಹಿರಿಯ ನಟರ ಸಾಲಿನಲ್ಲಿ ಪೃಥ್ವೀರಾಜರನ್ನು ಸೇರಿಸಿದರು. ಆದರೆ ಪೃಥ್ವೀರಾಜ್ ಸಂಬಳದ ಮೇಲೆ ಒಂದೇ ಕಂಪನಿಗೆ ತಮ್ಮ ಕಲೆಯನ್ನು ಮಾರಿಕೊಳ್ಳಲೊಪ್ಪದೆ ಫ್ರೀ ಲಾನ್ಸ್ ಆಗಿ ಅಭಿನಯಿಸಲು ನಿರ್ಧರಿಸಿದರು. ಮಿನರ್ವಾ, ವಾಡಿಯಾ, ಶಾಲಿಮಾರ್, ಡಿ ಆರ್. ಡಿ ಪ್ರೊಡಕ್ಷನ್ಸ್ ಹೀಗೆ ಹಲವು ಚಿತ್ರಸಂಸ್ಥೆಗಳ ಚಿತ್ರಗಳಲ್ಲಿ ಪೃಥ್ವಿರಾಜ್ ಕಾಣಿಸಿಕೊಂಡರು. ಮಿನರ್ವಾರ 'ಸಿಕಂದರ' ಚಿತ್ರದಲ್ಲಿ ಪೃಥ್ವೀರಾಜ ಅಭಿನಯಿಸಿದ ಸಿಕಂದರನ ಪಾತ್ರ ಅವಿಸ್ಮರಣೀಯವಾಗಿತ್ತು.

ಸಿನಿಮಾದಲ್ಲಿ ಧಾರಾಳ ಕೀರ್ತಿಯನ್ನೂ ಹಣವನ್ನೂ ಗಳಿಸಿದರೂ ನಾಟಕರಂಗದ ಆಸಕ್ತಿ ಅವರನ್ನು ಕೊನೆಯವರೆಗೆ ಬಿಟ್ಟು ಹೋಗಲಿಲ್ಲ. ಹಿಂದೀ ನಾಟಕರಂಗ ಆ ಕಾಲದಲ್ಲಿ ಹಲವು ಆಭಾಸಗಳಿಂದ ಕೂಡಿತ್ತು. ರಂಗದಲ್ಲಿ ಸತ್ತ ಪಾತ್ರ ಎದ್ದು ಹಾಡು ಹೇಳಿ ಪುನಃ ಸಾಯುವುದೂ ಇತ್ತಂತೆ! ಕೆಳದರ್ಜೆಯ ತಮಾಷೆಗಳು, ಮಿತಿ ಮೀರಿದ ಹಾಡುಗಳು ಎಲ್ಲಾ ನಾಟಕಗಳಲ್ಲಿರುತ್ತಿದ್ದವು. ಚಿಕ್ಕಂದಿನಿಂದಲೇ ನಾಟಕರಂಗ ವಾಸ್ತವ ಜೀವನದ ದರ್ಪಣವಾಗಿರಬೇಕೆಂದು ಪೃಥ್ವೀರಾಜ ದೃಢವಾಗಿ ನಂಬಿದ್ದರು. ಇದನ್ನು ಕಾರ್ಯರೂಪಕ್ಕೆ ತರಲು ಪ್ರಸಿದ್ಧ ಪೃಥ್ವಿ ಥಿಯೇಟರ್ಸ್ ೧೯೪೪ರಲ್ಲಿ ರೂಪುಗೊಂಡಿತು. ಮೊತ್ತ ಮೊದಲ ನಾಟಕವಾಗಿ 'ಶಾಕುಂತಲ'ದ ಆಯ್ಕೆಯಾಯಿತು. ಆದರದೂ ಒಂದು ಕಥೆ ಬೇರೊಬ್ಬ ನಾಟಕ ನಿರ್ಮಾಪಕ ಸರಳ ಹಿಂದಿಯಲ್ಲಿ 'ಶಾಕುಂತಲ' ನಾಟಕವನ್ನು ಬರೆಯಲು ಒಬ್ಬ ಕವಿಯನ್ನು ನಿಯಮಿಸಿ ಅದು ಮುಗಿದಾಗ ಮನಸ್ಸು ಬದಲಿಸಿದ್ದ. ಬಡ ಕವಿಯ ದುಡಿಮೆ ವ್ಯರ್ಥವಾಗಬಾರದೆಂದು ಪೃಥ್ವೀರಾಜ ಈ ನಾಟಕವನ್ನು ಆರಿಸಿದರು. ತಮ್ಮ ಎಲ್ಲಾ ಉಳಿತಾಯವನ್ನು

ಪೃಥ್ವೀರಾಜ ಈ ನಾಟಕಕ್ಕಾಗಿ ವೆಚ್ಚ ಮಾಡಿದರು. ಆ ಕಾಲದ ಪ್ರಸಿದ್ಧ ನಟಿ ಮುಮತಾಜ್ ಶಕುಂತಲಾ ಪಾತ್ರಕ್ಕೆ ನಿಯಮಿತಳಾದಳು. ಆದರೆ ಈ ಸಾಹಸದಲ್ಲಿ ಸುಮಾರು ಲಕ್ಷ ರೂಪಾಯಿಗಳಷ್ಟು ಹಣ ನಷ್ಟವಾಯಿತು. ಆದರೂ ಪೃಥ್ವೀರಾಜ ತಮ್ಮ ಎಲ್ಲಾ ನಟರು ಮತ್ತಿತರ ಸಿಬ್ಬಂದಿಗಳಿಗೆ ಎರಡು ತಿಂಗಳ ಬೋನಸ್ ಕೊಟ್ಟರಂತೆ!

'ಶಾಕುಂತಲ'ದ ವಿಫಲತೆಯಿಂದ ಸೋಲೊಪ್ಪದೆ ಪೃಥ್ವೀರಾಜ ಪೌರಾಣಿಕ, ಐತಿಹಾಸಿಕ ನಾಟಕಗಳ ಬದಲಿಗೆ ಸಮಕಾಲೀನ ಸಮಸ್ಯೆಗಳ ಸುತ್ತ ಹೆಣೆದ ನಾಟಕಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತಹ ಸರಳ ಹಿಂದಿಯಲ್ಲಿ ಬರೆಸಿ ಆಡಹತ್ತಿದರು. ಭಾರತವೆಲ್ಲ ಅಂದು ಪ್ರಕ್ಷುಬ್ಧವಾಗಿತ್ತು. ದೇಶವಿಭಜನೆಯ ಸುದ್ದಿ ಎಲ್ಲೆಲ್ಲೂ ಕೇಳಿಸುತಿತ್ತು. ಪೃಥ್ವೀರಾಜ ಇದೇ ವಿಷಯವನ್ನಾಧರಿಸಿ ಬರೆಸಿದ 'ದೀವಾರ್' (ಗೋಡೆ) ನಾಟಕ ಪ್ರದರ್ಶಿಸಿದರು. ದೀವಾರ್‌ನಲ್ಲಿನ ಇಬ್ಬರು ಸಹೋದರರು ಹಿಂದು ಮತ್ತು ಮುಸ್ಲಿಮರನ್ನು ಪ್ರತಿನಿಧಿಸುತ್ತಾರೆ. 'ದೀವಾರ್'ನ ಯಶಸ್ಸಿನಿಂದ ಪ್ರೇರಿತರಾಗಿ ಇಂತಹದೇ ಹಲವು ನಾಟಕಗಳನ್ನು ಪೃಥ್ವೀರಾಜ ರಂಗಕ್ಕೆ ತಂದರು. ೧೬ ವರ್ಷಗಳ ಆಯುಷ್ಯದಲ್ಲಿ ಪೃಥ್ವಿ ಥಿಯೇಟರ್ಸ್ ಒಟ್ಟು ಎಂಟು ನಾಟಕಗಳ ೨೬೦೦ ಪ್ರದರ್ಶನಗಳನ್ನು ದೇಶಾದ್ಯಂತ ನೀಡಿತು. ಇವುಗಳಲ್ಲೆಲ್ಲಾ ಪೃಥ್ವೀರಾಜ ಸ್ವತಃ ಪಾತ್ರವಹಿಸಿದ್ದರು.

'ದೀವಾರ್'ನ ಬಳಿಕ ಬಂದ 'ಪಠಾನ್', 'ಗದ್ದಾರ್' (ವಂಚಕ), 'ವಿದ್ರೋಹಿ' ಎಲ್ಲಾ ಹಿಂದೂ–ಮುಸ್ಲಿಂ ಸಮಸ್ಯೆಯನ್ನು ಪ್ರತಿಪಾದಿಸಿದವುಗಳೇ. ಆ ಬಳಿಕ ಬಂದ 'ಕಲಾಕಾರ' ಹಳ್ಳಿಯ ಮುಗ್ಧ ತರುಣಿ ವಿವಾಹಿತಳಾಗಿ ನಗರಕ್ಕೆ ಬಂದ ಕತೆ. ಆಧುನಿಕತೆಗೆ ಮಾರುಹೋಗಿ ಮನುಷ್ಯ ತನ್ನ ಜೀವನದ ನಿಜವಾದ ಮೌಲ್ಯಗಳನ್ನು ಕಳೆದುಕೊಳ್ಳುವುದನ್ನು ಈ ನಾಟಕ ಸಾರುತ್ತದೆ. ಮುಂದಿನ 'ಪೈಸಾ' ಮತ್ತು ಕೊನೆಯ 'ಕಿಸಾನ್' ನಾಟಕಗಳು ಜನಪ್ರಿಯವಾದುದಲ್ಲದೆ ಪೃಥ್ವೀರಾಜರಿಗೂ ಹಿಂದೀ ನಾಟಕರಂಗಕ್ಕೂ ಕೀರ್ತಿಯನ್ನು ತಂದವು. ಆದರೆ ಆರ್ಥಿಕವಾಗಿ ಪೃಥ್ವೀರಾಜರ ಈ ಪ್ರಯತ್ನವೂ ಪರಾಜಯವೆ. ನಾಟಕಗಳಿಂದಾಗುವ ನಷ್ಟವನ್ನು ತುಂಬಿಕೊಳ್ಳಲು ಪೃಥ್ವೀರಾಜ ಸಿನಿಮಾದಲ್ಲಿ ಅಭಿಸುತ್ತಿದ್ದರು. ಆಗ ತಾನೇ ಚಿತ್ರರಂಗದಲ್ಲಿ ಪ್ರಸಿದ್ಧರಾಗುತ್ತಿದ್ದ ಪೃಥ್ವೀರಾಜರ ಪುತ್ರರೂ ತಮ್ಮ ತಂದೆಗೆ ನೆರವಾಗುತ್ತಿದ್ದರು. ಕೊನೆಕೊನೆಗೆ ನಾಟಕಗಳು ಮುಗಿದ ಬಳಿಕ ಮಂದಿರದ ಬಾಗಿಲಲ್ಲಿ ತಮ್ಮ ಶಾಲಿನ ಸೆರಗನ್ನು ಎತ್ತಿ ಹಿಡಿದು ಪ್ರೇಕ್ಷಕರ ಸಹಾಯವನ್ನು ಈ ಮಹಾನಟ ಯಾಚಿಸುತ್ತಿದ್ದುದನ್ನು ಈಗಲೂ ಮುಂಬಯಿಯ ಜನ ಸ್ಮರಿಸುತ್ತಿದ್ದಾರೆ. ಆದರೆ ಕೊನೆಗೂ ೧೯೬೦ ರ ಮೇ ತಿಂಗಳಲ್ಲೊಂದು ದಿನ ಕೊನೆಯ ಪ್ರದರ್ಶನದೊಂದಿಗೆ ಪೃಥ್ವಿ ಥಿಯೇಟರ್ಸ್ ಕಣ್ಣು ಮುಚ್ಚಿತು.

ಆದರೆ ಈ ಹದಿನಾರು ವರ್ಷಗಳಲ್ಲಿ ಪೃಥ್ವೀರಾಜ ಹಿಂದೀ ನಾಟಕರಂಗಕ್ಕೆ ಒಂದು ಹೊಸ ರೂಪವನ್ನು ತಂದುಕೊಟ್ಟರು. ಅಲ್ಲಿ ತರಬೇತನ್ನು ಪಡೆದ ಅವರ ಪೃಥ್ವಿಯ ಪುತ್ರರಾದ ರಾಜ, ಶಮ್ಮಿ, ಶಶಿಯು ಹೊರತಾಗಿ ಪ್ರೇಮನಾಥ, ರಾಜೇಂದ್ರನಾಥ, ಸಜ್ಜನ್, ಕಮಲ ಕಪೂರ್, ರವೀಂದರ್ ಕಪೂರ್, ಸುಬರಾಜ್ ಮುಂತಾದ ನಟರೂ ಸಂಗೀತ ನಿರ್ದೇಶಕರಾದ ಶಂಕರ–ಜೈಕಿಷನ್, ಲೇಖಕರಾದ ರಮಾನಂದ ಸಾಗರ್, ಮೋಹನ ಸೈಗಲ್, ಇಂದರರಾಜ ಆನಂದ ಮೊದಲಾದವರು ಮುಂದೆ ಅತುಲ ಪ್ರಸಿದ್ಧಿಗೆ ಬಂದರು.

ಪೃಥ್ವೀರಾಜರು ಸಿನೇಮಾದಲ್ಲಿ ಅಭಿನಯಿಸುತ್ತಲೇ ಹೋದರು. ೧೯೬೦ರಲ್ಲಿ ಹೊರಬಂದ 'ಮೊಘಲ್–ಏ–ಅಜಂ'ನಲ್ಲಿ ಚಿತ್ರರಂಗದ ಈ ಸಮ್ರಾಟ ಸೆಲ್ಯುಲಾಯಿಡ್‌ನಲ್ಲಿ ಅಕ್ಬರ್ ಸಮ್ರಾಟನನ್ನು ಜೀವಂತನನ್ನಾಗಿಸಿದರು. ಆ ಬಳಿಕ ಕೂಡ ಕ್ಯಾರೆಕ್ಟರ್ ಪಾತ್ರಗಳನ್ನು ಅಭಿ-

ನಯಿಸುತ್ತಲೇ ಇದ್ದರು. ಕನ್ನಡ 'ಸಾಕ್ಷಾತ್ಕಾರ'-ದಲ್ಲೂ ಈ ಮಹಾನ್ ನಟ ಕೊನೆಗಾಲದಲ್ಲಿ ಅಭಿನಯಿಸಿದ್ದರು. ಕೊನೆಕೊನೆಯ ಪೃಥ್ವೀರಾಜ ಚಿತ್ರಗಳಲ್ಲಿ ಶ್ರೇಷ್ಠವಾದದ್ದು ಅವರ ಮೊಮ್ಮಗನೇ ನಿರ್ದೇಶಿಸಿದ್ದ 'ಕಲ್ ಆಜ್ ಔರ್ ಕಲ್' (ನಿನ್ನೆ ಇಂದು ಮತ್ತು ನಾಳೆ). ಒಂದು ಕುಟುಂಬದ ಮೂರು ತಲೆಮಾರನ್ನು ಇಲ್ಲಿ ಪೃಥ್ವೀರಾಜರು ತಮ್ಮ ಮಗ ರಾಜ ಹಾಗೂ ಮೊಮ್ಮಗ ರಣಧೀರನೊಂದಿಗೆ ಪ್ರತಿನಿಧಿಸುತ್ತಾರೆ. ಚಿತ್ರ ಬಿಡುಗಡೆಯಾದ ಕೆಲವೇ ತಿಂಗಳಲ್ಲಿ ಪೃಥ್ವೀರಾಜ ಸದಾ ಕಣ್ಣುಮುಚ್ಚಿದರು

ತಮ್ಮ ನಾಲ್ವತ್ತು ವರ್ಷಗಳ ಸುದೀರ್ಘ ಅಭಿನಯ ಜೀವನದಲ್ಲಿ ಪೃಥ್ವೀರಾಜ ಹಲವು ಪ್ರಶಸ್ತಿ ಗೌರವಗಳನ್ನು ಪಡೆದಿದ್ದಾರೆ. ಅವರು ಭಾರತ ಸರಕಾರದ ಸಂಗೀತ ನಾಟಕ ಅಕಾಡೆಮಿಯ ಫೆಲೋ ಆಗಿ ನಿಯಮಿತರಾಗಿದ್ದರು. ೧೯೬೯ ರಲ್ಲಿ ಪದ್ಮಭೂಷಣ ಪ್ರಶಸ್ತಿಯೂ ಅವರಿಗೆ ದೊರೆಯಿತು. ೧೯೫೨ ರಿಂದ ಎಂಟು ವರ್ಷ ಕಾಲ ಅವರು ರಾಜ್ಯಸಭೆಯ ಸದಸ್ಯರಾಗಿ ರಾಷ್ಟ್ರಪತಿಯವರಿಂದ ನೇಮಕಗೊಂಡಿದ್ದರು. ೧೯೭೨ ರಲ್ಲಿ ಅವರು ದಾದಾಸಾಹೇಬ ಫಾಳ್ಕೆ ಪ್ರಶಸ್ತಿಗೆ ಆಯ್ಕೆಯಾಗಿದ್ದು ಅದನ್ನು ಅವರ ಮರಣಾನಂತರ ನೀಡಲಾಯಿತು. ಚಿತ್ರರಂಗದ ಹೊರಗೂ ಪೃಥ್ವೀರಾಜ ದುಡಿದಿದ್ದಾರೆ. ನಾಲ್ಕು ವರ್ಷ ಕಾಲ ಅವರು ಸೆಂಟ್ರಲ್ ರೈಲ್ವೇ ಕಾಮಗಾರರ ಯೂನಿಯನ್ನಿನ ಅಧ್ಯಕ್ಷರಾಗಿದ್ದರು. ೧೯೫೧ ರಲ್ಲಿ ವಿಯೆನ್ನಾದಲ್ಲಿ ನಡೆದ ವರ್ಕರ್ಸ್ ಪೀಸ್ ಕಾನ್ಫರೆನ್ಸಿನಲ್ಲೂ ಭಾಗವಹಿಸಿದ್ದರು.

ಆದರೆ ಇದೆಲ್ಲದಕ್ಕೂ ಮಿಗಿಲಾಗಿ ಪೃಥ್ವೀರಾಜರ ಸಾಧನೆಯೆಂದರೆ ತಮ್ಮ ಸಂಪರ್ಕಕ್ಕೆ ಬಂದ ಹಿರಿ ಕಿರಿಯರೆಲ್ಲರ ಗೌರವವನ್ನು ಅವರು ಸಂಪಾದಿಸಿದ್ದು. ಅವರು ಚಿತ್ರರಂಗದ ಎಲ್ಲಾ ವ್ಯಕ್ತಿಗಳಿಗೆ ಪ್ರೀತಿಯ 'ಪಾಪಾಜಿ' ಆಗಿದ್ದರು. ಚಿತ್ರ ರಂಗದಲ್ಲಿ ಅತ್ಯುಚ್ಚ ಸ್ಥಾನವನ್ನು ಸೇರಿದ ಬಳಿಕ ಕೂಡ ಅವರು ಹಿಂದಿನ ಚಿಕ್ಕ ಮನೆಯಲ್ಲೇ ವಾಸಿಸುತ್ತಿದ್ದರು. ಹಳೆಯ ಮೋರಿಸ್ ಮೈನರ್ ಕಾರಿನಲ್ಲಿ ಸಂಚರಿಸುತ್ತಿದ್ದರು.

"ನಾನು ಜೀವನದಲ್ಲಿ ಉನ್ನತಿಯತ್ತ ಸಾಗಲು ಪ್ರಯತ್ನಿಸುತ್ತಿದ್ದಾಗ ಇದು ನನ್ನ ಒಡನಾಡಿಯಾಗಿತ್ತು. ಇಷ್ಟು ಪ್ರಾಮಾಣಿಕವಾಗಿ ನನ್ನ ಸೇವೆಯನ್ನು ಮಾಡಿದ ಇದನ್ನು ಈಗ ಹೇಗೆ ತ್ಯಜಿಸಲಿ?" ಎಂದು ಅವರು ಹೇಳುತ್ತಿದ್ದರು.

ರಮೇಶ ಕಪೂರ್, ಪೃಥ್ವೀರಾಜರ ವಿಶಾಲ ಹೃದಯಕ್ಕೆ ಜೀವಂತ ಉದಾಹರಣೆ. ಮೂವರು ಗಂಡು ಮಕ್ಕಳು, ಮತ್ತೊಬ್ಬ ಮಗಳ ಸಮೃದ್ಧ ಕುಟುಂಬ ತಮ್ಮದಾದರೂ ಪೃಥ್ವೀರಾಜ ಪಾಕಿಸ್ತಾನದಿಂದ ಓಡಿಬಂದ ಈ ಅನಾಥ ಹುಡುಗನನ್ನು ತನ್ನ ಪುತ್ರನಂತೆಯೇ ಸಾಕಿ ಸಲಹಿದರು. ತನ್ನನ್ನೂ ಶಮ್ಮಿ, ಶಶಿಯರೊಂದಿಗೆ ಇಂಗ್ಲೀಷು ಸ್ಕೂಲಿಗೆ ಕಳುಹಿಸುತ್ತಿದ್ದರು, ಅವರನ್ನು ನೋಡಿಕೊಳ್ಳುವಂತೆಯೇ ನೋಡಿಕೊಳ್ಳುತ್ತಿದ್ದರು ಎಂದು ರಮೇಶ ಕಪೂರ್ ಕೃತಜ್ಞತೆಯೊಂದಿಗೆ ಸ್ಮರಿಸಿ ತನ್ನ ಬಾಬಾಜಿಗೆ ಶ್ರದ್ಧಾಂಜಲಿಯರ್ಪಿಸುತ್ತಾನೆ.

ತುಕಾರಾಮ ಭಜನೆಗಳನ್ನು ಹೇಳಿ ಹೊಟ್ಟೆ ಹೊರೆಯುತ್ತಿದ್ದ ಭಿಕ್ಷುಕ ತಮ್ಮ ಮನೆಯ ಬಳಿ ಬಂದಾಗ ಆತನನ್ನು ಕರೆಸಿ, ಹಾಡಿಸಿ ಕೈ ತುಂಬಾ ಹಣವನ್ನಿತ್ತು ಕಳುಹಿಸುತ್ತಿದ್ದರಂತೆ. ಪೃಥ್ವೀರಾಜರ ನಿಧನದ ಕೆಲ ತಿಂಗಳು ಮೊದಲು ತುಕಾರಾಮ ಆ ಹಾದಿಯಾಗಿ ಬರುವುದನ್ನು ನಿಲ್ಲಿಸಿದ. ಆದರೆ ಅವರ ನಿಧನದ ಮರುದಿನ ತುಕಾರಾಮನ ಸ್ವರ ಆ ಬೀದಿಯಲ್ಲಿ ಕೇಳಿಸಿತು. ಆ ದಿನ ಆತ ಯಾರಿಂದಲೂ ಭಿಕ್ಷೆ ಸ್ವೀಕರಿಸಲಿಲ್ಲ. ಅಂದಾತ ಭಿಕ್ಷುಕನಾಗಲಿಲ್ಲ, ಸಂಗೀತಗಾರನಾಗಿ ತನ್ನನ್ನು ಕಂಡ ವ್ಯಕ್ತಿಯ ಸ್ಮರಣೆಗಾಗಿ ಹಾಡಿದ. ಇಂಥ ಹಲವು ಘಟನೆಗಳು ಪೃಥ್ವಿರಾಜರ ಘನತೆಯನ್ನು ಸಾರುತ್ತವೆ.

ಅಭಿನಯದ ಹೊರತಾಗಿ ಸಾಹಿತ್ಯ, ಸಂಗೀತಗಳಲ್ಲೂ ಪೃಥ್ವೀರಾಜರಿಗೆ ಆಸಕ್ತಿಯಿತ್ತು. ಒಬ್ಬಂಟಿಗನಾಗಿ ಇದ್ದಾಗ ಸಿತಾರು ನುಡಿಸುತ್ತಾ ಅವರು ಸಮಯವನ್ನು ಕಳೆಯುತ್ತಿ-

ದ್ದರು. ಹೊಸ ಹೊಸ ಭಾಷೆಗಳನ್ನು ಕಲಿಯುವುದು ಪೃಥ್ವೀರಾಜರ ಮತ್ತೊಂದು ಹವ್ಯಾಸ. ಕೊನೆಗಾಲದಲ್ಲಿ ಅವರು ತೆಲುಗು ಅಭ್ಯಸಿಸುತ್ತಿದ್ದರು. ಕನ್ನಡ ಚಿತ್ರದಲ್ಲಿ ಅಭಿನಯಿಸಿದ ಬಳಿಕ ಆ ಭಾಷೆಯನ್ನು ಚೆನ್ನಾಗಿ ಕಲಿಯುವ ಆಶಯವನ್ನು ಅವರೊಮ್ಮೆ ವ್ಯಕ್ತಪಡಿಸಿದ್ದರು.

ಅರುವತ್ತಾರು ವರ್ಷಗಳ ಭವ್ಯ ಜೀವನವನ್ನು ನಡೆಸಿದ ಈ ಶ್ರೇಷ್ಠ ನಟ ಕೊನೆಗೊಮ್ಮೆ ತಮ್ಮನ್ನು ಹಲವು ಕಾಲದಿಂದ ಪೀಡಿಸುತ್ತಿದ್ದ ಕ್ಯಾನ್ಸರ್ ರೋಗಕ್ಕೆ ಬಲಿಯಾಗಬೇಕಾಯಿತು. ಕಳೆದ ಮೇ ತಿಂಗಳು ೨೯ನೆಯ ದಿನಾಂಕ. ಟಾಟಾ ಮೆಮೋರಿಯಲ್ ಹಾಸ್ಪಿಟಲ್‌ನಲ್ಲಿ ಪೃಥ್ವೀರಾಜ ಕೊನೆಯನ್ನು ನಿರೀಕ್ಷಿಸುತ್ತಾ ಪವಡಿಸಿದ್ದಾರೆ. ಅಪಾರ ಬಂಧುಮಿತ್ರವರ್ಗ, ಹಿರಿಯ ಪುತ್ರ ರಾಜ, ಮಧ್ಯಮ ಶಮ್ಮಿ ಮತ್ತು ಮೊಮ್ಮಕ್ಕಳೂ ಕಾದಿದ್ದಾರೆ. ಆದರೆ ಪ್ರೀತಿಯ ಕಿರಿಯ ಪುತ್ರ ಶಶಿ ರಶ್ಯಾದಲ್ಲಿ ನಡೆಯುವ ಚಲಚ್ಚಿತ್ರೋತ್ಸವದಲ್ಲಿ ಭಾಗವಹಿಸಲೆಂದು ಹೊರಟಾತ ಲಂಡನ್ನಿನಲ್ಲಿದ್ದಾನೆ. ಆತನಿಗೂ ಕರೆ ಹೋಗಿತ್ತು. ಗಳಿಗೆಗೊಮ್ಮೆ ಪಿತಾಜಿ ಬಾಗಿಲಿನತ್ತ ನೋಡುತ್ತಿದ್ದಾರೆ. ಬಿಗಿದ ಕಂಠದಿಂದ ಶಮ್ಮಿ ಹೇಳಿದ: "ಇನ್ನೊಂದೆರಡು ಗಂಟೆಯಲ್ಲಿ ಶಶಿ ಬರುತ್ತಾನೆ." ಡಾಕ್ಟರರು ಇನ್ನು ಯಾವುದೇ ಕ್ಷಣದಲ್ಲಿ ಕೊನೆ ಬರುವುದೆಂದೆನ್ನುತ್ತಾರೆ; ಬಾಯಿಗೆ ಗಂಗಾಜಲ ಹೊಯ್ದಾಯಿತು. ಆದರೂ ಅರ್ಧ ನಿಮೀಲಿತ ನೇತ್ರಗಳೊಂದಿಗೆ ಪೃಥ್ವೀರಾಜ ಕಾಯುತ್ತಿದ್ದಾರೆ. ಹಿರಿಯ ಮಗ ರಾಜ ತಂದೆಯ ಇಚ್ಛೆಯಂತೆ ಅವರ ಕಿವಿಗಳಲ್ಲಿ ಗಾಯತ್ರಿಯನ್ನು ಉಚ್ಚರಿಸುತ್ತಿದ್ದಾನೆ. ಕೊನೆಗೊಮ್ಮೆ ಬಾಗಿಲಲ್ಲಿ ಸದ್ದಾಯಿತು. ಶಮ್ಮಿ ಗಟ್ಟಿಯಾಗಿ ಹೇಳಿದ: "ಶಶಿ ಬಂದ." ಪಿತಾಜಿ ತನ್ನ ಕಿರಿಯ ಮಗನನ್ನು ಕಣ್ಣುತುಂಬಾ ನೋಡಿದರು. ಇಚ್ಛಾಶಕ್ತಿ ಮರಣವನ್ನು ಮೆಟ್ಟಿ ನಿಂತಿತು. ಶಶಿ ಬಂದು ಎರಡು ಗಂಟೆಗಳ ಬಳಿಕ ಕಿರಿಯ ಇಬ್ಬರು ಮಕ್ಕಳ ಕೈಗಳಲ್ಲಿ ಕೈಯನ್ನಿರಿಸಿ,* ಎಲ್ಲರಿಗೂ ವಿದಾಯ ಹೇಳುವಂತೆ ನೋಡುತ್ತಾ ಪೃಥ್ವೀರಾಜ ಕಣ್ಣುಮುಚ್ಚಿದರು. ▲

---

* ಪತ್ನಿ ರಾಮಶರಣಿ ಪೃಥ್ವೀರಾಜರಂತೆಯೇ ರೋಗಶಯ್ಯೆಯಲ್ಲಿದ್ದರು. ಮಕ್ಕಳು ತಂದೆಯ ಮರಣವಾರ್ತೆಯನ್ನು ಹೇಳಿದಾಗ, "ನಾನೂ ಸದ್ಯದಲ್ಲಿ ಅವರನ್ನು ಸೇರುತ್ತೇನೆ" ಎಂದು ಉದ್ಗರಿಸಿದರಂತೆ. ಒಂದು ವಾರದೊಳಗೆ ಅವರು ತಮ್ಮ ಮಾತನ್ನು ಪಾಲಿಸಿದರು.

"ಏನು ಸ್ವಾಮಿ, ಈ ಹೋಟೇಲಿನಲ್ಲಿ ವ್ಯವಸ್ಥೆ ಸರಿಯಾಗಿದೆ ತಾನೆ?

"ಓಹೋ! ಮನೆಯಲ್ಲಿನ ವಾತಾವರಣವೇ ಇಲ್ಲಿದೆ. ನಿಜ ಹೇಳಬೇಕೆಂದರೆ ಮನೆಯಲ್ಲಿದ್ದ ಹಾಗೆಯೆ ನಿಮಗನಿಸುತ್ತದೆ ನೋಡಿ."

"ಅಂ! ಏನೆಂದಿರಿ? ಮನೆಯಲ್ಲಿನ ವಾತಾವರಣವೇ ಇಲ್ಲಿದೆ ಎಂತಲೆ? ಹಾಗಾದರೆ ಹಾಳಾಗಿ ಹೋಗಲಿ ಈ ಸುಡುಗಾಡು ಹೋಟೇಲು! ಮನೆಯಲ್ಲಿದ್ದ ವಾತಾವರಣವೇ ಇಲ್ಲಿರುವುದಾದರೆ ನಾನೇಕೆ ಮನೆ ಬಿಟ್ಟು ಇಲ್ಲಿಗೆ ಬರಬೇಕಾಗಿತ್ತು?"

•

"'ದಾರಿಹೋಕರಿಗೆ ಸಲಹೆಗಳು' ಎಂಬ ಪುಸ್ತಕ ಬರೆದ ನಿಮ್ಮ ಮಿತ್ರನನ್ನು ಇತ್ತೀಚೆ ನಾನು ಕಂಡೇ ಇಲ್ಲವಲ್ಲಾ?"

"ಆ ಪುಸ್ತಕ ಅಚ್ಚಾಗುವ ಮೊದಲೆ ಆತ ಬಸ್ಸಿನಡಿಯಲ್ಲಿ ಸಿಕ್ಕಿ ಸತ್ತು ಹೋದ."

ನಿರೀಕ್ಷಿಸಿರಿ

# ಕಸ್ತೂರಿ
## ವಸಂತ ಮತ್ತು
## ೨೦೦ ನೇ ಸಂಚಿಕೆ

ನಾಡಿನ ಪ್ರಮುಖ ಸಾಹಿತಿಗಳ
ಕಥೆ ಲೇಖನಗಳೊಡನೆ

ಅನೇಕ ಚಿತ್ರಗಳ ಸಹಿತ

ಏಪ್ರಿಲ್ ೧೯೭೩ ರಲ್ಲಿ ಪ್ರಕಟವಾಗಲಿದೆ!

# ಕವನಗಳು

## ಹುಡುಗಾಟ

ಅಂಗಳದಲಿ
ಆಡಾಡುತಿರುವಾಗ
ಅಂದ ಕಂಡದ್ದೆಲ್ಲಾ
ಆಯ್ದುಕೊಳ್ಳುತ್ತೇನೆ.

ಮುಂದೆಂದಾದರೂ
ಬಂದೀತೆಂದು
ಜೇಬಿನಲಿ ಭದ್ರವಾಗಿ
ಕಾಯ್ದುಕೊಳ್ಳುತ್ತೇನೆ.

ಕಲ್ಲು, ಆಣೆಕಲ್ಲು, ಬಿರಡೆ,
ಬಳಪಗಿಳಪ, ಮೊಳೆ
ಬಳೆ, ಇನ್ನೂ ಏನೇನೋ
ಹತ್ತು ಹಲವು......

ಮೊಗ್ಗೆ ಹೂವುಗಳನ್ನೂ
ಕುಯ್ಯುತ್ತಿರುತ್ತೇನೆ,
ಸಿಗದೇ ಇದ್ದಾಗ ಬಿಸು-
ಸುಯ್ಯುತ್ತಿರುತ್ತೇನೆ.

ಹಾರುವ ಪಾತರ-
ಗಿತ್ತಿಯನು ನೋಡುತ್ತೇನೆ.
ಹಿಡಿವ ಛಲದಿಂದಲೇ
ಜಪ್ಪಿಸಿ ಕೂಡುತ್ತೇನೆ.
ಹೂವ ಮೇಲದು ಇಳಿಯೆ
ಹಿಡಿಯಲೋಡುತ್ತೇನೆ.
ಬಳ್ಳಿ ಕಾಲ್ತೊಡಕಿ-
ಎಡವಿ ಬೀಳುತ್ತೇನೆ.
ಗಿಡ ತಗುಲಿ ಅಲುಗಾಡುತ್ತದೆ,
ಪಾತರಗಿತ್ತಿ ಹಾರಿಹೋಗುತ್ತದೆ.

ಹತ್ತುಹಲವಾರೆಲ್ಲಾ
ಬಿತ್ತರಾಗುತ್ತವೆ.
ಮೊಳೆ ಚುಚ್ಚಿ ಕೈ ಸೊಂಟ
ನೆತ್ತರಾಗುತ್ತವೆ.
ಬಳೆಯೊಡೆದು
ಚೂರುಚೂರಾಗುತ್ತದೆ,
ನುಚ್ಚುನೂರಾಗುತ್ತದೆ.

—ಜಿ. ವಿ. ವಾಜಪೇಯಿ

## ಅರಿವೆ ಹೊಲೆಯುವುದು

"ನೀನಿಲ್ಲ ಹೌದಲ್ಲೋ ?
ನನ್ನ ಮಾತು ನಿಜವಿದ್ದರೆ
ಹೂಂಗೊಡೋ ದೇವಾ......"
ಎಂಬ ಅರಳು-ಮರಳಿನ ಮಾತಿಗೆ
ನಕ್ಕು ಅಳಬೇಕು !
ಮೊನಚು ಸೂಜಿಯು ಬುಡಕೆ
ಎಳೆ ಹೂಡಿ
ಜಗ್ಗಾಡಿದಾಗ
ಸಾಮಾನ್ಯಕ್ಕೆ ಬಾಬಿನ್ ದಾರ
ಗೋಜಾಗುವುದಿಲ್ಲ.
ಅಥವ ಆದರೂ ಆಗ ಗೊತ್ತಾಗುವುದಿಲ್ಲ.
ಅದೇ ಒಂದು ಮೋಜು.
ಆ ಮೋಜಿನಲ್ಲಿ
ತಿಳಿದೋ ತಿಳಿಯದೆಯೋ
ಅಂತೂ
ರಾತ್ರಿ-ಹಗಲು ಹಗಲೂ-ರಾತ್ರಿ
ಹೊಲಿಗೆ ಬೀಳುತ್ತ ಸಾಗುತ್ತದೆ
ನೀರಿನ ಮೀಟರೋಡುವಂತೆ
ಇಲ್ಲ, ಹಾಲಿನಾಕೆ ದಿನಕೊಂದು
ಬೊಟ್ಟು ಗುರ್ತಿಡುವಂತೆ......
ತಿಂಗಳ ಕೊನೆಗೊಮ್ಮೆ
ಲೆಕ್ಕ ತೀರಿಸುವ ಕಾಲಕ್ಕೆ
ನಾಲ್ಕೂ ಮೂಲೆಯೂ ಹೊಲೆದಾಗಿ
ಒಳಗೆ ಸಿಕ್ಕಿರುತ್ತೇನೆ- ಉಸಿರಿಗೆ
ಚಡಪಡಿಸುತ್ತ !......
ಅಂದ ಹಾಗೆ
ಈ ಸಿಂಪಿಗನಾರು ?
ನಾನೋ-ಅವನೋ ?......

—ಆರ್. ಕೆ. ದಿವಾಕರ್

ಧಕ್ಕೆ ಕೆಲಸಗಾರ ಸಾಹಿತಿಯಾದ

ಪುಸ್ತಕ ವಿಭಾ

# ಎರಿಕ್ ಹಾಫರ್



ಮೂಲ: ಕ್ಯಾಲ್ವಿನ್ ಟಾಮ್‌ಕಿನ್ಸ್

# ಎರಿಕ್ ಹಾಫರ್

ಎರಿಕ್ ಹಾಫರ್ ಸಮಕಾಲೀನ ಅಮೇರಿಕದ ಒಬ್ಬ ಅಪೂರ್ವ ವ್ಯಕ್ತಿ. ಶಾಲೆಯ ಮೆಟ್ಟಲು ಹತ್ತದೇ ಇದ್ದರೂ ಇವನನ್ನು ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯ ರಾಜಕೀಯ ಸಂಶೋಧನಾ ವಿಭಾಗದ ಪ್ರೌಢವಿಜ್ಞಾನಿಯಾಗಿ ನೇಮಕ ಮಾಡಿತು! ಅತ್ಯಂತ ಮೇಧಾವಿಯಾದರೂ ಬೌದ್ಧಿಕ ವ್ಯಾಪಾರಗಳಲ್ಲಿ ತೀರ ಶಂಕೆ ಇವನಿಗೆ. ಜನಸಾಮಾನ್ಯರ ತಿಳುವಳಿಕೆಗೆ ಇವನು ಅತಿಶಯ ಮಹತ್ವ ಕೊಟ್ಟಿದ್ದಾನೆ.

ಸ್ಯಾನ್ ಫ್ರಾನ್ಸಿಸ್ಕೋವಿನ ಧಕ್ಕೆಯಲ್ಲಿ ಸಾಮಾನು ಹೊರುವ ಶ್ರಮಿಕನಾಗಿ ಇಪ್ಪತ್ತೈದು ವರ್ಷ ಕೆಲಸ ಮಾಡಿದ ಈತ ತನ್ನ ವಿಚಾರಪೂರ್ಣ ಬರಹ, ಭಾಷಣ, ಟೆಲಿವಿಶನ್ ದರ್ಶನಗಳ ಮೂಲಕ ನಾಗರಿಕರ, ತಾತ್ತ್ವಿಕರ ಹೃದಯಗಳನ್ನು ಸೂರೆಗೊಂಡಿದ್ದಾನೆ. ಮಿಂಚಿನಂತೆ ಗೂಢ ವಿಚಾರಗಳ ಅಂತರಾಳವನ್ನು ತೆರೆದು ತೋರಿಸುವ ಇವನ ಸೂಕ್ತಿಗಳು ಧಾರಾವಾಹಿಯಾಗಿ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ.

ಇವನ ಜೀವನದ ಗತಿಯೂ ವಿಚಿತ್ರ. ಏಳು ವರ್ಷದವನಿದ್ದಾಗ ಪೂರ್ಣ ಕುರುಡನಾದ. ಹದಿನೈದನೆಯ ವರ್ಷದಲ್ಲಿ ಇದ್ದಕ್ಕಿದ್ದ ಹಾಗೆಯೇ ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಪೂರ್ಣದೃಷ್ಟಿ ಮತ್ತೆ ಬಂತು! ಮತ್ತೆಲ್ಲಿ ಕುರುಡನಾಗುತ್ತೇನೋ ಎಂಬ ಭಯದಿಂದ ಸಿಕ್ಕ ಸಮಯವನೆಲ್ಲ ಓದುವುದು, ಬರೆಯುವುದು, ವಿಚಾರ ಮಾಡುವುದು ಇವುಗಳಲ್ಲೇ ಕಳೆಯುತ್ತ ಜ್ಞಾನದ ಬೆಟ್ಟವೇ ಆದ. ಬರವಣಿಗೆಯಿಂದ ಲೋಕಪ್ರಸಿದ್ಧನಾದರೂ ಧಕ್ಕೆಯ ಶ್ರಮಿಕ ನೌಕರಿಯನ್ನು ಬಿಡಲಿಲ್ಲ!

ಈತನ ಅದ್ಭುತ ಜೀವನಚರಿತ್ರೆಯನ್ನು "ನ್ಯೂಯಾರ್ಕರ್" ಪತ್ರಿಕೆಯ ಸಂಪಾದಕ ಕ್ಯಾಲ್ವಿನ್ ಟಾಮ್‌ಕಿನ್ಸ್ ಬರೆದಿದ್ದಾನೆ. ಅದರ ಸಂಗ್ರಹ ಇದು.

ಎರಿಕ್ ಹಾಫರ್ ಆರು ಅಡಿ ಎತ್ತರದ ಧಡೂತಿ ಆಸಾಮಿ. ದೊಡ್ಡ ಬೋಳು ತಲೆ. ಕತ್ತು ಬಲಿಷ್ಠವಾಗಿದ್ದರೂ ತಲೆಯ ಭಾರ ತಡೆಯಲಾರದೇನೋ ಎಂಬಂತೆ ಸ್ವಲ್ಪ ಬಗ್ಗಿರುತ್ತದೆ. ಆದರೂ ಅನೇಕ ವರ್ಷ ಅಲೆಮಾರಿ ಕಾರ್ಮಿಕನಾಗಿ, ಧಕ್ಕೆಯಲ್ಲಿ ಶ್ರಮಿಕನಾಗಿ ಕೆಲಸ ಮಾಡಿದ ದುಡಿತ ಅವನ ಬೆನ್ನನ್ನು ಬಗ್ಗಿಸಿಲ್ಲ. "ಜೀವನ ನನ್ನ ಮೂಳೆಗಳನ್ನು ಮಾತ್ರ ಮುರಿದಿದೆ ಅಷ್ಟೆ! ನನ್ನನ್ನೇನು ಜಜ್ಜಿ ಬಜ್ಜಿ ಮಾಡಿಲ್ಲ!" ಎಂದವನೇ ಹೇಳುತ್ತಾನೆ. ಓಡಾಡುವಾಗ ಸ್ವಲ್ಪ ಅಡ್ಡಾದಿಡ್ಡಿಯಾಗಿ ನಡೆಯುತ್ತಾನೆ. ಆದರೆ ಆ ಓಡಾಟದಲ್ಲೂ ಪ್ರಾಕೃತಿಕವಾಗಿ ಅವನ ದೇಹದಲ್ಲಿ ಚಿಮ್ಮುತ್ತಿರುವ ಹುಮ್ಮಸ್ಸು ಆಗಾಗ್ಗೆ ಇದ್ದಕ್ಕಿದ್ದ ಹಾಗೆಯೇ ಮಿಂಚಿ ಕಾಣಿಸಿಕೊಳ್ಳುತ್ತದೆ; ತಾನು ಮುದುಕ, ಆರೋಗ್ಯ ಅಷ್ಟು ಸರಿಯಾಗಿಲ್ಲ ಎಂದು ಆಗಿಂದಾಗ್ಗೆ ಅವನು ಹೇಳಿಕೊಳ್ಳುವುದನ್ನು ಸುಳ್ಳುಗಳೆಯುತ್ತದೆ.

ಒಳ್ಳೇ ಕಂಚಿನ ಕಂಠ ಅವನದು. ಹೇಳುತ್ತಿರುವ ವಿಷಯವನ್ನನುಸರಿಸಿ ಇದ್ದಕ್ಕಿದ್ದ ಹಾಗೆಯೇ ಏರುತ್ತದೆ, ಇಳಿಯುತ್ತದೆ. ಕೆಲವು ವೇಳೆ ಕೇಳಿಸದಷ್ಟು ಮೆತ್ತಗಾದರೆ ಇನ್ನು ಕೆಲವು ವೇಳೆ ರಭಸದಿಂದ ಭೋರ್ಗರೆಯುತ್ತ ಅಂಗಾಂಗ-

ಗಳ ಚೇಷ್ಟೆ, ಕುಣಿತಗಳಿಂದ, ಘೊಳ್ಳೆನುವ ನಗುವಿನ ಅಲೆಗಳಿಂದೊಡಗೂಡಿ ಹೊರಹೊಮ್ಮುತ್ತದೆ.

ಹಾಫರ್ ಶಾಲೆಯ ಮುಖ ನೋಡಿದವನಲ್ಲ. ಪ್ರೌಢ ಪ್ರಾಚೀನ ಫ್ರೆಂಚ್ ಲೇಖಕರ, ಅದರಲ್ಲೂ ಮಾಂಟೇನ*ನ ಶೈಲಿ ಈತನ ಬರವಣಿಗೆಗೆ ಮಾದರಿಯಾಯಿತು. ನೇರವಾಗಿ ಬಾಣ ಹೊಡೆದಂತೆ ಒಂದು ವಿಷಯದ ಮರ್ಮವನ್ನು ಭೇದಿಸಿ, ಅತಿ ಸಾಹಸದ ಕಲ್ಪನಾ ಚಾತುರ್ಯದಿಂದ ಸೂಕ್ತಿಗಳನ್ನು ರಚಿಸುವುದರಲ್ಲಿ ಹಾಫರನದು ಎತ್ತಿದ ಕೈ. ಅವನ ಬರವಣಿಗೆಯಲ್ಲಿ ಒಂದು ಪದವೂ ಅನವಶ್ಯಕ ಎಂದೆನಿಸುವುದಿಲ್ಲ. ವಾಕ್ಯಕ್ಕೆ ವಾಕ್ಯ ಸರಪಣಿಯ ಕೊಂಡಿಗಳಂತೆ ಜೋಡಣೆಯಾಗುತ್ತಾ ಹೋಗುತ್ತದೆ. ದೀರ್ಘಕಾಲ ಶ್ರಮ ವಹಿಸಿ ಆತ ಪ್ರತಿಯೊಂದು ವಾಕ್ಯವನ್ನೂ ನಾಜೂಕಿನಿಂದ ಕಟೆಯುತ್ತಾನೆ; ವಿಮರ್ಶೆಯ ಮೂಸೆಯಲ್ಲಿ ಕಾಯಿಸುತ್ತಾನೆ. ಹೀಗೆ ಪುಟವಿಕ್ಕಿದ ವಾಕ್ಯಗಳು ಒಂದಕ್ಕೊಂದು ಹೆಣೆದುಕೊಂಡು ವಿಚಾರದ ಹೃದಯವನ್ನು ಭೇದಿಸುವ ಅಪರಂಜಿಯಂಥ ಗದ್ಯವಾಗಿ ಪರಿಣಮಿಸುತ್ತವೆ.

ಒಂದು ದೀರ್ಘ ವಿಚಾರಸರಣಿಯ ಸಾರಾಂಶವನ್ನು ಕೆಲವೊಂದು ಸಣ್ಣ ವಾಕ್ಯಗಳಲ್ಲಿ ಸೆರೆ ಹಿಡಿದು ಸೂಕ್ತಿ ರೂಪದಲ್ಲಿ ಬರೆದಿಡುವುದು ಹಾಫರನಿಗೆ ಪ್ರಿಯವಾದ ಕೆಲಸ. ಬಿಡಿ ಹಾಳೆಗಳುಳ್ಳ ಒಂದು ಟಿಪ್ಪಣಿ ಪುಸ್ತಕದಲ್ಲಿ ಆತ ಅಂಥ ವಾಕ್ಯಗಳನ್ನು ಅವು ಆಗಾಗ ಹೊಳೆದ ಹಾಗೆ ಬರೆದಿಡುತ್ತಾನೆ.

ಹಾಫರ್ ಬರೆದಿರುವ ಒಂದೊಂದು ಮಾತೂ ಅವನ ಜೀವನದ ಸಂಗತಿಗಳಿಂದಲೇ ಪ್ರೇರಿತವಾದ ವಿಚಾರಸರಣಿಯ ಒಂದೊಂದು ಕೊಂಡಿ "ನಾನು ಬೌದ್ಧಿಕ ಜೀವಿಯಲ್ಲ, ಬೌದ್ಧಿಕ ವಿಚಾರಗಳು ನನ್ನ ಸರಕಲ್ಲ. ಗಿಡದ ರೆಂಬೆಯಲ್ಲಿ ಎಲೆಗಳು ಹೇಗೆ ಚಿಗುರಿ ಬರುತ್ತವೋ, ಹಾಗೆ ನನ್ನ ವಿಚಾರಗಳೂ ನನ್ನ ಜೀವನದ ಸಂಗತಿಗಳಿಂದಲೇ ಹುಟ್ಟಿ ಬಂದಿವೆ," ಎಂದು ಹಾಫರನೇ ಹೇಳಿದ್ದಾನೆ.

ಅವನು ಜೀವನವನ್ನೆಲ್ಲ ಬೆನ್ನು ಮುರಿಯುವ ಶ್ರಮದಿಂದ ಕಳೆದಿದ್ದಾನೆ. ಅದೊಂದು ತುಂಬು ಜೀವನ. ತರುಣನಾಗಿ ಹಾಫರ್ ಸಮಾಜದ ಉಚ್ಛಿಷ್ಟ ಜನರ ಮಧ್ಯೆ ಬೆಳೆದು ಬಂದ. ಆತ ಅವರನ್ನು "ಅಶಕ್ತರು, ನಿರ್ಗತಿಕರು, ಪೀಡಿತರು, ದಿಕ್ಕಿಲ್ಲದವರು, ಪಲಾಯನ ಮಾಡಿದವರು, ಯಾರಿಗೂ ಬೇಡವಾದವರು," ಎಂದೆಲ್ಲ ಕರೆದಿದ್ದಾನೆ.

## ಮಾರ್ಥಾ

ಹಾಫರ್ ಹುಟ್ಟಿದ್ದು ೧೯೦೨ ರಲ್ಲಿ, ನ್ಯೂಯಾರ್ಕ್ ನಗರದಲ್ಲಿ. ಅವನ ತಂದೆ–ತಾಯಿ ಆಲ್‌ಸೇಜ್§ನಿಂದ ವಲಸೆ ಬಂದವರು ತಂದೆ ಬಡಗಿ ಕೆಲಸ ಮಾಡಿ ಜೀವನ ಮಾಡುತ್ತಿದ್ದ. ಹಾಫರ್ ಒಬ್ಬನೇ ಮಗ ಅವನು ಏಳು ವರ್ಷದವನಿದ್ದಾಗಲೇ ತಾಯಿ ತೀರಿಕೊಂಡಳು. ನಂತರ ಆ ವರ್ಷದಲ್ಲೇ ಹಾಫರ್ ಇದ್ದಕ್ಕಿದ್ದ ಹಾಗೆಯೇ ಸಂಪೂರ್ಣ ಕುರುಡನಾದ. ಹೀಗಾಗಿ ಅವನು ಶಾಲೆಯ ಮುಖ ಕಾಣಲಿಲ್ಲ. ಹದಿನೈದು ವರ್ಷದವನಿದ್ದಾಗ ಇದ್ದಕ್ಕಿದ್ದ ಹಾಗೆಯೇ ಕುರುಡಾದ ಕಣ್ಣುಗಳಿಗೆ ದೃಷ್ಟಿ ಮತ್ತೆ ಲಭಿಸಿತು ಆಗಿನಿಂದ ಮುದ್ರಿತ ಪದಗಳನ್ನು ಕಂಡರೆ ತನಗೆ ಬಕಾಸುರನ ಹಸಿವು ಎಂದು ಅವನೇ ಹೇಳಿಕೊಂಡಿದ್ದಾನೆ ಈ ಹಸಿವು ಇಂದಿನವರೆಗೂ ಇಂಗಿಲ್ಲ

"ನಾನು ಐದು ವರ್ಷದವನಿದ್ದಾಗ ಉಜ್ವಲ ಮೇಧಾಶಕ್ತಿಯುಳ್ಳವನಾಗಿದ್ದೆ; ಅಂದಿನಿಂದ ನನ್ನ ಬುದ್ಧಿ ಇಳಿಯುತ್ತಾ ಬಂದಿದೆ ಎಂದು ನನಗೆ ಅನಿಸುತ್ತದೆ," ಎಂದು ಹಾಫರ್ ಹೇಳಿದ್ದಾನೆ. ತಾಯಿ ತೀರಿಹೋದಾಗ ಹಾಫರನನ್ನು ಮಾರ್ಥಾ ಬಾಕ್ ಎಂಬಾಕೆ ಪಾಲಿಸಿದಳು ಅವಳೊಬ್ಬ ಬಲ್ಗೇರಿಯಾದ ರೈತ ಕುಟುಂಬದವಳು; ಹಾಫರನ ತಂದೆತಾಯಿಯರ ಜೊತೆ ಅಮೇರಿಕಕ್ಕೆ ಬಂದವಳು "ಆಕೆಗೆ ನನ್ನನ್ನು ಕಂಡರೆ ತುಂಬ ಪ್ರೀತಿ

---

* ಹದಿನಾರನೇ ಶತಮಾನದ ಫ್ರೆಂಚ್ ಲೇಖಕ. ಈತನ "Essais" (ಪ್ರಬಂಧಗಳು) ಫ್ರೆಂಚ್ ಮಾತ್ರವಲ್ಲ ಯುರೋಪಿನ ಎಲ್ಲ ಭಾಷೆಗಳ ಮೇಲೂ ಪ್ರಭಾವ ಬೀರಿವೆ.

§ ಫ್ರಾನ್ಸಿನ ಪೂರ್ವ ಪ್ರಾಂತ, ಆಲ್‌ಸೇಶಿಯನ್ ನಾಯಿಗಳು ಮೂಲತಃ ಇಲ್ಲಿಯವು.

ಇದ್ದಿರಬೇಕು. ಏಕೆಂದರೆ, ಆ ದೃಷ್ಟಿಹೀನ ಸಪ್ತವರ್ಷಗಳನ್ನು ನಾನು ಅತ್ಯಂತ ಆನಂದದಿಂದ ಕಳೆದೆ ಎಂಬುದು ನನಗೆ ಗೊತ್ತಿದೆ. ಆಗ ಮಾತು ಮತ್ತು ನಗೆಗಳ ಕಡಲಿನಲ್ಲಿ ಮುಳುಗಿಹೋಗಿದ್ದೆ.

"ನಮ್ಮದು ಆಗ ಬಡತನದ ಜೀವನ. ಔಷಧಿಗೆ ಕೊಡಲು ಸಹ ಹಣ ಇರುತ್ತಿರಲಿಲ್ಲ. ಇವೆಲ್ಲ ಒಂದು ರೀತಿಯ ತಡೆಯನ್ನುಂಟುಮಾಡಿದವು ಎಂದು ನನಗನಿಸುತ್ತದೆ. ನಂತರ ಬಂತು ಯೌವನ. ರಸಪ್ರವಾಹವೇ ಹರಿದುಬಂತು. ಆದರೆ ಒಂದು ಮಾತು ಹೇಳಬೇಕು— ನನ್ನ ದೃಷ್ಟಿ ಹಿಂತಿರುಗಿ ಬಂದದ್ದರಿಂದ ನನಗೆ ಆನಂದವಾಯ್ತೆಂದೇನಲ್ಲ. ಇದುವರೆಗೆ ಮಾರ್ಥಾ ನನಗೆ ಉಣಿಸುತ್ತಿದ್ದಳು, ನನಗೆ ಮುದ್ದು ಕೊಡುತ್ತಿದ್ದಳು. ಮಾರ್ಥಾ, ನಾನು ಒಂದೇ ಜೀವಿಯ ಹಾಗೆ ಇದ್ದೆವು. ಕಣ್ಣು ಬಂದ ಮೇಲೆ ನಮ್ಮಿಬ್ಬರ ಮಧ್ಯೆ ಅಂತರ ಬಂತು. ಹಿಂದಿನದನ್ನು ನೆನಪು ಮಾಡಿಕೊಳ್ಳುವಾಗ ನನಗನಿಸುತ್ತದೆ, ನನ್ನ ಕಣ್ಣುಗಳನ್ನು ಮತ್ತೆ ಹಾಳು ಮಾಡಿಕೊಳ್ಳಲೋ ಎಂಬಂತೆ ಓದಲು ಶುರು ಮಾಡಿದೆ ಎಂದು! ದಿನಕ್ಕೆ ಹತ್ತು ಹನ್ನೆರಡು ಗಂಟೆಗಳ ಕಾಲ ಓದುತ್ತಿದ್ದೆ, ಯಾವ ನಿಮಿಷ ಮತ್ತೆ ಕುರುಡಾಗುತ್ತೇನೆಯೋ ಎಂಬ ಹೆದರಿಕೆಯಿಂದ."

ಮನೆಯ ಹತ್ತಿರವೇ ಒಂದು ಹಳೇ–ಪುಸ್ತಕಗಳ ಅಂಗಡಿ ಆಗ ತಾನೆ ಲಿಲಾವಿನಲ್ಲಿ ಭಾರಿ ಪುಸ್ತಕಗಳ ಸಂಗ್ರಹವನ್ನು ಕೊಂಡಿತ್ತು. ಅನಂತರದ ಮೂರು ವರ್ಷಗಳಲ್ಲಿ ಹಾಫರ್ ಪ್ರಾಯಶಃ ಅಲ್ಲಿದ್ದ ಎಲ್ಲ ಪುಸ್ತಕಗಳನ್ನೂ ಓದಿ ಮುಗಿಸಿದ್ದ! ಆ ಸಂಗ್ರಹದಲ್ಲಿ ಸಸ್ಯಶಾಸ್ತ್ರದ ಮೇಲಿನ ಪುಸ್ತಕಗಳು ಬಹಳ ಇದ್ದುವು. ಇಂಗ್ಲಿಷ್ ಭಾಷೆಗೆ ತರ್ಜುಮೆಗೊಂಡ ಸ್ಕ್ಯಾಂಡಿನೇವಿಯ* ಹಾಗೂ ರಶಿಯ ದೇಶಗಳ ಸಾಹಿತ್ಯ ಕೃತಿಗಳೂ ಅಲ್ಲಿದ್ದುವು. ಇವನ್ನೆಲ್ಲ ಓದಿ ಹಾಫರ್ ಸ್ವಲ್ಪ ಮಟ್ಟಿಗೆ ಆ ವಿಷಯಗಳಲ್ಲಿ ತಜ್ಞನೇ ಆದ.

ಮೊದಲನೆ ಜಾಗತಿಕ ಯುದ್ಧ ಮುಗಿದ ಮೇಲೆ (೧೯೧೯) ಮಾರ್ಥಾ ಜರ್ಮನಿಗೆ ವಾಪಸ್ಸು ಹೊರಟುಹೋದಳು. ತಂದೆ ಮಾರನೇ ವರ್ಷ ತೀರಿಕೊಂಡ. "ಈಗ ನಾನು ಸರ್ವಸ್ವತಂತ್ರನಾದೆ, ಅಷ್ಟೇ. ನಾನು ನಲವತ್ತನೇ ವರ್ಷದಲ್ಲಿ ಸಾಯುತ್ತೇನೆಂದು ಮಾರ್ಥಾ ನನಗೆ ಹೇಳಿದ್ದಳು. ನನ್ನ ಹಿರಿಯರೆಲ್ಲ ಅಲ್ಪಾಯುಗಳಾಗಿಯೇ ಸತ್ತಿದ್ದರು. ಅವಳ ಮಾತಿನಲ್ಲಿ ನನಗೆ ತುಂಬ ನಂಬುಗೆ. ನನಗಾಗಲೇ ಇಪ್ಪತ್ತು ವರ್ಷಗಳ ಹತ್ತಿರ ಹತ್ತಿರ. ಅಂದ ಮೇಲೆ ಅರ್ಧ ಜೀವನ ಕಳೆದುಹೋಗಿತ್ತು. ಇನ್ನು ಯಾವ ವಿಷಯವನ್ನೂ ಮನಸ್ಸಿಗೆ ಹಚ್ಚಿಕೊಳ್ಳುವುದರಲ್ಲಿ ಸ್ವಾರಸ್ಯವಿರಲಿಲ್ಲ! ನನ್ನ ತಂದೆ ಮುನ್ನೂರು ಡಾಲರುಗಳ (ಸುಮಾರು ಈಗಿನ ೨,೨೫೦ ರೂಪಾಯಿಗಳು) ಆಸ್ತಿ ಬಿಟ್ಟಿದ್ದರು. ಸರಿ, ಕ್ಯಾಲಿಫೋರ್ನಿಯಕ್ಕೆ ಹೋಗುವುದೆಂದು ಮನಸ್ಸು ಮಾಡಿದೆ. ಕ್ಯಾಲಿಫೋರ್ನಿಯಾ ಏಕೆ? ಏಕೆಂದರೆ ಬಡವರಿಗೆಲ್ಲ ಆಶ್ರಯವಾಗಿದ್ದ ಸ್ಥಾನ ಎಂದರೆ ಅದು. ಸ್ಕಿಡ್ ರೋ§ಗೆ ಹೋಗಿ ಅಲ್ಲೇ ಹತ್ತು ವರ್ಷ ಜೀವನ ನಡೆಸಿದೆ. ಮನೆಯಂಗಳದಿಂದ ಸೀದಾ ಚರಂಡಿಗೆ ಹೋದೆ ಎಂದು ಬೇಕಾದರೆ ನೀವು ಹೇಳಬಹುದು."

ಲಾಸ್ ಆಂಜಲೀಸ್‌ನ ಕೇಂದ್ರ ಪುಸ್ತಕಾಲಯದ ಹತ್ತಿರ ಹಾಫರ್ ಒಂದು ಕೋಣೆಯನ್ನು ಬಾಡಿಗೆಗೆ ಹಿಡಿದ. ಕೈಯಲ್ಲಿದ್ದ ಹಣ ಬಹಳ ಕಮ್ಮಿ. ಊಟ, ತಿಂಡಿಗಳಲ್ಲಿ ಬಹಳ ಹಿಡಿತ ಮಾಡಬೇಕಾಯಿತು. ಆದರೂ ಬಹು ಬೇಗ ಕೈಲಿದ್ದ ಕಾಸೆಲ್ಲ ಖರ್ಚಾಯಿತು. ತನ್ನ ಹಳೇ ಪುಸ್ತಕಗಳನ್ನು ಮಾರಿ ಕೆಲವು ಪುಡಿಕಾಸುಗಳನ್ನು ಸಂಪಾದಿಸಿದ. ಪುಸ್ತಕಗಳೆಲ್ಲ ಮುಗಿದುಹೋದ ಮೇಲೆ ತನ್ನ ಹೆಚ್ಚಿನ ಬಟ್ಟೆಗಳನ್ನು ಮಾರಿಕೊಂಡ. ಅವೂ ಹೋದ ಮೇಲೆ ಹಸಿವಿನಿಂದ ನರಳಿದ. ಕೊನೆಗೆ ಸರಕಾರ ನಡೆಸುತ್ತಿದ್ದ ಉದ್ಯೋಗ ವಿನಿಮಯದ ಬಾಗಿಲು ಕಾಯಲು ಕುಳಿತ. ಚತುರತೆಯಿಂದ ಆಗಿಂದಾಗ್ಗೆ ಸಣ್ಣ ಪುಟ್ಟ ಚಾಕರಿಗಳನ್ನು ಸಂಪಾದಿಸುತ್ತಿದ್ದ. ಹೀಗೆ ಅಲ್ಲಿ ಹತ್ತು ವರ್ಷ ಉದರಂಭರಣ ಮಾಡಿದ್ದಾಯಿತು.

ಒಮ್ಮೆ ಲಾಸ್ ಆಂಜಲೀಸ್ ಬಡಾವಣೆಗಳಲ್ಲಿ

---

* ಮುಖ್ಯವಾಗಿ ಸ್ವೀಡನ್, ನಾರ್ವೆ, ಡೆನ್‌ಮಾರ್ಕ್, ಫಿನ್‌ಲ್ಯಾಂಡ್ ಮತ್ತು ಐಸ್‌ಲ್ಯಾಂಡ್‌ಗಳನ್ನು ಇದಕ್ಕೆ ಸೇರಿಸುವ ವಾಡಿಕೆಯಿದೆ.

§ ಲಾಸ್ ಆಂಜಲೀಸ್‌ನಲ್ಲಿ ತೀರ ಬಡವರು ವಾಸಿಸುವ ಜಾಗ.

ಮನೆಮನೆಗೆ ಕಿತ್ತಳೆ ಹಣ್ಣು ಮಾರುವ ಕೆಲಸ ಕೈಗೊಂಡಾಗ, ತನ್ನ ವಾಕ್ ಚಾತುರ್ಯದ ಅರಿವು ಅವನಿಗೆ ಮೊಟ್ಟಮೊದಲು ಆಯಿತು. ಇವನ ಮಾತಿಗೆ ಮರುಳಾಗಿ ಗೃಹಿಣಿಯರು ಮೇಲೆ ಬಿದ್ದು ಹಣ್ಣುಗಳನ್ನು ಕೊಳ್ಳುತ್ತಿದ್ದರು. ಇವನನ್ನು ಗೊತ್ತುಮಾಡಿಕೊಂಡಿದ್ದ ತೋಟದಾರನಿಗೆ ಹಾಫರ್ ಮಾರಿದಷ್ಟು ಜಾಗ್ರತೆಯಾಗಿ ಹಣ್ಣುಗಳನ್ನು ಸರಬರಾಯಿ ಮಾಡುವುದೇ ಕಷ್ಟವಾಯ್ತು! ಇಂಥ ಒಳ್ಳೆ ಲಾಭದಾಯಕ ನೌಕರಿಯನ್ನು ಹಾಫರ್ ಎರಡನೇ ದಿವಸವೇ ಬಿಟ್ಟುಬಿಟ್ಟ! ಕಾರಣ ವಿಚಿತ್ರವಾಗಿದೆ. ತಾನು ಮಾಡುತ್ತಿದ್ದ ಕೆಲಸ ಹೊಲಸು ಎಂದವನಿಗನಿಸಿತು. ಹಣ್ಣು ಮಾರುವುದಕ್ಕಾಗಿ ಗೃಹಿಣಿಯರಿಗೆ ಏನೆಲ್ಲ ಸುಳ್ಳುಗಳನ್ನು ಬೊಗಳುತ್ತಿದ್ದ. 'ನಾನೇ ಹಣ್ಣುಗಳನ್ನು ಬೆಳೆದಿದ್ದು, ಈಗ ತಾನೇ ಗಿಡದಿಂದ ಕುಯ್ದು ತಂದಿದ್ದೇವೆ' ಎಂದೆಲ್ಲ ನಾಚಿಕೆಯಿಲ್ಲದೆ ಹೇಳುತ್ತಿದ್ದ. ಅವನಿಗೆ ಸುಲಭವಾದ ಈ ದಾರಿಯಲ್ಲಿ ಹೋಗುವುದಕ್ಕೆ ಭಯ ಆಯಿತು. ತಾನೆಲ್ಲಿ ಸುಳ್ಳಿನ ಮೋಹಕ್ಕೆ ಬಿದ್ದು ಇನ್ನೂ ಕೆಟ್ಟುಹೋಗುತ್ತೇನೆಯೋ ಎಂದು. "ನಾನು ಪ್ರಾಯಶಃ ದುರ್ಮಾರ್ಗಕ್ಕೆ ಬಹು ಬೇಗ ಬೀಳುವ ಆಸಾಮಿಯಿರಬೇಕು. ಆದ್ದರಿಂದಲೇ ಇಂಥ ಆಕರ್ಷಣೆಗಳಿಂದ ದೂರವಾಗಿರಲು ನಾನು ಯಾವಾಗಲೂ ಪ್ರಯತ್ನ ಮಾಡುತ್ತಿರುತ್ತೇನೆ," ಎಂದು ಹಾಫರ್ ಹೇಳಿಕೊಂಡಿದ್ದಾನೆ. ಅಂತು ಅಂದೇ ವ್ಯಾಪಾರಿಯಾಗುವ ಸಂಭವವನ್ನು ಹಾಫರ್ ಚಿವುಟಿಹಾಕಿಬಿಟ್ಟ.

ಹಾಫರನನ್ನು ಕಾಡುತ್ತಿದ್ದ ಒಂದು ದೊಡ್ಡ ಭಯ ಎಂದರೆ ಜೀವನದ ಬೋನಿನಲ್ಲಿ ಸಿಕ್ಕುಬಿದ್ದರೆ ಹೇಗಪ್ಪಾ ಎಂದು. ತನ್ನ ಕೈ ಮೀರಿದ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡರೆ ಹೇಗೆ ಎಂದು. ಒಂದು ಸಾರಿ ಇವನನ್ನು ಕೆಲಸಕ್ಕೆ ತೆಗೆದುಕೊಂಡ ಯಜಮಾನ ಇವನನ್ನು ಬಹಳ ಕಳಕಳಿಯಿಂದ ನೋಡಿಕೊಂಡ. ಏಕೆ ಬಿಳುಚಿಕೊಂಡಿದ್ದೀ? ಆರೋಗ್ಯ ಸರಿಯಾಗಿಲ್ಲವೆ? ನಿದ್ದೆ ಸಾಲದೆ? ಸಾಕಷ್ಟು ಹಾಲು ಕುಡಿಯುತ್ತಿಲ್ಲವೆ? ಎಂದೆಲ್ಲ ವಿಚಾರಿಸಿಕೊಂಡು ಅವನನ್ನು ಪ್ರೀತಿಯಿಂದ ನೋಡಿಕೊಂಡ. ಹಾಫರನಿಗೆ ಇವನ ದಾಕ್ಷಿಣ್ಯದ ಉರುಳಿನಿಂದ ತಪ್ಪಿಸಿಕೊಂಡು ಹೋಗುವುದು ಕಷ್ಟವಾಯ್ತು. ಇರುವುದು ಇನ್ನೂ ಕಷ್ಟವಾಯ್ತು. ಕೊನೆಗೆ ಆ ಯಜಮಾನ ಸತ್ತಿದ್ದರಿಂದಲೇ ಇವನಿಗೆ ಅದರಿಂದ ಬಿಡುಗಡೆಯಾದದ್ದು.

ಇನ್ನೊಂದು ಸಾರಿ—ಇಪ್ಪತ್ತೆಂಟು ವರ್ಷದವನಿದ್ದಾಗ ಒಂದು ಪರೀಕ್ಷೆಯ ಕಾಲ ಒದಗಿತು. ತನ್ನನ್ನು ಕಾಡುತ್ತಿದ್ದ ವಿಷಯ ಏನೆಂದು ಹಾಫರ್ ಸ್ಪಷ್ಟಪಡಿಸಿಲ್ಲ. ಅಂತೂ ಆಗ ಆತ್ಮಹತ್ಯದ ಪ್ರಯತ್ನ ಮಾಡಿದ. ವಿಷ ತೆಗೆದುಕೊಳ್ಳಬೇಕೆಂದು ನಿರ್ಧರಿಸಿ ಬ್ರಿಟಾನಿಕಾ ವಿಶ್ವಕೋಶದಲ್ಲಿ ಅದರ ವಿಷಯ ಕೂಲಂಕಷವಾಗಿ ಅಭ್ಯಾಸ ಮಾಡಿದ. ಕೊನೆಗೆ ಒಂದು ಶೀಶೆ ಆಕ್ಸಾಲಿಕ್ ಆಮ್ಲವನ್ನು ಕೊಂಡು ತನ್ನ ಕಪಾಟಿನ ಮೇಲೆ ಇಟ್ಟುಕೊಂಡ. ಈ ಸಂದಿಗ್ಧ ಸಮಯವನ್ನು ನೆನಪು ಮಾಡಿಕೊಂಡು ಹಾಫರ್ ಹೇಳುತ್ತಾನೆ:

"ಮುಂದೆ ಕೆಲವು ವಾರ ನಾನು ಈ ಲೋಕದಲ್ಲಿ ಯಾರ ಯೋಚನೆಯೂ ಇಲ್ಲದವನ ಹಾಗಿದ್ದೆ. ಓದುತ್ತಿದ್ದೆ, ಉಣ್ಣುತ್ತಿದ್ದೆ, ಕುಡಿಯುತ್ತಿದ್ದೆ. ಯಾವಾಗ ಮನಸ್ಸಾಗುತ್ತಿತ್ತೊ ಆಗ ಏಳುತ್ತಿದ್ದೆ. ನಾನು ಮೊದಲನೇ ಬಾರಿಗೆ ಆಗ 'ಹಳೇ ಒಡಂಬಡಿಕೆ'*ಯನ್ನು ಓದಿದೆ. ಒಂದು ದಿನ ನನ್ನ ಕೈಲಿದ್ದ ಹಣವೆಲ್ಲ ಮುಗಿದುಹೋಯಿತು. ನಾಳೆ ಸಾಯುವುದೆಂದು ಖಚಿತ ಮಾಡಿಕೊಂಡೆ. ಆ ರಾತ್ರಿ ಕಳೆಯುವುದು ತುಂಬ ಕಷ್ಟವಾಯ್ತು. ಬೆಳಿಗ್ಗೆ ಆಕ್ಸಾಲಿಕ್ ಆಮ್ಲವಿದ್ದ ಶೀಶೆಯನ್ನು ಕಂಕುಳಲ್ಲಿಟ್ಟುಕೊಂಡು ಹೊರಗೆ ಹೊರಟೆ. ಟ್ರಾಮಿನಲ್ಲಿ ಅಷ್ಟು ದೂರ ಹೋಗಿ ಒಂದು ಕಡೆ ಇಳಿದೆ. ಸ್ವಲ್ಪ ದೂರ ನಡೆದು ಶೀಶೆಯಿಂದ ಬಾಯಿಗೆ ಸ್ವಲ್ಪ ದ್ರವವನ್ನು ಸುರಿದುಕೊಂಡೆ. ಬಾಯಲ್ಲಿ ಅದನ್ನಿಟ್ಟುಕೊಳ್ಳಲಾಗಲಿಲ್ಲ. ಬಾಯಿ ತುಂಬ ಗುಂಡುಸೂಜಿಗಳನ್ನು ತುಂಬಿಕೊಂಡ ಹಾಗಿತ್ತು. ಸರಕ್ಕನೆ ಅದನ್ನು ಉಗುಳಿ, ಶೀಶೆಯನ್ನು ಬೀಸಾಕಿ, ಅಲ್ಲಿಂದ ಓಟ ಕಿತ್ತೆ."

---

*ಬೈಬಲ್ಲಿನ ಪೂರ್ವಭಾಗ. ಕ್ರಿಸ್ತ ಹುಟ್ಟುವುದಕ್ಕೆ ಮುಂಚೆಯೇ ಯಹೂದಿಗಳು ಬರೆದದ್ದು.

ಈ ಆತ್ಮಹತ್ಯದ ಪ್ರಯತ್ನದಿಂದ ಹಾಫರನ ಸ್ಕಿಡ್ ರೋ ಜೀವನ ಕೊನೆಗೊಂಡಿತು. ತನ್ನ ಸಾಮಾನುಗಳನ್ನೆಲ್ಲ ಗಂಟುಕಟ್ಟಿಕೊಂಡು ಹಾಫರ್ ಲಾಸ್ ಆಂಜಲೀಸ್ ಬಿಟ್ಟು ದಕ್ಷಿಣಾಭಿಮುಖವಾಗಿ ಹೊರಟ.

## ಹೊಲ ಗದ್ದೆಗಳ ಮಧ್ಯೆ

ಮುಂದಿನ ಹತ್ತು ವರುಷ ಹಾಫರ್ ನಾಡಾಡಿಯಾಗಿ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಾ ಕಾಲ ಕಳೆದ. ಆಗಲೇ ಅವನು ಕ್ಯಾಲಿಫೋರ್ನಿಯಾ ಸಂಸ್ಥಾನದಲ್ಲೆಲ್ಲ ಅಲೆದಾಡಿದ್ದ. ಈ ಅಲೆದಾಟದಲ್ಲಿ ಮನುಷ್ಯ ವಿಷಯವಾಗಿ —ಮಾನವಸಮಾಜದ ಅಂಗವಾಗಿ ಮನುಷ್ಯ, ವ್ಯಕ್ತಿಯಾಗಿ ಮನುಷ್ಯ— ಅವನ ಕೆಲವು ವಿಚಾರಗಳು ಮೆಟ್ಟಿಲು ಮೆಟ್ಟಿಲಾಗಿ ರೂಪಗೊಂಡವು. ಈ ಕಾಲದಲ್ಲೇ ಅವನು ತನ್ನ ಸ್ವಂತ ಅನುಭವದಿಂದ, ಒಂದು ಹೊಸ ವಾದವನ್ನು ನಿರೂಪಿಸಿದ್ದ. ಎಡಬಿಡಂಗಿಗಳಿಂದಲೇ ಚರಿತ್ರೆ ನಿರ್ಮಾಣವಾಗುವುದು ಎಂಬುದೇ ಆ ವಾದ. ಬಿಳೀ ಅಮೇರಿಕವನ್ನು ಕಟ್ಟಿದ ಮೊದಲಿಗರು ಎಂಥವರಿದ್ದರು ? ಪ್ರಾಯಶಃ ತನ್ನಂತೇ ಆಗ ಕೆಲಸವಿಲ್ಲದೇ ಅಲೆದಾಡುತ್ತಿದ್ದ ಚಂಚಲ ಮನೋವೃತ್ತಿಯವರು, ಕುಡುಕರು, ಜೂಜುಗಾರರು, ಪಲಾಯನ ಮಾಡಿ ಬಂದವರು, ಸಮಾಜದಿಂದ ಹೊರದೂಡಲ್ಪಟ್ಟವರು! ಮಧ್ಯೆ ಮಧ್ಯೆ, ಒಬ್ಬಿಬ್ಬರು ಶುದ್ಧ ದುಸ್ಸಾಹಸಿಗಳೂ ಇದ್ದರೇನೋ. "ಇಂಥವರು ಕೊನೆಗೆ ಅತಿ ಸಾಹಸದ ಕೆಲಸಗಳನ್ನು ಕೈಗೊಂಡು, ಹೇಳಲಾರದ ಕಷ್ಟನಷ್ಟಗಳನ್ನೆಲ್ಲ ಅನುಭವಿಸಿ, ದುಸ್ಸಾಧ್ಯವಾದ ಕಾರ್ಯಗಳನ್ನು ಮಾಡಿ ತೋರಿಸಿದರೆಂದರೆ, ಅದು ಅವರಿಗೆ ಅನಿವಾರ್ಯವಾದದ್ದೇ ಕಾರಣ. ತಪ್ಪಿಸಿಕೊಂಡು ಓಡಿ ಹೋಗುವವನು ಸಾಹಸಕ್ಕೆ ಬಿದ್ದೇ ಬೀಳುತ್ತಾನೆ... ಒಂದು ಸಾರಿ ಸಾಧನೆಯ ಆನಂದವನ್ನುಂಡ ಮೇಲೆ, ಆ ಉದ್ರೇಕ ಸ್ಥಿತಿಗೋಸ್ಕರ ಅವನು ಮತ್ತೆ ಮತ್ತೆ ಹಾತೊರೆಯುವಂತಾಗುತ್ತದೆ," ಎಂದು ಹಾಫರ್ ಹೇಳಿದ್ದಾನೆ.

ಈ ಎಡಬಿಡಂಗಿಗಳು ಇನ್ನೊಂದು ಹಾದಿಯಲ್ಲಿ ಹೋಗಿ ಸಮಾಜಕಂಟಕರೂ ಆಗಬಹುದೆಂದು ಹಾಫರನಿಗೆ ಆಗಲೇ ಅನಿಸಿತ್ತು. ತಮ್ಮ "ಅನಿಷ್ಟ" ಸ್ಥಿತಿಯನ್ನು ಕಳೆದುಕೊಳ್ಳಲು ಅವರು ಜರ್ಮನಿ, ಇಟಲಿಯಲ್ಲಿ(೧೯೩೦ರ ದಶಕದಲ್ಲಿ)ನ ಹಾಗೆ ಸಾಮೂಹಿಕ ಚಳವಳಿಗಳನ್ನು ಸೇರಿಕೊಳ್ಳಬಹುದು. ಆಗ ಅವರಿಗೆ "ದ್ವೇಷಿಸಲು, ದಾದಾಗಿರಿ ಮಾಡಲು, ಸುಳ್ಳು ಹೇಳಲು, ಹಿಂಸೆ ಮಾಡಲು, ಕೊಲ್ಲಲು, ನಾಚಿಕೆ ಅಥವಾ ದುಃಖವಿಲ್ಲದೆ ವಂಚಿಸಲು ಒಂದು ಹೊಸ ಸ್ವಾತಂತ್ರ್ಯ ಸಿಗುತ್ತದೆ," ಎಂದು ಹಾಫರ್ ಹೇಳುತ್ತಾನೆ. ಹಾಫರನಿಗೆ, ಆ ಮೂರನೆಯ ದಶಕದಲ್ಲಿ ಹಿಟ್ಲರ್, ಮುಸೋಲಿನಿ ಮತ್ತು ಸ್ಟಾಲಿನ್ನರಂಥ ಹಿಂದೆ ಎಂದೆಂದೂ ಕಾಣದಿದ್ದಂಥ ಅಪಾಯಕಾರಿ ಪೀಡಕರ ಸೇವೆಗೆ ಜೀವನವನ್ನು ಮೀಸಲಿಟ್ಟ ಎಡಬಿಡಂಗಿಗಳಿಂದಲೇ ಚರಿತ್ರೆ ನಿರ್ಮಾಣವಾಯಿತೆಂದು ಅನಿಸಿತ್ತು.

ತನ್ನ ಅಲೆದಾಟದಲ್ಲಿ ಕಂಡ ಜನಗಳನ್ನು ಹಾಫರ್ ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದ. ಅವನ ಮೇಲೆ ಪ್ರಭಾವ ಬೀರಿದ ಒಂದಂಶವೆಂದರೆ ಸಾಮಾನ್ಯ ಜನಗಳಲ್ಲಿರುವ ಒಂದು ತರಹದ ಸರಳ ರೀತಿಯ ಕಾರುಣ್ಯಭಾವ. ಈ ಸ್ವಭಾವದ ಜೊತೆ ಜೊತೆಯಾಗಿ ಅವಿಚಾರಿ ಕ್ರೌರ್ಯವಿರುವುದನ್ನೂ ಆತ ಕಂಡಿದ್ದನು. "ನನಗೆ ಜನಸಾಮಾನ್ಯರು ತೋರುವ ಕರುಣೆಯನ್ನು ಕಂಡು ಆಶ್ಚರ್ಯವಾಗುತ್ತದೆ ನಾನು ಸ್ವಭಾವತಃ ಮೃದು ಹೃದಯನಲ್ಲ. ಶಾಲೆಯ ಮೇಡಂಗಳಿಂದ ಮೆದು ಮಾಡಲ್ಪಡದ ರೂಕ್ಷ ಹೃದಯ ನನ್ನದು. ಜನಗಳನ್ನು ಹೇಗೆ ಮಾತನಾಡಿಸಬೇಕು, ಅವರೊಡನೆ ಹೇಗೆ ಬೆರೆಯಬೇಕು ಎಂಬುದನ್ನು ನಾನು ಇದುವರೆಗೂ ಕಲಿತಿಲ್ಲ. ನಾನೊಬ್ಬ ಒಂಟಿ ಜೀವಿ. ದಯೆ, ಕರುಣೆ—ಇದನ್ನು ತೋರಿಸಲು ನಾನು ಬುದ್ಧಿಪೂರ್ವಕವಾಗಿ ಪ್ರಯತ್ನ ಮಾಡಬೇಕಾಗುತ್ತದೆ. ಆದರೆ ಜೀವನದುದ್ದಕ್ಕೂ ನಾನು ಕಂಡಿರುವುದು ಜನ ತಮ್ಮ ಕಷ್ಟಗಳನ್ನು ಪರಿಗಣಿಸದೆ ದಯಾಪರರಾಗಿರುತ್ತಾರೆಂಬುದು," ಎಂದು ಹಾಫರ್ ಒಂದು ಕಡೆ ಹೇಳಿದ್ದಾನೆ.

## ಧಕ್ಕೆಯಲ್ಲಿ ಕಾಯಕ

ಮೂರನೆಯ ದಶಕದ ಪೂರ್ಣ ಹಾಫರ್

ಬರೆಯುವುದನ್ನು ಅಭ್ಯಾಸ ಮಾಡುತ್ತಿದ್ದ. ಆಗಾಗ ಹೊಳೆಯುತ್ತಿದ್ದ ವಿಚಾರ, ವಾಕ್ಯಗಳನ್ನು ನೋಟು ಪುಸ್ತಕಗಳಲ್ಲಿ ಬರೆದಿಡುತ್ತಿದ್ದ. ಗ್ರಂಥಾಲಯಗಳಲ್ಲಿ ಓದಿದ ಪುಸ್ತಕಗಳಲ್ಲಿನ ಮನಸೆಳೆದ ವಾಕ್ಯಗಳನ್ನು ಬರೆದುಕೊಳ್ಳುತ್ತಿದ್ದ. ಎರಡು ಕಾದಂಬರಿಗಳನ್ನು ಆತ ಆಗ ಬರೆದಿದ್ದ. ಆದರೆ ಅವನ್ನು ಹಾಫರ್ ಮತ್ತು ಅವನೊಬ್ಬ ಮಿತ್ರನ ಹೊರತು ಇದುವರೆಗೂ ಇನ್ನಾರೂ ಓದಿಲ್ಲ.

೧೯೩೮ರ ಕೊನೆಯ ಹೊತ್ತಿಗೆ, ಹಾಫರ್ ತನ್ನ ಟಿಪ್ಪಣಿಗಳನ್ನೂ ಹಿಂದೆ ತಾನು ಎಡಬಿಡಂಗಿಗಳ, "ಅನಿಷ್ಟ"ರ ಬಗ್ಗೆ ಬರೆದಿದ್ದ ವಿಚಾರಗಳನ್ನೂ ಸೇರಿಸಿ "ಕಾಮನ್ ಗ್ರೌಂಡ್" ಎಂಬ ಒಂದು ಪತ್ರಿಕೆಗೆ ಕಳಿಸಿದ. ಅನೇಕ ವಾರಗಳ ತರುವಾಯ ಪತ್ರಿಕೆಯ ಸಹಸಂಪಾದಿಕೆಯಾಗಿದ್ದ ಮಾರ್ಗರೆಟ್ ಆಂಡರ್ಸನ್ ಎಂಬುವಳಿಂದ ಒಂದು ಪತ್ರ ಬಂತು. ಹಾಫರನ ಟಿಪ್ಪಣಿಗಳನ್ನು ತಾವು ಪ್ರಕಟಿಸಲು ಸಾಧ್ಯವಾಗಲಿಲ್ಲವೆಂದೂ ಆದರೆ ಅವು ಸುಂದರ ಕೃತಿಗಳೆಂದು ತಾನು ಭಾವಿಸಿದ್ದಾಗಿಯೂ ಆಕೆ ಹೇಳಿದ್ದಳು. ನಂತರ ಕ್ರಿಸ್‌ಮಸ್ ಹಬ್ಬದ ಹೊತ್ತಿಗೆ ಆಕೆಯಿಂದ ಶುಭಾಶಯದ ಕಾರ್ಡು ಬಂದಿತು. ಅದರಲ್ಲಿ ಅವನು ತನ್ನ ಬರವಣಿಗೆಯನ್ನು ಮುಂದುವರಿಸಬೇಕೆಂದು ಆಕೆ ತಿಳಿಸಿದ್ದಳು. ಪ್ರತಿ ಕ್ರಿಸ್‌ಮಸ್ ಸಮಯಕ್ಕೂ ಆಕೆಯಿಂದ ಅವನಿಗೆ ಶುಭಾಶಯ ಕೋರಿ ಕಾರ್ಡು ಬರುತ್ತಿತ್ತು. ಆಕೆಯ ಸ್ನೇಹಪರ ಕಳಕಳಿಯಿಂದ ತಾನೂ ಒಬ್ಬ ಲೇಖಕನಾಗುವೆನೆಂಬ ನಂಬಿಕೆ ಬಂದಿತೆಂದು ಹಾಫರ್ ಹೇಳಿದ್ದಾನೆ.

ಈಗ ಹಾಫರನ ಜೀವನ ಇನ್ನೊಂದು ಘಟ್ಟವನ್ನು ಸಮೀಪಿಸಿತ್ತು. ಎರಡನೇ ಮಹಾಯುದ್ಧ ಯುರೋಪಿನಲ್ಲಿ ಪ್ರಾರಂಭವಾಗಿತ್ತು. ಸಾಮೂಹಿಕ ಚಳುವಳಿ ಹಾಗೂ "ಅನಿಷ್ಟ" ಜನರ ಬಗ್ಗೆ ತಾನು ಹಿಂದೆ ವಿಚಾರ ಮಾಡಿದ್ದ ವಿಷಯಗಳು ಈಗ ಖಚಿತವಾದುವೆಂದು ಅವನಿಗನಿಸಿತು. ಅಮೆರಿಕ ೧೯೪೧ರಲ್ಲಿ ಸಂಗ್ರಾಮದಲ್ಲಿ ತಾನೂ ಧುಮುಕಿದಾಗ ಹಾಫರ್ ಸೈನ್ಯಕ್ಕೆ ಸೇರಿಕೊಳ್ಳಲು ಅರ್ಜಿ ಹಾಕಿದ. ಹಿಂದಿನಿಂದ ಅವನನ್ನು ಕಾಡುತ್ತಿದ್ದ ಅಂತ್ರವೃದ್ಧಿ (hernia) ಯೇ ಕಾರಣವಾಗಿ ಅವನನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಿಲ್ಲ. ಅದಕ್ಕೆ ಬದಲಾಗಿ ಯುದ್ಧ ಪ್ರಯತ್ನಕ್ಕೆ ಸಂಬಂಧಿಸಿದ ಯಾವುದಾದರೊಂದು ಅತ್ಯಂತ ಶ್ರಮದಾಯಕವಾದ ಕೆಲಸದಲ್ಲಿ ತೊಡಗಬೇಕೆಂದೆನಿಸಿ ಹಾಫರ್ ಸ್ಯಾನ್ ಫ್ರಾನ್ಸಿಸ್ ಕೋವಿನ ಧಕ್ಕೆಯಲ್ಲಿ ಸಾಮಾನು ಹೊರುವ ಕೆಲಸಕ್ಕೆ ಸೇರಿಕೊಂಡ. ಆಗ ಅವನಿಗೆ ನಲವತ್ತು ವಯಸ್ಸು. ಮಾರ್ಥಾಳ ಭವಿಷ್ಯ ಸುಳ್ಳಾಗಿತ್ತು. ಅವನಿನ್ನೂ ಬದುಕೇ ಇದ್ದ! ಜೀವನದಲ್ಲಿ ಪ್ರಥಮವಾಗಿ ಹಾಫರ್ ಈಗ ಒಂದು ಭದ್ರವಾದ ಕೆಲಸಕ್ಕೆ ಅಂಟಿಕೊಂಡ.

ಧಕ್ಕೆಯಲ್ಲಿ ಸಹ ಅವನಿಗೆ ಚಿರಪರಿಚಿತರೇ ಸಿಕ್ಕರು. ತನು-ಮನಗಳಲ್ಲೊಂದರಲ್ಲಾದರೂ ಊನವಿರುವವರು; ಪರದೇಶಿಗಳು. ಹಾಫರ್ ಅತಿಶ್ರಮದಾಯಕವಾದ ಕೆಲಸಗಳನ್ನೇ ಹುಡುಕಿ ಮಾಡುತ್ತಿದ್ದ. ಪರಿಣಾಮದ ಪರಿವೆಯಿಲ್ಲದೆ ಕೆಲಸದಲ್ಲಿ ನಿರತನಾದ. ಅವನ ಭಾರಿ ದೇಹ ಇದರಿಂದ ನುಗ್ಗಾಯಿತು. ಕಾಲ್ಬೆರಳು, ಕೈಬೆರಳುಗಳು ಲೊಟಕ್ಕನೆ ಮುರಿದುಕೊಂಡವು; ಮಾಂಸಖಂಡಗಳು ತಿರುಚಿಕೊಂಡವು; ಹಡಗಿನ ಕುಳ್ಳು ಅಟ್ಟಗಳಲ್ಲಿ ಕೆಲಸ ಮಾಡುವಾಗ ತಲೆ ತಿಂದ ಪೆಟ್ಟುಗಳೆಷ್ಟೋ. ಇವು ಯಾವುದಕ್ಕಾಗಿಯೂ ಅವನು ಕೆಲವು ದಿನಗಳಿಗಿಂತ ಹೆಚ್ಚಾಗಿ ವಿಶ್ರಾಂತಿ ಪಡೆಯುತ್ತಿರಲಿಲ್ಲ. ಒಮ್ಮೆ ೧೯೪೩ರಲ್ಲಿ ಐದು ಟನ್ ಭಾರದ ಒಂದು ಹಡಗೆ ಮೇಲಿನಿಂದ ಒಡೆದು ಬಿತ್ತು. ಅನೇಕರಿಗೆ ಪ್ರಾಣಕ್ಕೇ ಸಂಚಕಾರ ತಂದಿತು. ಹಾಫರನ ಬಲಗೈ ಹೆಬ್ಬೆರಳು ಜಜ್ಜಿ ಬಜ್ಜಿಯಾಗಿ ಅದನ್ನು ಕೊನೆಗೆ ಕತ್ತರಿಸಿಯೇ ಹಾಕಬೇಕಾಯಿತು. ಹೊಸ ಹೆಬ್ಬೆರಳನ್ನು ಜೋಡಿಸಿಕೊಳ್ಳಲು ಹಾಫರ್ ಆಸ್ಪತ್ರೆಯಲ್ಲಿ ಒಂಭತ್ತು ತಿಂಗಳಿರಬೇಕಾಯಿತು. ಶಸ್ತ್ರಚಿಕಿತ್ಸಕರು ಹಾಫರನ ಒಂದು ಪಕ್ಕೆಲುಬಿನಿಂದ ಮೃದ್ವಸ್ಥಿಯನ್ನು ತೆಗೆದು ಅನೇಕ ಬಾರಿ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ ಮಾಡಿ ಅವನಿಗೆ ಕೊನೆಗೊಂದು ಕೆಲಸಕ್ಕೆ ಬರುವ ಹೊಸ ಹೆಬ್ಬೆರಳ ಮೋಟಕನ್ನು ಕೊಟ್ಟರು. ಅದು ನೋಡುವುದಕ್ಕೆ ವಕ್ರವಾಗಿದ್ದರೂ ಕೈಯನ್ನು ಪೂರ್ಣವಾಗಿ ಸರಿಯಾಗಿ ಉಪಯೋಗಿಸಲು ಸಹಾಯಮಾಡುವಂತಿತ್ತು. "ಆಸ್ಪತ್ರೆಯಲ್ಲಿ ಕಳೆದ ಒಂಭತ್ತು ತಿಂಗಳು ಹಾಯಾಗಿದ್ದೆ! ಸರ್ವ-

# ನಿಮಗೆ ಇನ್ನೊಂದು ಮಗು ಆಗುವ ಮುಂಚೆ
# ಯೋಚಿಸಿ

ಮೊದಲು ಈಗಿರುವ ಮಗುವಿಗೆ
ಅಗತ್ಯವಿರುವ ಆರೈಕೆ
ಒದಗಿಸಬೇಡವೆ?



ಅವನಿಗೆ ಓದು ಬರಹ ಕಲಿಸಬೇಕು. ನೀವು ಯೋಚಿಸಿರುವ ಎಲ್ಲ ಸೌಕರ್ಯಗಳನ್ನೂ ಅವನಿಗೆ ಒದಗಿಸಬೇಕು. ಈಗಲೇ ಇನ್ನೊಂದು ಮಗು ಆದರೆ ಇದು ಕಷ್ಟವಾಗುವುದು. ಇದನ್ನು ತಡೆಗಟ್ಟಬೇಕಲ್ಲವೇ ?

ಪ್ರಪಂಚದಾದ್ಯಂತ ಲಕ್ಷಾಂತರ ದಂಪತಿಗಳು ಹೀಗೆ ಮಾಡುತ್ತಿದ್ದಾರೆ. ಸಾಕಷ್ಟು ಅನುಕೂಲ ದೊರೆಯುವವರೆಗೆ ಮುಂದಿನ ಮಗು ಹುಟ್ಟುವುದನ್ನು ಅವರು ಮುಂದೂಡುತ್ತಿದ್ದಾರೆ. ನಿರೋಧ್ ನಿಂದ ನೀವೂ ಇದನ್ನು ಸಾಧಿಸಬಹುದು. ಇದು ಗಂಡಸರು ಬಳಸುವ ಪ್ರಪಂಚದ ಅತ್ಯಂತ ಜನಪ್ರಿಯ ರಬ್ಬರ್ ಗರ್ಭನಿರೋಧಕ. ನೆನಪಿರಲಿ, ನಿರೋಧ್ ಅತ್ಯಂತ ಸುರಕ್ಷಿತ, ಸರಳ ಗರ್ಭ ನಿರೋಧ ಸಾಧನ. ಅನೇಕ ಪರೀಕ್ಷಣಗಳಿಂದ ಯಶಸ್ವಿಯಾಗಿದೆ. ನೀವೂ ಏಕೆ ನಿರೋಧ್ ಉಪಯೋಗಿಸಬಾರದು?

ಎಲ್ಲಾ ಕಡೆಯೂ 15 ಪೈಸೆಗೆ 3 ರಂತೆ ಸರ್ಕಾರದ ಸಹಾಯಧನದಿಂದ ಕಡಿಮೆ ಬೆಲೆಗೆ ಸಿಗುತ್ತದೆ.



ಇನ್ನೊಂದು ಮಗು ಬೇಕೆನಿಸುವ ತನಕ ಉಪಯೋಗಿಸಿ

## ನಿರೋಧ್

ಲಕ್ಷಾಂತರ ಜನ ಬಳಸುವ ಸುರಕ್ಷಿತ, ಸರಳ ಗರ್ಭ ನಿರೋಧಕ.

ದಿನಬಳಕೆಯ ವಸ್ತುಗಳನ್ನು ಮಾರುವ ಅಂಗಡಿಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ, ಔಷಧಿ ವ್ಯಾಪಾರಿಗಳಲ್ಲಿ ಮುಂತಾದಲ್ಲಿ ನಿರೋಧ್ ದೊರೆಯುತ್ತದೆ.

ಸ್ವತಂತ್ರನಾಗಿದ್ದೆ ! ದಿನವೆಲ್ಲಾ ಓದಬಹುದಾಗಿತ್ತು. ಹಾಸಿಗೆಯಲ್ಲಿ ಆರಾಮವಾಗಿದ್ದೆ. ಎಲ್ಲರೂ ನನ್ನನ್ನು ಕಂಡರೆ ಕಳಕಳಿ ತೋರಿಸುವವರೇ!" ಎಂದು ಹಾಫರ್ ಹೇಳಿಕೊಂಡಿದ್ದಾನೆ. ಅವನು ಸದಸ್ಯನಾಗಿದ್ದ ಕಾರ್ಮಿಕರ ಸಂಘ ಅವನಿಗೆ ವಿಮಾ ಹಣವನ್ನು ಕೊಟ್ಟಿತು. ಹಾಫರ್ ಅದನ್ನೆಲ್ಲ ಆಸ್ಪತ್ರೆಯ ದಾಯಿಗಳಿಗೆ ಹೂವು, ಮಿಠಾಯಿಗಳನ್ನು ಕೊಂಡುಕೊಡುವುದರಲ್ಲಿ ಖರ್ಚುಮಾಡಿದ. ದಾಯಿಗಳಿಗಂತೂ ಹಾಫರನನ್ನು ಕಂಡರೆ ಪ್ರಾಣ. ಒಂದು ಶಿಶು ತಯಾರಾಗುವುದಕ್ಕೂ ಒಂದು ಹೆಬ್ಬೆರಳು ಬೆಳೆಯುವುದಕ್ಕೂ ಒಂದೇ ಸಮಯ ಎಂದು ತಿಳಿದು ಅವನಿಗೆ ಆನಂದವಾಯ್ತಂತೆ.

ಧಕ್ಕೆಯ ಕಾಯಕ ಹಾಫರನಿಗೆ ಇಷ್ಟವಾದದ್ದು ಮುಖ್ಯವಾಗಿ ಅದು ತನಗೆ ಆಲೋಚನೆಮಾಡಲು ಅವಕಾಶ ಕೊಟ್ಟದ್ದಕ್ಕಾಗಿ. ಈ ಕೆಲಸದಲ್ಲಿ ಆಗಿಂದಾಗ್ಗೆ ಬಿಡುವು ಇದ್ದೇ ಇರುತ್ತದೆ. ಆ ಸಮಯದಲ್ಲಿ ಅವನು ಓದುತ್ತಲೋ ಒಂದು ನೋಟು ಪುಸ್ತಕದಲ್ಲಿ ಟಿಪ್ಪಣಿಗಳನ್ನು ಬರೆದಿಟ್ಟುಕೊಳ್ಳುತ್ತಲೋ ಇರುವುದು ಸಾಮಾನ್ಯವಾಗಿತ್ತು. ಇದನ್ನು ಕಂಡ ಅವನ ಸಂಗಡಿಗರು ಅವನಿಗೆ "ಪ್ರೊಫೆಸರ್" ಎಂದು ಅಡ್ಡ ಹೆಸರಿಟ್ಟಿದ್ದರು.

ಹಾಫರನ ಅನೇಕ ಗಮನಾರ್ಹವಾದ ವಿಚಾರಗಳು ಅವನು ಕೆಲಸ ಮಾಡುತ್ತಿದ್ದಾಗಲೇ ಬಂದವು. ಅವನು ಮಾಡುತ್ತಿದ್ದ ಕೆಲಸದಲ್ಲೇ ಪೂರ್ಣಮನಸ್ಕನಾಗಿ ಮುಳುಗಿದ್ದರೂ ತಲೆಯ ಯಾವುದೋ ಒಂದು ಮೂಲೆಯಲ್ಲಿ ಅವನ ವಿಚಾರಗಳು ಸದ್ದಿಲ್ಲದೆ ಬೆಳೆಯುತ್ತಿದ್ದವು. ಈ ವಿಚಾರಸರಣಿಯನ್ನು ಚಿಮ್ಮಿಸಲು ಯಾವುದಾದರೂ ಒಂದು ಸಣ್ಣ ವಿಷಯ—ಯಾರೋ ನುಡಿದ ಮಾತು, ಹಾರಿ ಹೋಗುತ್ತಿದ್ದ ಬೆಳ್ಳಕ್ಕಿ, ಸಂಗಡಿಗನೊಬ್ಬ ಕೆಲಸ ಮಾಡುತ್ತಿದ್ದ ರೀತಿ—ಸಾಕಾಗಿತ್ತು. ಎಂಥ ಕೆಲಸಗೇಡಿ ಸಂಗಡಿಗನೂ ಅವನಲ್ಲಿ ಒಮ್ಮೊಮ್ಮೆ ಒಂದು ಹೊಸ ವಿಚಾರಸರಣಿಯನ್ನು ಹೊರಡಿಸಲು ಸಾಕಾಗುತ್ತಿದ್ದ. "ಮನುಷ್ಯನಲ್ಲಿ ಒಂದೇ ಒಂದು ಒಳ್ಳೇ ಗುಣ ಇದ್ದರೆ ಸಾಕು, ನಾನು ಅವಕ್ಕಿಂತ ಹೆಚ್ಚಿನವನ್ನು ಅಪೇಕ್ಷಿಸುವುದಿಲ್ಲ," ಎಂದು ಹಾಫರ್ ಹೇಳಿದ್ದಾನೆ.

ಹಾಫರನ ವಿಚಾರಸರಣಿ ಹುಟ್ಟುತ್ತಿದ್ದ, ಬೆಳೆಯುತ್ತಿದ್ದ ವಿಧಾನವನ್ನು ಈ ಒಂದು ಉದಾಹರಣೆ ಚೆನ್ನಾಗಿ ಚಿತ್ರಿಸುತ್ತದೆ. ಒಮ್ಮೆ ಹಾಫರನಿಗೆ ನಿಜವಾಗೂ ಒಬ್ಬ ಶುದ್ಧ ಪೆದ್ದುಪೆದ್ದು ಕೆಲಸದವನು ಸಂಗಡಿಗನಾಗಿ ಸಿಕ್ಕ. ಅವನ ಒಡ್ಡತನಕ್ಕೆ ಬೇಸತ್ತು ಯಾರೊಬ್ಬರೂ ಅವನನ್ನು ಸಂಗಡಿಗನಾಗಿ ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಿದ್ದರು. ಹಾಫರ್ ನೆನಪು ಮಾಡಿಕೊಂಡು ಹೇಳುತ್ತಾನೆ, "ನಾವಿಬ್ಬರೂ ನಮ್ಮ ಪೇರನ್ನು ಜೋಡಿಸುವ ಕೆಲಸ ಪ್ರಾರಂಭಿಸಿದೆವು. ಧಕ್ಕೆಯಲ್ಲಿ ಇದು ಸರಳವಾದ ಕೆಲಸ. ನನ್ನ ಕಡೆಯ ಸಾಮಾನುಗಳನ್ನು ನಾನು ಜೋಡಿಸುತ್ತಿದ್ದರೆ, ತನ್ನ ಕಡೆ ಸಾಮಾನನ್ನು ನನ್ನ ಸಂಗಡಿಗ ಜೋಡಿಸಬೇಕಿತ್ತು. ಆ ದಿನ ನನಗೊಂದು ತಮಾಷೆ ಕಣ್ಣಿಗೆ ಬಿತ್ತು. ನನ್ನ ಮೂರ್ಖ ಸಂಗಡಿಗ ನಮ್ಮ ಬದಿಯಿಂದ ಆಚೆಗೆ ಹೋಗಿ ತನ್ನ ಕೆಲಸ ಬಿಟ್ಟು ಬೇರೆ ಕೆಲಸಗಾರರಿಗೆ ಸಹಾಯ ಮಾಡುತ್ತಿದ್ದ. ನನ್ನನ್ನು ಕಂಡರೆ ಅವನಿಗಾಗುತ್ತಿರಲಿಲ್ಲ ಎಂದೇನಲ್ಲ. ಆ ದಿನ ನನ್ನ ಮನಸ್ಸಿನಲ್ಲಿ ಒಂದು ಸುಂದರ ವಿಚಾರಸರಣಿ ಮೂಡಿಕೊಂಡಿತು. ಈ ಆಸಾಮಿ, ತನ್ನ ಕೆಲಸವನ್ನೇ ಸರಿಯಾಗಿ ಮಾಡಲು ಬಾರದವನು, ತನ್ನ ಕರ್ತವ್ಯದ ಸೀಮೆಯನ್ನು ದಾಟಿ ಪರೋಪಕಾರಿಯಾಗಲು ಇಷ್ಟೇಕೆ ಆತುರನಾಗಿದ್ದ ಎಂದು ನಾನು ವಿಚಾರಮಾಡಲು ಆರಂಭಿಸಿದೆ. ಪ್ರಶ್ನೆಗೆ ನನ್ನ ಉತ್ತರ ಹೀಗಿತ್ತು. ನಿನ್ನ ಕೆಲಸ ಮಾಡುವುದರಲ್ಲಿ ನೀನು ಅಪಕ್ವನಾಗಿದ್ದರೆ, ನೀನು ಉಪಹಾಸಕ್ಕೆ ಎಡೆಗೊಡುತ್ತೀ; ಆದರೆ ಅದೇ ನೀನು ಇನ್ನೊಬ್ಬರಿಗೆ ಸಹಾಯ ಮಾಡಲು ಅದೇ ಕೆಲಸ ಮಾಡಿದರೆ ನಿನ್ನನ್ನು ಕಂಡು ಯಾರೂ ನಗುವುದಿಲ್ಲ. ಆ ನನ್ನ ಸಂಗಡಿಗ ತನ್ನ ಅದಕ್ಷತೆಯನ್ನು ಬೇರೆಯವರು ಲಕ್ಷ್ಯಕ್ಕೆ ತೆಗೆದುಕೊಳ್ಳದ, ತೆಗಳದಿರುವ ಒಂದು ಸ್ಥಾನಕ್ಕೆ ವರ್ಗಾಯಿಸಲು ಪ್ರಯತ್ನ ಮಾಡುತ್ತಿದ್ದ ಎಂದು ನನಗನಿಸಿತು. ಈ ವಿಚಾರ ಬಂದೊಡನೆ ಆ ಪೆದ್ದುಪೆದ್ದು ಸಂಗಡಿಗನನ್ನು ನಾನು ಪೂರ ಮರೆತುಬಿಟ್ಟೆ. ನನ್ನ ಬುದ್ಧಿ ಯಾವುದೋ ವ್ಯೂಹದಲ್ಲಿ ಗಿರ್ರನೆ ತಿರುಗತೊಡಗಿತು. ಅಗ್ರ-

ಗಾಮಿ (avant-garde) ಸಾಹಿತ್ಯ, ಕಲೆಗಳ ವಿಷಯ ವಿಚಾರ ಮಾಡತೊಡಗಿದೆ. ನನಗನಿಸಿತು, ಸಹಜವಾದ ಸಾಮರ್ಥ್ಯ, ಕೌಶಲ ಇಲ್ಲದ ಎಲ್ಲ ಬರಹಗಾರರೂ ಕಲಾಕಾರರೂ ತಮ್ಮ ಅದಕ್ಷತೆ ಒಂದು ಸಾಧಾರಣ ನಿರೀಕ್ಷಿತ ವಿಷಯವಾಗಿ ಪರಿಗಣಿಸಲ್ಪಡುವ ಸ್ಥಿತಿಗೆ ಜಾರಿಹೋಗುವಂತೆ ಮಾಡಲು ಪ್ರಯತ್ನಪಡುತ್ತಿರುತ್ತಾರೆ ಎಂದು. ಅಂಥ ಸ್ಥಿತಿ ಯಾವುದು? ನವ್ಯತೆ, ಹೊಸಹೊಸ ಪದ್ಧತಿ ಅಂಥಾ ಸ್ಥಿತಿಯನ್ನು ಏರ್ಪಡಿಸುತ್ತವೆ. ಎಲ್ಲಕ್ಕೂ ಹೊಸತಾದ್ದು ಪರಿಪಕ್ವವಾಗಿರಲು, ಪರಿಪೂರ್ಣವಾಗಿರಲು ಹೇಗೆ ಸಾಧ್ಯ? ಎಂದೇ ಎಲ್ಲರೂ ಅದರಲ್ಲಿರುವ ನ್ಯೂನತೆಗಳನ್ನು ಲಕ್ಷಿಸದಿರಲು, ಕ್ಷಮಿಸಲು ತಯಾರಿರುತ್ತಾರೆ. ಕೆಲವೊಂದು ಅಪವಾದಗಳ ಹೊರತಾಗಿ, ಈ ನವ್ಯ ಪಂಥದವರೆಲ್ಲ ಬಹುಶಃ ಸಹಜವಾದ ಸಾಮರ್ಥ್ಯವಿಲ್ಲದವರು ಎಂದು ನನಗನಿಸಿತು. ಆದ್ದರಿಂದಲೇ ಎಲ್ಲ ನವ್ಯಸಾಹಿತ್ಯವೂ ಅಪಲಕ್ಷಣವಾಗಿರುತ್ತದೆ. ಆದರೆ ಈ ನವ್ಯಪಂಥಗಳ ಜನವೂ ಒಂದು ಆವಶ್ಯಕ ಪಾತ್ರವನ್ನು ಹೊತ್ತಿದ್ದಾರೆ. ಅವರು ಸಾಹಿತ್ಯ, ಕಲೆ ಚಲನೆಯಿಲ್ಲದೆ ಮುರಗಟ್ಟಿ ಹೋಗುವುದನ್ನು ತಪ್ಪಿಸುತ್ತಾರೆ. ಕದಗಳನ್ನು ತೆರೆದು ಸಹಜ ಸಾಮರ್ಥ್ಯವುಳ್ಳ ಕಲಾಕಾರ ಹುಟ್ಟಿಕೊಂಡಾಗ ಅವನು ಈ ಒಡ್ಡರು ತಯಾರಿಸಿಟ್ಟಿದ್ದ ತಂತ್ರಗಳನ್ನು ಪಯೋಗಿಸಿಕೊಂಡು ಆ ದಾರಿಯಲ್ಲೇ ಧೈರ್ಯದಿಂದ ನುಗ್ಗುವುದಕ್ಕೆ ಅವಕಾಶ ಮಾಡಿಕೊಟ್ಟಿರುತ್ತಾರೆ. ಸಾಮರ್ಥ್ಯವುಳ್ಳವನು ಯಾವ ತಂತ್ರವನ್ನಾದರೂ ಉಪಯೋಗಿಸಿಕೊಳ್ಳಬಲ್ಲ. ಈ ಸರಣಿಯುದ್ದಕ್ಕೂ ನಾನು ವಿಚಾರ ಮಾಡುತ್ತಲೇ ಹೋದೆ. ಆ ದಿನವೆಲ್ಲ ನಾನು ಒಂದು ಭಾವೋದ್ರೇಕ ಸ್ಥಿತಿಯಲ್ಲೇ



ಇದ್ದೆ. ಇದೆಲ್ಲದರ ಪರಿಣಾಮವಾಗಿ ಕೊನೆಗೊಂದು ಪೂರ್ಣ ಸೂಕ್ತಿಯೇ ಬೆಳೆದುಬಂತು. ನಾನು ಮನೆಗೆ ಬಂದ ಮೇಲೆ ಅದನ್ನು ಬರೆದಿಡುವ ಕೆಲಸ ಮಾತ್ರ ಉಳಿದಿತ್ತು. ಇದೇ ರೀತಿ ನಾನು ಅನೇಕ ಸೂಕ್ತಿಗಳನ್ನು ಬರೆದಿದ್ದೇನೆ—ಎಲ್ಲ ಕೆಲಸದ ವೇಳೆಯಲ್ಲೇ!" ಎಂದು.

ಮೆಲ್ಲಮೆಲ್ಲಗೆ, ಯಾವ ಯೋಜನೆಯೂ ಇಲ್ಲದೆ, ಹಾಫರನ ಪುಸ್ತಕ 'ದಿ ಟ್ರೂ ಬಿಲೀವರ್' (The True Believer) ರೂಪುಗೊಳ್ಳುತ್ತಿತ್ತು. ಸಾಮೂಹಿಕ ಚಳುವಳಿಗಳ ಬಗ್ಗೆ ಈ ಪುಸ್ತಕದಲ್ಲಿ ಹಾಫರ್ ತನ್ನ ವಿಚಾರಗಳನ್ನು ವ್ಯಕ್ತ ಮಾಡಿದ್ದಾನೆ. ಅದಕ್ಕೆ ಬೇಕಾದ ಚಾರಿತ್ರಿಕ ವಿಷಯಗಳನ್ನು ಹುಡುಕಲು ಅವನು ಕೈಗೊಂಡ ಸಂಶೋಧನೆ ತೀರ ವಿಚಿತ್ರವಾದದ್ದು. "ಸಂಶೋಧನೆಗೆ ಬೇಕಾದ ಶಿಸ್ತಿನ ಬಗ್ಗೆ ನನಗೆ ಏನೂ ತಿಳಿದಿಲ್ಲ. ನನಗೆ ಬೇಕಾದ ವಿಷಯವನ್ನು ನಾನು ಸಂಗ್ರಹಿಸುವುದು ಹೀಗೆ. ಗ್ರಂಥಾಲಯಕ್ಕೆ ಹೋಗುತ್ತೇನೆ. ಅಲ್ಲಿ ನನಗೆ ಮನಸ್ಸಿಗೆ ಬಂದ ಪುಸ್ತಕಗಳನ್ನು ತಿರುವಿ ಹಾಕುತ್ತೇನೆ. ಆಗ ಕಣ್ಣಿಗೆ ಬಿದ್ದ ವಿಷಯಗಳನ್ನೆಲ್ಲ ಉಪಯೋಗಿಸಿಕೊಳ್ಳುತ್ತೇನೆ. ಸ್ಪಷ್ಟವಾದ ವಿಚಾರ ನಿಮ್ಮ ಮನಸ್ಸಿನಲ್ಲಿದ್ದರೆ, ನಿಮಗೆ ಬೇಕಾದ ವಸ್ತು ನಿಮ್ಮ ಕಾಲಿಗೇ ಬಂದು ತೊಡರುತ್ತದೆ ಎಂದು ನನ್ನ ನಂಬಿಕೆ. ಅದೃಷ್ಟವೇ ದಾರಿ ತೋರಿಸುತ್ತದೆ. ಪ್ಯಾಶ್ಚರ್*ಹೇಳಲಿಲ್ಲವೇ, 'ಸಿದ್ಧವಿರುವ ಮನಸ್ಸನ್ನು ಅವಕಾಶ ಹುಡುಕಿಕೊಂಡು ಬರುತ್ತದೆ.' ಕಿಚನರ್† ಹಾಗೂ ಫ್ರೆಡರಿಕ್††ದಂಡನಾಯಕರನ್ನು ಆಯ್ಕೆಮಾಡಿಕೊಳ್ಳಬೇಕಾದಾಗ 'ಅವನು ಅದೃಷ್ಟವಂತನೋ ಅಲ್ಲವೋ?' ಎಂದು ಮೊದಲು ನೋಡುತ್ತಿದ್ದರು. ಅದೃಷ್ಟವಂತ ಎಂದರೇನು? ಬಂದ ಅವಕಾಶಗಳ ಉಪಯೋಗವನ್ನು ಪಡೆಯುವುದಕ್ಕೆ ಸಿದ್ಧನಿರುವವನು ಎಂದು ತಾನೇ? ನಾನೂ ಸಹ ನನಗೆ ಬೇಕಾದ್ದನ್ನು ಪಡೆಯಲು ಅದೃಷ್ಟವನ್ನೇ ನಂಬಿಕೊಂಡಿದ್ದೇನೆ. ಅದು ಸಾಮಾನ್ಯವಾಗಿ ನನಗೆ ಮೋಸ ಮಾಡಿಲ್ಲ."

ಧಕ್ಕೆಯಲ್ಲಿನ ಸಂಪಿನಿಂದಾಗಿ ೧೯೪೭ ರಲ್ಲಿ ಹಾಫರನಿಗೆ ಎರಡು ತಿಂಗಳು ಪುರಸೊತ್ತು ಸಿಕ್ಕಿತು. ಆಗ ತಾನು ಯಾಪಾಟೇದರೆ ಆವಾಗ ಹೇಗೆಂದರೆ ಹಾಗೆ ಬರೆದಿದ್ದ ಟಿಪ್ಪಣಿಗಳನ್ನೆಲ್ಲ ಕಲೆಹಾಕಿ ಅದಕ್ಕೊಂದು ರೂಪು ಕೊಟ್ಟು ಮಾಂಟೇನಿನ ಪ್ರಬಂಧಗಳ ಮಾದರಿಯಲ್ಲಿ ಒಂದು ಪುಸ್ತಕ ಮಾಡಿದ. ಮಾರ್ಗರೆಟ್ ಆಂಡರ್‌ಸನ್ನಳ ನೆರವಿನಿಂದ ಕೊನೆಗೆ ೧೯೫೧ ರಲ್ಲಿ ಹಾರ್ಪರ್ ಅಂಡ್ ಬ್ರದರ್ಸ್ (Harper & Brothers) ಅವರಿಂದ ಅದು ಪ್ರಕಟವಾಯಿತು. ಆ ಪುಸ್ತಕವೇ "ದಿ ಟ್ರೂ ಬಿಲೀವರ್" (The True Believer).

೮೮

ವಿಮರ್ಶಕರು ಪುಸ್ತಕವನ್ನು ಹೊಗಳಿದರು. 'ನ್ಯೂಯಾರ್ಕರ್' ಪತ್ರಿಕೆಯ ವಿಮರ್ಶಕ ಅದನ್ನು 'ಕೇವಲ ಬುದ್ಧಿ ಮತ್ತು ಹುಟ್ಟರಿವುಗಳ ಕಾರ್ಯಕಲಾಪಗಳಿಂದ ನಿರ್ಮಿತವಾದ ಕೃತಿ' ಎಂದು ವರ್ಣಿಸಿದ. ಪುಸ್ತಕವೇನೂ ಹಾಫರನಿಗೆ ಐಶ್ವರ್ಯ ತರಲಿಲ್ಲ. ಅವನ ದೈನಂದಿನ ಜೀವನ ಯಥಾಪ್ರಕಾರ ಸಾಗಿತ್ತು. ಅವನು ಮೊದಲಿನ ಹಳೆ ಕೊಠಡಿಯಲ್ಲೇ ವಾಸವಾಗಿದ್ದ. ಆತನ ಊಟ, ಉಡುಪು, ವಿನೋದ ವಿಹಾರಗಳೆಲ್ಲ ತೀರ ಸರಳ ರೀತಿಯವು. ಹೆಚ್ಚು ಖರ್ಚಿನವಲ್ಲ. ಸ್ವಂತಕ್ಕಾಗಿ ವಸ್ತುಗಳನ್ನು ಶೇಖರಿಸಿಕೊಳ್ಳ

---

* ಲೂಯಿ ಪ್ಯಾಶ್ಚರ್ (೧೮೨೨-೯೫). ಫ್ರೆಂಚ್ ರಸಾಯನಶಾಸ್ತ್ರಜ್ಞ. ಏಕಾಣುಜೀವಿಗಳ ವಿಷಯ ಶೋಧನೆ ಮಾಡಿ ಹಾಲು ಕೆಡದಂತೆ ಏಕಾಣುಗಳನ್ನು ಧ್ವಂಸ ಮಾಡುವ ಪಾಶ್ಚುರೈಸೇಷನ್ ಪದ್ಧತಿ ಕಂಡುಹಿಡಿದ. ದನಗಳ ನೆರಡಿ ರೋಗಕ್ಕೆ ಹುಚ್ಚು ನಾಯಿ ಕಚ್ಚಿದರೆ ಬರುವ ರ್‍ಯಾಬಿ ರೋಗಕ್ಕೆ ಲಸಿಕೆ ಚುಚ್ಚುವ (Vaccination) ವಿಧಾನವನ್ನು ಕಂಡುಹಿಡಿದ.

† ಹೊರೇಷಿಯೋ ಹರ್ಬರ್ಟ್ ಕಿಚನರ್ (೧೮೫೦–೧೯೧೬). ಬ್ರಿಟಿಷ ದಂಡನಾಯಕ. ಸೂಡಾನನ್ನು ಗೆದ್ದ ವೀರ.

†† ಫ್ರೆಡರಿಕ್ ದಿ ಗ್ರೇಟ್ (ಫ್ರೆಡರಿಕ್ II) (೧೭೧೨-೮೬). ಪ್ರಶ್ಯಾದ ಯೋಧರಾಜ. ಪ್ರಶ್ಯಾವನ್ನು ಯುರೋಪಿನಲ್ಲೆಲ್ಲ ಅತ್ಯಂತ ಪ್ರಬಲವಾದ ರಾಷ್ಟ್ರವನ್ನಾಗಿ ಮಾಡಿದ.

ಬೇಕು ಎಂಬ ಆಸೆಯೂ ಅವನಿಗಿರಲಿಲ್ಲ. ಆತ ಮಾರ್ಗರೆಟ್ ಆಂಡರ್‌ಸನ್ನಳಿಗೆ ಒಮ್ಮೆ ಬರೆದಿದ್ದಂತೆ, "ನನ್ನ ಬೆನ್ನ ಮೇಲೆ ಹೊರುವಷ್ಟಕ್ಕಿಂತ ಹೆಚ್ಚಾಗಿ ಸಾಮಾನುಗಳನ್ನು ಸಂಗ್ರಹ ಮಾಡಿಕೊಳ್ಳಬಾರದು," ಎಂಬುದು ಅವನ ಒಂದು ಮುಖ್ಯ ತತ್ತ್ವವಾಗಿತ್ತು.

"ಧಕ್ಕೆಯ ಕೆಲಸ ನನಗೆ ಹೇಗೆ ಬೇಕೋ ಹಾಗೆ ಇರಲು ಅವಕಾಶ ಕೊಡುವಂಥದ್ದಿತ್ತು. ಶನಿವಾರ, ಭಾನುವಾರ ಮಾತ್ರ ಕೆಲಸ ಮಾಡಿದರೆ ಸಾಕು, ವಾರಕ್ಕೆ ೪೦–೫೦ ಡಾಲರ್* ಸಿಗುತ್ತಿತ್ತು. ಇದು ನನಗೊಂದು ಐಶ್ವರ್ಯವೇ ಆಗಿತ್ತು," ಎಂದು ಹಾಫರ್ ಹೇಳಿದ್ದಾನೆ.

ಧಕ್ಕೆಯ ಹಮಾಲಿಗಳೊಂದಿಗೆ ಕೆಲಸ ಮಾಡುವುದು ಹಾಫರನಿಗೆ ತುಂಬ ಇಷ್ಟದ ವಿಷಯ. ಅವರು ತನಗಿಂತ ಕೀಳು ಎಂಬ ಭಾವನೆ ಅವನಿಗ್ಯಾವಾಗಲೂ ಇರಲಿಲ್ಲ. ಅವರ ಸಾಮರ್ಥ್ಯ, ತಿಳುವಳಿಕೆಯ ಬಗ್ಗೆ ಅವನ ಮೆಚ್ಚುಗೆ ಅಪಾರ. ತನ್ನ ವಿಚಾರಗಳ ತಥ್ಯವನ್ನು ಪರೀಕ್ಷಿಸಲು ಅವರೊಡನೆ ಎಷ್ಟೋ ಸಾರಿ ವಾದ ವಿವಾದ ಮಾಡುತ್ತಿದ್ದ. "ಈ ಜನ ಚತುರರು, ಕುಶಲಿಗಳು, ಬುದ್ಧಿವಂತರು– ಅವರು ಯಾವ ಕೆಲಸವನ್ನಾದರೂ ಮಾಡಬಲ್ಲರು, ತಾವೇ ತಾವಾಗಿ ಅವರು ಕ್ಷಿಪ್ರ ಸಾಗಾಣಿಕೆಯ ವ್ಯವಸ್ಥೆಯನ್ನು ರೂಪಿಸಲಿಲ್ಲವೆ? ಯಾವ ತಜ್ಞನ ಸಹಾಯವೂ ಅವರಿಗೆ ಬೇಕಾಗಲಿಲ್ಲ!" ಎಂದೆಲ್ಲ ಹಾಫರ್ ಅವರನ್ನು ಹೊಗಳಿದ್ದಾನೆ.

ಸಂಗಡಿಗರಿಗೆಲ್ಲರಿಗೂ ಹಾಫರ್ ಪ್ರಿಯನಾದ ವ್ಯಕ್ತಿ. ಆದರೂ ಧಕ್ಕೆಯಲ್ಲಿನ ಮೊದಲ ಹತ್ತು ವರುಷ ಅವನು ಯಾರ ಜೊತೆಯೂ ನಿಕಟ ಸ್ನೇಹ ಮಾಡಲಿಲ್ಲ. ತನ್ನ ಪುಸ್ತಕ ಪ್ರಕಟವಾಗುವುದಕ್ಕೆ ಕೊಂಚ ಮುಂಚೆ ಸೆಲ್ಡನ್ ಓಸ್‌ಬೋರ್ನ್ ಎಂಬ ಇನ್ನೊಬ್ಬ ಕಾರ್ಮಿಕನ ಬಲವಂತದ ಮೇಲೆ ಅವನ ಮನೆಗೆ ಹೋದ. ಓಸ್‌ಬೋರ್ನ್ ಎಲ್ಲ ರೀತಿಯಲ್ಲೂ ಹಾಫರನಿಗೆ ವ್ಯತಿರಿಕ್ತ ವ್ಯಕ್ತಿ. ರಾಜಕೀಯ ಶಾಸ್ತ್ರದಲ್ಲಿ ಮಾಸ್ಟರ್ ಪದವೀಧರ. ತನ್ನ ರಾಜಕೀಯ ನಂಬುಗೆಗಳನ್ನು ಕಾರ್ಯಗಳಲ್ಲಿ ತೊಡಗಿಸುವುದಕ್ಕೋಸ್ಕರ ವಿಶ್ವವಿದ್ಯಾಲಯದಿಂದ ನೇರ ಧಕ್ಕೆಗೆ ಬಂದು ಶ್ರಮಿಕನಾಗಿ ಸೇರಿಕೊಂಡಿದ್ದ. ಈ ಯೂನಿಯನ್ ಬೌದ್ಧಿಕರ ಬಗ್ಗೆ ಹಾಫರನಿಗೆ ಅಂಥ ಆದರ ಇರಲಿಲ್ಲ. ಅವರೆಲ್ಲ ಬರೀ ಅಧಿಕಾರಕ್ಕೋಸ್ಕರ ಹೊಡೆದಾಡುವವರು ಎಂದವನ ಅಭಿಪ್ರಾಯ. ಆದರೂ ಓಸ್‌ಬೋರ್ನ್ ಅವನನ್ನು ಮನೆಗೆ ಊಟಕ್ಕೆ ಕರೆದಾಗ ಇಲ್ಲ ಎನ್ನಲಿಲ್ಲ.

ತನ್ನನ್ನು ಸಾಕಿ ಸಲಹಿದ ಮಾರ್ಥಾ ಜರ್ಮನಿಗೆ ವಾಪಸ್ಸು ಹೊರಟುಹೋದ ಮೇಲೆ ಹಾಫರ್ ಇನ್ನ್ಯಾವ ವ್ಯಕ್ತಿಯೊಂದಿಗೂ ಆತ್ಮೀಯ ಸಂಬಂಧ ಬೆಳಸಿಕೊಂಡಿರಲಿಲ್ಲ. ಮದುವೆ ಮಾಡಿಕೊಳ್ಳುವುದರಲ್ಲೂ ಏನೂ ಆಸಕ್ತಿ ತೋರಿರಲಿಲ್ಲ; ಅಂದರೆ ಅವನಿಗೆ ಮನಸ್ಸಿದ್ದಿದ್ದರೆ ಅದಕ್ಕೆ ಅವಕಾಶವಿರಲಿಲ್ಲವೆಂದೇನಲ್ಲ. ಹೆಂಗಸರೆಲ್ಲ ಎರಡು ವಿಧ ಎಂದು ಅವನ ಅಭಿಪ್ರಾಯವಿತ್ತು. ಸುಶೀಲೆಯರು, ಸುಸಂಸ್ಕೃತರಾದ ಮಹಿಳೆಯರು; ಇವರನ್ನು ಕಣ್ಣೆತ್ತಿ ನೋಡಲೂ ಅಂಜಿಕೆ. ಇನ್ನೊಂದು ರೀತಿಯವರು ಬೆಲೆವೆಣ್ಣುಗಳು. ಇವರನ್ನು ಕಣ್ಣೆತ್ತಿ ನೋಡಲೂ ಕೂಡದು!

ಓಸ್‌ಬೋರ್ನನ ಹೆಂಡತಿ ಲಿಲಿ ಸುಂದರಿ. ಮೂವತ್ತರ ಹತ್ತಿರ ಹತ್ತಿರದ ಹರೆಯ. ಸ್ನೇಹಪರಳು, ನಗೆಮಾತಿನವಳು. ರುಚಿರುಚಿಯಾದ ಅಡುಗೆಮಾಡುವುದರಲ್ಲಿ ಎತ್ತಿದ ಕೈ ಅವಳದು. ಇಬ್ಬರು ಮಕ್ಕಳು. ಅವರನ್ನು ಕಂಡರೆ ಅವಳಿಗೆ ಎಷ್ಟೋ ಹೆಮ್ಮೆ. ಹಾಫರನ ದೃಷ್ಟಿಯ ಎರಡು ವಿಧದ ಸ್ತ್ರೀಯರ ಮಧ್ಯೆ ನಿಲ್ಲುವಂತೆ ಈಕೆ ಕಂಡಳು.

ಹಾಫರ್ ಮತ್ತು ಲಿಲಿ ಒಬ್ಬರನ್ನೊಬ್ಬರು ತಕ್ಷಣವೇ ಮೆಚ್ಚಿಕೊಂಡರು. ಯಾವ ಅಭ್ಯಂತರವೂ ಇಲ್ಲದೆ ಪರಸ್ಪರ ಪ್ರೀತಿಸಿದರು.

* ಸುಮಾರು ೩೦೦–೩೭೫ ರೂಪಾಯಿಗಳು. ಧಕ್ಕೆಯಲ್ಲಿ ಕೆಲವು ಕೆಲಸಗಳು ಈ ರೀತಿಯಾಗಿರುತ್ತವೆ. ಹಡಗು ಬಂದಾಗ ಕೆಲಸಕ್ಕೆ ಕರೆಯುತ್ತಾರೆ. ಹಾಜರಾದ ಯೂನಿಯನ್ ಸದಸ್ಯರಿಂದ ಬೇಕಷ್ಟು ಜನರನ್ನು ಕೆಲಸಕ್ಕೆ ಆಯ್ಕೆ ಮಾಡುತ್ತಾರೆ. ಇಷ್ಟು ಹೊತ್ತು ಕೆಲಸಮಾಡಿದ್ದಕ್ಕೆ ಇಷ್ಟು ಮಜೂರಿ ಎಂದು ನಿಗದಿ ಮಾಡುತ್ತಾರೆ. ಹಾಜರಾಗುವುದು ಬಿಡುವುದು ಕೆಲಸಗಾರನ ಇಷ್ಟ.

ದವಿವಾರವನ್ನು ಹಾಫರ್ ಓಸ್‌ಬೋರ್ನನ ಮನೆಯಲ್ಲಿ ಕಳೆಯುವುದು ವಾಡಿಕೆಯಾಯ್ತು.

ಅವರನ್ನು ಹಾಫರ್ ಮೊದಲಿಗೆ ಕಂಡಾಗ, ಓಸ್‌ಬೋರ್ನ್ ದಂಪತಿಗಳಿಗೆ ಇಬ್ಬರು ಮಕ್ಕಳು. ಒಂದು ಗಂಡು, ಹನ್ನೆರಡು ವರುಷದ್ದು; ಒಂದು ಹೆಣ್ಣು, ಐದು ವರುಷದ್ದು. ಮಕ್ಕಳೊಂದಿಗೆ ಕಾಲ ಕಳೆಯುವುದು, ಅವರು ಬೆಳೆದು ದೊಡ್ಡವರಾಗುವುದನ್ನು ನಿತ್ಯ ನೋಡುತ್ತಿರುವುದು ಬಾಲ್ಯವನ್ನೆಲ್ಲ ಹೆಚ್ಚಾಗಿ ಕತ್ತಲಲ್ಲೇ ಕಳೆದ ಹಾಫರನಿಗೆ ಒಂದು ಮೋಹಕ ಅನುಭವವೆನಿಸಿತು.

ಲಿಲಿ ಮತ್ತೆ ಗರ್ಭಿಣಿಯಾದಾಗ ಹಾಫರ್ ಕಣಿ ಹೇಳಿದ: "ಗಂಡೇ ಹುಟ್ಟುವುದು. ಅವನ ಹೆಸರು ಎರಿಕ್* ಎಂದೇ ಇಡುತ್ತೀರಿ. ಅವನು ನನ್ನ ಮೊಮ್ಮಗನಾಗುತ್ತಾನೆ." ಹಾಗೆಯೇ ಎಲ್ಲವೂ ಆಯಿತು! ಅಂದಿನಿಂದ ಹಾಫರನ ಜೀವನಕ್ಕೆ ಒಂದು ಕೇಂದ್ರ ಸಿಕ್ಕ ಹಾಗಾಯಿತು.

ಈ ಮಧ್ಯೆ ಹಾಫರ್ ಅಭಿವೃದ್ಧಿ ಹೊಂದಲು ಸಾಹಸಪಡುತ್ತಿರುವ ಹಿಂದುಳಿದ ದೇಶಗಳ ವಿಷಯವಾಗಿ ವಿಚಾರ ಮಾಡಹತ್ತಿದ್ದ. "ಅವರು ಮಾಡಬೇಕಾದ್ದು ಕೇವಲ ಕೆಲವು ಉಪಯೋಗಿ ಕೆಲಸಗಳು: ಆಸ್ಪತ್ರೆ, ಫ್ಯಾಕ್ಟರಿ, ಶಾಲೆ ಇಂಥವುಗಳನ್ನು ಕಟ್ಟುವುದು, ಎಂದು ಆಗ ನನಗನಿಸಿತ್ತು. ಇಂಥ ಕೆಲಸಗಳನ್ನು ನಾವು ಇಲ್ಲಿ ಏನೂ ಮಹತ್ವ ಕೊಡದೆ ವಾಡಿಕೆಯಾಗಿ ಮಾಡಿಕೊಂಡು ಹೋಗುತ್ತಿದ್ದೇವೆ. ಅವರೇಕೆ ಹುಚ್ಚರಂತೆ ಇಷ್ಟು ಗಲಿಬಿಲಿ ಮಾಡುತ್ತಾರೆ?" ಎಂದು ಹಾಫರ್ ಆಶ್ಚರ್ಯಪಟ್ಟಿದ್ದ. ಹತ್ತು ವರ್ಷ ಈ ಸಮಸ್ಯೆಯ ಹಲವಾರು ಶಾಖೆಗಳ ವಿಷಯ ವಿಚಾರ ಮಾಡಿ ಕೊನೆಗೊಂದು "ದಿ ಪ್ಯಾಷನೇಟ್ ಸ್ಟೇಟ್ ಆಫ್ ಮೈಂಡ್" (The Passionate State of Mind) ಎಂಬ ಸೂಕ್ತಿಗಳ ಒಂದು ಸಣ್ಣ ಪುಸ್ತಕ ಬರೆದ. ಇದು ಹಾರ್ಪರ್ ಅಂಡ್ ರೋ ಅವರಿಂದ ೧೯೫೫ ರಲ್ಲಿ ಪ್ರಕಟವಾಯ್ತು. ಆದರೆ ಐವತ್ತರ ದಶಕದಲ್ಲಿ ಅವನ ಲಕ್ಷ್ಯ ಹೆಚ್ಚಾಗಿದ್ದುದು "ದಿ ಆರ್ಡಿಯಲ್ ಆಫ್ ಚೇಂಜ್" (The Ordeal of Change) ಎಂಬ ಪುಸ್ತಕದ ಬರವಣಿಗೆಯಲ್ಲಿ. ಶಕ್ತಿ ಸಾಹಸಗಳೆಲ್ಲ ಈ ಪುಸ್ತಕದಲ್ಲಿನ ಪ್ರಬಂಧಗಳನ್ನು ಬರೆಯುವುದರಲ್ಲೇ ವ್ಯಯವಾದುವು. ಆದರೆ ಪುಸ್ತಕ ಮುಗಿಯಲು ಇನ್ನೂ ಬಹಳ ಕಾಲ ಬೇಕಾಯ್ತು.

ಅಭಿವೃದ್ಧಿಪರ ದೇಶಗಳ 'ಹುಚ್ಚಾಟ'ದ ಬಗ್ಗೆ ಅವನ ಮನಸ್ಸು ಇನ್ನೂ ಓಡುತ್ತಿತ್ತು. ಅವುಗಳ ಸಮಸ್ಯೆಗಳು ಅನುಕರಣದಿಂದ ಹೊರಡುವ ಮಾನಸಿಕ ಪರಿಣಾಮಗಳಿಂದಾದುವೇ ಎಂದು ವಿಚಾರ ಮಾಡಿದ. ಎಲ್ಲ ಹಿಂದುಳಿದ ದೇಶಗಳೂ ಆಧುನಿಕ ಸ್ಥಿತಿಯನ್ನು ತಲುಪಬೇಕಾದರೆ ಅಂಥ ಸ್ಥಿತಿಯನ್ನು ಆಗಲೇ ತಲುಪಿದ ದೇಶಗಳ ಪದ್ಧತಿಗಳನ್ನು ಅನುಕರಣ ಮಾಡಲೇಬೇಕಾಗುತ್ತದೆ ಎಂಬ ಒಂದು ವಾದ ಅವನಿಗೆ ಹೊಳೆಯಿತು. ಈ ಅನುಕರಣ ಅಂತರ್ಯದಲ್ಲಿ ವಿರೋಧವನ್ನು ಹುಟ್ಟಿಸುತ್ತದೆ. ಯಾವ ರೀತಿಯ ಕ್ರಾಂತಿಕಾರಕ ಬದಲಾವಣೆಯೂ ಒಂದು 'ಹುಚ್ಚಾಟ'ದ ವಾತಾವರಣ ಕಲ್ಪಿಸಬಹುದೆಂದು ಹಾಫರ್ ತನ್ನ ವಾದವನ್ನು ಬೆಳೆಸಿದ. "ಮುರಿದ ಸಂಪ್ರದಾಯಗಳು ಮುರಿದ ಮೂಳೆಗಳಿಗಿಂತ ಹೆಚ್ಚಾಗಿ ಸಮಾಜವನ್ನು ತಲೆಕೆಳಗು ಮಾಡುತ್ತವೆ. ಈ ಬದಲಾವಣೆಯ ಸುಂಟರಗಾಳಿಯಲ್ಲಿ ಸಿಕ್ಕಿಹಾಕಿಕೊಂಡವರು ಎಡವಟ್ಟರಾಗುತ್ತಾರೆ," ಎಂದು ಹಾಫರ್ ಬರೆದ. ಈಗ ಅವನಿಗೆ ಮತ್ತೆ ತಾನು "ದಿ ಟ್ರೂ ಬಿಲೀವರ್"ನಲ್ಲಿ ತೆಗೆದುಕೊಂಡ ಪ್ರಶ್ನೆಯ ಹತ್ತಿರವೇ ಬಂದಿರುವುದಾಗಿ ಕಂಡುಬಂತು. "ಬದಲಾವಣೆಯೇ ಎಡವಟ್ಟರನ್ನು ಸೃಷ್ಟಿಸುತ್ತದೆ; ಎಡವಟ್ಟರು ಒಂದು ಆವೇಶದ ವಾತಾವರಣದಲ್ಲಿ ಉಸಿರಾಡುತ್ತಾರೆ, ಬದುಕುತ್ತಾರೆ; ಅಂದರೆ ಅದರದೇ ಒಂದು ಹುಚ್ಚಾಸ್ಪತ್ರೆಯಾಗುತ್ತದೆ," ಎಂದು ಅವನ ಹೇಳಿದ್ದಾನೆ. ಇದಕ್ಕೂ ನಂತರ ಹಾಫರನಿಗೆ ತನ್ನ ಬರವಣಿಗೆಗಳಲ್ಲೆಲ್ಲಾ ತಾನು ಇದುವರೆಗೆ ವಿಚಾರ ಮಾಡುತ್ತಿದ್ದ ಮೂಲ ಪ್ರಶ್ನೆಯೆಂದರೆ ಬದಲಾವಣೆಯಿಂದ ಬರುವ ಪರಿಣಾಮಗಳು ಎಂಬುದೇ ಎಂದು ತಿಳಿಯಿತು.

ಇನ್ನೂ ಹೆಚ್ಚು ವಿಚಾರ ಮಾಡಿ ಹಾಫರ್ ಕೊನೆಗೆ ಈ ಅಭಿಪ್ರಾಯಕ್ಕೆ ಬಂದ: ಬದಲಾವಣೆ ಸಹ ಯಾವುದಾದರೂ ಒಂದು ರೀತಿಯ ಪುನ-

* ಹಾಫರನ ಸ್ವಂತ ಹೆಸರು.

ಜನ್ಮಕ್ಕೆ ಎಡೆಗೊಡಲೇಬೇಕು. ಹೀಗೆ ಪುನರ್ಜನ್ಮ ತಾಳಲು ಸಾಧ್ಯವಾದವರೇ ಬದಲಾವಣೆಯು ತರುವ ಎಲ್ಲ ಬವಣೆಗಳನ್ನು ಜಯಿಸಿ ಆಘಾತವಿಲ್ಲದೆ ಉಳಿಯುತ್ತಾರೆ. ಈ ವಿಚಾರಸರಣಿಯನ್ನು ಹಾಫರ್ ತನ್ನ ಮುಂದಿನ ಪುಸ್ತಕ "ದಿ ಟೆಂಪರ್ ಆಫ್ ಅವರ್ ಟೈಮ್" (The Temper of Our Time) ಎಂಬುದರಲ್ಲಿ ಮುಂದೊಯ್ದ. ಈ ಪುಸ್ತಕ ೧೯೬೭ರಲ್ಲಿ ಪ್ರಕಟವಾಯ್ತು. ಹಾಫರನ ಅಭಿಪ್ರಾಯದಲ್ಲಿ ಈ ಪುಸ್ತಕವಲ್ಲೇ ತನ್ನ ಒಳನೋಟ ಅತ್ಯಂತ ಫಲಶಾಲಿಯಾದದ್ದು. ಆದರೆ ಆತ ಸಹಜವಾಗಿ ಈ ವಿಚಾರಗಳೆಲ್ಲ ತನ್ನ ಸ್ವಂತದ್ದೇ ಎಂಬುದನ್ನು ನಿರಾಕರಿಸುತ್ತಾನೆ.

ಧಕ್ಕೆಯಲ್ಲಿ ಸ್ವಯಂಚಾಲಿತ (automatic) ಯಂತ್ರಗಳನ್ನು ಹೇರು ಸಾಗಿಸುವುದಕ್ಕೆ ಉಪಯೋಗ ಮಾಡಲು ಪ್ರಾರಂಭಿಸಿದಾಗ ಹೆದರಿದವರೆಂದರೆ ಅಲ್ಲಿನ ಕಾರ್ಮಿಕರಲ್ಲ—ಹಾಫರ್! ಕಾರ್ಮಿಕರಿಗೆ ತಮ್ಮ ಕೆಲಸ ಹೋಗುವ ಹೆದರಿಕೆ ಇರಲಿಲ್ಲ. ಹಾಫರನಿಗೆ ಹೆದರಿಕೆ ಇದ್ದುದು ನೌಕರಿ ಮಜೂರಿ ವಿಷಯಗಳಲ್ಲಲ್ಲ. ಅನೇಕ ವರ್ಷಗಳಿಂದ ಹಾಫರನಿಗೆ ಒಂದು ವಿಷಯ ಮನದಟ್ಟಾಗಿತ್ತು. ಪ್ರತಿಯೊಬ್ಬ ಸಾಮಾನ್ಯನೂ ತನ್ನ ವ್ಯಕ್ತಿತ್ವದ ಮೌಲ್ಯವನ್ನು ತನಗೆಯೆ ಸಿದ್ಧಪಡಿಸಿಕೊಳ್ಳಲು ಹಾತೊರೆಯುತ್ತಿರುತ್ತಾನೆ. ಅದಕ್ಕೆ ತನ್ನ ಶಕ್ತಿಯುಕ್ತಿಗಳನ್ನು ಉಪಯೋಗಿಸಿಕೊಳ್ಳಬಲ್ಲ ಕೆಲಸ ಅವನಿಗೆ ಬೇಕೇ ಬೇಕು. ಸ್ವಯಂಚಾಲಿತ ಯಂತ್ರ ಬಂದ ಮೇಲೆ ಇದಕ್ಕೆ ಅವಕಾಶ ಕಡಮೆಯಾಗಿ ಆತ್ಮವಿಶ್ವಾಸ, ಆತ್ಮಗೌರವಗಳು ನಶಿಸಿಹೋಗಬಹುದು. ಇವನ್ನು ಕಳೆದುಕೊಂಡ ಜನತೆ, ಚಂಚಲತೆಗೆ ತುತ್ತಾಗಿ ಸಮಾಜದಲ್ಲಿ ತಮ್ಮ ಸ್ಥಾನ ಕಳೆದುಕೊಳ್ಳಬಹುದು. ಆಗ ಸಮಾಜದ ನೇತೃತ್ವ ಬೌದ್ಧಿಕರ ಕೈಗೆ ಹಸ್ತಾಂತರವಾದರೆ ಎಂಥ ಕಷ್ಟದ ಸಮಯ ಬರಬಹುದು ಎಂಬುದೇ ಹಾಫರನ ಹೆದರಿಕೆ. ಚರಿತ್ರೆಯಲ್ಲಿ ಪ್ರತಿಯೊಂದು ಯುಗದಲ್ಲೂ ಬೌದ್ಧಿಕರು ಜನಸಾಮಾನ್ಯರ ಕಡುವೈರಿಗಳಾಗಿದ್ದರು ಎಂಬುದನ್ನು ಹಾಫರ್ ಬಲವಾಗಿ ನಂಬಿದ್ದ.

ಈ ಹೆದರಿಕೆ ಹಾಫರನ ನಾಲಗೆಯನ್ನು ಬಿಚ್ಚಿತು. ಅದುವರೆಗೆ ಅವನು ಭಾಷಣ ಕೊಡಲು ಹೋದದ್ದು ಅಪರೂಪ. ಈಗ ಎಲ್ಲಿಂದ ಕರೆ ಬರಲಿ ಒಪ್ಪಿಕೊಳ್ಳುತ್ತಿದ್ದ. ಚರ್ಚು, ಶಾಲೆ, ರೋಟರಿ ಕ್ಲಬ್ಬು, ಅತಿಥಿಗೃಹ—ಎಲ್ಲ ಕಡೆಗಳಲ್ಲೂ ಭಾಷಣ ಬಿಗಿಯತೊಡಗಿದ. ಆಗ ಮಾತ್ರವನಿಗೆ ತನ್ನ ಮಾತುಗಾರಿಕೆಯಲ್ಲಿ ಜನಸಾಮಾನ್ಯರಿಂದ ಏನನ್ನು ಬೇಕಾದರೂ ಮಾಡಿಸಬಲ್ಲ ಮಾಂತ್ರಿಕ ಶಕ್ತಿಯಿದೆ ಎಂಬುದು ಅರಿವಾಯಿತು. ಹಿಟ್ಲರ್ ಸಹ ಮಾತಿನಿಂದಲೇ ಹೇಗೆ ಜನರನ್ನು ವಶ ಮಾಡಿಕೊಂಡ ಎಂಬುದು ಅವನ ನೆನಪಿಗೆ ಬಂತು. "ಹಟವಾದಿ ಮನುಷ್ಯನಾಗುವ ಬೇರುಗಳು ನನ್ನಲ್ಲೂ ಇದ್ದುವು" ಎಂದು ಅವನು ಹೇಳಿಕೊಂಡಿದ್ದಾನೆ.

ಸ್ವಯಂಚಾಲಿತಗಳ ಹೆದರಿಕೆ ಒಂದು ವರ್ಷ ಅವನನ್ನು ಕಾಡಿತು. ಆ ಮೇಲೆ ಹೊಸ ಪರಿಸ್ಥಿತಿಗಳಿಗೆ ಹೊಂದಿಕೊಂಡು ಹೋಗುವ ಶಕ್ತಿ ಅಮೆರಿಕನ್ ಕಾರ್ಮಿಕ ಜನರಲ್ಲಿದೆ ಎಂಬ ನಂಬಿಗೆ ಅವನಲ್ಲಿ ನಿಧಾನವಾಗಿ ಬಲವಾಗುತ್ತಾ ಬಂತು. ಅಲ್ಲದೆ ಸ್ವಯಂಚಾಲಿತ ಯಂತ್ರಗಳೂ ಎಲ್ಲಾ ಒಮ್ಮೆಗೆ ಬರುವಂತಿರಲಿಲ್ಲ. ಯಂತ್ರ-ತಂತ್ರಗಳಲ್ಲಿ ಅಭಿವೃದ್ಧಿ ಹೊಂದಿದ ಎಲ್ಲ ಸಮಾಜಗಳೂ ಜನಸಾಮಾನ್ಯರ ಶಾಲೆಗಳಾಗಿ ಮಾರ್ಪಾಡಾಗುತ್ತಿರುವುದನ್ನು, ಅಲ್ಲಿ ಎಲ್ಲ ನಾಗರಿಕರೂ ತಮ್ಮ ಜೀವನದ ಬಹುಕಾಲವನ್ನು ಶಿಕ್ಷಣ, ಪುನಃ ಶಿಕ್ಷಣ ಹೊಂದುವುದರಲ್ಲಿ ಕಳೆಯಬೇಕಾಗುವುದೆಂಬುದನ್ನು ಹಾಫರ್ ಕಂಡುಕೊಂಡ. ಈ ಮಧ್ಯದ ಸಂಕ್ರಮಣ ಕಾಲವನ್ನು ಅಮೆರಿಕನ್ ಜನತೆ ಮಿಕ್ಕೆಲ್ಲ ಕುತ್ತುಗಳನ್ನು ನಿಭಾಯಿಸಿಕೊಂಡು ಹೋದ ಹಾಗೇ ನಿಭಾಯಿಸಿಕೊಂಡು ಹೋಗುವರೆಂದೂ ಅವನಿಗರಿವಾಯಿತು.

## ಖ್ಯಾತಿ

ಹಾಫರ್ ಧಕ್ಕೆಯಲ್ಲಿ ಕೆಲಸ ಮಾಡುತ್ತಿರುವಾಗಲೇ ೧೯೬೪ರಲ್ಲಿ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯ ಅವನನ್ನು ರಾಜಕೀಯ ವಿಜ್ಞಾನ ವಿಭಾಗದ ಪ್ರೌಢ ಸಂಶೋಧಕನನ್ನಾಗಿ ನೇಮಕ ಮಾಡಿತು. ಈ ಸುದ್ದಿಯನ್ನು ಆತ ತನ್ನ ಧಕ್ಕೆಯ ಸಂಗಡಿಗರಿಗಾರಿಗೂ ತಿಳಿಸಲಿಲ್ಲ. ಪಗಾರವೇನೂ ಹೆಚ್ಚಿನದಿರಲಿಲ್ಲ. ಆದರೆ ಅಲ್ಲಿ ಅವನಿಗೇ ಪ್ರತ್ಯೇಕವಾಗಿ ಒಂದು ಕೋಣೆ ಕೊಡಲ್ಪಟ್ಟಿತು. ಅಲ್ಲಿ ಪ್ರತಿ

ಬುಧವಾರ ಮಧ್ಯಾಹ್ನ ಎರಡರಿಂದ ಐದರವರೆಗೆ ವಿದ್ಯಾರ್ಥಿಗಳೊಂದಿಗೆ ಮಾತುಕತೆಯಾಡುವುದು ಅವನು ನಿರ್ವಹಿಸಬೇಕಾದ ಒಂದು ಕರ್ತವ್ಯವಾಗಿತ್ತು. ಹೀಗೆ ವಾರಕ್ಕೆ ಇಪ್ಪತ್ತು-ಇಪ್ಪತ್ತೈದು ವಿದ್ಯಾರ್ಥಿಗಳು ತಾವಾಗಿಯೇ ಅವನ ಕೋಣೆಗೆ ಬಂದು ರಾಜಕೀಯ ವಿಜ್ಞಾನದ ಬಗೆಗಿನ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ಇದಲ್ಲದೆ ವರ್ಷಕ್ಕೆ ಮೂರು ನಾಲ್ಕು ಬಾರಿ ಅವನು ಉಪನ್ಯಾಸಗಳನ್ನೂ ಕೊಡಬೇಕಿತ್ತು. ಈ ಉಪನ್ಯಾಸಗಳಿಗೆ ವಿದ್ಯಾರ್ಥಿಗಳು ಕಿಕ್ಕಿರಿದು ತುಂಬುತ್ತಿದ್ದರು. ವಿದ್ಯಾರ್ಥಿಗಳು ತನ್ನ ಭಕ್ತರಾಗುವುದು ಹಾಫರನಿಗೆ ಇಷ್ಟವಿರಲಿಲ್ಲ. ಆದ್ದರಿಂದ ಯಾವನಾದರೂ ಒಂದಿಷ್ಟು ಹೆಚ್ಚು ಆಸಕ್ತಿಯನ್ನು ತೋರಿಸಿ ಅವನ ಮೆಚ್ಚುಗೆ ಪಡೆಯಬೇಕೆಂದು ಆಶಿಸಿದರೆ ನಿನ್ನ ವಿಚಾರಗಳನ್ನು ಸಾಧ್ಯವಾದರೆ ಒಂದೇ ಪುಟದಲ್ಲಿ ಸ್ಪಷ್ಟ ಮಾತುಗಳಲ್ಲಿ ಬರೆದುಕೊಂಡು ಬಾ, ಎಂದು ಹೇಳಿ ಕಳಿಸುತ್ತಿದ್ದ.

ಹಾಗೆ ನೋಡಿದರೆ ಹಾಫರನಿಗೆ ಅಲ್ಲಿನ ವಿದ್ಯಾರ್ಥಿಗಳ ರೀತಿ ನೀತಿಗಳು ಸರಿ ಬೀಳಲಿಲ್ಲವೆಂದೇ ಹೇಳಬೇಕು. ಆಗ ತಾನೆ ಅಲ್ಲಿನ ವಿದ್ಯಾರ್ಥಿಗಳು ವಾಕ್‌ಸ್ವಾತಂತ್ರ್ಯದ ವಿಚಾರವಾಗಿ ಬಂಡಾಯ ಎದ್ದಿದ್ದರು. ಪ್ರಭುಶಕ್ತಿ-ವಿರೋಧಿಗಳಾದ ಆ ವಿದ್ಯಾರ್ಥಿಗಳನೇಕರ ಜೊತೆಗೆ ಹಾಫರ್ ಮಾತುಕತೆ ನಡೆಸಿದ್ದ. ಅವನಿಗೆ ಆ ವಿದ್ಯಾರ್ಥಿಗಳೆಲ್ಲ ಅತಿಮುದ್ದಿನಿಂದ ಹಾಳಾದ ಮಕ್ಕಳಂತೆ ಕಂಡರು. "ನೀವೆಂಥ ಬಂಡುಗಾರರಯ್ಯಾ? ಹುಸಿ-ವೈರಿಯ ಜೊತೆಗೆ ಹುಸಿಯುದ್ಧ ಮಾಡುವ ವೀರರು! ನಿಮಗೆ ಆಶ್ರಯ ಕೊಟ್ಟಿರುವ ವಿಶ್ವವಿದ್ಯಾನಿಲಯವನ್ನೇ ನೀವು ಮುರಿಯಬೇಕೆಂದು ನೋಡುತ್ತೀರಲ್ಲ! ಸ್ವಲ್ಪ ತಾಳಿ! ಹೊರಗಿನ ನೈಜ ಪ್ರಪಂಚಕ್ಕೆ ಕಾಲಿಟ್ಟ ಮೇಲೆ ನಿಜವಾದ ವೈರಿಗಳ ಜೊತೆಗೆ ಕೈಕೈ ಮಿಲಾಯಿಸುವಿರಂತೆ!" ಎಂದೆಲ್ಲ ಅವರಿಗೆ ಆತ ಹೇಳುತ್ತಿದ್ದನಂತೆ. "ಒಂದು ಗರಿ ಹುಲ್ಲನ್ನೂ ಅವರು ಬೆಳೆದಿಲ್ಲ, ಒಂದು ಬುಕ್ಕಿ ಮಣ್ಣು ಹೊತ್ತಿಲ್ಲ. ಇದೋ ಇಲ್ಲಿ ನ್ಯಾಯದ ಮಾತನ್ನು ಆಡಲು ಬರುತ್ತಾರೆ!" ಎಂದು ಹಾಫರ್ ಅವರನ್ನು ಟೀಕಿಸುತ್ತಿದ್ದನು. ಅವನ ಅಭಿಪ್ರಾಯದಲ್ಲಿ ಬಂಡುಗಾರ ವಿದ್ಯಾರ್ಥಿಗಳಿಗೆ ನಿಜವಾಗಿ ಬೇಕಾದ್ದು ಕಷ್ಟ ತಪ್ಪಿಸಿಕೊಳ್ಳುವುದು. ಅವರನ್ನೇಕೆ ನಾವು ಇದರಲ್ಲಿ ಪ್ರೋತ್ಸಾಹಿಸಬೇಕು?" ಎಂದು ಹಾಫರ್ ಕೇಳುತ್ತಿದ್ದ.

ವಿದ್ಯಾರ್ಥಿಗಳ ವಿಷಯ ತನ್ನ ಅಭಿಪ್ರಾಯ ಬದಲಾಗಬಹುದೆಂಬುದನ್ನೇನೋ ಹಾಫರ್ ಒಪ್ಪಿಕೊಂಡಿದ್ದ. "ಈಗ ಈ ತರುಣರನ್ನು ಕಂಡರೆ ನನಗೆ ಅಷ್ಟು ಸಮಾಧಾನವಿಲ್ಲ ನಿಜ. ಆದರೆ ಲಿಲಿ ಹೇಳುತ್ತಾಳೆ, 'ತಾಳು, ನಿನ್ನ ಎರಿಕ್‌ಗೆ ಕಾಲೇಜಿಗೆ ಹೋಗುವ ವಯಸ್ಸಾಗಲಿ, ನಿನ್ನ ಅಭಿಪ್ರಾಯವನ್ನು ಬದಲಾಯಿಸುತ್ತೀ' ಎಂದು. ನಿಜವಿದ್ದರೂ ಇರಬಹುದು."

ಹಾಫರ್ ತನ್ನ ಅತ್ಯಂತ ಆನಂದದ ದಿನಗಳನ್ನು ಓಸ್‌ಬೋರ್ನ್ ಗಳೆಯರ ಮಧ್ಯದಲ್ಲಿ ಕಳೆದ. ಪುಟ್ಟ ಎರಿಕ್‌ನೊಂದಿಗೆ ಉದ್ಯಾನವನದಲ್ಲಿ ಓಡಾಡುವುದು, ಅವನನ್ನು ಸಿನಿಮಾಗಳಿಗೆ ಕರೆದುಕೊಂಡು ಹೋಗುವುದು ಅವನಿಗೆ ಅಭ್ಯಾಸವಾಗಿ ಹೋಯಿತು. ತಾನು ಉಳಿಸಿದ ಹಣವನ್ನೆಲ್ಲ ಎರಿಕ್‌ನ ಹೆಸರಿನಲ್ಲಿ ಬ್ಯಾಂಕಿನಲ್ಲಿಟ್ಟು, ಅದು ಅವನ ವಿದ್ಯಾಭ್ಯಾಸಕ್ಕೆ ಮೀಸಲು ಎಂದು ಮಾಡಿದ. "ಅವನಿಗೆ ಬೇಕೆಂದರೆ ಹಾರ್ವರ್ಡ್*ಗೆ ಹೋಗಲಿ, ಮತ್ತಿನ್ನೆಲ್ಲಿಗಾದರೂ ಹೋಗಲಿ. ಬೇಡ, ಕಾಲೇಜಿಗೇ ಹೋಗುವುದಿಲ್ಲವೆಂದರೆ ಅದೂ ಸರಿಯೇ! ತಾನೂ ಧಕ್ಕೆಯಲ್ಲೇ ಹಮಾಲಿ ಕೆಲಸ ಮಾಡುತ್ತೇನೆಂದರೆ ಒಳಿತೇ ಆಯಿತು!" ಎನ್ನುತ್ತಾನೆ ಹಾಫರ್.

ಇದುವರೆಗೆ ಅವನ ನಾಲ್ಕು ಪುಸ್ತಕಗಳು ಪ್ರಕಟವಾಗಿದ್ದರೂ ಹಾಫರ್ ಈಚೆಗಿನ ತನಕ ಪರದೆಯ ಹಿಂದಿನ ಮನುಷ್ಯನ ಹಾಗೇ ಆಡುತ್ತಿದ್ದ. ಅವನ ಪುಸ್ತಕಗಳು ಹನ್ನೆರಡು ಭಾಷೆಗಳಿಗೆ ತರ್ಜುಮೆಯಾಗಿವೆ. "ದಿ ಟ್ರೂ ಬಿಲೀವರ್" ಪುಸ್ತಕದ ಐದು ಲಕ್ಷ ಪ್ರತಿಗಳು ಮಾರಾಟವಾ-

---

*ಮೂರು ಶತಮಾನಗಳ ಚರಿತ್ರೆಯುಳ್ಳ ಅಮೇರಿಕದ ಸುವಿಖ್ಯಾತ ವಿಶ್ವವಿದ್ಯಾನಿಲಯ. ಮೆಸಾಚುಸೆಟ್ಸ್ ಪ್ರಾಂತದ ಕೇಂಬ್ರಿಡ್ಜ್ ಎಂಬ ಊರಿನಲ್ಲಿದೆ. ಇಂಗ್ಲೆಂಡಿನ ಆಕ್ಸ್‌ಫರ್ಡ್, ಕೇಂಬ್ರಿಡ್ಜ್‌ಗಳಷ್ಟೇ ಪ್ರಸಿದ್ಧ.

ಗಿವೆ. ಎಷ್ಟೋ ಕಾಲೇಜುಗಳಲ್ಲಿ ಆ ಪುಸ್ತಕವನ್ನು ರಾಜಕೀಯ ಶಾಸ್ತ್ರದ ವಿದ್ಯಾರ್ಥಿಗಳು ಓದಲೇಬೇಕಾದ ಪುಸ್ತಕಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದಲ್ಲದೆ ತಾನು ಆಗಾಗ್ಗೆ ಕೊಡುತ್ತಿದ್ದ ಭಾಷಣಗಳ ಕಾರಣದಿಂದಲೂ ಹಾಫರ್ ಈಗಾಗಲೇ ಹೆಸರುವಾಸಿಯಾದ ವ್ಯಕ್ತಿಯಾಗಿದ್ದ. ಆದರೂ ಅವನು ಏಕಾಕಿಯಾಗಿ ಮೊದಲಿನಂತೆಯೇ ಒಂದೇ ಒಂದು ಕೋಣೆಯ ಮನೆಯಲ್ಲಿ ಟೆಲಿಫೋನ್ ಸೌಕರ್ಯ ಸಹ ಇಲ್ಲದೆ ವಾಸವಾಗಿರುತ್ತಿದ್ದ. ೧೯೬೭ ರ ವಸಂತ ಋತುವಿನ ವರೆಗೂ ಅವನು ಧಕ್ಕೆಯಲ್ಲಿ ವಾರಕ್ಕೆ ಮೂರು ದಿನ ಕೆಲಸ ಮಾಡುತ್ತಿದ್ದ. ಇವನ ಸಾಹಿತ್ಯಕ ಚಟುವಟಿಕೆಗಳು ಧಕ್ಕೆಯಲ್ಲಿ ಯಾವ ವಿಶೇಷ ರೀತಿಯ ಕುತೂಹಲವನ್ನೂ ಎಬ್ಬಿಸಿದ ಹಾಗೆ ಕಾಣಲಿಲ್ಲ.

ಆದರೆ ೧೯೬೭ ರ ಸೆಪ್ಟೆಂಬರ್ ೧೯ ನೇ ತಾರೀಖು ಅವನ ಅಜ್ಞಾತವಾಸ ಒಮ್ಮೆಗೇ ಕೊನೆಗೊಂಡಿತು. ಅದಕ್ಕೆ ಕಾರಣವಾದದ್ದು ಆ ದಿನ ಟೆಲಿವಿಶನ್. ಮೇಲೆ ದೇಶಾದ್ಯಂತ ಪ್ರಸಾರಿತವಾದ ಅವನ ಸಂಭಾಷಣೆ. ಎರಿಕ್ ಸಿವರೀಡ್ ಎಂಬುವನ ಜೊತೆ ಈ ಸಂಭಾಷಣೆ ಅಮೇರಿಕದ ಜನರಲ್ಲಿ ಹುಟ್ಟಿಸಿದ ಅದ್ಭುತ ಉತ್ಸಾಹಯುತ ಆಸಕ್ತಿಗೆ ಕಾರಣವೇನೆಂದು ಸರಿಯಾಗಿ ತಿಳಿದಿಲ್ಲ. ತನ್ನ ರೇಡಿಯೋ—ಟೆಲಿವಿಶನ್ ಅನುಭವದಲ್ಲಿ ಇಷ್ಟೊಂದು ಪತ್ರ, ಟೆಲಿಫೋನ್ ಕರೆಗಳನ್ನು ಆಕರ್ಷಿಸಿದ ಬೇರೊಂದು ಪ್ರಸಾರವನ್ನು ತಾನು ಕಂಡಿಲ್ಲ ಎಂದು ಸಿವರೀಡ್ ಹೇಳಿದ್ದಾನೆ. ಹಾಫರ್ ಆ ಪ್ರಸಾರದಲ್ಲಿ, "ನಮ್ಮ ಹಾಗೂ ನಮ್ಮ ದೇಶದ ಬಗ್ಗೆ ವಿಶ್ವಾಸದ ಎಳೆಯನ್ನು ಸ್ಪಂದಿಸಿದ" ಎಂದು ಸಿವರೀಡ್ ಹೇಳಿದ್ದಾನೆ ಆ ಮನುಷ್ಯನ ಅನುಭಾವ, ಆಕರ್ಷಕವಾದ ವ್ಯಕ್ತಿತ್ವ, ಆ ಪ್ರಚಂಡ ಜನಪ್ರಿಯತೆಗೆ ಒಂದು ಕಾರಣ ಎಂದು ಲಿಲಿ ಓಸ್‌ಬೋರ್ನ್ ಹಾಗೂ ಮತ್ತಿತರರು ಹೇಳಿದ್ದಾರೆ. ಟೆಲಿವಿಶನ್ ತೆರೆಯ ಮೇಲೆ ಇವನ ಮುಖ ಕಂಡ ತಕ್ಷಣ ಅನಿಸುತ್ತಿದ್ದುದು—ಇದು ಅಪರಂಜಿ, ಖೋಟ ಅಲ್ಲ ಎಂದು. ಅವನ ಮಾತುಗಳೂ ಹಾಗೆಯೇ, ಸ್ವಂತ ಅನುಭವದ ಅಂತರಾಳದಿಂದ ಬಂದ, ಜೀವನದ ಜೊತೆಗೇ ಅನುರಕ್ತನಾದವನ ಆವೇಶಪೂರಿತವಾದ ಮಾತುಗಳು ಟಂಕಸಾಲೆಯ ನಾಣ್ಯಗಳಂತೆ ಸ್ವಜ ಧ್ವನಿಯನ್ನು ಕೊಡುತ್ತಿದ್ದವು.

ಹಾಫರನ ಖ್ಯಾತಿ ಅಪರಿಮಿತವಾಗಿ ಹಬ್ಬಿತು. ಭಾಷಣ ಮಾಡಲು ಎಲ್ಲೆಲ್ಲಿಂದಲೂ ಕರೆ ಬರುತ್ತಿತ್ತು. ಹಾಫರನಿಗೆ ಧಾರ್ಮಿಕ ಸಂಸ್ಥೆಗಳೆಂದರೆ ಅಷ್ಟಕ್ಕಷ್ಟೇ. ಆದರೂ ಧಾರ್ಮಿಕ ಸಂಸ್ಥೆಗಳಿಂದ ಅವನಿಗೆ ಅನೇಕ ಕರೆಗಳು ಬರುತ್ತಿದ್ದವು. ಇದೊಂದು ಅವನಿಗೆ ತಮಾಷೆಯೆನಿಸಿತು. "ನಾನೊಬ್ಬ ದೇವತಾಶಾಸ್ತ್ರಜ್ಞ (theologian) ಎಂದು ಅವರು ತಿಳಿದಿದ್ದಾರೆ! ನನ್ನ ಶಾಸ್ತ್ರ ದೇವರಿಗೆ ಸಂಬಂಧಪಟ್ಟದ್ದಲ್ಲ, ಆತ್ಮಕ್ಕೆ ಸಂಬಂಧಪಟ್ಟುದು. ದೇವರು, ಸೈತಾನ ಇಬ್ಬರೂ ಯುದ್ಧ ಮಾಡುತ್ತಿದ್ದಾರೆ— ಎಲ್ಲೋ ಅಲ್ಲ, ಇಲ್ಲಿಯೇ ಮನುಷ್ಯನ ಹೃದಯದೊಳಗೆ! ದೇವರು ಎಂದರೆ ಯಾರು ಎಂಬುವದರಲ್ಲಿ ನನ್ನದೂ ಒಂದು ಅಭಿಪ್ರಾಯವಿದೆ— ಮಾನವೀಯತೆಯನ್ನು ಉತ್ತೇಜಿಸುವುದೆಲ್ಲ ದೈವಿಕ ಸತ್ವ; ಅಮಾನವೀಯತೆಯನ್ನು ಉತ್ತೇಜಿಸುವುದು ಸೈತಾನ ಸತ್ವ!" ಎಂದು ಹಾಫರ್ ಹೇಳುತ್ತಾನೆ. ಮನೋರೋಗ ವಿಜ್ಞಾನಿಗಳಿಂದಲೂ ಹಾಫರನಿಗೆ ಭಾಷಣ ಮಾಡಲು ಕರೆಬರುತ್ತಿತ್ತು. "ನಾನು ಮನೋರೋಗಗಳ ಮೇಲೆ ಒಂದು ಪುಸ್ತಕವನ್ನೂ ಓದಿಲ್ಲ. ಫ್ರಾಯ್ಡನ ಪುಸ್ತಕವನ್ನೂ ಓದಿಲ್ಲ. ಒಮ್ಮೆ ಒಬ್ಬ ಮನೋರೋಗ ವಿಜ್ಞಾನಿ ತನ್ನ 'ಎವ್ವೆರಿ ಡೇ ನ್ಯೂರಾಸಿಸ್' (Everyday Neurosis) ಎಂಬ ಪುಸ್ತಕದ ಹಸ್ತಪ್ರತಿಯನ್ನು ನನಗೆ ಕಳಿಸಿದ. ನಾನು ಅದನ್ನು ಹಾಗೆಯೇ ವಾಪಸ್ಸು ಮಾಡಿ, 'ಅಯ್ಯಾ, ನನ್ನ ಸಂಗಡಿಗರೆಲ್ಲ ಹಣದ ಅಭಾವದಿಂದ ನರಳುತ್ತಿರುವಂಥವರೇ ಹೊರತು, ಮನೋರೋಗದಿಂದಲ್ಲ. ಅವರಿಗೆ ಯಾವುದಾದರೂ ಮನೋರೋಗವಿದ್ದರೆ ಅದನ್ನು ಖಂಡಿತ ಒಂದಿಷ್ಟು ಹಣ ಗುಣಮಾಡುತ್ತದೆ.' ಎಂದು ತಿಳಿಸಿದೆ." ಎಂದಾತ ಹೇಳಿದ್ದಾನೆ.

ಹಾಫರ್ ಅಮೇರಿಕದ ಅಧ್ಯಕ್ಷನಾಗಿದ್ದ ಲಿಂಡನ್ ಜಾನ್‌ಸನ್ನನ ವ್ಯಕ್ತಿತ್ವದಿಂದ ಆಕರ್ಷಿತನಾಗಿದ್ದ. ಆತನಿಂದ ಕರೆಬಂದಾಗ ವೈಟ್‌ಹೌಸಿಗೆ ಹೋಗಿ ಭೇಟಿಮಾಡಿ ಬಂದ. ಅದೇ ಐಸನ್‌ಹೋವರ್ ಒಂದು ಸಾರಿ ಇವನ "ದಿ ಟ್ರೂ

ಬಿಲೀವರ್" ಪುಸ್ತಕ ಓದಿ ಪ್ರಶಂಸೆ ಮಾಡಿ ಪತ್ರ ಬರೆದಾಗ, ಹಾಫರನಿಗೆ ಅಷ್ಟು ಸಂತೋಷವಾಗಲಿಲ್ಲ. "ಓಹೋ, ನಾನು ಮೊದಲಿನಿಂದಲೂ ಅಂದುಕೊಂಡಿದ್ದು ಈಗ ಖಚಿತವಾಯಿತು. ಈ ಪುಸ್ತಕವನ್ನು ಎಳೇ ಮಗು ಸಹ ಓದಿ ಅರ್ಥ ಮಾಡಿಕೊಳ್ಳಬಲ್ಲದು," ಎಂದು ಆ ವಿಷಯವಾಗಿ ತಮಾಷೆ ಮಾಡುತ್ತಿದ್ದನು.

ನಗರಜೀವನದಲ್ಲಿನ ಒಡಕು, ಕೊಳಕುಗಳು ಹಾಫರನ ಹೃದಯವನ್ನು ಹಿಂಡಿವೆ. ಹಿಪ್ಪೀ ಪಂಥದಿಂದ ಅವಪಾತವಾಗಿರುವ ಮಾದಕ ದ್ರವ್ಯಗಳ ಹಾವಳಿ, ಅಮೇರಿಕದಲ್ಲಿ ನೀಗ್ರೋಗಳ ಅವಸ್ಥೆ ಇವೆಲ್ಲ ಅವನ ಮನಸ್ಸನ್ನು ಕಲುಕಿವೆ. "ನೀಗ್ರೋವಿಗೆ ತಾನು ಪುನರ್ಜನ್ಮವೆತ್ತುವ ವರೆಗೆ ಮೋಕ್ಷವಿಲ್ಲ. ಅದು ಹೇಗೆ ಸಾಧ್ಯ ಎಂದರೆ ಅವನು ಕಪ್ಪು ಕಾರ್ಮಿಕರ ಸಂಘ, ಪುನರ್ನಿರ್ಮಿತವಾದ ಕಪ್ಪು ವಸಾಹತು, ಕಪ್ಪು ಜನರೇ ಸ್ವಂತ ಪ್ರಯತ್ನದಿಂದ ನೆಟ್ಟು ಬೆಳಸಿದ ಸ್ಥಳೀಯ ಸಂಸ್ಥೆ ಮೊದಲಾದ ಕಪ್ಪು ಜನರ ಸಾಹಸದಿಂದಲೇ ಜನಿಸಿದ ಸಾಮಾಜಿಕ, ಔದ್ಯೋಗಿಕ ಸಂಸ್ಥೆಗಳನ್ನು ಬೆಳೆಸಿಕೊಂಡು ಬರುವುದರಿಂದ, ತನ್ನ ಸಾಧನೆಯಿಂದ ತನಗೆ ತನ್ನಲ್ಲೇ ವಿಶ್ವಾಸ ಹುಟ್ಟುವಂತಾಗಬೇಕು," ಎಂದು ಹಾಫರ್ ಹೇಳುತ್ತಾನೆ.

ಒಮ್ಮೊಮ್ಮೆ ಬೇಸತ್ತು, ಹಾಫರ್ ತಾನು ಎಲ್ಲೋ ದೂರ ತನ್ನ ಪರಿಚಯದವರಾರೂ ಇಲ್ಲದ ಸ್ಥಳಕ್ಕೆ ಹೋಗಿ ಅಲ್ಲೊಂದು ಸಣ್ಣ ಗುಡಿಸಲಿನಲ್ಲಿ ತನ್ನ ಉಳಿದ ಜೀವನವನ್ನು ಕಳೆಯಬೇಕೆಂಬ ಕನಸನ್ನು ಕಾಣುತ್ತಾನೆ.

"ನಾನು ಉತ್ತರ ಧ್ರುವಕ್ಕೆ ಹೋಗಿ ಠಾಣೆ ಹಾಕಿದರೂ, ಲಿಲಿ ಅಲ್ಲಿಗೇ ಬಂದು ನನ್ನನ್ನು ವಾಪಸು ಕರೆದುಕೊಂಡು ಬರುತ್ತಾಳೆ!" ಎಂದು ತಲೆ ಅಲ್ಲಾಡಿಸುತ್ತಾನೆ.

"ಹೌದೌದು! ಎರಿಕ್‌ನನ್ನು ಬಿಟ್ಟು ನಾವಿರುವುದಕ್ಕಾಗುತ್ತದೆಯೇ?" ಎಂದು ಆಗ ಲಿಲಿ ದನಿಗೂಡಿಸುತ್ತಾಳೆ.

"ಇದಕ್ಕೆ ಏನು ಹೇಳುತ್ತೀರಿ?" ಎಂದು ಹಾಫರ್ ಆಶ್ಚರ್ಯದಿಂದೆಂಬಂತೆ ಕೇಳುತ್ತಾನೆ.

## ಅಮೆರಿಕನ್ನರು

ಆಜೀವ ಪರ್ಯಂತ ಧಕ್ಕೆಯಲ್ಲೇ ಕೆಲಸ ಮಾಡಿಕೊಂಡಿರುತ್ತೇನೆ ಎಂದು ಹಾಫರ್ ಅಂದುಕೊಂಡಿದ್ದ. ಆದರೆ ಏಪ್ರಿಲ್ ೧೯೬೭ ರಲ್ಲಿ ಅವನ ಪೆನ್ಶನ್ ಹಣ ಕೈಗೆ ಬಂದಾಗ ಅವನಿಗೆ ದೊಡ್ಡ ಆಘಾತವೇ ಆಯಿತು. ಆ ನಂತರ ಒಂದು ವರ್ಷ ಕಾಲ ತನ್ನ ಹಳೆಯ ಸ್ನೇಹಿತರನ್ನು ನೋಡಿಕೊಂಡು ಬರುವಷ್ಟು ಧೈರ್ಯ ಅವನಿಗೆ ಬರಲಿಲ್ಲ. "ಅವರ ಸಹವಾಸವಿಲ್ಲದೆ ನನಗೆ ಬಿಕೋ ಎನಿಸುತ್ತದೆ. ಅವರಲ್ಲದೆ ನನಗೆ ಇನ್ಯಾರು ಪರಿಚಯಸ್ಥರಿದ್ದಾರೆ? ಎಷ್ಟೋ ಸಾರಿ, ಬೆಳಿಗ್ಗೆ ಎದ್ದಾಗ ಬಹಳ ಸುಸ್ತು ಎನಿಸುತ್ತದೆ. ಕಾರಣ—ರಾತ್ರಿಯೆಲ್ಲ ಕನಸಿನಲ್ಲಿ ಹಡಗಿನಿಂದ ಧಕ್ಕೆಗೆ, ಧಕ್ಕೆಯಿಂದ ಹಡಗಿಗೆ ಸಾಮಾನು ಸಾಗಿಸುತ್ತಿದ್ದೆ" ಎಂದು ಹಾಫರ್ ತನ್ನ ಕಷ್ಟವನ್ನು ತೋಡಿಕೊಂಡಿದ್ದಾನೆ.

ಈಗ ನಿವೃತ್ತ ಜೀವನದಲ್ಲಿ ಅವನು ಮೊದಲಿಗಿಂತ ಏಕಾಕಿ. ಬೆಳಿಗ್ಗೆ ಬೇಗ ಎದ್ದು ಆರು ಮೈಲಿ ವಾಕಿಂಗ್ ಹೋಗುತ್ತಾನೆ— ಹವೆ ಅನುಕೂಲವಿದ್ದರೆ. ನಂತರ ತನ್ನ ಕೋಣೆಗೆ ಬಂದು ಒಂದೆರಡು ಗಂಟೆ ಬರೆಯುತ್ತಾ ಕುಳಿತಿರುತ್ತಾನೆ. ಮಾನವಜೀವನದಲ್ಲಿ ಸೃಜನಾತ್ಮಕ ಪರಿಸ್ಥಿತಿ ಯಾವುದು ಎಂಬುದರ ಬಗ್ಗೆ ಅವನ ಹೊಸ ವಿಚಾರಸರಣಿ ಹೊರಟಿದೆ. ಸೃಜನಾತ್ಮಕವಾದದ್ದು ನಗರಗಳಿಂದ ಬಂದಿದೆಯೇ ಹೊರತು ಹಳ್ಳಿಗಳಿಂದಲ್ಲ ಎಂಬ ವಿಚಾರದ ಬೆನ್ನು ಹತ್ತಿ ಅವನು ನಡೆದಿದ್ದಾನೆ. "ಮನುಷ್ಯ ಮನುಷ್ಯನಾದದ್ದು ನಗರಗಳಲ್ಲಿ; ಅವನು ಕೊಳೆಯುವುದೂ ಅಲ್ಲೇ. ನಾವು ಬದುಕಬಲ್ಲ ನಗರಗಳನ್ನು ನಡೆಸಿಕೊಂಡು ಹೋಗಲಾರದವರಾದರೆ, ಅಮೇರಿಕ ಸತ್ತುಹೋಗುತ್ತದೆ," ಅನ್ನುತ್ತಾನೆ ಹಾಫರ್.

ಟೆಲಿವಿಷನ್ ಪ್ರಸಾರದ ನಂತರ ಅವನ ಪುಸ್ತಕಗಳ ಮಾರಾಟ ಭರಾಟೆಯಿಂದ ಸಾಗಿದೆ. "ಚಿಂತನ" (Reflections) ಎಂಬ ಶೀರ್ಷಿಕೆಯಲ್ಲಿ ಅವನ ವಿಚಾರಧಾರೆಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇದರಿಂದ ಅವನ ಸಂಪಾದನೆಯೂ ತುಂಬ ಹೆಚ್ಚಿದೆ. ಈ ಹಣವನ್ನೆಲ್ಲ ಏನು ಮಾಡ

ಬೇಕು ಎಂಬ ಯೋಚನೆ ಅವನನ್ನು ಕೆಲವು ಕಾಲ ಕಾಡಿತು. ಕೊನೆಗೊಂದು ಇತ್ಯರ್ಥಕ್ಕೆ ಬಂದು ತನ್ನ ಪೆನ್ಷನ್ ಹಾಗು ವಿಶ್ವವಿದ್ಯಾನಿಲಯದಿಂದ ಬರುವ ಸಂಬಳ ಇಷ್ಟರಲ್ಲಿ ತನ್ನ ಜೀವನ ನಡೆಸಿಕೊಂಡು ಹೋಗುವುದು; ಮಿಕ್ಕಿದ್ದನ್ನೆಲ್ಲ ಎರಿಕ್ ಓಸ್‌ಬೋರ್ನ್ ಮತ್ತು ಅವನ ಸಂಸಾರದ ಹೆಸರಿನಲ್ಲಿ ಒಂದು ಟ್ರಸ್ಟ್ ಫಂಡಿಗೆ ಹಾಕುವುದು ಎಂದು ತೀರ್ಮಾನ ಮಾಡಿ ಹಾಗೆಯೇ ನಡೆಸಿಕೊಂಡು ಬರುತ್ತಿದ್ದಾನೆ.

ಎರಿಕ್ ಬೆಳೆಯುತ್ತಿದ್ದ ಹಾಗೆ ಅವನನ್ನು ಕಾಣುವುದನ್ನು ಹಾಫರ್ ಕಮ್ಮಿ ಮಾಡುತ್ತಿದ್ದಾನೆ. ಒಮ್ಮೊಮ್ಮೆ ಲಿಲಿಯ ಜೊತೆ ಗೋಲ್ಡನ್ ಗೇಟ್ ಪಾರ್ಕಿನಲ್ಲಿ ಸುತ್ತಾಡುತ್ತಿರುತ್ತಾನೆ. ಅವನಿಗೆ ಆ ಪಾರ್ಕ್ ಕಂಡರೆ ಈಗಲೂ ತುಂಬಾ ಇಷ್ಟ- ಅದು ಮಾನವನಿರ್ಮಿತ ಎಂದು. ಮನುಷ್ಯ ಪ್ರಕೃತಿಯ ಸಹಾಯ ಪಡೆದಲ್ಲ, ಅದನ್ನು ಗೆದ್ದುದರಿಂದಲೇ ಬೆಳವಣಿಗೆ ಹೊಂದಲು ಸಾಧ್ಯವಾಯ್ತು ಎಂದು ಅವನ ಅಭಿಪ್ರಾಯ.

ಒಂದು ಸಾರಿ ಓಸ್‌ಬೋರ್ನ್ ಮನೆಯಲ್ಲಿ ಹಾಫರ್ ಹೀಗೆ ಹೇಳಿದ:

"ನಾನೂ ಒಬ್ಬ ಸಾಮಾನ್ಯ ಮನುಷ್ಯ. ಈ ಸಾಮಾನ್ಯತೆಯಲ್ಲೇ ನನಗೆ ಅಭಿಮಾನವಿದೆ. ಸಾಮರ್ಥ್ಯವೂ ಸಾಮಾನ್ಯವೇ. ಅದು ನಮ್ಮ ಸುತ್ತು ಮುತ್ತು ಎಲ್ಲರಲ್ಲೂ ಇದೆ ಆದರೆ ಹೆಚ್ಚಾಗಿ ಅದು ವ್ಯರ್ಥವಾಗುತ್ತದೆ ನೀವು ಸುಮ್ಮನೆ ಜನಸಾಮಾನ್ಯರ ಹತ್ತಿರ ಮಾತನಾಡಿ ಅವರ ಸಾಮರ್ಥ್ಯವನ್ನು ಅಳೆಯುತ್ತೀರೆಂದರೆ ತಪ್ಪಾಗುತ್ತದೆ. ಅವರ ಜೊತೆ ಹೆಗಲು ಕೊಟ್ಟು ಕೆಲಸ ಮಾಡಿದಾಗಲೇ ಅವರ ಸಾಮರ್ಥ್ಯದ ಅರಿವು ನಮಗಾಗುವುದು. ನಾನು ನಲವತ್ತೈದು ವರ್ಷ ಅವರ ಜೊತೆ ಕೆಲಸ ಮಾಡಿ ನೋಡಿದ್ದೇನೆ. ಅವರಿಂದ ಯಾವಾಗಲೂ ಹೊಸ ಹೊಸದನ್ನು ಕಲಿಯಲು ನನಗೆ ಸಾಧ್ಯವಾಗಿದೆ.

"ಏಶಿಯದಲ್ಲಿನ ಮತ್ತು ಬೇರೆ ದೇಶಗಳಲ್ಲಿನ ಜನತೆ ಅಮೆರಿಕನ್ ಜನತೆಗಿಂತ ಭಿನ್ನ ಎಂದು ಕೆಲವರು ನನಗೆ ತಿಳಿಸಲು ಪ್ರಯತ್ನಪಟ್ಟಿದ್ದಾರೆ. ನನಗೆ ಈ ಮಾತಿನಲ್ಲಿ ಸುತರಾಂ ವಿಶ್ವಾಸವಿಲ್ಲ. ತೊಂಬತ್ತು ಟಕ್ಕ ಅವರೂ ನಮ್ಮವರಂತೆಯೇ. ವಿದೇಶಿ ಬೌದ್ಧಿಕರಿಗೆ ನಮ್ಮನ್ನು ಕಂಡರೆ ದ್ವೇಷ; ಏಕೆಂದರೆ ನಮ್ಮ ಈ ಸಂಸ್ಕೃತಿ ನಿಜವಾಗೂ ಜನಸಾಮಾನ್ಯರ ಸಂಸ್ಕೃತಿ. ಇಂಥ ಸಂಸ್ಕೃತಿ ಹಿಂದೆಂದೂ ಇದ್ದದ್ದಿಲ್ಲ. ನಮ್ಮ ಆಂತರ್ಯದ ಆಶೋತ್ತರವೆಲ್ಲ ಜನಸಾಮಾನ್ಯರ ಕಲ್ಯಾಣವನ್ನೇ ಉದ್ದೇಶಿಸಿರುವಂಥದ್ದು. ಬುದ್ಧಿಜೀವಿಗಳಿರೆ ನೀವು ಎಲ್ಲಾದರೂ ಹಾಳಾಗಿಹೋಗಿ ಎಂದು ಹೇಳುತ್ತೇನೆ! ಈ ವಿದೇಶಿ ಬೌದ್ಧಿಕರೇ ಜನಸಾಮಾನ್ಯರ ಬದ್ಧ ವೈರಿಗಳು. ಆ ಸುಕಾರ್ನೋನನ್ನ* ನೋಡಿ ಅವನು ಪ್ರಪಂಚದ ಮುಂದೆ ಬಂದಾಗ ಹೇಳಿದ್ದು ನೆನಪಿದೆಯೇ? 'ನಾನು ಡಬ್ಬಲ್ ಡಾಕ್ಟರ್— ವಿಶ್ವವಿದ್ಯಾನಿಲಯದ ಎರಡು ಪದವಿಗಳು ನನಗಿವೆ,' ಎಂದಿದ್ದ. ಅವನು ತನ್ನ ಜನಕ್ಕೇನು ಹೇಳಿದ್ದ ಗೊತ್ತೆ? 'ನಾವು ಹೇಗೆ ಒಂದು ಭಾರಿ ರಾಷ್ಟ್ರವಾಗಬಹುದು?—ಅನ್ನ, ರೊಟ್ಟಿ ಮಾತ್ರ ಸಾಕೆ? ಒಂದು ರಾಷ್ಟ್ರ ಬರೀ ಅನ್ನ ರೊಟ್ಟಿ ತಿಂದುಕೊಂಡು ಬದುಕುವುದಿಲ್ಲ. ಒಂದು ಉಜ್ವಲ ಚೈತನ್ಯ ಇದ್ದರೇನೇ ಭಾರೀ ರಾಷ್ಟ್ರವಾಗುವುದು. ಈ ಚೈತನ್ಯವೇ ನಮ್ಮ ಆಹಾರವಾಗಬೇಕು.' ಇಂಥ ಮೂರ್ಖ ಮಾತುಗಳನ್ನು ನೀವೆಲ್ಲಾದರೂ ಕೇಳಿದ್ದೀರಾ? ಉಜ್ವಲ ಚೈತನ್ಯ! ದೇವರೇ ಕಾಪಾಡಬೇಕು!

"ನನಗೆ ತಿಳಿದಿದೆ, ಇಲ್ಲೂ ಪರಿಸ್ಥಿತಿ ಬದಲಾಯಿಸುತ್ತಿದೆ ಬೌದ್ಧಿಕರು ಇಲ್ಲೂ ಪ್ರಬಲರಾಗುತ್ತಿದ್ದಾರೆ. ಜನಸಾಮಾನ್ಯರ ಶಕ್ತಿ ಕುಂದುತ್ತಿದೆ. ಹತ್ತೊಂಭತ್ತನೆ ಶತಮಾನದಲ್ಲಿ ಪ್ರಾರಂಭವಾದ ಬೌದ್ಧಿಕರ ಮತ್ತು ಮಧ್ಯಮ ವರ್ಗದವರ ನಡುವಿನ ಶೀತಲಯುದ್ಧ ಈಗೊಂದು ಪರಾಕಾಷ್ಠೆಯ ಸ್ಥಿತಿಯನ್ನು ತಲುಪುತ್ತಿದೆ ಬೌದ್ಧಿಕರೇ ಮೇಲುಗೈಯಾಗಿದ್ದಾರೆ. ಸ್ವಯಂಚಾಲಿತ ಯಂತ್ರಗಳ ಉಪಯೋಗವೇ ಅದನ್ನು ತೋರಿಸುತ್ತದೆ. ಇದಕ್ಕೆ ಕೊನೆ? ಸಮಾಜವೇ ಒಂದು ದೊಡ್ಡ ಶಾಲೆಯಾಗಿ ಪ್ರತಿಯೊಬ್ಬನೂ ಬೌದ್ಧಿಕನಾಗುವುದು! ಆಗ ಬೌದ್ಧಿಕರ ಬಗ್ಗೆ ಯಾರೂ ತಲೆ

---

* ಡಾ. ಸುಕಾರ್ನೋ (೧೯೦೧—೧೯೭೦). ಇಂಡೋನೇಶಿಯಾದ ಥಳಕಿನ ನೇತಾರ; ಅಧ್ಯಕ್ಷ (೧೯೪೫—೧೯೬೭).

ಹಿಡಿಸಿಕೊಳ್ಳಬೇಕಾಗುವುದಿಲ್ಲ !"

## ಸೂಕ್ತಿಗಳು

ನಮ್ಮಲ್ಲಿರುವ ವಿಶಿಷ್ಟವಾದ ಚೈತನ್ಯ ಮಿಂಚಿನಂತೆ ಕಾಣಿಸಿಕೊಂಡು ಮಾಯವಾಗುತ್ತದೆ. ಕಿಡಿಗಳನ್ನು ಹಿಡಿದು ಜ್ವಾಲೆಯನ್ನು ಬೆಳಗಿಸಿಕೊಳ್ಳದಿದ್ದರೆ, ಜೀವನದಲ್ಲಿ ನಾವು ಬೆಳೆಯುವುದೂ ಇಲ್ಲ. ಆನಂದದಿಂದ ಪುಲಕಿತರಾಗುವುದೂ ಇಲ್ಲ.

*

ಈ ಪ್ರಪಂಚದಲ್ಲಿ ಮಾನವನೊಬ್ಬನೆ ತಾರುಣ್ಯವನ್ನು ತೋರುವುದು. ಮಿಕ್ಕೆಲ್ಲ ಜೀವಿಗಳೂ ಒಂದು ಗುರುತರವಾದ ಗಾಂಭೀರ್ಯದಿಂದ ಮುಂದುಡಿಕೊಂಡಿರುತ್ತವೆ. ಮಿಕ್ಕ ಜೀವಿಗಳಂತೆ ನೋವು ಭಯಗಳಿಂದ ಮನುಷ್ಯನೂ ಆಕ್ರಂದಿಸುತ್ತಾನೆ; ಆದರೆ ನಗಬಲ್ಲ ಪ್ರಾಣಿ ಅವನು ಮಾತ್ರ.

*

ಬೌದ್ಧಿಕರಿಗೆ ಯಾವಾಗಲೂ ಗಣ್ಯರ ಸಹವಾಸವೇ ಬೇಕು. ಅವರು ಸಂಸ್ಕೃತರಾಗಿದ್ದರೆ ಒಳ್ಳೇದು; ಇಲ್ಲದಿದ್ದರೆ ದೋಷವಿಲ್ಲ. ಆದರೆ ಸಾಮಾನ್ಯರೇ ಪ್ರಬಲರಾಗಿರುವ ಸಮಾಜವನ್ನು ಅವರು ಖಂಡಿತ ಸಹಿಸಲಾರರು. ಸಾಮಾನ್ಯರೇ ಅಧಿಕಾರ ಚಲಾಯಿಸುವ ಪ್ರಜಾಪ್ರಭುತ್ವಕ್ಕಿಂತ ಹೊಲಸಾದ ಸಮಾಜ ಅವರ ದೃಷ್ಟಿಯಲ್ಲಿ ಬೇರೆ ಇಲ್ಲ.

•

ತಿಳುವಳಿಕೆ ನಾಶವಾದ ಜಗತ್ತಿನಲ್ಲಿ ತರುಣರು ದೊಡ್ಡ ಕಷ್ಟದಲ್ಲಿ ಬಿದ್ದಿರುತ್ತಾರೆ ತಿಳುವಳಿಕೆಯಿರುವ ಜನಕ್ಕೆ ಮಾತ್ರ ಸಾಧ್ಯವಾದ, ಸತ್ಯರೂಪದ, ಏಕಮೇವ ದೃಷ್ಟಿಕೋನ ತಮಗಿಲ್ಲವೆಂದು ಯಾವಾಗ ಹಿರಿಯರಿಗೆ ಅನಿಸುತ್ತದೆಯೋ, ಆಗ ತರುಣರಿಗೆ ಬೆಳೆಯುವುದರಲ್ಲಿ ಅರ್ಥವೇ ಇಲ್ಲದ ಹಾಗಾಗುತ್ತದೆ.

*

ಇಂದ್ರಿಯಸುಖಗಳಲ್ಲಿ ಆಸಕ್ತಿ ನಮ್ಮನ್ನು ಮಾನವಕುಲದ ಜೊತೆಗೆ ಒಮ್ಮತದಿಂದಿರುವ ಹಾಗೆ ಮಾಡುತ್ತದೆ. ವೃದ್ಧರ ಮಾನವದ್ವೇಷ ಬಹುಮಟ್ಟಿಗೆ ಕಾಮನೆಯ ಕಾವು ಆರಿಹೋದದ್ದರಿಂದ.


•

ಬಹಳವಾಗಿ ಇತರ ಜನ ನಮಗಿಂತ ಅಂಥ ಉತ್ತಮರೇನಲ್ಲ ಎಂದು ನಾವು ಯೋಚಿಸಲು ಪ್ರಾರಂಭ ಮಾಡಿದಾಗ ಪ್ರಪಂಚವೆಲ್ಲ ಅನಿಷ್ಟ ವ್ಯಕ್ತಿಗಳಿಂದ ತುಂಬಿಹೋದಂತೆ ಕಾಣುವುದು ಸಹಜ.

*

ಚರಿತ್ರೆ ಯಾವಾಗ ಮುಗಿಯುತ್ತದೆ? ಪ್ರಪಂಚವೆಲ್ಲ ಒಂದು ಮೃಗಾಲಯವಾದಾಗ; ಇಲ್ಲವೆ, ಮನುಷ್ಯ ಪೂರ್ಣ ಮಾನವನಾದಾಗ. ಚರಿತ್ರೆಯೆಂದರೆ ಮತ್ತಿನ್ನೇನು? ಮನುಷ್ಯತನದ

WHEN NATURE FAILS !
NEW HEIGHT
**ಪ್ರಕೃತಿಗೆ ಅಶಕ್ಯವಾದಾಗ ಎತ್ತರ ಪಡೆಯಿರಿ.**
(೨" ನಿಂದ ೮" ವರೆಗೆ ಗ್ಯಾರಂಟಿ)
ನಿಮ್ಮ ಎತ್ತರವನ್ನು ಹೆಚ್ಚಿಸುವ ಅಪೇಕ್ಷೆ ನಿಮಗಿದ್ದರೆ ನಮ್ಮ ಜಗತ್‌ಪ್ರಸಿದ್ಧ 'Hytex' (ಹೈಟೆಕ್ಸ್) ಔಷಧವನ್ನು ಉಪಯೋಗಿಸಿರಿ. ಪ್ರತಿ ಫಾಯಿಲಿಗೆ ( 20 TABS ) ಬೆಲೆ ರೂ. 3.75 ಪೈಸೆ. ಪೋಸ್ಟೇಜ ಪ್ರತ್ಯೇಕ.
– ವಿಜ್ಞಾನ ಸಮಸ್ಯೆಯನ್ನು ಬಿಡಿಸಿತು –
ನಮ್ಮ ಆಯುರ್ವೇದಿಕ ಸುವಾಸಿಕ
**ಬಾಲ ಕಲಾ ತೇಲವು** BAL KALA TEL
ನಿಮ್ಮ ಬಿಳಿಕೂದಲನ್ನು ತನ್ನ ಪ್ರಾಕೃತಿಕ ಕಪ್ಪು ಬಣ್ಣಕ್ಕೆ ಬೇರಿನಿಂದ ಶಾಶ್ವತ ತಿರುಗಿಸುವುದು. ಚಿಕ್ಕ ಪ್ರಾಯದವರಾಗಿ ಕಾಣಿರಿ. ಪ್ರಾಯಕ್ಕೆ ತಕ್ಕ ಉತ್ಸಾಹ ಪಡೆಯಿರಿ. ಬೆಲೆ-ಪ್ರತಿ ಫಾಯಿಲಿಗೆ ರೂ. 3/- ಪೋಸ್ಟೇಜ ಪ್ರತ್ಯೇಕ 3 ಫಾಯಿಲುಗಳ ಪೂರ್ತಿ ಕ್ರಮಕ್ಕೆ ರೂ. 7/50 ಪೈ. ಪೋ. ಪ್ರತ್ಯೇಕ.
M s United Commercial Coy
Beat No. 28 (K. H. M.12-)
Flat Door No. 3883.
Ambala Cantt (N. India)



'ಟೆರೀನ್' ಬಟ್ಟೆಗಳು
ದಿನಕಳೆದಂತೆ ಹೊಸದರಂತೆ
ಕಾಣುತ್ತಿರುತ್ತವೆ ಎಂಬುದನ್ನು
ನೀವು ಲಕ್ಷಿಸಿದ್ದೀರಾ?



ಇದು ಆಕಸ್ಮಿಕವಲ್ಲ.

## ಅವುಗಳನ್ನು ಮಾಡಿರುವುದೇ ಹಾಗೆ

ನೀವು 'ಟೆರೀನ್'® ಕೊಳ್ಳುವಾಗ ನಿಮಗೆ ಅತ್ಯುತ್ತಮವಾದುದೇ ದೊರೆಯುತ್ತದೆಂಬುದರ ಬಗ್ಗೆ ಖಾತ್ರಿಯಾಗಿರಬಹುದು. ಏಕೆಂದರೆ ಆ ಬಗ್ಗೆ ನಾವೇ ಮೊದಲು ಖಾತ್ರಿಮಾಡಿಕೊಳ್ಳುತ್ತೇವೆ. ನಮ್ಮಲ್ಲಿ ಕಟ್ಟುನಿಟ್ಟಾದ ಮೇಲ್ವಿಚಾರಣೆಯ ಪರೀಕ್ಷೆಗಳಿವೆ. ಈ ಪರೀಕ್ಷೆಗಳಂತೆ ಅವು ನೆರಿಗೆ ಬೀಳಬಾರದು. ಅಂದವಾಗಿರಬೇಕು. ಅಚ್ಚ ಬಣ್ಣದವುಗಳಾಗಿರಬೇಕು. ಮತ್ತು ಕುಗ್ಗದಿರಬೇಕು. ಆದುದರಿಂದ ಬಟ್ಟೆಯ ಮೇಲೆ 'ಟೆರೀನ್' ಟ್ರೇಡ್ ಮಾರ್ಕ್ ಇದೆಯೆಂದರೆ ಅದರರ್ಥ ಆ ಬಟ್ಟೆಯು ಈ ಎಲ್ಲಾ ಪರೀಕ್ಷೆಗಳಲ್ಲಿ ಉತ್ತೀರ್ಣವಾಗಿದೆಯೆಂದು. ಒಂದೇ ಟ್ರೇಡ್ ಮಾರ್ಕ್ ಇಷ್ಟೆಲ್ಲ ಗುಣಗಳನ್ನು ಖಾತ್ರಿಗೊಳಿಸುವಾಗ ಆ ಟ್ರೇಡ್ ಮಾರ್ಕ್ ಇದೆಯೋ ಇಲ್ಲವೋ ಎಂದು ನೋಡಿಯೆ ಬಟ್ಟೆಗಳನ್ನು ಕೊಳ್ಳಿರಿ.

ಈಗ ನಾವು ಇನ್ನೂ ಒಂದು ಹೆಜ್ಜೆ ಮುಂದಿಟ್ಟು, ಆಯ್ದ, ಗುಣಮಟ್ಟದ ಬಗ್ಗೆ ಶ್ರದ್ಧೆಯಿರುವ ಮತ್ತು ತಮ್ಮ ಕ್ಷೇತ್ರದಲ್ಲಿ 'ಟೆರೀನ್' ನಂತೆ ಪ್ರಮುಖರಾದ ಮಿಲ್ಲುಗಳೊಂದಿಗೆ ಜೊತೆಗೂಡಿದ್ದೇವೆ. ಹೀಗಾಗಿ ಈಗ ನಿಮಗೆ ಇನ್ನಷ್ಟು ಕಟ್ಟುನಿಟ್ಟಿನ ಗುಣಮಟ್ಟದಂತೆ ಮಾಡಿರುವ ಬಟ್ಟೆಗಳು ದೊರೆಯುತ್ತವೆ. ಅಂದರೆ ಈಗ ನೀವು ಇನ್ನೂ ಉತ್ತಮ 'ಟೆರೀನ್' ಬಟ್ಟೆಗಳನ್ನು ಅಪೇಕ್ಷಿಸಬಹುದು. ಮತ್ತು ಅವನ್ನು ಪಡೆಯಬಹುದು.

TERENE

'ಟೆರೀನ್' —

CHAITRA-CAFI-50 KAN

ಬೆಳವಣಿಗೆ ತಾನೆ? ಕೋಟ್ಯಂತರ ವರ್ಷ ಸುತ್ತು ಬಳಸಿನ ಹಾದಿಯಲ್ಲಿ ನಿಧಾನವಾದ ಏರಿಕೆ; ಮಿಕ್ಕ ಜೀವಿಗಳ ಗುಂಪಿನಿಂದ ಸಿಡಿದು ಬೇರೆಯಾಗಿ ತಾನೇ ಒಂದು ಬೇರೆ ಜಾತಿಯಾಗುವ ನಿರಂತರ ಪ್ರಯತ್ನ, ಇದೇ ಆ ಚರಿತ್ರೆ.

*

ನಾವು ಒಂದು ಧರ್ಮವನ್ನು ತ್ಯಜಿಸಿದೆವು ಎಂದಾಗ ಅದನ್ನು ಕಿತ್ತೊಗೆದೆವು ಎಂದಲ್ಲ; ಅದನ್ನು ನುಂಗಿಬಿಟ್ಟಿರುತ್ತೇವೆ ಅಷ್ಟೆ.

*

ಈ ಪ್ರಪಂಚವೇ ನಮ್ಮ ಮನೆ ಎಂದು ನಮಗನಿಸಬೇಕಾದರೆ ನಾವು ಸಸ್ಯಗಳ ಮತ್ತು ಪ್ರಾಣಿಗಳ ಸ್ವಭಾವದಲ್ಲಿ ಬೆರೆಯಬೇಕಾಗುತ್ತದೆ. ಮನುಷ್ಯ ಈ ಪ್ರಪಂಚದಲ್ಲಿ ಸರ್ವದಾ ಆಗಂತುಕನೇ. ಅವನು ಸಮಸ್ತ ಸೃಷ್ಟಿಯಿಂದ ಯಾವಾಗ ತನ್ನನ್ನು ಬೇರ್ಪಡಿಸಿಕೊಂಡನೋ ಆಗಲೇ ಆಗಂತುಕನಾದ. ಈ ಆಜೀವ ಆಗಂತುಕತನದಿಂದಲೇ ಹುಟ್ಟಿಕೊಂಡಿವೆ—ನಮ್ಮ ಕೊನೆಯಿಲ್ಲದ ಅನಿಶ್ಚಯಗಳು, ಮೂಲವನ್ನು ಹುಡುಕಿಕೊಂಡು ಹೊರಟ ಪೂರ್ಣವಾಗಲಾರದ ತೃಷ್ಣೆಗಳು, ಈ ಪ್ರಪಂಚವನ್ನೇ ಮಾನವನಿರ್ಮಿತ ವಸ್ತುಗಳಿಂದ ತುಂಬಿಬಿಡಬೇಕೆಂಬ ಹಂಬಲಗಳು, ನಮ್ಮನ್ನು ತನ್ನ ಪ್ರತಿನಿಧಿಯಾಗಿ ಈ ಭೂಮಿಯ ಮೇಲಿರಿಸುವ ದೇವನೆಂಬುವನ ಆವಶ್ಯಕತೆಗಳು.

*

ಜನರ ಗಣ್ಯತೆಯನ್ನು ಅಳೆಯುವಾಗ ನಾವು ಬೇಕೆಂತಲೇ ಅವರ ಮೌಲ್ಯವನ್ನು ಏರಿಸಿರುತ್ತೇವೆ—ನಂತರ ಅವರನ್ನು ಮೊಟಕುಗೊಳಿಸುವ ಸಂತೋಷವನ್ನು ಲಾಭವಾಗಿ ಪಡೆಯುವ ಅವಕಾಶಕ್ಕೋಸ್ಕರ!

*

ಕ್ರಾಂತಿಕಾರ ಮತ್ತು ಸೃಜನಶೀಲ—ಇವರಿಬ್ಬರೂ ಆಜೀವನ ಹುಡುಗರಾಗಿಯೇ ಉಳಿಯುತ್ತಾರೆ. ಕ್ರಾಂತಿಕಾರ ಬೆಳೆಯಲು ಅಸಮರ್ಥ, ಆದ್ದರಿಂದ ಎಂದೂ ಹರೆಯಕ್ಕೆ ಬರಲಾರ; ಸೃಜನಶೀಲ ಬೆಳೆಯುತ್ತಲೇ ಇರುತ್ತಾನೆ, ಆದ್ದರಿಂದ ಎಂದೂ ಹರೆಯಕ್ಕೆ ಬರಲಾರ.

*

ಕ್ರಾಂತಿ ತಾನಾದ ಕಡೆಗಿಂತ ಹೆಚ್ಚಾಗಿ ಬೇರೆ ಕಡೆ ತನ್ನ ಪ್ರಭಾವವನ್ನು ಬೀರಿರುತ್ತದೆ ಎಂದು ನನಗನಿಸುತ್ತದೆ. ಫ್ರಾನ್ಸಿನ ಕ್ರಾಂತಿ ಜರ್ಮನಿಯ ಸೃಷ್ಟಿಗೆ ಕಾರಣವಾಯ್ತು; ಅದು ತನ್ನಲ್ಲೇ ಇಂಥ ಮಹತ್ವದ ಬದಲಾವಣೆಯನ್ನು ಮಾಡಲಿಲ್ಲ. ರಶಿಯದ ಕ್ರಾಂತಿಯ ನಿರ್ಧಾರಕ ಪರಿಣಾಮಗಳು ಒಂದು ಸಂಘಟಿತವಾದ ಯುರೋಪಿನ, ಒಂದು ಹೊಸ ಚೀನದ ಸೃಷ್ಟಿಗೆ ಕಾರಣವಾಗಬಹುದು. ನೀಗ್ರೋಗಳಲ್ಲಿ ಆಗುತ್ತಿರುವ ಕ್ರಾಂತಿ ಅವರನ್ನು ಬದಲಾಯಿಸುವುದಕ್ಕಿಂತ ಹೆಚ್ಚಾಗಿ ಬಿಳೀ ವಿದ್ಯಾರ್ಥಿಗಳನ್ನು, ತರುಣರನ್ನು ಬದಲಾಯಿಸಬಹುದಾಗಿದೆ.

*

ಅಮೇರಿಕನ್ನರದು ಒಂದು ತರದ ತಲೆಕೆಳಗಾದ ಬೂಟಾಟಿಕೆ. ಮಿಕ್ಕ ಜನಾಂಗಗಳ ನೀತಿ ಮಾತುಗಳು ಅವರ ನಡತೆಗಿಂತ ಎತ್ತರದ ಮಟ್ಟದಲ್ಲಿರುವುವೆಂದು ನಾವು ಭಾವಿಸಬಹುದಾದರೆ, ಅಮೆರಿಕದ ಜನಸಾಮಾನ್ಯರ ನಡತೆ ಅವರು ಆಡುವುದಕ್ಕಿಂತ ಉತ್ತಮವಿರುತ್ತದೆ

*

ದಬ್ಬಾಳಿಕೆಯಿಂದ ಪೀಡಿತರಾದವರು ಸ್ವಾತಂತ್ರ್ಯಕ್ಕೋಸ್ಕರ ಹೊಡೆದಾಡುತ್ತಾರೆಂಬುದರಲ್ಲಿ ತಥ್ಯ ಎಷ್ಟಿದೆ? ಅವರು ಹೊಡೆದಾಡುವುದು ಅಭಿಮಾನ, ಅಧಿಕಾರಗಳಿಗೋಸ್ಕರ. ಯಾವ ಅಧಿಕಾರ? ಬೇರೆಯವರನ್ನು ದಬ್ಬಾಳಿಕೆಯಿಂದ ಪೀಡಿಸುವ ಅಧಿಕಾರ. ಪೀಡಿತರ ದೊಡ್ಡ ಆಸೆ ಎಂದರೆ ತಾವೂ ಪೀಡಕರಾಗುವುದು.

*

ಸಾಹಿತ್ಯ, ಕಲೆ, ಸಂಗೀತಗಳಲ್ಲಿ ಈಗಾಗಿರುವಂಥ 'ನವ್ಯ'ದ ಸ್ಫೋಟ ಹಿಂದೆಂದೂ ಆಗಿರಲಿಲ್ಲ. ಇದಕ್ಕೆ ಸ್ವಲ್ಪ ಹತ್ತಿರ ಬಂದಂಥದ್ದು ರಿಫರ್ಮೇಷನ್* ಕಾಲದಲ್ಲಿ ಸ್ಫೋಟಗೊಂಡ

* ಹದಿನಾರನೆ ಶತಮಾನದ ಯುರೋಪಿನಲ್ಲಿ ರೋಮನ್ ಕ್ಯಾಥೊಲಿಕ್ ಮತದ ದೋಷಗಳನ್ನು ತಿದ್ದುವುದಕ್ಕಾಗಿ ಹುಟ್ಟಿಕೊಂಡ ಸುಧಾರಣಾ ಚಳುವಳಿ. ಆಗ ಸಾಹಿತ್ಯ, ಕಲೆ, ಸಂಗೀತಗಳಲ್ಲೂ ಹೊಸ ಹೊಸ ಬದಲಾವಣೆಗಳಾದುವು.

ಮತೀಯ ನವೀನತೆ. ಆಗ ಪ್ರತಿಯೊಬ್ಬ ಗಮಾರನೂ ತಾನೂ ಹೊಸದೊಂದು ಪಂಥವನ್ನು ಸೃಷ್ಟಿ ಮಾಡಲು ಸಾಮರ್ಥ್ಯವುಳ್ಳವನೆಂದು ತಿಳಿದಿರುವ ಸ್ಥಿತಿಯಿತ್ತು. ಆಗಿನ ಕಾಲಕ್ಕೂ ನಮ್ಮ ಈ ಕಾಲಕ್ಕೂ ಒಂದು ವಿಷಯದಲ್ಲಿ ಸಮಾನತೆ ಇದೆ. ಆಗ ಆದ ಹಾಗೆಯೇ ಈಗಲೂ ಮೌಲ್ಯಗಳು ಛಿದ್ರ ಛಿದ್ರವಾಗಿ ಕೆಳಕ್ಕೆ ಉರುಳುತ್ತಿವೆ. ಇದರಲ್ಲಿ ಅರ್ಥವಾಗದ ವಿಷಯವೆಂದರೆ ಇಂಥ ಅಪಮೌಲ್ಯವನ್ನೇ ಸ್ವಾಗತಿಸಲು ಜನತೆ ಸಿದ್ಧರಾಗಿದ್ದಾರಲ್ಲ ಎಂಬುದು.

ಕವಿಗಳು ಅರ್ಥವಾಗದ ಹಾಗೆ ಬರೆಯುತ್ತಿದ್ದಾರೆ, ಕಲಾಕಾರರು ಅಮೂರ್ತವಾಗಿ ಚಿತ್ರಿಸುತ್ತಿದ್ದಾರೆ, ಸಂಗೀತ ರಚನಾಕಾರರು ಕರ್ಕಶವಾದ ಸಂಗೀತವನ್ನು ಸೃಷ್ಟಿಸುತ್ತಿದ್ದಾರೆ. ಆದರೆ ಇದಕ್ಕಿಂತ ಆಶ್ಚರ್ಯಕರವಾದ ವಿಷಯವೆಂದರೆ ಜನ ಸಹಿತ ತಮಗೆ ಅರ್ಥವಾಗದ್ದನ್ನು ಮೆಚ್ಚಿಕೊಳ್ಳುತ್ತಿದ್ದಾರೆ. ಯಾವ ನಿಯಮದ ಪ್ರಕಾರವೂ ಅರ್ಥವಿಲ್ಲದ್ದನ್ನು ಅವರು ಮೆಚ್ಚಿಕೊಳ್ಳುತ್ತಿರುವುದು ಅರ್ಥಗರ್ಭಿತವಾಗಿದೆ.

*

ಮನುಷ್ಯನನ್ನು ಸೃಷ್ಟಿಸಿದ ದೇವರು ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಕಲಾಕಾರನಾಗಿದ್ದ. ತನ್ನ ಪ್ರತಿರೂಪದಲ್ಲೇ ಅಂದರೆ ಕಲಾಕಾರನಾಗಿಯೇ ಅವನು ಮನುಷ್ಯನನ್ನು ಸೃಷ್ಟಿಸಿದ. ಮಿಕ್ಕೆಲ್ಲ ಪ್ರಾಣಿಗಳೂ ಪರಿಪೂರ್ಣವಾದ ಯಂತ್ರಗಳು. ತಮ್ಮ ಒಳಗೇ ತಮ್ಮ ಯಂತ್ರಸಾಮಗ್ರಿಗಳನ್ನು ಇಟ್ಟುಕೊಂಡು ಹುಟ್ಟಿರುತ್ತವೆ. ಪ್ರತಿಯೊಂದು ಒಂದೊಂದು ವಿಷಯದಲ್ಲಿ ಪ್ರಾವೀಣ್ಯವನ್ನು ಪಡೆದೇ ಹುಟ್ಟಿರುತ್ತದೆ.

ತಾಂತ್ರಿಕವಾಗಿ ನೋಡಿದರೆ ಮನುಷ್ಯ ಹಸಿ-ಬಿಸಿಯಾಗಿ ತಯಾರಿಸಲ್ಪಟ್ಟಿದ್ದಾನೆ. ಪ್ರಾಣಿಗಳಂತೆ ಯಾವುದರಲ್ಲೂ ಅಪ್ರತಿಮ ಪ್ರಾವೀಣ್ಯವುಳ್ಳವನು ಅವನಲ್ಲ. ಆದರೆ ಅವನ ಬುದ್ಧಿ ಮತ್ತು ಚೈತನ್ಯಗಳಲ್ಲಿ ಅವನ ಸೃಷ್ಟಿಕರ್ತನ ಅಂದರೆ ಕಲಾಕಾರನ ಅಂಶಗಳಿವೆ. ದೇವರ ಅಪ್ರತಿಮ ಕಲಾಶಕ್ತಿಗೆ ಇದೊಂದು ಕುರುಹು—ಅವನು ಮನುಷ್ಯನನ್ನು ಸ್ವಯಂಚಾಲಿತ ಯಂತ್ರದ ಮಾದರಿಯಲ್ಲಿ ಮಾಡಲಿಲ್ಲ.

ಘಟನೆಗಳಿಂದ ಕಿಕ್ಕಿರಿದ ಬದುಕೇ ಸುಲಭವಾಗಿ ನೆನಪಿಡಲು ಬರುವುದು. ಸಾಧನೆಗಳು, ವಿಫಲವಾದ ಆಸೆ ಆಕಾಂಕ್ಷೆಗಳು, ಅನಿರೀಕ್ಷಿತಗಳು, ಸಂದಿಗ್ಧ ಸಮಯಗಳು, ತಿರುವು ಮುರುವುಗಳು—ಇವುಗಳೆಲ್ಲ ಬದುಕಿಗೆ ಗುರುತಿಸಬಲ್ಲ ಮೈಲಿಗಲ್ಲುಗಳಾಗುತ್ತವೆ. ಬರಡು ಜೀವನದಲ್ಲಿ ಇಂಥ ಗುರುತುಗಳಿಲ್ಲ. ಇರುವ ಒಂದೆರಡು ಗುರುತುಗಳೂ ಮಸುಕು ಮಸುಕಾಗಿ ನೆನಪಿಗೆ ಅಸ್ಪಷ್ಟವಾಗಿ ತೇಲಿಹೋಗುತ್ತವೆ.

*

ಬೌದ್ಧಿಕರಿಗೆ ಅವರ ಕೈಗೆ ಅಧಿಕಾರ ಕೊಡದೆಯೇ, ಅವರ ಅಸಾಧಾರಣ ಚೈತನ್ಯ ಹರಿಯುವುದಕ್ಕೆ ಸರಿಯಾದ ಮಾರ್ಗ ಕಲ್ಪಿಸಿ ಕೊಡುವುದು; ಅಂದರೆ ಅವರನ್ನು 'ಕಾಗದದಲ್ಲಿ ಕತ್ತರಿಸಿದ ಹುಲಿ'ಯನ್ನಾಗಿ ಮಾಡುವುದು ಈಗಿನ ಸಮಾಜದ ಒಂದು ಮುಖ್ಯ ಸಮಸ್ಯೆ.



“ಎರಡು ಫೋಟೋಗಳೂ ನಂದೇ ಸ್ವಾಮಿ... ಮೊದಲನೆಯದು ಆಹಾರ ಖಾತೇಲಿದ್ದಾಗ ತೆಗೆಸಿದ್ದು... ಎರಡನೆಯದು ಉಕ್ಕು ಮತ್ತು ಕೈಗಾರಿಕಾ ಖಾತೇಲಿದ್ದಾಗ ತೆಗೆಸಿದ್ದು...”

ಆತ್ಮದ ಬಿಗಿಯಾದ ತಂತಿಗಳನ್ನು ಮೀಟಿಸಿದರೆ ಬರುವ ನಾದವೇ ಮನುಷ್ಯನ ವಿಚಾರಗಳು, ಕಲ್ಪನೆಗಳು. ತಂತಿಗಳಿಗೆ ಬಿಗಿ ಬರುವುದು ದ್ವಂದ್ವಗಳ ದ್ವಿಮುಖ ಎಳೆತದಿಂದ. ವಿರೋಧಿ ಪ್ರವೃತ್ತಿಗಳು, ವಿರೋಧಿ ಬಂಧನಗಳು, ವಿರೋಧಿ ಆಕಾಂಕ್ಷೆಗಳು—ಇವೇ ಆ ದ್ವಂದ್ವಗಳು. ಎಲ್ಲಿ ಈ ದ್ವಂದ್ವಗಳು ಕೇಂದ್ರೀಕೃತವಾಗುವುದಿಲ್ಲವೋ, ಎಲ್ಲಿ ಆತ್ಮಶಕ್ತಿ ಒಂದೇ ದಿಕ್ಕಿನಲ್ಲಿ ತಡೆಯಿಲ್ಲದೆ ಹರಿದುಹೋಗುತ್ತದೋ, ಅಲ್ಲಿ ಬರೀ ಆತುರ, ಗೊಂದಲ ಹೊರತು ನಾದವೆಂಬುದಿಲ್ಲ.

•

ಸಾಮರ್ಥ್ಯ ಇಲ್ಲದವ ಏನೂ ಪ್ರಯತ್ನವಿಲ್ಲದೇ ಕಾರ್ಯ ಆಗಬೇಕು ಎಂದು ಅಪೇಕ್ಷಿಸುತ್ತಾನೆ. ಸೋಲುವಿಕೆಗೆ ಅವನು ಕಾರಣ ಕೊಡುವುದು, ಸ್ಫೂರ್ತಿಯ ಅಥವಾ ತ್ರಾಣದ ಅಭಾವ, ದುರದೃಷ್ಟ ಮೊದಲಾದುವು. ಸಾಕಷ್ಟು ಪ್ರಯತ್ನ ಪಡಲಿಲ್ಲ ಎಂದು ಅವನು ಎಂದಿಗೂ ಒಪ್ಪಿಕೊಳ್ಳುವುದಿಲ್ಲ. ನಿಜವಾದ ಸಾಮರ್ಥ್ಯ ಇರುವವನಲ್ಲಿ ಯಾವುದೊಂದು ಸಾಧನೆಯ ಮಾರ್ಗದಲ್ಲೂ ಅನೇಕ ಅಡಚಣೆಗಳು ಇದ್ದೇ ಇರುತ್ತವೆಯೆಂಬ ತಿಳುವಳಿಕೆ ಅಗರ್ಭವಾಗಿರುತ್ತದೆ. ದೃಢ ಸಂಕಲ್ಪದಿಂದ, ತಾಳ್ಮೆಯಿಂದ ಏನಾದರೂ ಸಾರ್ಥಕವಾದ್ದನ್ನು ಸಾಧಿಸಬಹುದೆಂಬ ಆತ್ಮವಿಶ್ವಾಸವೂ ಅಂಥವನಲ್ಲಿ ಇರುತ್ತದೆ. ಹೀಗೆ, ಸಾಮರ್ಥ್ಯವೂ ಒಂದು ಜಾತಿಯ ವೀರ್ಯ ಎಂದು ಹೇಳಬಹುದು.

ಯಾವಾಗ ನಾವು ಬದುಕಿರುವವರನ್ನು ಹೊಗಳಲಾರೆವೋ ಆಗ ಒಳಗಿಂದೊಳಗೇ ಮೃತ್ಯು ನಮ್ಮ ಹೃದಯವನ್ನು ಕೊರೆಯುತ್ತಿದೆಯೆಂದು ತಿಳಿಯಬೇಕು.

•

ಮಾನವ-ಸಂಗತಿಗಳಲ್ಲಿ ಪ್ರತಿಯೊಂದು ಉತ್ತರವೂ ಸಮಸ್ಯೆಯನ್ನು ಇನ್ನಷ್ಟು ಬಿಗಿ ಮಾಡುತ್ತದೆ; ನಾವು ಏತರ ವಿರುದ್ಧ ಹೋರಾಡಬೇಕಾಗಿದೆ ಎಂಬುದನ್ನು ಇನ್ನಷ್ಟು ಸ್ಪಷ್ಟವಾಗಿ ತೋರಿಸುತ್ತದೆ. ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸುವ ಉತ್ತರ ಯಾವುದೂ ಇಲ್ಲ.

•

ಬಹಳ ವಿವರವಾಗಿ, ಬಹಳ ಖಚಿತವಾಗಿ ಕೆಲವು ವಿಷಯಗಳನ್ನು ನಾವು ನೆನಪಿನಲ್ಲಿಟ್ಟಿರುತ್ತೇವೆ—ಅವು ನಮಗಾದ ಸಂಗತಿಗಳಾಗಿರದಿದ್ದರೆ ಮಾತ್ರ! ನಾನು ಪ್ರಲೋಭಗಳಿಗೆ ಅತ್ಯಂತ ಸುಲಭವಾಗಿ ಬೀಳುವ ಮನುಷ್ಯ. ಆದ್ದರಿಂದಲೇ ನಾನು ಅವುಗಳಿಂದ ಬಹು ದೂರ ಇರಲು ಪ್ರಯತ್ನ ಮಾಡುತ್ತೇನೆ.

*

ಸಮಾಜದ ಶಕ್ತಿ ಏತರಲ್ಲಿದೆ? ಪ್ರಬಲರಾದ ನೇತಾರರಿಲ್ಲದಿರುವಾಗಲೂ ಸಲೀಸಾಗಿ ನಡೆದುಕೊಂಡು ಹೋಗುವುದರಲ್ಲಿ.

•

ಮುರಿದ ಮೂಳೆಗಳಿಗಿಂತ ಮುರಿದ ಸಂಪ್ರದಾಯಗಳೇ ಹೆಚ್ಚು ಅಪಾಯಕರ. ▲

Condensed from the book 'ERIC HOFFER- An American Odessy' (a Four Star condensation) by Calvin Tomkins. Text copyright ©1968, 1967 by Calvin Tomkins. Aphorism copyright © by Eric Hoffer.

---

This Magazine, owned by the Loka Shikshana Trust, Hubli, is printed & published by B. G. Guttal at the Samyukta Karnatak Press, Koppikar Road, Hubli.

Representatives: Bombay: V. S. Mani, Phone: 472794; Calcutta: H. Muzamdar Phone: How. 67-3164; Madras: P. M. Srinivasan, Phone: 33748; New Delhi P. R. Chopra, Phone: 223130.

# ...ಮತ್ತು ಈಗ!




## ತಲೆನೋವಿಗೆ ಏಕಮಾತ್ರ ಮಾತ್ರೆ
## ಹೆಚ್ಚು ಶಕ್ತಿಶಾಲಿ+ನಿರಪಾಯಕರ

**ಹೆಚ್ಚು ಶಕ್ತಿಶಾಲಿ** ಎಕೆಂದರೆ ಅವೇದನ್ ಪ್ಲಸ್‌ನಲ್ಲಿ ನೋವನ್ನು ಬಲವಾಗಿ ಎದುರಿಸುವ ಘಟಕಗಳು ಅಡಕವಾಗಿವೆ. ಇದು ಶೀಘ್ರ, ನಿರಪಾಯಕರ, ನಿಶ್ಚಿತ ಪರಿಹಾರವನ್ನು ನೀಡುತ್ತದೆ.

**ನಿರಪಾಯಕರ** ಎಕೆಂದರೆ ಅವೇದನ್ ಪ್ಲಸ್‌ನಲ್ಲಿ ಹೆಚ್ಚುಕಾಲ ಸೇವಿಸಿದರೆ ಹಾನಿಕರ ಪ್ರಭಾವ ಬೀರುವಂತಹ ಯಾವುದೇ ಘಟಕ ಅಡಕವಾಗಿಲ್ಲ.

**ತಲೆನೋವು, ನೆಗಡಿ, ಫ್ಲೂ, ಮೈನೋವು, ಹಲ್ಲುನೋವುಗಳಿಗೆ ಮತ್ತು ಕಷ್ಟದ ದಿನಗಳಲ್ಲಿ ಅವೇದನ್ ಪ್ಲಸ್ ಸೇವಿಸಿರಿ.**

ಪ್ರಮಾಣ: ಒಂದು ಮಾತ್ರೆ ಮಾತ್ರ (ಉಲ್ಬಣಿಸಿದ ಸ್ಥಿತಿಗಳಲ್ಲಿ ಎರಡು ಮಾತ್ರೆ ಸೇವಿಸಿರಿ.)
20 ಮಾತ್ರೆಗಳ ಫ್ಯಾಮಿಲಿ ಪ್ಯಾಕ್ ಕೂಡ ದೊರೆಯುತ್ತದೆ.

SARABHAI CHEMICALS

avedan® plus

Shilpi HPMA-8C/78 Kan

KASTURI PRICE: RE 1-00 Regd No. BG 131
Registered with the Registrar of Newspapers for India under No. 3633/57


# ಉತ್ತಮ ಬಿಸ್ಕತ್ತಿಗೆ ಮತ್ತೊಂದು ಹೆಸರು-ಕ್ವಾಲಿಟಿ !

ಉತ್ತಮ ಬಿಸ್ಕತ್ತುಗಳು ತಿನ್ನಲು ರುಚಿ, ಮಾಡುವುದು ಕಷ್ಟ.
ಆದರೆ ನಾವು ಕಷ್ಟಕ್ಕೆ ಸಿದ್ಧ. ಪದಾರ್ಥಗಳ ಆಯ್ಕೆಗೆ, ಬಿಸ್ಕತ್ ತಯಾರಿಕೆಯ ಪರಿಣತೆಗೆ,
ಪ್ರತಿಯೊಂದಕ್ಕೂ ಕಷ್ಟ ಪಡುತ್ತೇವೆ. ಆದುದರಿಂದಲೇ ಕ್ವಾಲಿಟಿ ಬಿಸ್ಕತ್ತುಗಳು
ಯಾವಾಗಲೂ ರುಚಿಯಾಗಿ, ಶುಚಿಯಾಗಿ, ಸತ್ವಪೂರ್ಣವಾಗಿರುತ್ತವೆ.

ಕ್ವಾಲಿಟೀಸ್ ಗ್ಲೂಕೋಸ್, ಗೋಲ್ಡನ್ ಮತ್ತು
ಟೀಟೈಂ ಬಿಸ್ಕತ್ತುಗಳು




ಕ್ವಾಲಿಟಿ ಫುಡ್ ಪ್ರಾಡಕ್ಟ್ಸ್